
ಸಂಶೋಧನಾ ಮಾಲಿಕೆ

ಕರ್ನಾಟಕದಲ್ಲಿನ ರೈತ ಚಳುವಳಿ



ಡಾ. ಕೆ.ಎಂ. ಕುಮಾರ್

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೧೮.

ಸಂಶೋಧನಾ ಮಾಲಿಕೆ

ಕರ್ನಾಟಕದಲ್ಲಿನ ರೈತ ಚಳುವಳಿ

(ಕುವೆಂಪು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಡಾ. ಕೆ.ಎಂ. ಕುಮಾರ್

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

KARNATAKADALLINA RAITA CHALUVALI
A Thesis by : **Dr. K.M. Kumar**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 204, Price : Rs. **100=00** : **2008**

ಪ್ರಥಮ ಮುದ್ರಣ	:	೨೦೦೮
ಪ್ರತಿಗಳು	:	೫೦೦
ಬೆಲೆ	:	ಒಂದು ನೂರು ರೂಪಾಯಿಗಳು

ಮುಖಪುಟ ವಿನ್ಯಾಸ : ಕಮಲಂ ಅರಸು

ಮುದ್ರಣ : ಮೆ|| ಸತ್ಯಶ್ರೀ ಪ್ರಿಂಟರ್ಸ್
ನಂ.೧೬/೧, ೩ನೇ ಕ್ರಾಸ್, ೨ನೇ ಮುಖ್ಯರಸ್ತೆ
ಕಸ್ತೂರಬಾ ನಗರ, ಬೆಂಗಳೂರು - ೫೬೦೦೨೬

ಅಧ್ಯಕ್ಷರ ನುಡಿ

ಕಳೆದ ತೊಂಬತ್ತೂರು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ-ಅಕ್ಷರ-ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ-(ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ. ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ನಮ್ಮ ಅಧಿಕಾರಾವಧಿಯಲ್ಲಿ ಕೈಕೊಳ್ಳಲಾದ ಒಂದು ವಿಶೇಷ ಯೋಜನೆ: ಸಂಶೋಧನಾ ಗ್ರಂಥಮಾಲಿಕೆ. ವಿವಿಧ ವಿಶ್ವವಿದ್ಯಾಲಯಗಳಿಗೆ ಕನ್ನಡ ನಾಡು-ನುಡಿ ಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಸಲ್ಲಿಸಲಾದ ಪಿಎಚ್.ಡಿ. ಮಹಾಪ್ರಬಂಧಗಳ ಅಧಿಕೃತ ಮಾಹಿತಿ ಪಡೆದುಕೊಂಡು ನಮ್ಮ 'ಪ್ರಕಟನಾ ಸಮಿತಿ'ಯು ಆಯ್ಕೆ ಮಾಡಿ, ಈ ಥೀಸಿಸ್‌ಗಳನ್ನು ಗರಿಷ್ಠ ೨೫೦ ಪುಟಗಳಿಗೆ ಇಳಿಸಿ ಗ್ರಂಥ ರೂಪದಲ್ಲಿ ಪ್ರಕಟಿಸಲು ತೀರ್ಮಾನಿಸಿತು. ಡಾಕ್ಟರೇಟ್ ಪಡೆದ ತಜ್ಞರು ನಮ್ಮೊಂದಿಗೆ ಸಂಪೂರ್ಣ ಸಹಕರಿಸಿ ನಮ್ಮ ಯೋಜನೆಯ ಅನುಷ್ಠಾನದಲ್ಲಿ ಕೈಗೂಡಿಸಿದ್ದಾರೆ. ಜ್ಞಾನವೆಂಬುದು ಕೇವಲ ಯೂನಿವರ್ಸಿಟಿಗಳಲ್ಲಿ ಶೇಖರಗೊಂಡು ನಿಂತ ನೀರಾಗದೆ ಅದು ಒಂದು ವಾಹಿನಿಯಾಗಿ ಈ ನಾಡಿನ ಪ್ರಜೆಗಳ ಕಡೆಗೆ ನಿರಂತರ ಹರಿದು ಬರುತ್ತಲೇ ಇರಬೇಕು. ಕನ್ನಡ ಬದುಕಿನ ಒಂದು ಅರ್ಥಪೂರ್ಣ ಅಂಗವಾಗುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಹೆಮ್ಮೆಯ ಸಾಧನೆಗಳಲ್ಲಿ ಇದೂ ಒಂದು. ಏಪ್ರಿಲ್ ೨೦೦೪ರ ಅಂತ್ಯದ ವೇಳೆಗೆ ಈ ಪುಸ್ತಕಗಳು ಓದುಗರ ಕೈಸೇರುವ ನಿರೀಕ್ಷೆ ಇದೆ.

ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯದವರಿಗೂ, ಮುಖಪುಟ ವಿನ್ಯಾಸದ ಕಲಾವಿದರಿಗೂ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕರ ಮಾತು

ಭಾರತದ ಸ್ವರಾಜ್ಯ, ವಕೀಲರಿಂದಾಗಲಿ, ಉದ್ಯಮಿಗಳಿಂದಾಗಲಿ, ವ್ಯಾಪರಸ್ಥರಿಂದಾಗಲೀ, ಭೂಮಾಲಿಕರಿಂದಾಗಲೀ ಸಾಧಿಸಲು ಸಾಧ್ಯವಿಲ್ಲ. ಅದು ಕೇವಲ ಕೃಷಿಕರನ್ನೇ ಅವಲಂಬಿಸಿದೆ ಎಂದು ಮಹಾತ್ಮ ಗಾಂಧಿಯವರು ತಮ್ಮ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದು ತತ್ವಶಃ ವಾಸ್ತವಿಕ ವಿಚಾರವಾಗಿದೆ. ಇಂದೂ ಸಹ ರೈತರ ಅಭಿವೃದ್ಧಿಯೇ ಈ ದೇಶದ ಅಭಿವೃದ್ಧಿಯಾಗಿದೆ. ಆದರೆ ಕೃಷಿ, ಕೃಷಿಕ ಸಮಾಜ, ಮತ್ತು ಕೃಷಿಕ ಅಗತ್ಯವಾಗಿ ಪಡೆಯಬೇಕಾದ ಸಹಕಾರವನ್ನು ಇಂದಿನ ಸರ್ಕಾರಗಳು ನೀಡದೇ ಇರುವುದರಿಂದ ರೈತ ಆತ್ಮಹತ್ಯೆಗೆ ಮೊರೆಹೋಗಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಹಾಗೂ ರೈತರ ಆತ್ಮಹತ್ಯೆ ಪ್ರಕರಣಗಳು ದಿನೇದಿನೇ ಹೆಚ್ಚಾಗುತ್ತಿದೆ.

ಚೀನಾ ದೇಶದ ಮಾದರಿಯಲ್ಲಿ ಬಡ್ಡಿರಹಿತ ಕೃಷಿ ಸಾಲ ನಿಡುವಿಕೆ, ಉತ್ಪಾದನಾ ವೆಚ್ಚ ಆಧಾರಿತ ಬೆಂಬಲ ಬೆಲೆ ನಿಗದಿಕರಣ, ಮಾರುಕಟ್ಟೆಯ ನಿಯಂತ್ರಣ, ಸಾಲ ಮರುಪಾವತಿಗೆ ಸಂಬಂಧಿಸಿದ ನಿಯಮಾವಳಿಗಳು ಮತ್ತು ಕ್ರಮಗಳನ್ನು ಮಾನವೀಯ ನೆಲೆಯಲ್ಲಿ ಸ್ಥಿತಿ ಸ್ಥಾಪಕತೆ ಹೊಂದುವಂತೆ ರಚಿಸುವುದು. ಹಾಗೂ ಅಂತಾರಾಷ್ಟ್ರೀಯ ಕೃಷಿ ಆಧಾರಿತ ಬಹುರಾಷ್ಟ್ರೀಯ ಕಂಪನಿಗಳ ನಿಯಂತ್ರಣಗಳು ಮತ್ತು ಅಂತಾರಾಷ್ಟ್ರೀಯ ಹಣಕಾಸಿನ ಸಂಘಸಂಸ್ಥೆಗಳ ಪ್ಯಾಕೇಜ್‌ಗಳನ್ನು ಭಾರತೀಕರಣಗೊಳಿಸಿ ಬಳಸುವಿಕೆಯಂತಹ ಕ್ರಮಗಳಿಂದ ರೈತರ ಪ್ರಸ್ತುತ ಅಸ್ಥಿರ ಮತ್ತು ಅಭದ್ರವಾದ ಮನಃಸ್ಥಿತಿಗೆ ಸ್ಥಿರ ಮತ್ತು ಭದ್ರವಾದ ರಕ್ಷಣಾತ್ಮಕ ನಿಯಮಗಳನ್ನು ಸರ್ಕಾರವು ಇಚ್ಛಾಶಕ್ತಿಯಿಂದ ರಚಿಸಿ, ರೈತರ ಆತ್ಮಸ್ಥೈರ್ಯ ಹೆಚ್ಚಿಸಿ, ಆತ್ಮಹತ್ಯೆ ತಡೆಗಟ್ಟಬಹುದಾಗಿದೆ. ಈ ಮೇಲಿನ ಎಲ್ಲಾ ವಿಚಾರಗಳನ್ನು ಈ ಅಧ್ಯಯನದಲ್ಲಿ ಸೂಕ್ತ ಆಧಾರಗಳ ಸಹಿತ ವಿವರಿಸಲಾಗಿದೆ.

ನನ್ನ ಸಂಶೋಧನಾ ಅಧ್ಯಯನಕ್ಕೆ ಮಾರ್ಗದರ್ಶಕರಾದ ಕುವೆಂಪು ವಿಶ್ವವ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಡಾ. ಜೆ.ಎಸ್. ಸದಾನಂದ ಇವರಿಗೆ ಕೃತಜ್ಞನಾಗಿದ್ದೇನೆ. ಹಾಗೂ ಈ ಅಧ್ಯಯನಕ್ಕೆ ಬೇಕಾದ ಮೂಲ ದಾಖಲೆಗಳನ್ನು ನೀಡಿ ಪ್ರೋತ್ಸಾಹಿಸಿದ ಕಡಿದಾಳ್ ಶಾಮಣ್ಣನವರಿಗೆ ಮತ್ತು ಬರವಣಿಗೆಗೆ ಸಂಬಂಧಿಸಿದ ಮಾದರಿ ಬಗೆಗೆ ಸಲಹೆ ನೀಡಿದ ದಿ. ಪೂರ್ಣಚಂದ್ರ ತೇಜಸ್ವಿಯವರಿಗೆ ನಾನು ಆಭಾರಿಯಾಗಿದ್ದೇನೆ.

ಈ ಗ್ರಂಥವನ್ನು ಪ್ರಕಟಿಸಲು ನಿರ್ಧಾರ ತೆಗೆದುಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ಣಯ ಶ್ಲಾಘನೀಯವಾದದ್ದು. ಆದ್ದರಿಂದ ಈ ಬೃಹತ್ ಕಾರ್ಯದ ಹಿಂದಿರುವ ಶಕ್ತಿಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲರಿಗೆ ಮತ್ತು ಗೌರವ ಕಾರ್ಯದರ್ಶಿಗಳಾದ ಶ್ರೀ ಜರಗನಹಳ್ಳಿ ಶಿವಶಂಕರ್ ಅವರಿಗೆ ಹಾಗೂ ಎಲ್ಲಾ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

ಕೆ. ಎಂ. ಕುಮಾರ್

ಪರಿವಿಡಿ

ಪಟ್ಟಿಗಳ ವಿವರಣೆ

ಪಟ್ಟಿ ೧.೧೦ : ಆಧಾರ ೧೯೯೪-೯೫ ಕೆ.ಆರ್.ಆರ್.ಎಸ್.ನಿಂದ ಒಂದು ಎಕರೆ ಕಬ್ಬಿಗೆ ವೈಜ್ಞಾನಿಕ ಬೆಲೆ ಲೆಕ್ಕಾಚಾರ

ಪಟ್ಟಿ ೧.೧೧ : ಕಬ್ಬು ಬೆಲೆ ೧೯೯೪-೯೫ ಸಕ್ಕರೆ ನಿರ್ದೇಶನಾಲಯದ ಆದೇಶಾತ್ಮಕ ವಿಧಾನದಂತೆ ಕೆ.ಆರ್.ಆರ್.ಎಸ್.ನ ಸಕ್ಕರೆ ಬೆಲೆ ನಿಗದೀಕರಣ ಲೆಕ್ಕಾಚಾರ

ಪಟ್ಟಿ ೧.೧೨ : ಸಂಗ್ರಹಣೆ/ಕನಿಷ್ಟ ಬೆಂಬಲ ಬೆಲೆ (ರೂಪಾಯಿ ಪ್ರತಿ ೧೦೦ ಕೆಜಿಗೆ)

ಪಟ್ಟಿ ೧.೧೩ : ರಾಷ್ಟ್ರಗಳು ನೀಡುತ್ತಿರುವ ಕೃಷಿ ಸಹಾಯಧನ

ಪಟ್ಟಿ ೧.೧೪ : ಕೃಷಿ ಕಾರ್ಮಿಕರಾಗಿ ಮಹಿಳೆಯರ ಶೇಕಡವಾರು ದುಡುಮೆಯ ಪ್ರಮಾಣ

ಪಟ್ಟಿ ೧.೧೫ : ಮರಗಳ ಬೆಳೆಯುವ ಸಾಮಾರ್ಥ್ಯ

ಪಟ್ಟಿ ೧.೧೬ : ಕೋಲಾರ ಜಿಲ್ಲೆಯಲ್ಲಿ ೧೯೭೭-೭೮ ಮತ್ತು ೧೯೮೦-೮೧ರಲ್ಲಿ ರಾಗಿ ಉತ್ಪಾದನೆ

ಅಧ್ಯಾಯ. ೧
ಪೀಠಿಕೆ

ಪ್ರಸ್ತುತ ಅಧ್ಯಯನ ಕರ್ನಾಟಕ ರಾಜ್ಯ ರೈತ ಸಂಘದ (ಇನ್ನು ಮುಂದೆ ಕ.ರಾ.ರೈ.ಸಂ ಎಂದು ಬಳಸಲಾಗಿದೆ) ಅಡಿಯಲ್ಲಿ ಕರ್ನಾಟಕದಲ್ಲಿನ ರೈತರ ಚಳುವಳಿಯನ್ನು ಕುರಿತಂತೆ ಇರುವ ಒಂದು ವಿಶ್ಲೇಷಣೆಯಾಗಿದೆ. ಕರ್ನಾಟಕ ಒಂದು ಕೃಷಿ ರಾಜ್ಯವಾಗಿದ್ದು, ಇದರ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೬೦ ಭಾಗ ರೈತರು ಮತ್ತು ಕೃಷಿ ಕಾರ್ಮಿಕರಾಗಿದ್ದಾರೆ. ಇದರಲ್ಲಿ ಶೇಕಡ ೭೫ರಷ್ಟು ರೈತರು ಅಂದರೆ ಸುಮಾರು ೫೭ ಲಕ್ಷ ರೈತರು ಕೇವಲ ಎರಡು ಹೇಕ್ಟೇರ್ ಅಥವಾ ಅದಕ್ಕಿಂತ ಕಡಿಮೆ ಭೂ ಹಿಡುವಳಿಯನ್ನು ಹೊಂದಿದ್ದು, ಶೇಕಡ ೨೫ ರಷ್ಟು ಭೂಮಿಗೆ ಮಾತ್ರ ನೀರಾವರಿ ಸೌಲಭ್ಯವಿದೆ.

ಒಟ್ಟು ೧೯೧ ಲಕ್ಷ ಹೆಕ್ಟೇರು ಭೂ ಪ್ರದೇಶದಲ್ಲಿ ನಿವ್ವಳ ಬಿತ್ತನೆಯಾದ ಪ್ರದೇಶ ಸುಮಾರು ೧೦೭ ಲಕ್ಷ ಹೆಕ್ಟೇರುಗಳಿದ್ದು ಶೇಕಡಾ ೫೬ ರಷ್ಟಿದೆ. ಪ್ರಮುಖ ಆಹಾರ ಬೆಳೆಗಳೆಂದರೆ ಅಕ್ಕಿ, ರಾಗಿ, ಜೋಳ, ಮೆಕ್ಕೆ ಜೋಳ ಮತ್ತು ದ್ವಿದಳ ಧಾನ್ಯಗಳು. ರಾಷ್ಟ್ರದ ಕಾಫಿ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇಕಡಾ ೫೯ ರಷ್ಟಿದ್ದು. ಪ್ರತಿ ಹೆಕ್ಟೇರು ಪ್ರದೇಶದಲ್ಲಿ ಬೆಳೆಯುವ ಕಾಫಿಯ ಪ್ರಮಾಣದಲ್ಲಿ ಪ್ರಥಮ ಸ್ಥಾನದಲ್ಲಿದೆ. ಇತರ ಬೆಳೆಗಳೆಂದರೆ ಏಲಕ್ಕಿ, ಅಡಿಕೆ, ಸೂರ್ಯಕಾಂತಿ, ತೆಂಗು, ಗೋಡಂಬಿ, ನೆಲಗಡಲೆ, ಮೆಣಸಿನಕಾಯಿ, ಹರಳೆ ಬೀಜ, ಕಬ್ಬು ಮತ್ತು ತಂಬಾಕು.

ನೀರಾವರಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಪೂರ್ವಕ್ಕೆ ಹರಿಯುವ ನದಿಗಳಾದ ಗೋದಾವರಿ, ಕೃಷ್ಣ, ಕಾವೇರಿ, ಪಲಾರ ಮತ್ತು ಪೆನ್ನಾರ ನದಿ ಬಯಲುಗಳನ್ನು ಹೊಂದಿದೆಯಲ್ಲದೆ. ಅವುಗಳಿಂದ ೧,೯೧,೧೭೦ ಕಿಲೋ ಮೀಟರ್‌ಗಳಷ್ಟು ನಾಲಾ ಪ್ರದೇಶವನ್ನು ಪ್ರಮುಖವಾಗಿ ಹೊಂದಿದೆ. ಅಂದರೆ ಕರ್ನಾಟಕದಲ್ಲಿ ನದಿ ಪಾತ್ರಗಳಿಂದ ಒಟ್ಟು ಸುಮಾರು ೩೪೩೮ ಟಿ. ಎಂ. ಸಿ ನೀರಿದೆ. ಈ ೩೪೩೮ ಟಿ.ಎಂ.ಸಿ ನೀರಿನಲ್ಲಿ ೧೦೧೭.೭೬ ಟಿ. ಎಂ. ಸಿ. ನೀರಿನ ಯೋಜನೆ ಗುರಿ ಹಾಕುಕೊಂಡಿದ್ದು ಉಳಿದ ೨,೪೨೦.೨೪ ಟಿ. ಎಂ. ಸಿ ನೀರಿನ ಯೋಜನೆ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಬೇಕಾಗಿದೆ.

ರೈತ ಚಳುವಳಿ ಹಿನ್ನೆಲೆಯಲ್ಲಿ ಭೂ ಹಿಡುವಳಿ ಮತ್ತು ಭೂ ಸುಧಾರಣಾ ಶಾಸನಗಳ ಅಧ್ಯಯನ ಅವಶ್ಯಕವಾಗಿದೆ. ಈ ಸುಧಾರಣೆಗಳ ಬಗ್ಗೆ ಅವಲೋಕಿಸಿದ ಜಪಾನಿನ ಲೆಡನ್ ಜಿನ್‌ಸ್ಕಿ ಅವರು ಅಭಿಪ್ರಾಯ ಪಟ್ಟಿರುವಂತೆ, ಭೂಮಾಲೀಕತ್ವವನ್ನು ಅಲುಗಾಡಿಸಿದ ರೈತ ಚಳುವಳಿ ಜಪಾನಿನಲ್ಲಿ ಯುದ್ಧ ಪೂರ್ವ ಅವಧಿಯಲ್ಲಿ ಕಂಡು ಬಂದಿತಲ್ಲದೆ, ಎರಡನೇ ಮಹಾಯುದ್ಧದ ನಂತರ ಜಾರಿಗೆ ಬಂದ ರೈತ ಒಡೆತನ ಸ್ಥಾಪಿಸುವ ವಿಶೇಷ ಕ್ರಮಗಳ ಕಾಯ್ದೆಗೆ ಒಂದು ಕಾರಣವಾಗಿತ್ತು.

ಈ ಕಾಯ್ದೆಯು ಯಶಸ್ವಿಯಾಗಿ ಜಾರಿಗೊಳ್ಳಲು ರಾಷ್ಟ್ರದಾದ್ಯಂತ ನಡೆದ ರೈತ ಚಳುವಳಿಯೇ ಕಾರಣವಾಗಿದೆ ಎಂದಿದ್ದಾರೆ. ಎರಿಕ್ ವುಲ್ಫ್ ಅವರು ಮಾಧ್ಯಮಿಕ ರೈತರಲ್ಲಿ ಕ್ರಾಂತಿಕಾರಿ ಸಶಕ್ತತೆಯನ್ನು ಗುರುತಿಸಿದ್ದಾರೆ. ಅವರ ಕ್ರಾಂತಿಕಾರಿ ಸಶಕ್ತತೆಯ ಹಿಂದೆ ಭೂ ಹಿಡುವಳಿಯ ಆಂತರಿಕ ಸುರಕ್ಷತೆ ಕಾರಣವಾಗಿತ್ತು ಎಂದು ಅವರು ಅಭಿಪ್ರಾಯ ಪಡುತ್ತಾರೆ.

ರೈತರಲ್ಲಿ ಭೂಮಿಯ ಮರುಹಂಚಿಕೆ ಮಾಡುವುದಕ್ಕಾಗಿ ೧೮ನೇ ಶತಮಾನದ ಕೊನೆಯ ಹೊತ್ತಿಗೆ ಇಟಲಿಯಲ್ಲಿ ಫೆಡರಲ್ ಹಕ್ಕುಗಳನ್ನು ರದ್ದುಗೊಳಿಸಲಾಗಿತ್ತು. ಈ ಕ್ರಮದಿಂದಾಗಿ ೧೮೬೦ರಲ್ಲಿ ಚರ್ಚಿನ ಎಲ್ಲಾ ಭೂಮಿಯನ್ನು ವಶಪಡಿಸಿಕೊಂಡ ನಂತರ ಈ ಕಾರ್ಯವನ್ನು ತ್ವರಿತಗೊಳಿಸಲಾಯಿತು. ಆದ್ದರಿಂದ ಪ್ರಪಂಚಾದಾದ್ಯಂತ ಎಲ್ಲಾ ರಾಷ್ಟ್ರಗಳ ಭೂ ಸುಧಾರಣೆಗಳು ಭೂ ರಹಿತರು ಮತ್ತು ಜಮೀನ್ದಾರ ವರ್ಗದ ನಡುವಣ ಸಂಘರ್ಷದ ಫಲವಾಗಿದೆ.

ಭಾರತದ ರಾಜ್ಯಗಳಲ್ಲಿ ಭೂ ಸುಧಾರಣೆಗಳ ರೂಪಿಸುವಿಕೆ ಮತ್ತು ಜಾರಿಯಲ್ಲಿ ಕಂಡು ಬಂದ ಸಫಲತೆ ಮತ್ತು ವಿಫಲತೆಗಳು ಕೃಷಿ ಹೋರಾಟಗಳ ತೀವ್ರತೆಯನ್ನು ಅವಲಂಬಿಸಿದ್ದವು. ಅಲ್ಲದೆ ಈ ಭೂ ಸುಧಾರಣಾ ಕಾಯ್ದೆಗಳು ನಿರ್ದಿಷ್ಟ ಪ್ರದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳ ಆಧಾರದ ಮೇಲೆ ರೂಪಿಸಲ್ಪಟ್ಟು ಜಾರಿಗೊಂಡಿದ್ದರಿಂದ ರಾಜ್ಯ ರಾಜ್ಯಗಳ ನಡುವೆ ಭೂ ಸುಧಾರಣೆಗಳು ಹಾಗೂ ಅವುಗಳ ಕಾರ್ಯಾಚರಣೆಯಲ್ಲಿ ಭಿನ್ನತೆಗಳಿದ್ದವು.

೧೯೫೬ರ ರಾಜ್ಯಗಳ ಪುನರ್ ವಿಂಗಡನೆಗೂ ಮೊದಲು ಮೈಸೂರು ರಾಜ್ಯ (ನಂತರ ಕರ್ನಾಟಕವೆಂದು ಪುನರ್ ನಾಮಕರಣ ಗೊಂಡಿದ್ದು) ಮೈಸೂರು, ಬಾಂಬೆ, ಮದ್ರಾಸ್ ಮತ್ತು ತಿರುವಾಂಕೂರು-ಕೊಚ್ಚಿನ್ ರಾಜ ಪ್ರತಿನಿಧಿಗಳನ್ನು ಒಳಗೊಂಡಿತ್ತು. ಆ ಸಂದರ್ಭದಲ್ಲಿ ಭೂ ಗೇಣಿ ಮತ್ತು ಭೂ ನೊಂದಣಿಯಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದವು.

ಇಲ್ಲಿ ೧೯೫೫, ೧೯೬೧ ಮತ್ತು ೧೯೭೪ ಭೂ ಸುಧಾರಣಾ ಕಾಯ್ದೆಗಳು ರೈತ ಚಳುವಳಿಯ ಪ್ರತಿಫಲವೇ ಆಗಿತ್ತು. ಕರ್ನಾಟಕದಲ್ಲಿ ೭೦ರ ದಶಕದ ಮಧ್ಯಭಾಗದವರೆಗೆ ರೈತರ ಚಳುವಳಿಗಳು, ವ್ಯವಸ್ಥಿತ ಸ್ವರೂಪದ ಭೂ ಸುಧಾರಣಾ ಕಾಯ್ದೆಯನ್ನು ರೂಪಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದವು. ಆದರೆ ಅವುಗಳನ್ನು ಸಮರ್ಪಕವಾಗಿ ಜಾರಿ ಗೊಳಿಸಿರಲಿಲ್ಲ. ೧೯೭೦ರ ಕೊನೆಯ ಭಾಗದ ನಂತರ ಭೂರಹಿತರ ಗುಂಪು ಅಥವಾ ಸಾಂಪ್ರದಾಯಿಕವಾಗಿ ಹೆಚ್ಚು ಪ್ರಬಲವಲ್ಲದ ಜಾತಿಗಳ ಮೇಲುಗೈ ಸಾಧಿಸಿದ್ದ ಸರ್ಕಾರ ಹಿಂದಿನ ಭೂಸುಧಾರಣೆ ಕಾನೂನುಗಳನ್ನು ತಿದ್ದುಪಡಿ ಮಾಡಿ ಸಮರ್ಪಕವಾಗಿ ಅವುಗಳನ್ನು ಕಾರ್ಯಗತಗೊಳಿಸಿತು.

ಅಂತಹ ಪರಿಸ್ಥಿತಿಯಲ್ಲಿ ಪ್ರಬಲ ಭೂ ಒಡೆತನ ಹೊಂದಿದ್ದ ಪಂಗಡಗಳು ಸರ್ಕಾರವನ್ನು ನಿಯಂತ್ರಿಸಲು ಬದಲಿ ಶಕ್ತಿಗಳನ್ನು ಹುಡುಕುತ್ತಿದ್ದು ರೈತ ಚಳುವಳಿಯನ್ನು ಅವುಗಳಲ್ಲಿ ಒಂದು ಎಂಬುದಾಗಿ ಗುರುತಿಸಿದವು.

ಭಾರತದ ಸ್ವಾತಂತ್ರ್ಯ ಕೃಷಿಕರನ್ನೇ ಅವಲಂಬಿಸಿದೆ ಹಾಗಾಗಿ ರೈತರೆ ದೇಶದ ಬೆನ್ನೆಲುಬು ಎಂದು ಮಹಾತ್ಮ ಗಾಂಧಿಯವರು ಕರೆದಿದ್ದರು. ಆದರೆ ಸ್ವಾತಂತ್ರ್ಯ ನಂತರದಲ್ಲಿ ಸಂಪೂರ್ಣವಾಗಿ ಸರ್ಕಾರದಿಂದ ನಿರ್ಲಕ್ಷ್ಯಕ್ಕೆ ಒಳಗಾದ ಮತ್ತು ಒಳಗಾಗುತ್ತಿರುವ ವರ್ಗವೇ ಕೃಷಿಕರಾಗಿದ್ದಾರೆ. ಇದೊಂದು ವಿಪರ್ಯಾಸವೇ ಸರಿ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಕೆಲವು ನಾಯಕರ ನೇತೃತ್ವದಲ್ಲಿ ಕೆಲವು ರಾಜ್ಯಗಳಲ್ಲಿ ರೈತ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಹರಿಯಾಣ, ಪಂಜಾಬ್, ಉತ್ತರ ಪ್ರದೇಶದಲ್ಲಿ ಮಹೇಂದ್ರ ಸಿಂಗ್ ಟಿಕಾಯಿತ್ ನೇತೃತ್ವದಲ್ಲಿ ಭಾರತೀಯ ಕಿಸಾನ್ ಯೂನಿಯನ್, ಮಹಾರಾಷ್ಟ್ರದಲ್ಲಿ ಶರದ್ ಜೋಶಿ ನೇತೃತ್ವದಲ್ಲಿ ಮಹಾರಾಷ್ಟ್ರ ಶೇತ್ಕಾರಿ ಸಂಘಟನೆ, ತಮಿಳುನಾಡಿನಲ್ಲಿ ನಾರಾಯಣ ಸ್ವಾಮಿ ನೇತೃತ್ವದಲ್ಲಿ ತಮಿಳುನಾಡು ವ್ಯವಸಾಯಿಗಳ ಸಂಘಂ ಎಂಬ ಸಂಘಟನೆಗಳು ಅಸ್ತಿತ್ವಕ್ಕೆ ಬಂದು ರೈತ ಪರ ಹೋರಾಟಕ್ಕೆ ವೇದಿಕೆ ನಿರ್ಮಾಣಗೊಳಿಸಿದರು.

ಕರ್ನಾಟಕದಲ್ಲೂ ಕಾಗೋಡು ಸತ್ಯಾಗ್ರಹದ ನಂತರ, ಸಮಾಜವಾದಿ ಚಳುವಳಿಯು ರೈತ ಪರ ಕಾಳಜಿಯನ್ನು ಹೊಂದಿತ್ತು. ಸಮಾಜವಾದಿ ಯುವಜನಾ ಸಭಾ ಸಂಘಟನೆಯನ್ನು ಕಟ್ಟಿಕೊಂಡು ಕರ್ನಾಟಕದಲ್ಲಿ ಜಾತಿ ವಿನಾಶ ಚಳುವಳಿ, ಅಂತರ್ಜಾತಿಯ ವಿವಾಹ, ಸರಳ ವಿವಾಹ ಮುಂತಾದ ವಿಶಿಷ್ಟ ಕಾರ್ಯದಲ್ಲಿ ತೊಡಗಿದ್ದ ಪ್ರೊ. ಎಂ. ಡಿ. ನಂಜುಂಡಸ್ವಾಮಿ, ಎನ್. ಡಿ. ಸುಂದರೇಶ್, ಕಡಿದಾಳ್ ಶಾಮಣ್ಣ ಮುಂತಾದವರು ರೈತ ಸಮಸ್ಯೆಗಳ ಬಗ್ಗೆ ಗಂಭೀರ ಚಿಂತನೆ ಮಾಡಲು ಮುಂದಾದರು.

ಅದಕ್ಕೆ ಪೂರಕವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಭತ್ತದ ನಾಶವಾಗಿದ್ದು ಸರಕಾರದ ಪರಿಹಾರ ಬರದಿರುವುದು, ಕಬ್ಬಿನ ಬೆಲೆ ಇಳಿಮುಖವಾದದ್ದು ರೈತರ ಆಕ್ರೋಶಕ್ಕೆ ಕಾರಣವಾಗಿತ್ತು.

ಇಂತಹ ಸಂದರ್ಭದಲ್ಲಿ ೧೯೮೦ರ ಆಕ್ಟೋಬರ್ ಎರಡರ ಗಾಂಧೀ ಜಯಂತಿಯಂದು ಶಿವಮೊಗ್ಗದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಕೃಷಿ ಮಂತ್ರಿ ಹೆಚ್. ಎಸ್. ರುದ್ರಪ್ಪನವರ ನೇತೃತ್ವದಲ್ಲಿ ಕ.ರಾ.ರೈ. ಸಂಘವು ಅಸ್ತಿತ್ವಕ್ಕೆ ಬಂದಿತು. ಅದರ ಪ್ರೇರಕ ಶಕ್ತಿಯಾಗಿದ್ದವರು. ಪ್ರೊ. ಎಂ. ಡಿ. ನಂಜುಂಡಸ್ವಾಮಿ, ಎನ್. ಡಿ. ಸುಂದರೇಶ್, ಕಡಿದಾಳ್ ಶಾಮಣ್ಣ, ಪೂರ್ಣಚಂದ್ರ ತೇಜಸ್ವಿಯಂಥ ಸಮಾಜವಾದಿ ಚಿಂತಕರು. ಸಮಾಜವಾದಿ ನಾಯಕರ ದೂರದೃಷ್ಟಿಕೋನದಿಂದ ಅಸ್ತಿತ್ವಕ್ಕೆ ಬಂದ ಸಂಘಟನೆಗೆ ಸೇರ್ಪಡೆಯಾದ ಇತರೆ ನಾಯಕರೆಂದರೆ ಜಾನಪದ ಸಾಹಿತಿ ಡಾ. ಹಿ. ಶಿ. ರಾಮಚಂದ್ರೇಗೌಡ, ನ್ಯಾಯವಾದಿ ಪ್ರೊ. ರವಿವರ್ಮ ಕುಮಾರ್, ಹಾಸನದ ಮಂಜುನಾಥ ದತ್ತ, ಆ. ಪಿ. ವೆಂಕಟೇಶ್ ಮೂರ್ತಿ, ಮಂಡ್ಯದ ಎಸ್. ಶ್ರೀನಿವಾಸ್, ಶಿವಮೊಗ್ಗದ ಎನ್. ಗಂಗಾಧರ್, ಹೆಚ್. ಆರ್. ಬಸವರಾಜಪ್ಪ, ಬೆಳಗಾವಿಯ ಬಾಬಾಗೌಡ ಪಾಟೀಲ, ಉತ್ತರ ಕರ್ನಾಟಕದ ಬಸವರಾಜಪ್ಪ, ಹನುಮನ ಗೌಡ ಮುಂತಾದ ಪ್ರಜ್ಞಾವಂತ ನಾಯಕರು.

ಸಂಘ ಅಸ್ತಿತ್ವಕ್ಕೆ ಬಂದ ಪ್ರಾರಂಭದಲ್ಲಿ ಯಾವ ರಾಜಕೀಯ ಪಕ್ಷದ ಒಲವು ಇಲ್ಲದೆ, ಅಧಿಕಾರದ ಲಾಲಸೆಯೂ ಇಲ್ಲದೆ ರೈತರ ಸಮಸ್ಯೆಗಳಾದ ಸಾಲ ಭಾದೆ, ಸಾಲ ವಸೂಲಾತಿಗೆ ಜಪ್ತಿ, ಬೆಳೆ ಹಾನಿ, ಸೂಕ್ತ ಬೆಂಬಲ ಬೆಲೆ ಇಲ್ಲದಿರುವುದು, ದಲ್ಲಾಳಿಗಳ ಶೋಷಣೆ, ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ರೈತರ ಧ್ವನಿಯಾಗಿ ಪರಿಹಾರ ಕಂಡು ಕೊಳ್ಳುವ ಒತ್ತಡದ ಗುಂಪಾಗಿ ಕಾರ್ಯ ನಿರ್ವಹಿಸಿತು.

ರೈತ ಸಂಘ ತನ್ನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ತನ್ನದೇ ಆದ ವಿನೂತನ ಹೋರಾಟದ ಮಾರ್ಗಗಳನ್ನು ಅಳವಡಿಸಿಕೊಂಡಿತು. ರೈತ ವಿರೋಧಿ ಅಧಿಕಾರಿಗಳಿಗೆ, ನೌಕರರಿಗೆ ಪ್ರವೇಶವಿಲ್ಲ, ಎಂಬ ಫಲಕಗಳು ಹಳ್ಳಿಗಳಲ್ಲಿ ರಾರಾಜಿಸಿದವು, ಜನ ಪ್ರತಿನಿಧಿಗಳನ್ನು ಕೂಡ ನಿಲ್ಲಿಸಿ ತಮ್ಮ ಹಕ್ಕುಗಳನ್ನು ಕೇಳುವ, ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡದಿದ್ದರೆ ಗ್ರಾಮ ಪ್ರವೇಶ ನಿಷಿದ್ಧದಂತಹ ಪ್ರತಿಭಟನೆಗಳು ನಡೆಯ ತೊಡಗಿದವು. ಲಕ್ಷಾಂತರ ರೈತರು ಬೆಂಗಳೂರಿಗೆ ಬಂದು ಸರ್ಕಾರದ ರೈತ ವಿರೋಧಿ ಧೋರಣೆಯನ್ನು ಖಂಡಿಸಿದವು.

೧೯೮೩ರಲ್ಲಿ ರಾಜ್ಯದ ಮುಖ್ಯಂತ್ರಿಯಾಗಿದ್ದ ಆರ್. ಗುಂಡುರಾವ್‌ರವರಿಗೆ, ರೈತ ಚಳುವಳಿ ನುಂಗಲಾರದ ತುತ್ತಾಯಿತು. ಇದೇ ಸಂದರ್ಭದಲ್ಲಿ ನರಗುಂದದಲ್ಲಿ

ಸೇರಿದ್ದ ಭಾರೀ ರೈತ ಸಮಾವೇಶದಲ್ಲಿ ದರ್ಪಿಷ್ಟ ಅಧಿಕಾರಿಯೊಬ್ಬ ರೈತರತ್ತ ಬೂಟುಗಾಲು ತೋರಿಸಿದಾಗ ರೈತರು ರೊಚ್ಚಿಗೆದ್ದರು. ಆಕ್ರೋಶದಿಂದ ಕುದಿಯುತ್ತಿದ್ದ ರೈತರು ಆತನ ಮೇಲೆ ದಾಳಿ ಮಾಡಿ ಕೊಂದು ಹಾಕಿದರು, ಇನ್ನೊಬ್ಬ ಅಧಿಕಾರಿಯ ಮೂಳೆ ಮುರಿದರು, ಮತ್ತೊಬ್ಬ ತಹಶೀಲ್ದಾರರನ್ನು ಚೆನ್ನಾಗಿ ಥಳಿಸಿದರು.

ಇದು ಗಾಂಧಿಯ ತತ್ವ ವಿಚಾರವನ್ನು ಮೂಲವಾಗಿ ಅಳವಡಿಸಿಕೊಂಡ ರೈತ ಸಂಘಟನೆಯಿಂದಾದ ಹಿಂಸಾತ್ಮಕ ಕೃತ್ಯವಾಗಿ, ರೈತ ಚಳುವಳಿ ಇತಿಹಾಸದಲ್ಲಿ ದಾಖಲಿಸಲ್ಪಟ್ಟ ಕಪ್ಪು ಘಟನೆಯಾಯಿತು. ಆದರೆ ಒಬ್ಬ ಅಧಿಕಾರಿಯ ಬಲಿಗೆ ಪರ್ಯಾಯವಾಗಿ ಗುಂಡುರಾವ್‌ರವರ ಸರ್ವಾಧಿಕಾರಿ ಸರ್ಕಾರ ೧೪೦ ರೈತರನ್ನು ಪೋಲಿಸರ ಗೋಲಿಬಾರ್‌ನಿಂದ ಹತ್ಯೆ ಮಾಡುವ ಮೂಲಕ ಪ್ರತೀಕಾರ ತೀರಿಸಿಕೊಂಡಿತು.

೧೯೮೩ರಲ್ಲಿ, ಈ ಘಟನೆಯ ನಂತರದಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲನ್ನು ಅನುಭವಿಸಿತು. ಈ ಬದಲಾವಣೆ ರೈತ ಚಳುವಳಿಯನ್ನು ಹೆಚ್ಚು ಸಂಘಟಿತವಾಗಲು ಕಾರಣವಾಯಿತು.

ಆದರೆ ೧೯೮೩ರ ಚುನಾವಣೆಯಲ್ಲಿ ಅಸ್ತಿತ್ವಕ್ಕೆ ಬಂದ ರಾಮಕೃಷ್ಣ ಹೆಗಡೆ ನೇತೃತ್ವದ ಕಾಂಗ್ರೇಸ್ಸೇತರ ಸರ್ಕಾರ ರೈತರ ಸಮಸ್ಯೆಯನ್ನು ಪರಿಹರಿಸುವಲ್ಲಿ ವಿಫಲವಾಯಿತು. ಇದನ್ನು ವಿರೋಧಿಸಿ ೧೯೮೪ರಲ್ಲಿ ಸರ್ಕಾರದ ವಿರುದ್ಧ ರೈತ ಸಂಘ ಬೆಂಗಳೂರಿನಲ್ಲಿ ಭಾರಿ ಸಮಾವೇಶವನ್ನು ನಡೆಸಿತು. ಈ ಸಮಾವೇಶದ ತರುವಾಯ ಸರ್ಕಾರದ ಪರ ಮತ್ತು ವಿರುದ್ಧವಾದ ಅಭಿಪ್ರಾಯದ ಆಧಾರದ ಮೇಲೆ ಸಂಘಟನೆಯಿಂದ ಉಚ್ಛಾಟನೆಗೊಂಡಿದ್ದ ರೇವಣಸಿದ್ಧಯ್ಯ ನೇತೃತ್ವದಲ್ಲಿ ಮತ್ತೊಂದು 'ಕರ್ನಾಟಕ ಪ್ರಾಂತ ರೈತ ಸಂಘ' ಅಸ್ತಿತ್ವಕ್ಕೆ ಬಂದು, ಸರ್ಕಾರದ ಪರವಾದ ನಿಲುವನ್ನು ಪಡೆದು ಕೊಂಡಿತು.

೧೯೮೪ರ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ, ಭಾರಿ ಸಂಖ್ಯೆಯ ರೈತ ಸಮಾವೇಶವನ್ನು ಕಂಡ ರೈತ ಸಂಘದ ನಾಯಕರು, ಅವರೆಲ್ಲ ರೈತ ಸಂಘದ ಮತದಾರರು ಎಂಬ ಭ್ರಮಾಲೋಕದಲ್ಲಿ ವಿಹರಿಸಿದರು. ಆದರೆ ಕರ್ನಾಟಕದಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು ಜನತಂತ್ರ ನಾಯಕರಿಂದ ರಚನೆಯಾಗಿದ್ದು, ಅವುಗಳೆಲ್ಲವೂ ರೈತ ಆಧಾರಿತ ರಾಜಕೀಯ ಪಕ್ಷಗಳು ಎಂಬ ವಾಸ್ತವವನ್ನು ಅರಿತುಕೊಳ್ಳುವಲ್ಲಿ ವಿಫಲವಾದರು. ಅದರ ಫಲವೇ ರೈತ ಸಂಘ ೧೯೮೪ರಲ್ಲಿ 'ಮತದಾರರ ವೇದಿಕೆ'ಯ ಹೆಸರಲ್ಲಿ ಲೋಕಸಭೆ ಚುನಾವಣೆಯಲ್ಲಿ ಕೆಲವು ಕ್ಷೇತ್ರಗಳಲ್ಲಿ ರೈತ ಸಂಘದ ಅಭ್ಯರ್ಥಿಗಳನ್ನು

ಸ್ಪರ್ಧೆಗಿಳಿಸಿದರು. ಆದರೆ ಬಹುತೇಕ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡರು.

ನಂತರದಲ್ಲಿ ಡಂಕೆಲ್ ಪ್ರಸ್ತಾಪ, ಗ್ಯಾಟ್ ಒಪ್ಪಂದ, ವಿಶ್ವ ವ್ಯಾಪಾರ ಮುಂತಾದ ಜಾಗತಿಕ ವಿಚಾರಗಳನ್ನು ಒಳಗೊಂಡ 'ನವ ರೈತ ಚಳುವಳಿ'ಯಾಗಿ ಪರಿವರ್ತನೆಗೊಂಡಿತು. ಆದರೆ ಸಂಘದ ಮಾನವೀಯ ಸೆಲೆಯಾಗಿದ್ದ ಎಸ್. ಡಿ. ಸುಂದರೇಶ್ ಮತ್ತು ಸಂಘದ ಆತ್ಮದಂತಿದ್ದ ರುದ್ರಪ್ಪನವರ ಮರಣದಿಂದ ಸಂಘವು ಸಂಪೂರ್ಣವಾಗಿ ನಂಜುಂಡಸ್ವಾಮಿಯವರ ನೇತೃತ್ವದ ನಾಯಕತ್ವವನ್ನು ಬಯಸಿತು. ಅವರೇ ಅಧ್ಯಕ್ಷರಾದರು.

೧೯೮೯ರ ಚುನಾವಣೆಯ ಸಂದರ್ಭದಲ್ಲಿ ರೈತ ಸಂಘ ಚುನಾವಣೆಯಲ್ಲಿ ಭಾಗವಹಿಸಬೇಕೆ ? ಎಂಬ ವಿಚಾರವಾಗಿ ಭಿನ್ನಾಭಿಪ್ರಾಯ ತಲೆದೂರಿತು. ಕಡಿದಾಳ್ ಶಾಮಣ್ಣನವರು ರಾಜಕೀಯ ಪ್ರವೇಶ ಬೇಡ ಎಂಬ ಅಭಿಪ್ರಾಯವನ್ನು ನೀಡಿದ್ದರಿಂದ ಶಾಮಣ್ಣನವರನ್ನು ಕುರಿತು ನಂಜುಂಡ ಸ್ವಾಮಿಯವರು ಸಂಘದಲ್ಲಿ ಒಂದು ನೀವಿರಬೇಕು ಅಥವಾ ನಾನೀರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ, ಶಾಮಣ್ಣನವರು ಸಂಘಕ್ಕೆ ನಿಮ್ಮ ಅಗತ್ಯ ಬಹಳಷ್ಟಿದೆ ಆದ್ದರಿಂದ ನೀವಿರಿ, ನಾನು ಹೊರ ಹೋಗುತ್ತೇನೆಂದು ಹೇಳಿ ಸಂಘದಿಂದ ಭಾರದ ಹೃದಯ ಹೊತ್ತು ಹೊರ ನಡೆದರು.

ಈ ಚುನಾವಣೆಯಲ್ಲಿ, ಹಲವಾರು ಕ್ಷೇತ್ರಗಳಲ್ಲಿ, ಕರ್ನಾಟಕ ರಾಜ್ಯ ರೈತ ಸಂಘದ ಹೆಸರಲ್ಲಿ, ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸಲಾಯಿತು. ಆದರೆ ೧೯೮೫ರ ಚುನಾವಣೆ ಒಳ್ಳೆ ಅನುಭವವನ್ನು ನೀಡಿತ್ತು. ಆ ಅನುಭವದ ಜೊತೆ ೧೯೮೯ರ ಚುನಾವಣೆ ಮತ್ತೊಂದು ಅನುಭವವನ್ನು ನೀಡಿತು. ಕರ್ನಾಟಕದಲ್ಲಿ ರೈತ ಸಂಘದ ಸರ್ಕಾರ ರಚನೆಯಾಗುತ್ತೇ ಎಂಬ ಭ್ರಮೆಯಲ್ಲಿದ್ದ ನಂಜುಂಡಸ್ವಾಮಿಯವರಿಗೆ, ರೈತ ಸಂಘದ ಎಲ್ಲಾ ಅಭ್ಯರ್ಥಿಗಳು ಸೋತು ಬಾಬಾ ಗೌಡ ಪಾಟೀಲರು ಮಾತ್ರ ಧಾರಾವಾಡ ದಕ್ಷಿಣ ಮತ್ತು ಬೆಳಗಾವಿ ಎರಡೂ ಕ್ಷೇತ್ರಗಳಲ್ಲೂ ಗೆದ್ದು ಇತಿಹಾಸ ನಿರ್ಮಿಸಿದರು. ನಂತರ ದಕ್ಷಿಣ ಧಾರವಾಡದ ಕ್ಷೇತ್ರವನ್ನು ತೆರವು ಗೊಳಿಸಿ, ನಂಜುಂಡ ಸ್ವಾಮಿಯವರನ್ನು ಸ್ಪರ್ಧೆಗಿಳಿಸಿ ಗೆಲ್ಲಿಸಿದರು. ಒಂದೇ ವಿಧಾನ ಸಭೆಯಲ್ಲಿ ಇಬ್ಬರು ರೈತ ಸಂಘದ ಸದಸ್ಯರು ರೈತರ ಹಲವಾರು ವಿಚಾರಗಳನ್ನು ಸುದೀರ್ಘವಾಗಿ ಚರ್ಚಿಸಿದರು. ಸದನದ ಗಮನಕ್ಕೆ ಹಲವಾರು ವಿಷಯಗಳನ್ನು ಸ್ಪಷ್ಟಪಡಿಸಿದರು. ಆದರೆ ಸಂಖ್ಯೆಯ ಬೆಂಬಲವಿಲ್ಲದ ಕಾರಣದಿಂದ ರೈತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲವಾದರು. ಹಾಗೆಯೇ ೧೯೯೪ರ ಚುನಾವಣೆಯಲ್ಲಿ ಹಲವಾರು ರೈತ ಸಂಘದ ಅಭ್ಯರ್ಥಿಗಳು ಸ್ಪರ್ಧಿಸಿದ್ದರೂ ಪಾಂಡವಪುರದಿಂದ ಕೆ. ಎಸ್. ಪುಟ್ಟಣ್ಣಯ್ಯ ಮಾತ್ರ

ಆಯ್ಕೆಯಾದರು.

ನಂಜುಂಡಸ್ವಾಮಿಯವರ ಸರ್ವಾಧಿಕಾರದಿಂದ ಸಂಘ ನಲುಗುತ್ತಿದೆ, ಆದ್ದರಿಂದ ರಾಜಕೀಯ ಗೆಲುವಿಗೆ ಸಂಘಟನೆ ಅವಶ್ಯಕ ಎಂದು ಭಾವಿಸಿ, ೧೯೭೭ರಲ್ಲಿ ದಲಿತ ಮತ್ತು ಭಾಷಾ ಚಳುವಳಿಗಳನ್ನು ಒಳಗೊಂಡ 'ಕನ್ನಡ ದೇಶ' ಎಂಬ ರಾಜಕೀಯ ಪಕ್ಷವನ್ನು ರಚಿಸಲಾಯಿತು. ಆದರೂ ಅದು ಯಶಸ್ವಿಯಾಗಲಿಲ್ಲ. ೧೯೯೯ರ ಚುನಾವಣೆಯಲ್ಲಿ ಯಾವೊಬ್ಬ 'ಕನ್ನಡ ದೇಶ' ಪಕ್ಷದ ಅಭ್ಯರ್ಥಿ ಗೆಲವು ಸಾಧಿಸಲು ಸಾಧ್ಯವಾಗದಿರುವುದು ಇದನ್ನು ಸಾಬಿತುಪಡಿಸಿತು.

ಆದರೆ ೨೦೦೪ರ ಫೆಬ್ರವರಿ ೩ರಂದು, ರೈತ ಸಂಘದ ಸೈದ್ಧಾಂತಿಕ ಬೆನ್ನೆಲುಬಾಗಿದ್ದ ನಂಜುಂಡ ಸ್ವಾಮಿಯವರು ಮರಣ ಹೊಂದಿದುದರಿಂದ ರೈತ ಸಂಘ ಇಂದು ಚುಕ್ಕಿ ನಂಜುಂಡ ಸ್ವಾಮಿ, ಕೆ. ಎಸ್. ಪುಟ್ಟಣ್ಣಯ ಮತ್ತು ಕೋಡಿಹಳ್ಳಿ ಚಂದ್ರಶೇಖರ್‌ರವರ ನಾಯಕತ್ವದಲ್ಲಿ ಮೂರು ಗುಂಪುಗಳಾಗಿ ಹೊಡೆದು ಹೋಗಿ ಯಾವುದೇ ರೈತ ಸಮಸ್ಯೆಯನ್ನು ಪರಿಹರಿಸುವಲ್ಲಿ ವಿಫಲವಾಗಿದೆ. ಆದರೆ ನಂಜುಂಡಸ್ವಾಮಿಯವರ ೨ನೇ ಪುಣ್ಯತಿಥಿಯ ಸಂದರ್ಭದಲ್ಲಿ ತಮ್ಮ ಹಿಂದಿನ ಅನುಭವ ಪ್ರತಿಫಲ ನೀಡುವಂತೆ ಭಾಸವಾಗುತ್ತಿದೆ. ಆದ್ದರಿಂದ ಎಲ್ಲಾ ಸಂಘಟನೆಗಳು ಒಂದೇ ವೇದಿಕೆಯ ಅಡಿಯಲ್ಲಿ ಒಂದಾಗುವ ಪ್ರಯತ್ನ ನಡೆಸುತ್ತಿವೆ.

ಪ್ರಸ್ತುತ ಅಧ್ಯಯನ ಕ.ರಾ.ರೈ.ಸಂ.ವು ಕೈಗೊಂಡ ವೈಜ್ಞಾನಿಕ ಬೆಲೆ, ಬೆಳೆ ವಿಮೆ, ಸಹಕಾರ ಬ್ಯಾಂಕುಗಳ ಸಾಲ ಮನ್ನಾ, ವಿದ್ಯುತ್ ಶಕ್ತಿ ತೆರಿಗೆ ಇಳಿತ, ಮಾರುಕಟ್ಟೆ ಮತ್ತು ಸಾಲ ಇತ್ಯಾದಿಗಳಿಗೆ ನಡೆಸಿದ ಚಳುವಳಿಗಳ ಪರಿಶೀಲನೆಯನ್ನು ಕೈಗೊಂಡಿದೆ.

೧೯೭೦ರ ದಶಕದ ಕೊನೆಯಭಾಗದಲ್ಲಿ ಮತ್ತು ೧೯೮೦ರ ದಶಕದ ಆದಿ ಭಾಗದಲ್ಲಿ ಭಾರತದ ರೈತ ಚಳುವಳಿಯಲ್ಲಿ ನವ ರೈತ ಚಳುವಳಿಯ ಉಗಮವನ್ನು, ಟಾಮ್ ಬ್ರಾಸ್‌ರವರು ತಮ್ಮ 'ನ್ಯೂ ಫಾರ್ಮರ್ಸ್ ಮೂವ್‌ಮೆಂಟ್ಸ್' ಎಂಬ ಗಂಥ್ರದಲ್ಲಿ ಹಸಿರು ಕ್ರಾಂತಿಯ ಪ್ರದೇಶಗಳಲ್ಲಿ ಗುರುತಿಸುತ್ತಾರೆ. ಅವರು ಹಳೆಯ ಮತ್ತು ನವ ರೈತ ಚಳುವಳಿಗಳನ್ನು ಪ್ರತ್ಯೇಕಿಸಿ ನೋಡಿದ್ದಾರೆ. ಹಿಂದಿನ ರೈತ ಚಳುವಳಿ ನಿರ್ದಿಷ್ಟವಾಗಿ ಭೂ ಮಾಲೀಕರ ವಿರುದ್ಧವಾಗಿತ್ತು ಹಾಗೂ ೭೦ರ ದಶಕದಲ್ಲಿ ಎಲ್ಲಾ ಬೆಳೆಗಳನ್ನು ಬೆಳೆಯುವ ರೈತರು ಯಾವುದೇ ವರ್ಗವನ್ನು ತಮ್ಮೊಳಗೆ ಇಟ್ಟುಕೊಳ್ಳದೆ ಒಂದಾಗಿ ರಾಜ್ಯಕ್ಕೆ ಬೆಂಬಲ ಬೆಲೆಗಾಗಿ ಬೇಡಿಕೆ ಸಲ್ಲಿಸಿದ್ದವು. ಆದರೆ ನವ ರೈತ ಚಳುವಳಿಯ ಕೆಲವು ಪ್ರಮುಖ ಬೇಡಿಕೆಗಳೆಂದರೆ, ಮೊದಲನೆಯದಾಗಿ, ತಾವು ಬೆಳೆದ ಧಾನ್ಯಗಳಿಗೆ ಬೆಂಬಲ ಬೆಲೆ ನಿಗಧೀ ಮಾಡುವುದು, ಎರಡನೆಯದಾಗಿ, ಭೂಮಿ ರೈತ ಚಳುವಳಿಯ

ಕಾರ್ಯಸೂಚಿಯಲ್ಲಿದ್ದರೂ ಹಿಂದಿನ ರೈತ ಚಳುವಳಿಯ ಜಮೀನ್ದಾರಿ ಪದ್ಧತಿಯ ಹೋರಾಟದಂತಲ್ಲ ಅದರ ಬದಲಾಗಿ ಭೂಮಿಯನ್ನು ಉತ್ತಮ ಪಡಿಸಿ ಆ ಮೂಲಕ ಗ್ರಾಮೀಣ ಬಡತನವನ್ನು ನಿರ್ಮೂಲನೆ ಮಾಡಲು ಹೋರಾಟ. ಮೂರನೆಯದಾಗಿ, ಕೃಷಿಗೆ ಹೆಚ್ಚಿನ ಸಹಾಯಧನವನ್ನು ನೀಡಬೇಕು. ನಾಲ್ಕನೆಯದಾಗಿ, ನವ ರೈತ ಚಳುವಳಿ ಕೃಷಿ ಕೂಲಿ ಕಾರ್ಮಿಕರು ಮತ್ತು ಬಡ ಕೃಷಿಕರನ್ನು ತಮ್ಮ ಹೋರಾಟಕ್ಕೆ ಸೇರ್ಪಡೆ ಮಾಡಿಕೊಂಡು ತಮ್ಮ ಬೆಂಬಲಿಗರ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ ಹಾಗೂ ಮುಂತಾದವುಗಳು. ಹಾಗೆಯೇ ಅವರು ಮುಂದುವರೆದು ನವ ರೈತ ಚಳುವಳಿಯಲ್ಲಿ ಚರ್ಚೆಗೊಳದಾದ ಒಂದು ಪ್ರಮುಖ ವಿಷಯವೆಂದರೆ ರಾಜಕೀಯ ಸೈದ್ಧಾಂತಿಕ ಸಂಬಂಧದಿಂದ ರೂಪಗೊಂಡ ನೈಸರ್ಗಿಕ ಮಹಿಳಾವಾದ.

ರುಡಾಲ್ಫರು ತಮ್ಮ "ಮಾಡರ್ನಿಟಿ ಆಫ್ ಟ್ರಡಿಷನ್ : ಪೊಲಿಟಿಕಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ" ಎಂಬ ಗ್ರಂಥದಲ್ಲಿ ನವ ರೈತ ಚಳುವಳಿಯನ್ನು ದೊಡ್ಡ ಹಿಡುವಳಿದಾರರ ಹೋರಾಟ ಎಂದು ಬಣ್ಣಿಸಿ ತಮ್ಮ ಬೆಳೆಗಳಿಗೆ ಬೆಂಬಲ ಬೆಲೆಯ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ ಎಂದಿದ್ದಾರೆ.

ಧನಾಗರೆಯವರು, 'ಪೆಸೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ' ಎಂಬ ಗ್ರಂಥದಲ್ಲಿ ಭಾರತದ ಹಲವಾರು ಭಾಗಗಳಲ್ಲಿ ನಡೆದ ರೈತ ಚಳುವಳಿಯನ್ನು ವಿಮರ್ಶಿಸಿದ್ದಾರೆ ಹಾಗೂ ಭಾರತದ ರೈತ ಸಮಸ್ಯೆಗಳು ಎಲ್ಲಾ ಭಾಗಗಳಲ್ಲೂ ಒಂದೇ ತೆರನಾಗಿದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಆದರೆ ಅವರ ವಿಚಾರಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಭಿನ್ನವಾಗಿದೆ ಎಂದಿದ್ದಾರೆ. ಕೆಲವು ರೈತ ದಂಗೆಗಳು ಮತ್ತು ಹೋರಾಟದ ವಿಧಾನಗಳು (ಉದಾಹರಣೆಗೆ, ಮಾಪಿಳ್ಳಾ ದಂಗೆ, ಬಾರ್ದೋಲಿ ಸತ್ಯಾಗ್ರಹ, ಔದ್‌ನ ರೈತ ಚಳುವಳಿ, ತೆಬಗಾ ಚಳುವಳಿ) ಇಂದಿಗೂ ಐತಿಹಾಸಿಕವಾಗಿ ಗಾಢವಾದ ಪರಿಣಾಮವನ್ನು ಬೀರಿವೆ ಎಂದಿದ್ದಾರೆ.

ರಣಜಿತ್ ಗುಹಾ ತಮ್ಮ 'ಎಲಿಮೆಂಟರಿ ಆಸ್ಪೆಕ್ಟ್ಸ್ ಆಫ್ ಪೆಸೆಂಟ್ ಇನ್‌ಸರ್‌ಜೆನ್ಸಿ ಇನ್ ಕೊಲೊನಿಯಲ್ ಇಂಡಿಯಾ' ಎಂಬ ಗ್ರಂಥದಲ್ಲಿ, ಜನತಾ ರಾಜಕೀಯ ಒಂದು ಸ್ವಾಯತ್ತತಾ ಕ್ಷೇತ್ರವನ್ನು ಹೊಂದಿದೆ ಎಂದು ವಾದಿಸುತ್ತಾ ಇದು ಯಾವುದೇ ಒಂದು ಹಿನ್ನೆಲೆಯಿಂದ ಹುಟ್ಟಿದ್ದು ಅಲ್ಲ, ಹಾಗೆಯೇ ಯಾವುದೇ ಆಧುನಿಕತೆಯ ಮೇಲೆ ಅವಲಂಭಿತವಾದುದು ಅಲ್ಲ ಎಂದಿದ್ದಾರೆ. ಇಂತಹ ಚಳುವಳಿಗಳು ಕರ್ನಾಟಕದ ಹಲವು ಭಾಗಗಳಲ್ಲಿ ನಡೆದ ಹಲವು ಬಗೆಯ ದಂಗೆಗಳನ್ನು ಮತ್ತು ಹೋರಾಟಗಳನ್ನು ಚರ್ಚಿಸುತ್ತವೆ ಎಂದಿದ್ದಾರೆ.

ಅಸ್ಸಾದಿಯವರು ಭಾರತದಲ್ಲಿ ಶ್ರೀಮಂತ ಒಕ್ಕಲುತನದ ಹುಟ್ಟು, ಬೆಳವಣಿಗೆ

ಆಯ್ಕೆಯಾದರು.

ನಂಜುಂಡಸ್ವಾಮಿಯವರ ಸರ್ವಾಧಿಕಾರದಿಂದ ಸಂಘ ನಲುಗುತ್ತಿದೆ, ಆದ್ದರಿಂದ ರಾಜಕೀಯ ಗೆಲುವಿಗೆ ಸಂಘಟನೆ ಅವಶ್ಯಕ ಎಂದು ಭಾವಿಸಿ, ೧೯೯೭ರಲ್ಲಿ ದಲಿತ ಮತ್ತು ಭಾಷಾ ಚಳುವಳಿಗಳನ್ನು ಒಳಗೊಂಡ 'ಕನ್ನಡ ದೇಶ' ಎಂಬ ರಾಜಕೀಯ ಪಕ್ಷವನ್ನು ರಚಿಸಲಾಯಿತು. ಆದರೂ ಅದು ಯಶಸ್ವಿಯಾಗಲಿಲ್ಲ. ೧೯೯೯ರ ಚುನಾವಣೆಯಲ್ಲಿ ಯಾವೊಬ್ಬ 'ಕನ್ನಡ ದೇಶ' ಪಕ್ಷದ ಅಭ್ಯರ್ಥಿ ಗೆಲವು ಸಾಧಿಸಲು ಸಾಧ್ಯವಾಗದಿರುವುದು ಇದನ್ನು ಸಾಬಿತುಪಡಿಸಿತು.

ಆದರೆ ೨೦೦೪ರ ಫೆಬ್ರವರಿ ೩ರಂದು, ರೈತ ಸಂಘದ ಸೈದ್ಧಾಂತಿಕ ಬೆನ್ನೆಲುಬಾಗಿದ್ದ ನಂಜುಂಡ ಸ್ವಾಮಿಯವರು ಮರಣ ಹೊಂದಿದುದರಿಂದ ರೈತ ಸಂಘ ಇಂದು ಚುಕ್ಕಿ ನಂಜುಂಡ ಸ್ವಾಮಿ, ಕೆ. ಎಸ್. ಪುಟ್ಟಣ್ಣಯ ಮತ್ತು ಕೋಡಿಹಳ್ಳಿ ಚಂದ್ರಶೇಖರ್‌ರವರ ನಾಯಕತ್ವದಲ್ಲಿ ಮೂರು ಗುಂಪುಗಳಾಗಿ ಹೊಡೆದು ಹೋಗಿ ಯಾವುದೇ ರೈತ ಸಮಸ್ಯೆಯನ್ನು ಪರಿಹರಿಸುವಲ್ಲಿ ವಿಫಲವಾಗಿದೆ. ಆದರೆ ನಂಜುಂಡಸ್ವಾಮಿಯವರ ೨ನೇ ಪುಣ್ಯತಿಥಿಯ ಸಂದರ್ಭದಲ್ಲಿ ತಮ್ಮ ಹಿಂದಿನ ಅನುಭವ ಪ್ರತಿಫಲ ನೀಡುವಂತೆ ಭಾಸವಾಗುತ್ತಿದೆ. ಆದ್ದರಿಂದ ಎಲ್ಲಾ ಸಂಘಟನೆಗಳು ಒಂದೇ ವೇದಿಕೆಯ ಅಡಿಯಲ್ಲಿ ಒಂದಾಗುವ ಪ್ರಯತ್ನ ನಡೆಸುತ್ತಿವೆ.

ಪ್ರಸ್ತುತ ಅಧ್ಯಯನ ಕ.ರಾ.ರೈ.ಸಂ.ವು ಕೈಗೊಂಡ ವೈಜ್ಞಾನಿಕ ಬೆಲೆ, ಬೆಳೆ ವಿಮೆ, ಸಹಕಾರ ಬ್ಯಾಂಕುಗಳ ಸಾಲ ಮನ್ನಾ, ವಿದ್ಯುತ್ ಶಕ್ತಿ ತೆರಿಗೆ ಇಳಿತ, ಮಾರುಕಟ್ಟೆ ಮತ್ತು ಸಾಲ ಇತ್ಯಾದಿಗಳಿಗೆ ನಡೆಸಿದ ಚಳುವಳಿಗಳ ಪರಿಶೀಲನೆಯನ್ನು ಕೈಗೊಂಡಿದೆ.

೧೯೭೦ರ ದಶಕದ ಕೊನೆಯಭಾಗದಲ್ಲಿ ಮತ್ತು ೧೯೮೦ರ ದಶಕದ ಆದಿ ಭಾಗದಲ್ಲಿ ಭಾರತದ ರೈತ ಚಳುವಳಿಯಲ್ಲಿ ನವ ರೈತ ಚಳುವಳಿಯ ಉಗಮವನ್ನು, ಟಾಮ್ ಬ್ರಾಸ್‌ರವರು ತಮ್ಮ 'ನ್ಯೂ ಫಾರ್ಮರ್ಸ್ ಮೂವ್‌ಮೆಂಟ್ಸ್' ಎಂಬ ಗಂಥ್ರದಲ್ಲಿ ಹಸಿರು ಕ್ರಾಂತಿಯ ಪ್ರದೇಶಗಳಲ್ಲಿ ಗುರುತಿಸುತ್ತಾರೆ. ಅವರು ಹಳೆಯ ಮತ್ತು ನವ ರೈತ ಚಳುವಳಿಗಳನ್ನು ಪ್ರತ್ಯೇಕಿಸಿ ನೋಡಿದ್ದಾರೆ. ಹಿಂದಿನ ರೈತ ಚಳುವಳಿ ನಿರ್ದಿಷ್ಟವಾಗಿ ಭೂ ಮಾಲೀಕರ ವಿರುದ್ಧವಾಗಿತ್ತು ಹಾಗೂ ೭೦ರ ದಶಕದಲ್ಲಿ ಎಲ್ಲಾ ಬೆಳೆಗಳನ್ನು ಬೆಳೆಯುವ ರೈತರು ಯಾವುದೇ ವರ್ಗವನ್ನು ತಮ್ಮೊಳಗೆ ಇಟ್ಟುಕೊಳ್ಳದೆ ಒಂದಾಗಿ ರಾಜ್ಯಕ್ಕೆ ಬೆಂಬಲ ಬೆಲೆಗಾಗಿ ಬೇಡಿಕೆ ಸಲ್ಲಿಸಿದ್ದವು. ಆದರೆ ನವ ರೈತ ಚಳುವಳಿಯ ಕೆಲವು ಪ್ರಮುಖ ಬೇಡಿಕೆಗಳೆಂದರೆ, ಮೊದಲನೆಯದಾಗಿ, ತಾವು ಬೆಳೆದ ಧಾನ್ಯಗಳಿಗೆ ಬೆಂಬಲ ಬೆಲೆ ನಿಗಧೀ ಮಾಡುವುದು, ಎರಡನೆಯದಾಗಿ, ಭೂಮಿ ರೈತ ಚಳುವಳಿಯ

ಮತ್ತು ಸ್ವರೂಪವನ್ನು ವಿವರಿಸುತ್ತಾ, ಕ.ರಾ.ರೈ.ಸಂ.ದ ಸಂಘಟನಾತ್ಮಕ ಚೌಕಟ್ಟನ್ನು ವಿಮರ್ಶಿಸಿದ್ದಾರೆ ಹಾಗೂ ರೈತ ಚಳುವಳಿಗೆ ಸಂಬಂಧಿಸಿದ ಮಾಹಿತಿಗಳು ಹಲವು ಮೂಲಗಳಲ್ಲಿ ಹರಡಿಕೊಂಡಿವೆ. ಅವುಗಳೆಂದರೆ ನಿಯತಕಾಲಿಕಗಳು, ಪ್ರಚಾರ ಪತ್ರಗಳು, ಸಮ್ಮೇಳನಗಳು, ವಾರ್ಷಿಕ ವರದಿಗಳು, ರಾಜ್ಯ ರೈತ ಸಂಘದ ಪ್ರಕಟಣೆಗಳು, ಮತ್ತು ಇತರೆ ರೈತ ಸಂಘಗಳ ಪ್ರಕಟಣೆಗಳು.

ಭಾರತೀಯ ರೈತ ಚಳುವಳಿಯ ಪರಿಕಲ್ಪನೆ :

ಭಾರತದಲ್ಲಿ ರೈತ ಚಳುವಳಿಯ ಬಗೆಗಿನ ಅಧ್ಯಯನ ಇತ್ತೀಚೆಗೆ ಬೆಳವಣಿಗೆಯಾದುದು, ನಿರ್ದಿಷ್ಟವಾಗಿ ಹೇಳುವುದಾದರೆ ೭೦ರ ದಶಕದ ಮಧ್ಯಭಾಗದಲ್ಲಿ ಇದಕ್ಕೆ ಕಾರಣವನ್ನು ಪ್ರಸ್ತಾಪಿಸುತ್ತಾ, ಬ್ಯಾರಿಂಗ್‌ಟನ್ ಮೂರ್‌ರವರು ತಮ್ಮ 'ಸೋಷಿಯಲ್ ಆರಿಜಿನ್ಸ್ ಆಫ್ ಡಿಕ್ಟೆಟರ್‌ಶಿಫ್ ಅಂಡ್ ಡೆಮಾಕ್ರೆಸಿ' ಎಂಬ ಗ್ರಂಥದಲ್ಲಿ ಭಾರತೀಯ ರೈತ ಸಾಂಪ್ರದಾಯಿಕವಾಗಿ ಸಾಧು ಮತ್ತು ಜಡ ಸ್ವಭಾವದವರು ಎಂದಿದ್ದಾರೆ. ಆದರೆ ಭಾರತೀಯ ರೈತರ ಈ ರೀತಿಯ ಸ್ವಭಾವದ ಪ್ರಸ್ತಾಪವನ್ನು ಕ್ಯಾತ್ಲೀನ್ ಗುಹಾ, ಎ. ಆರ್. ದೇಸಾಯ್, ಡಿ. ಎನ್. ಧನಾಗರೆ ಮತ್ತು ರಣಜಿತ್ ಗುಹಾರವರು ಕ್ರಮವಾಗಿ ತಮ್ಮ ಗ್ರಂಥ ಮತ್ತು ಲೇಖನಗಳಾದ ಇಂಡಿಯನ್ ಫೆಸೆಂಟ್ ಅಫ್‌ರೈಸಿಂಗ್, ಪೇಸೆಂಟ್ ಸ್ಟಗಲ್ ಇನ್ ಇಂಡಿಯಾ, ಪೇಸೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ, ಎಲಿಮೆಂಟರಿ ಆಸ್ಪೆಕ್ಟ್ಸ್ ಆಫ್ ಪೇಸೆಂಟ್ ಇನ್‌ಸರ್‌ಜೇನ್ಸಿ ಇನ್ ಇಂಡಿಯಾದಲ್ಲಿ, ಆಕ್ಷೇಪಿಸಿದ್ದಾರೆ ಹಾಗೂ ಇತಿಹಾಸಕಾರರು, ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಮತ್ತು ಬ್ರಿಟಿಷರ ಆಡಳಿತಾವಧಿಯಲ್ಲಿ ನಡೆದ ರೈತ ದಂಗೆಗಳನ್ನು ಮತ್ತು ಹೋರಾಟಗಳನ್ನು, ಗುರುತಿಸುವಲ್ಲಿ ವಿಫಲರಾಗಿದ್ದಾರೆ ಎಂದು ಬ್ಯಾರಿಂಗ್‌ಟನ್ ಮೂರ್‌ರವರ ಅಭಿಪ್ರಾಯವನ್ನು ತಿರಸ್ಕರಿಸಿದ್ದಾರೆ.

ಕ್ಯಾತಲೀನ್ ಗುಹಾರವರು, ಪ್ರಸ್ತುತ ಭಾರತದ ಪ್ರತಿ ರಾಜ್ಯದಲ್ಲಿ ಕಳೆದ ಎರಡು ಶತಮಾನಗಳಿಂದಲೂ ರೈತ ಪ್ರತಿಕಾರಗಳು ನಡೆಯುತ್ತಿವೆ ಎಂದು ವಾದಿಸಿದ್ದಾರೆ. ಎ. ಆರ್. ದೇಸಾಯಿಯವರು ಗುರುತಿಸಿರುವ ಹಾಗೆ, ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲಾವಧಿಯಲ್ಲಿ ಮತ್ತು ಆನಂತರದ ಗ್ರಾಮೀಣ ಇತಿಹಾಸವು ರೈತರ ಚಳುವಳಿಗಳು, ವಿರೋಧಗಳು, ದಂಗೆಗಳು, ಪ್ರತಿಭಟನೆಗಳಿಂದ, ನೂರಾರು ಹಳ್ಳಿಗಳಲ್ಲಿ ಸಾಕಷ್ಟು ವರ್ಷಗಳವರೆಗೆ ಮುಂದುವರೆದಿದ್ದವು ಎಂದಿದ್ದಾರೆ. ಬ್ರಿಟಿಷ್ ಭಾರತದಲ್ಲಿ ಕೃಷಿ ಆಧಾರಿತ ಚಳುವಳಿಗಳು ಸಾಮಾನ್ಯವಾಗಿದ್ದವು ಎಂದು ರಣಜಿತ್ ಗುಹಾ ಗುರುತಿಸಿದ್ದಾರೆ ಹಾಗೂ ಅವುಗಳು ನಿರ್ದಿಷ್ಟವಾಗಿ ಬ್ರಿಟಿಷ್ ಆಳ್ವಿಕೆ ಅವಧಿಯಲ್ಲಿ ಪ್ರಾರಂಭವಾಗಿ ಮತ್ತು ಅವು ಅದೇ ಸ್ಥಿತಿಯಲ್ಲಿ ಅವರ ಅವಧಿಯಲ್ಲಿ ಹತ್ತೊಂಬತ್ತನೆ ಶತಮಾನದ ಕೊನೆವರೆಗೂ ಮುಂದುವರೆದವು ಎಂದಿದ್ದಾರೆ.

ಬಗ್ಗೆ ತಳೆದಿರುವ ನಿರ್ಧಾರವನ್ನು ಪ್ರಶ್ನಿಸುವುದರ ಜೊತೆಗೆ ಭಾರತೀಯ ರೈತರ ಸ್ವಭಾವದ ಬಗೆಗೆ ಇರುವ ಅವರ ದೃಷ್ಟಿಕೋನವನ್ನು ಪುನರ್ ಪರಿಶೀಲಿಸುವಂತೆ ಧನಾಗರೆಯವರು ಕೇಳಿದ್ದಾರೆ.

ಸ್ಥಳೀಯ ಮಟ್ಟದ ಹೋರಾಟಗಳು

ಸ್ಥಳೀಯ ಮಟ್ಟದಲ್ಲಿ ಬಹಳಷ್ಟು ಸಂಖ್ಯೆಯ ರೈತ ಹೋರಾಟಗಳನ್ನು ಬಿಹಾರ, ಬೆಂಗಾಳ, ಆಂಧ್ರಪ್ರದೇಶ, ಕೇರಳ ಮತ್ತು ಕರ್ನಾಟಕದಲ್ಲಿ ಗುರುತಿಸ ಬಹುದಾಗಿದೆ. ಈ ರಾಜ್ಯಗಳಲ್ಲಿ ನಡೆದ ಕೆಲವು ಪ್ರಮುಖ ಚಳುವಳಿಗಳೆಂದರೆ, ಬೆಂಗಾಳ ಮತ್ತು ಬಿಹಾರದ ನೀಲಿ (ಇಂಡಿಗೊ) ಚಳುವಳಿಗಳು, ಕೇರಳದ ಮಲಬಾರಿನ ಮಾಪಿಳ್ಳೆ ದಂಗೆ, ಬೆಂಗಾಳದ ತೇಭಾಗ ಚಳುವಳಿ, ಆಂಧ್ರಪ್ರದೇಶದಲ್ಲಿ ತೆಲಂಗಣ ಹೋರಾಟ, ಹಾಗೂ ಬಿಹಾರ, ಪಶ್ಚಿಮ ಬಂಗಾಳ ಮತ್ತು ಆಂಧ್ರಪ್ರದೇಶದ ನಕ್ಸಲೈಟ್ ಚಳುವಳಿಗಳು, ಕರ್ನಾಟಕದ ಕಾಗೋಡು ಸತ್ಯಾಗ್ರಹ. ಇಂತಹ ಬಹುತೇಕ ಚಳುವಳಿಗಳು ತಮ್ಮ ಚಳುವಳಿಯ ಪ್ರತಿಫಲವನ್ನು (ಬೇಡಿಕೆಗಳನ್ನು) ಪಡೆಯುವುದರಲ್ಲಿ ಸಫಲವಾಗಿದೆ. ಆದರೆ ಅವುಗಳಲ್ಲಿ ಕೆಲವೊಂದು ಮಾತ್ರ ವಿಫಲವಾಗಿವೆ.

ಅಧ್ಯಯನ ಉದ್ದೇಶಗಳು

೧. ಕರ್ನಾಟಕದ ಭೂ ಸುಧಾರಣಾ ಕಾಯ್ದೆಯನ್ನು ಅರಿತುಕೊಳ್ಳಲು, ಅದರ ಹಿನ್ನೆಲೆ, ಮತ್ತು ರೈತ ಚಳುವಳಿಯಿಂದಲೇ ಅವು ಅಸ್ತಿತ್ವಕ್ಕೆ ಬಂದಿದ್ದಾವೆ ಎನ್ನುವುದನ್ನು ನಿರ್ಧಿಷ್ಟಪಡಿಸಲು.

೨. ಭೂ ಸುಧಾರಣೆ ಶಾಸನಗಳು ಜಾರಿಗೆ ಬರುವಲ್ಲಿ ಗೇಣಿದಾರರ ಪಾತ್ರವನ್ನು ತಿಳಿದುಕೊಳ್ಳಲು.

೩. ಭೂ ಸುಧಾರಣೆಯ ಶಾಸನಗಳು ವಿಭಿನ್ನ ಪ್ರದೇಶಗಳಲ್ಲಿ ಬೀರಿದ ಭಿನ್ನ ಪರಿಣಾಮಗಳನ್ನು ತಿಳಿಯಲು.

೪. ಭೂ ಸುಧಾರಣಾ ಕಾಯ್ದೆಯಿಂದ ಬದಲಾದಂತಹ ಸಾಮಾಜಿಕ ಸ್ಥಿತಿ, ಅದರಲ್ಲೂ ಬಹಳ ನಿರ್ದಿಷ್ಟವಾಗಿ ಭೂ ರಹಿತ ಹಿಂದುಳಿದವರ ಮೇಲೆ ಬೀರಿದ ಪ್ರಭಾವ ಅರಿಯಲು.

೫. ಕರ್ನಾಟಕದಲ್ಲಿ ಭೂ-ಸುಧಾರಣಾ ಕಾನೂನುಗಳು ಅಸ್ತಿತ್ವಕ್ಕೆ ತರುವಲ್ಲಿ ರೈತ ಚಳುವಳಿಯ ಪಾತ್ರವನ್ನು ಅರಿಯಲು.

೬. ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದೀಕರಣಕ್ಕೆ ರೈತ ಚಳುವಳಿಗಳ ಹೋರಾಟದ ಸ್ವರೂಪ ತಿಳಿಯಲು.

೭. ಕರ್ನಾಟಕದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ ತಡೆಯುವಲ್ಲಿ ರೈತ ಚಳುವಳಿಗಳ ಪಾತ್ರವನ್ನು ವಿಶ್ಲೇಷಿಸಲು.

೮. ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯಲ್ಲಿ ರೈತ ಚಳುವಳಿಯ ಪಾತ್ರವನ್ನು ಅಧ್ಯಯನ ಮಾಡುವುದು.

೯. ಮಹಿಳೆಯರ ಅಧರಲ್ಲೂ ರೈತ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಲು ಮತ್ತು ನಿವಾರಣೆ ಮಾಡುವುದಕ್ಕೆ ರೈತ ಚಳುವಳಿ ವೇದಿಕೆಯನ್ನು ನೀಡಿರುವ ಬಗ್ಗೆ ಅಧ್ಯಯನ ನಡೆಸಲು.

ಅಧ್ಯಯನಕ್ಕೆ ಸೀಮಿತಗೊಳಿಸಿಕೊಂಡಿರುವ ವ್ಯಾಪ್ತಿ

ಅಧ್ಯಯನದ ವ್ಯಾಪ್ತಿ ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಕೆಲವೊಂದು ಪ್ರಧಾನತೆಯ ಆಧಾರದ ಮೇಲೆ ಕೆಲವೊಂದು ಅಂಶಗಳನ್ನು ಪರಿಗಣಿಸಲಾಗಿದೆ. ಅವುಗಳೆಂದರೆ :

೧. ರೈತ ಚಳುವಳಿಯ ಬಲ, ರಚನೆ ಮತ್ತು ಸಂಘಟನೆ.

೨. ಭೂ ಸುಧಾರಣಾ ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಂಡ ಪ್ರದೇಶಗಳು.

೩. ಸರ್ಕಾರದ ವಿರುದ್ಧ ಭೂ ಸುಧಾರಣಾ ಚಳುವಳಿಗಳು ಬಲಿಷ್ಠವಾಗಿ ರೂಪುಗೊಂಡು ಹೋರಾಟ ಮಾಡಿದ ಪ್ರದೇಶಗಳು.

ಈ ಮೇಲಿನ ಪ್ರಧಾನ ಅಂಶಗಳ ಆಧಾರದ ಮೇಲೆ ಕರ್ನಾಟಕದ ಎರಡು ವಿಭಿನ್ನ ಭೌಗೋಳಿಕತೆಯ ಭಾಗಗಳಾದ ಮಲೆನಾಡು ಮತ್ತು ಬಯಲುಸೀಮೆ ಪ್ರತಿನಿಧಿಸುವ ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ನಿರ್ದಿಷ್ಟವಾಗಿ ಮತ್ತು ಇಡೀ ಕರ್ನಾಟಕವನ್ನು ಸಾಮಾನ್ಯವಾಗಿ ಈ ಅಧ್ಯಯನದ ವ್ಯಾಪ್ತಿಯೊಳಗೆ ಸೇರ್ಪಡಿಸಿ ಕೊಳ್ಳಲಾಗಿದೆ.

ಅಧ್ಯಾಯಗಳ ರಚನಾ ವಿಧಾನ :

ಮೊದಲನೆ ಅಧ್ಯಾಯದಲ್ಲಿ, ಈ ಅಧ್ಯಯನದ ಪೀಠಿಕೆಯನ್ನು ನೀಡಲಾಗಿದೆ ಹಾಗೂ ರೈತ ಅಧ್ಯಯನದ ಒಂದು ಸಂಕ್ಷಿಪ್ತವಾದ ಐತಿಹಾಸಿಕ ಹಿನ್ನಲೆಯನ್ನು ಪ್ರಸ್ತಾಪಿಸಲಾಗಿದೆ. ಈ ಅಧ್ಯಾಯದಲ್ಲಿ ಕರ್ನಾಟಕ ರೈತ ಚಳುವಳಿಯ ರಾಜಕೀಯ ವರ್ಗ ಗುಣಗಳನ್ನು ವಿವರಿಸಲಾಗಿದೆ. ಈ ಅಧ್ಯಯನದ ಸಂಶೋಧನಾ ವಿಧಾನದ ಬಗ್ಗೆ, ಉದ್ದೇಶಗಳ ಬಗ್ಗೆ ಹಾಗೂ ಅಧ್ಯಯನ ಪ್ರದೇಶದ ವ್ಯಾಪ್ತಿಯ ಆಯ್ಕೆ ಬಗ್ಗೆ ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ, ಭೂ ಸುಧಾರಣಾ ಕಾಯ್ದೆಗಳಿಗಾಗಿ ಕರ್ನಾಟಕದಲ್ಲಿ ನಡೆದ ರೈತ ಹೋರಾಟಗಳನ್ನು ಪ್ರಸ್ತಾಪಿಸಲಾಗಿದೆ. ಸರ್ಕಾರದ ಭೂ ಸುಧಾರಣಾ ಕಾಯ್ದೆಗಳು, ರೈತರ ಹೋರಾಟದ ಪ್ರತಿಫಲವೇ ಹೊರತು, ಸರ್ಕಾರದ ಉದಾರ

ಕೊಡುಗೆಗಳಲ್ಲ ಎಂಬುದನ್ನು ಹೋರಾಟಗಳ ಸಹಿತ ವಿವರಿಸಲಾಗಿದೆ ಹಾಗೂ ಭೂ ಸುಧಾರಣಾ ಕಾಯ್ದೆಯು ಯಾವ ರೀತಿ ನಿರೀಕ್ಷೆಯ ಸಾಮಾಜಿಕ ನ್ಯಾಯವನ್ನು ಅಸ್ತಿತ್ವಕ್ಕೆ ತರುವಲ್ಲಿ ಯಶಸ್ವಿಯಾಗಿರುವುದನ್ನು ಸಾಮಾಜಿಕ ಪರಿವರ್ತನೆಯ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಚರ್ಚಿಸಲಾಗಿದೆ. ಭೂ ಸುಧಾರಣಾ ಕಾಯ್ದೆಗಳ ರಚನೆ ಮತ್ತು ಅವುಗಳ ಜಾರಿಗೊಳಿಸುವಿಕೆ ಸರ್ಕಾರದ ಅಧಿಕಾರದ ಚುಕ್ಕಾಣಿ ಹಿಡಿದವರ ಸಾಮಾಜಿಕ ವರ್ಗೀಕರಣದ ಆಧಾರದ ಮೇಲೆ ನಿರ್ಧಾರವಾಗಿರುವುದನ್ನು ನಾಯಕತ್ವ ಮತ್ತು ಸರ್ಕಾರಗಳನ್ನು ಮೂಲವಾಗಿರಿಸಿಕೊಂಡು ವಿವರಿಸಲಾಗಿದೆ ಹಾಗೂ ಜಗತ್ತಿನ ಎಲ್ಲಾ ಭೂ ಸುಧಾರಣಾ ಕಾಯ್ದೆಗಳು ರೈತರ ಹೋರಾಟದ ಫಲ ಎಂಬುದನ್ನು ಮತ್ತು ಕರ್ನಾಟಕವು ಕೂಡ ಅದಕ್ಕೆ ಹೊರತಾಗಿಲ್ಲ ಎಂಬುದನ್ನು ವಿಷದಪಡಿಸಲಾಗಿದೆ.

ಮೂರನೆ ಅಧ್ಯಾಯದಲ್ಲಿ, ಕರ್ನಾಟಕದಲ್ಲಿ ಕೃಷಿ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದೀಕರಣಕ್ಕೆ ಸಂಬಂಧಿಸಿದಂತಹ ಹೋರಾಟಗಳನ್ನು ಪ್ರಸ್ತಾಪಿಸಲಾಗಿದೆ. ನೆರೆಯ ರಾಜ್ಯಗಳ ರೈತ ಸಂಘಟನೆಗಳು ಮತ್ತು ಅವುಗಳ ಹೋರಾಟವನ್ನು ತುಲನಾತ್ಮಕವಾಗಿ ಚರ್ಚಿಸಲಾಗಿದೆ. ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶಕ್ಕೆ ಸಂಬಂಧಿಸಿದ ವಿರೋಧದ ಹೋರಾಟಗಳನ್ನು ಚರ್ಚಿಸಿ, ರೈತ ಚಳುವಳಿ 'ಕನ್ನಡ ದೇಶ' ಎಂಬ ರಾಜಕೀಯ ಪಕ್ಷವಾಗಿ ರೂಪುಗೊಂಡಿರುವುದನ್ನು ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಪರಿಸರ ಮತ್ತು ಮಹಿಳಾ ಶಸಕ್ತೀಕರಣದ ಬಗ್ಗೆ ಪ್ರಸ್ತಾಪಿಸಿ, ಮಹಿಳಾ ವಿಷಯವನ್ನು ವಿಶಾಲ ದೃಷ್ಟಿಕೋನದಲ್ಲಿ, ಲಿಂಗ ಅಸಮಾನತೆಯ ಆಧಾರದ ಮೇಲೆ ಚರ್ಚಿಸಲಾಗಿದೆ. ಅದರಲ್ಲೂ ನಿರ್ದಿಷ್ಟವಾಗಿ ಗ್ರಾಮೀಣ ಮಹಿಳಾ ಕೃಷಿ ಕಾರ್ಮಿಕರ ಬದುಕನ್ನು ಆಧಾರ ಸಹಿತ ಚರ್ಚಿಸಲಾಗಿದೆ. ಪರಿಸರ ಸಂರಕ್ಷಣೆಯ ಚಳುವಳಿಗಳು, ನೀಲಗಿರಿ ನೆಡುತೋಪುಗಳಿಗೆ ವಿರೋಧ ವ್ಯಕ್ತಪಡಿಸಿದ ಹೋರಾಟಗಳನ್ನು ವಿವರಿಸಲಾಗಿದೆ. ಈ ಹಿನ್ನಲೆಯಲ್ಲಿ ಕೊಂಜ್ರೆಂಟ್ರಿಕ್ಸ್, ಕುದುರೆಮುಖ ಕಬ್ಬಿಣದ ಅದಿರು ಕಾರ್ಖಾನೆಗಳು ನಿಸರ್ಗ ವಿರೋಧಿ ಎಂದು ಪರಿಗಣಿಸಿ ಹೋರಾಟ ಮಾಡಿದ್ದರಿಂದ ಆ ಎರಡು ಕಂಪೆನಿಗಳು ರಾಷ್ಟ್ರೀಯ ವರಮಾನದ ದೃಷ್ಟಿಯಲ್ಲಿ ಲಾಭದಾಯಕವಾಗಿದ್ದರೂ, ತಮ್ಮ ಅಸ್ತಿತ್ವವನ್ನು ಕರ್ನಾಟಕದಲ್ಲಿ ಕಳೆದುಕೊಂಡಿವೆ ಎಂಬುದನ್ನು ಪ್ರಸ್ತಾಪಿಸಲಾಗಿದೆ.

ಅಂತಿಮ ಅಧ್ಯಾಯದಲ್ಲಿ, ಈ ಅಧ್ಯಯನದ ಉಪಸಂಹಾರದ ಜೊತೆಗೆ ಕೆಲವು ಉಪಯುಕ್ತವಾದ ಸಲಹೆಗಳನ್ನು ನೀಡಲಾಗಿದೆ.

ಅಧ್ಯಾಯ. ೨
ಭೂ ಸುಧಾರಣಾ ಚಳುವಳಿ ಮತ್ತು ಕ.ರಾ.ರೈ.ಸಂ.

ಮಾನವ ಇತಿಹಾಸ ಮಾನವ ಮತ್ತು ಭೂಮಿಯ ನಡುವಣ ಸಂಬಂಧದ ಮತ್ತು ಕಾಲಾನಂತರದಲ್ಲಿ ಈ ಸಂಬಂಧಗಳಲ್ಲಿನ ಬದಲಾವಣೆಗಳ ಇತಿಹಾಸವಾಗಿದೆ. ಈ ಇತಿಹಾಸದ ತುಂಬೆಲ್ಲಾ ಕ್ರಾಂತಿಕಾರಿ ಭೂ ಸುಧಾರಣೆ ಕಾಯಿದೆ ಸರ್ಕಾರದ ಮುಕ್ತ ಕೊಡುಗೆಯಾಗಿರದೆ ರೈತರ ದೀರ್ಘ ಹೋರಾಟದ ಫಲವೆಂದು ತೋರಿಸುವ ಉದಾಹರಣೆಗಳಿವೆ. ಆದ್ದರಿಂದ ಭೂಸುಧ್ಯಾರಣೆಗಳು ಕೃಷಿ ರಚನೆಯಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಿರುವ ತೊಡಕುಗಳ ನಿವಾರಣೆಗೆ ಇರುವ ಹಲವು ಕ್ರಮಗಳ ಸಮೂಹವೆಂದು ಪರಿಗಣಿಸಲಾಗಿದೆ. ಅಲ್ಲದೆ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಆಸ್ತಿಯ ಮರುವಿತರಣೆ ಅಥವಾ ಭೂಮಿಯ ಮೇಲಿನ ಹಕ್ಕುಗಳ ಮರುವಿತರಣೆಗಾಗಿಯೂ ಬಳಸಲಾಗಿದೆ. ಗೇಣಿದಾರರ ಚಳುವಳಿ ರೈತರಲ್ಲಿ ಹಾಗೂ ಗೇಣಿದಾರರ ವರ್ಗದ ಅರಿವನ್ನು ಉಂಟು ಮಾಡುವ ಸಾಧನವೆನಿಸಿದೆ, ಹಾಗೂ ಗೇಣಿದಾರರ ಹಕ್ಕು ಮತ್ತು ಸೌಲಭ್ಯಕ್ಕಾಗಿ ಯಾವುದೇ ಶಾಸನಾತ್ಮಕ, ಆಡಳಿತಾತ್ಮಕ ಕ್ರಮಕ್ಕೆ ಬೇಕಾದ ಪೂರ್ವಪೇಕ್ಷಿತವಾದುದಾಗಿದೆ.

ಯುದ್ಧೋತ್ತರ ಅವಧಿಯಲ್ಲಿ, ಅಂತಹ ಉದಾಹರಣೆಗಳೆಂದರೆ, ಉಳುವವನಿಗೆ ಭೂಮಿಯಂತಹ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಜಾರಿಗೆ ತಂದ ಕೀರ್ತಿ ಜಪಾನಿಗೆ ಸಲ್ಲುತ್ತದೆ. ಭೂಸುಧಾರಣೆಯನ್ನು ಅಧ್ಯಯನದ ಒಂದು ವಿಷಯವಾಗಿ ಜಾಗತಿಕ ಸಮೀಕ್ಷಾ ದೃಷ್ಟಿಕೋನದಿಂದ ನೋಡಿದಾಗ ಅದು ಅದರ ಯಶಸ್ಸು ಮತ್ತು ವಿಫಲತೆ ಹಾಗೂ ಅವುಗಳ ಕಾರಣಗಳ ವಿವಿಧ ಮುಖಗಳನ್ನು ತಿಳಿಸುತ್ತದೆ.

ಮೆಕ್ಸಿಕೋ ಮತ್ತು ಬೊಲಿವಿಯಾದ ಕೃಷಿ ಚಳುವಳಿಗಳು ಕೆಳಸ್ತರದಿಂದ ಪ್ರೋತ್ಸಾಹ ಪಡೆದವುಗಳಾಗಿವೆ. ನಂತರ ಆ ಸಂಘಟನೆಗಳಿಗೆ ಸರ್ಕಾರ ಸಹಾಯ ಮತ್ತು ಉತ್ತೇಜನ ನೀಡಿತು. ವೆನಿಜುವೆಲಾದಲ್ಲಿ, ೧೯ಳಶಿರ ದಮನ ಸಂಸ್ಕೃತಿಗೆ ಪ್ರತಿಯಾಗಿ ಸ್ಥಳೀಯ ಸಂಘಟನೆಯೊಂದು ಬೆಳೆದು ಕೊಂಡಿತು. ಹತ್ತು ವರ್ಷಗಳ ತರುವಾಯ ಅದು ಒಂದು ಹೋರಾಟದ ಸಂಘಟನೆಯಾಯಿತು ಮತ್ತು ಹಲವು

ರೈತ ಗುಂಪುಗಳಿಗೆ ಭೂ ಹಂಚಿಕೆಯಂತಹ ಹಲವು ಪ್ರಮುಖ ಸಾಧನೆಗಳನ್ನು ಮಾಡಿತು.

ಜಾಗತಿಕವಾಗಿ ರೈತ ಚಳುವಳಿಗಳು ಒಂದು ಸಾಮಾನ್ಯ ವಿಧಾನವನ್ನು ಹೊಂದಿದೆ. ಕೆಳಸ್ತರದಿಂದ ಒತ್ತಾಯ ಬಂದಾಗ ಮಾತ್ರ ಸರ್ಕಾರಗಳು ಭೂ ಸಂಬಂಧೀ ಸಮಸ್ಯೆಗಳ ನಿವಾರಣೆಗೆ ಭೂಸುಧಾರಣೆ ಕಾಯ್ದೆಗಳನ್ನು ಕಾರ್ಯರೂಪಕ್ಕೆ ತಂದಿರುವುದನ್ನು ಅದು ಸೂಚಿಸುತ್ತದೆ.

ಸ್ವತಂತ್ರ ಪೂರ್ವ ಭಾರತದಲ್ಲಿ ಭೂಸುಧಾರಣೆಗಳು

ಸ್ವತಂತ್ರ ಪೂರ್ವದಲ್ಲಿ ಕೃಷಿ ಸಮಾಜ ಸಾಮಾನ್ಯವಾಗಿ ಅಧಿಕ ಬಡ್ಡಿ ಸಾಲ, ಸುರಕ್ಷಿತರಲ್ಲದ ರೈತರ ಜೀತ ಪದ್ಧತಿ, ಮಿತಿಮೀರಿದ ಗೇಣಿ, ಗ್ರಾಮೀಣ ಜನರ ದಿಗಿಲುಗೊಳಿಸುವ ಬಡತನಕ್ಕೆ ಕಾರಣವಾಗಿತ್ತು. ಭೂಸುಧಾರಣೆ ಒಂದು ವಿಸ್ತಾರವಾದ ವಿಷಯವಾಗಿದ್ದು ಶಾಸನಾತ್ಮಕ, ಆರ್ಥಿಕ, ಸಾಮಾಜಿಕ ಮತ್ತು ಆಡಳಿತಾತ್ಮಕ ಅಂಶಗಳನ್ನು ಒಳಗೊಂಡಿತ್ತು.

ಶಾಸನದ ಮೂಲಕ ಭೂಸುಧಾರಣೆಗಳು ಬ್ರಿಟಿಷರ ಕಾಲದಲ್ಲಿ ಹುಟ್ಟಿಕೊಂಡವು ಮತ್ತು ಭಾರತೀಯ ನಾಯಕರು ಅದನ್ನೇ ಮುಂದುವರೆಸಿದರು. ಯಾರು ನಿಜವಾದ ಉಳುವವರಾಗಿದ್ದರೋ ಅವರ ಹೋರಾಟದಿಂದಲೂ ಆಗಾಗ್ಗೆ ಭೂ ಕಾಯ್ದೆ ಜಾರಿಗೆ ಬಂದಿತ್ತು. ಸ್ಥಳೀಯ ಮತ್ತು ದೇಶೀಯ ಸಂಸ್ಥಾನಗಳಲ್ಲಿಯೂ ಪರಿಸ್ಥಿತಿ ಬೇರೆಯಾಗಿರಲಿಲ್ಲ. ವಾಸ್ತವವಾಗಿ ಬ್ರಿಟಿಷ್ ರಾಜ್ಯಗಳಿಗಿಂತ ದೇಶೀಯ ಸಂಸ್ಥಾನಗಳಲ್ಲಿ ಪರಿಸ್ಥಿತಿ ಇನ್ನೂ ವಿಷಣ್ಣವಾಗಿತ್ತು. ಬ್ರಿಟಿಷ್‌ರು ಭಾರತದಲ್ಲಿ ವಂಶಪಾರಂಪರ್ಯವಾಗಿದ್ದ ಉಳಿಗಮಾನ್ಯ ಭೂಮಾಲೀಕತ್ವವನ್ನು ಮುಂದುವರೆಸಿತು. ಇದರಲ್ಲಿ ೩ ಪ್ರಕಾರದ ಭೂ ಒಡೆತನ ಮತ್ತು ಗೇಣಿ ಪದ್ಧತಿಗಳಿದ್ದವು. ಅವುಗಳೆಂದರೆ.

೧. **ಜಮೀನ್ದಾರಿ ಪದ್ಧತಿ :** ಇದು ಬಂಗಾಳ ಮತ್ತು ಬಿಹಾರ ರಾಜ್ಯದಲ್ಲಿತ್ತು. ಈ ಪದ್ಧತಿಯಲ್ಲಿ ಭೂಮಾಲೀಕ ಮುಖ್ಯಸ್ಥನಾಗಿರುತ್ತಿದ್ದ ಅವನ ಕೆಳಗೆ ಹಲವಾರು ಹಂತದ ಗೇಣಿದಾರರಿರುತ್ತಿದ್ದರು.

೨. **ಮಹಲವಾರಿ ಪದ್ಧತಿ :** ಇದು ಪಶ್ಚಿಮ ಉತ್ತರ ಪ್ರದೇಶ ಮತ್ತು ಪಂಜಾಬಿನ ಕೆಲವು ಭಾಗಗಳಲ್ಲಿ ಜಾರಿಯಲ್ಲಿತ್ತು, ಇದರ ಅನ್ವಯ ಗ್ರಾಮೀಣ ನಿವಾಸಿಗಳೆ ಜಮೀನಿನ ಸಮುದಾಯ ಒಡೆಯರಾಗಿದ್ದರು.

೩. **ರೈತವಾರಿ ಪದ್ಧತಿ :** ಇದು ಮದ್ರಾಸು ಮತ್ತು ಬಾಂಬೆ ಪ್ರಾಂತ್ಯದಲ್ಲಿದ್ದು, ಪ್ರತಿಯೊಬ್ಬ ಉಳುವವನನ್ನೇ ಭೂ ಒಡೆಯನೆಂದು ಗುರುತಿಸಲಾಗಿತ್ತು.

ಒಟ್ಟಿನಲ್ಲಿ ಹೇಳುವುದಾದರೆ ಭೂ ಮಾಲೀಕ ವರ್ಗ ರೈತರನ್ನು ನಿರ್ದಯವಾಗಿ ಶೋಷಣೆ ಮಾಡಿದ್ದಾರೆ. ಆದರೆ, ಅದೇ ಸಂದರ್ಭದಲ್ಲಿ ಅನೇಕ ಗೇಣಿ ಸಂಬಂಧೀ ಕಾನೂನುಗಳನ್ನು ಸರ್ಕಾರ ಜಾರಿಗೆ ತಂದಿದ್ದರೂ, ಭಾರತದಾದ್ಯಂತ ಭೂಮಾಲೀಕರ ಪ್ರಾಬಲ್ಯ ಹೆಚ್ಚಾಗಿದ್ದರಿಂದ, ಅವುಗಳಾವೂ ಸಮರ್ಥವಾಗಿ ಕಾರ್ಯರೂಪಕ್ಕೆ ಬರಲು ಸಾಧ್ಯವಾಗಲಿಲ್ಲ.

ವಸಾಹತು ಭಾರತದಲ್ಲಿ ಕೃಷಿ ಸಾಂಪ್ರದಾಯಿಕ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ಲಕ್ಷಣಗಳನ್ನು ಹೊಂದಿತ್ತು. ೧೯೩೧ರ ಹೊತ್ತಿಗೆ ಗ್ರಾಮೀಣ ಜನಸಂಖ್ಯೆಯ ೧/೩ ಭಾಗ ಭೂರಹಿತರಾಗಿದ್ದರು ಮತ್ತು ಉಳಿದ ೨/೩ ಭಾಗದಲ್ಲಿ ಅನೇಕರು ಸ್ವ ಇಚ್ಛೆಯಿಂದ ಗೇಣಿದಾರರಾಗಿದ್ದರು, ಪಾಲುದಾರಿಕೆ ಬೆಳೆಗಾರರು ಮತ್ತು ಸಣ್ಣ ಕೃಷಿಕ ಮಾಲೀಕರಾಗಿದ್ದರು.

ವಸಾಹತು ಆಡಳಿತದಲ್ಲಿ ರೈತ ಚಳುವಳಿಯ ಸ್ವರೂಪವನ್ನು ಅಂದು ಅಸ್ತಿತ್ವದಲ್ಲಿದ್ದ ಉತ್ಪಾದನೆಯ ಸಂಬಂಧಗಳು ಮತ್ತು ದಮನಕಾರಿ ವಸಾಹತು ಸರ್ಕಾರದ ಭೂಮಾಲೀಕರ ಹಿತಾಸಕ್ತಿ ಪರ ನೀಡಿದ ಅಮಿತ ಬೆಂಬಲದ ಆಧಾರದಲಿ ಅರ್ಥ ಮಾಡಿಕೊಳ್ಳಬಹುದು. ಏಕೆಂದರೆ ವಸಾಹತು ಆಡಳಿತ ಮತ್ತು ಅವರ ಊಳಿಗಮಾನ್ಯ ಪದ್ಧತಿಯನ್ನು ಉಳಿಸಿಕೊಳ್ಳಬೇಕೆಂಬ ಬಯಕೆಗಳೇ ರೈತರನ್ನು ಒಂದುಗೂಡಿಸುವ ಎಲ್ಲಾ ಪ್ರಯತ್ನಗಳು ವಿಫಲವಾಗಲು ಕಾರಣವಾಗಿದೆ. ನಂತರದಲ್ಲಿ ರೈತ ಚಳುವಳಿ, ಸಾಮಾಜ್ರ್ಯಶಾಹಿ ವಿರೋಧಿ ರಾಷ್ಟೀಯ ಚಳುವಳಿಯೊಂದಿಗೆ ಬಿಡಿಸಲಾರದಷ್ಟು ಗಟ್ಟಿಯಾಗಿ ಬೆಸೆದುಕೊಂಡಿತು. ಆದ್ದರಿಂದ ವಸಾಹತು ಅವಧಿಯಲ್ಲಿ ಎರಡು ಮುಖ್ಯ ಶಕ್ತಿಗಳು ರೈತ ಚಳುವಳಿಯ ವಿರುದ್ಧ ಕೆಲಸ ಮಾಡುತ್ತಿದ್ದವು. ಒಂದು ವಸಾಹತು ಆಡಳಿತ ಮತ್ತೊಂದು ಊಳಿಗಮಾನ್ಯ ಆಸಕ್ತಿಗಳು.

ಇಷ್ಟೆಲ್ಲಾ ಇದ್ದರೂ ರಾಷ್ಟ್ರೀಯ ಚಳುವಳಿ ಭೂಮಾಲೀಕರ ವಿರೋಧಿ ಮತ್ತು ಊಳಿಗಮಾನ್ಯ ವಿರೋಧಿ ಹೋರಾಟವನ್ನು ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಭಾಗವನ್ನಾಗಿ ಮಾಡುವಲ್ಲಿ ಯಶಸ್ವಿಯಾಯಿತು. ಆ ಕಾರ್ಯ ತಂತ್ರದಲ್ಲಿ, ಅಧಿಕಾರಕ್ಕೆ ಬಂದ ಮೇಲೆ ಮಹತ್ವದ ಭೂ ಸುಧಾರಣೆಗಳನ್ನು ಜಾರಿಗೆ ತರುವ ಹೊಣೆಗಾರಿಕೆ ಹೊಂದಿತ್ತು. ಭಾರತದ ಆಧುನಿಕ ಇತಿಹಾಸ ಹಲವು ರೀತಿಯಲ್ಲಿ ಭೂ ಒಡೆತನಕ್ಕಾಗಿ ಮತ್ತು ಕೃಷಿ ಭೂಮಿಯ ಬಳಕೆಗಾಗಿ ನಡೆದ ಹೋರಾಟದೊಂದಿಗೆ ನಿಕಟ ಸಂಬಂಧ ಹೊಂದಿದೆ. ಭಾರತದಂತಹ ರಾಷ್ಟ್ರದಲ್ಲಿ ಇದು ಸಹಜವಾಗಿದೆ.

ಜನಬೆಂಬಲಿತ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅದರ ಹೋರಾಟದಲ್ಲಿ

ಮೊದಲು ಸ್ವಂತ ಆಡಳಿತಕ್ಕಾಗಿ ಮತ್ತು ಆಂತರಿಕ ಸ್ವಾಯತ್ತತೆಗಾಗಿ ಹೋರಾಟ ನಡೆಸಿತು. ನಂತರದಲ್ಲಿ ಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಿತು. ಆ ಕಾರ್ಯತಂತ್ರದಲ್ಲಿ, ೧೯೩೫ರಲ್ಲಿ ಕಾಂಗ್ರೆಸ್ ಅಧಿಕಾರಯುಕ್ತವಾಗಿ ಭೂಸುಧಾರಣೆಗಳನ್ನು ತನ್ನ ಕಾರ್ಯಕ್ರಮದಲ್ಲಿ ಸೇರಿಸಿಕೊಂಡಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭೂ ಒಡೆತನದ ಪದ್ಧತಿಯಲ್ಲಿ ಕಂಡು ಬಂದ ಮಿತಿಮೀರಿದ ಗೇಣಿ, ಗೇಣಿದಾರರ ಶೋಷಣೆ, ಅರೆಗೇಣಿದಾರರು ಮತ್ತು ಪಾಲುದಾರಿಕೆ ಬೆಳೆಗಾರರು ಇತ್ಯಾದಿ ಅಂಶಗಳ ಬಗ್ಗೆ ಹೆಚ್ಚು ವಿಮರ್ಶಾತ್ಮಕವಾಗಿತ್ತು. ಮೂವತ್ತರ ದಶಕದ ಮೊದಲರ್ಧ ಭಾಗದಲ್ಲಿ ಕಾಂಗ್ರೆಸ್ ಆಗಿನ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಪ್ರಾಚೀನ ಮತ್ತು ದಮನಕಾರಿ ಭೂಹಿಡುವಳಿ ಪದ್ಧತಿ ಮತ್ತು ಆದಾಯ ಪದ್ಧತಿಯಲ್ಲಿ ಮಹತ್ವದ ಸುಧಾರಣೆಯ ಅಗತ್ಯತೆಯನ್ನು ಸ್ಪಷ್ಟವಾಗಿ ಉಚ್ಚರಿಸಿತ್ತು. ೧೯೩೭ರಲ್ಲಿ, ರಾಷ್ಟ್ರದ ಹಲವು ಪ್ರಾಂತ್ಯಗಳಲ್ಲಿ ಪಕ್ಷ ಅಧಿಕಾರಕ್ಕೆ ಬಂದಿತು. ರೈತರ ಹಿತಾಸಕ್ತಿ ಗಮನದಲ್ಲಿರಿಸಿ ಕಾಂಗ್ರೆಸ್ ಸರ್ಕಾರಗಳು ಅಸ್ತಿತ್ವದಲ್ಲಿದ್ದ ಭೂ ಹಿಡುವಳಿ ಕಾನೂನುಗಳನ್ನು ತಿದ್ದುಪಡಿ ಮಾಡುವ ಪ್ರಯತ್ನ ನಡೆಸಿದವು. ಆದರೆ ಈ ಸರ್ಕಾರಗಳ ಅಲ್ಪಾವಧಿ ಹಾಗೂ ಸಂವಿಧಾನಾತ್ಮಕ ತೊಡಕುಗಳು ಅವುಗಳನ್ನು ಈ ವಿಷಯದಲ್ಲಿ ದುರ್ಬಲರನ್ನಾಗಿಸಿದವು. ಆದ್ದರಿಂದ ಅಂದು ಅಸ್ತಿತ್ವದಲ್ಲಿದ ಭೂಗೇಣಿ ಪದ್ಧತಿಯಲ್ಲಿ ಅವರು ಯಾವುದೇ ಗಣನೀಯ ಬದಲಾವಣೆ ತರಲು ಸಾಧ್ಯವಾಗಲಿಲ್ಲ.

ಮಹತ್ಮಾ ಗಾಂಧೀಜೀಯವರು ರೈತರ ಅಪರಿಮಿತವಾದ ಶಕ್ತಿಯನ್ನು ಅರಿತಿದ್ದು ಅದನ್ನು ೧೯೧೬ರಲ್ಲಿ ವ್ಯಕ್ತಪಡಿಸಿದರು. "ನಮ್ಮ ಮುಕ್ತಿ ಕೇವಲ ರೈತರ ಮೂಲಕ ಮಾತ್ರ ಬರಬಹುದು. ವಕೀಲರಾಗಲೀ ಅಥವಾ ವೈದ್ಯರಾಗಲೀ, ಶ್ರೀಮಂತ ಭೂ ಮಾಲೀಕರಾಗಲೀ ಅದನ್ನು ಸಾಧಿಸಲು ಸಾಧ್ಯವಿಲ್ಲ" ಎಂದು ಅವರು ಹೇಳಿದರು. ೧೯೨೧ರ ಜನವರಿಯಲ್ಲಿ ಮತ್ತೊಮ್ಮೆ ಅವರು ಕಲ್ಕತ್ತಾದಲ್ಲಿನ ವ್ಯಾಪಾರಸ್ಥರ ಎದುರು ಸ್ವರಾಜ್ಯ ಕೃಷಿಕರನ್ನೇ ಅವಲಂಭಿಸಿದೆ ಎಂದು ಅಭಿಪ್ರಾಯಪಟ್ಟರು. ಒಂದು ವೇಳೆ ಅವರು ಸಹಾಯ ಮಾಡದಿದ್ದರೆ, ಸ್ವರಾಜ್ಯ ಹೊಂದಲು ಸಾಧ್ಯವಿಲ್ಲ. ಒಂದು ವೇಳೆ ಅವರು ಬ್ರಿಟಿಷ್ ಸರ್ಕಾರದೊಂದಿಗೆ ಸಹಕರಿಸಿದರೆ ಆಗ ನಿಮ್ಮ ಎಲ್ಲಾ ಒಳ್ಳೆಯ ಗುಣಗಳೂ ಸ್ವರಾಜ್ಯ ಪಡೆಯುವಲ್ಲಿ ಸಹಾಯ ಮಾಡಲಾರವು.ರೈತರ ಶಕ್ತಿಯ ಬಗ್ಗೆ ಗಾಂಧಿಯವರು ಉನ್ನತ ಅಭಿಪ್ರಾಯ ಹೊಂದಿದ್ದರು. ಆದರೆ ರೈತರ ಚಟುವಟಿಕೆಗಳು ಅವರ ಹೇಳಿಕೆಗೆ ಭೌಗೋಳಿಕವಾಗಿ ನಿರ್ಬಂಧಿತವಾಗಿದ್ದವು ಹಾಗೂ ಆಗಾಗ್ಗೆ ಅವರ ನಿಯಂತ್ರಣಕ್ಕೆ ಮೀರಿದ್ದವು. ನಿರ್ದಿಷ್ಟ ರೈತರ ಸಮಸ್ಯೆಗಳ ಪರಿಹಾರಕ್ಕೆ ಚಳುವಳಿಗಳಿಂದ ಮಾತ್ರವಲ್ಲದೆ ತಮ್ಮ ಜ್ಞಾನದ ಬೆಳಕಿನಲ್ಲಿ ಗ್ರಾಮೀಣ ಪ್ರದೇಶಗಳ ಜನರನ್ನು ರಾಜಕೀಯವಾಗಿ ಶಿಕ್ಷಿತರನ್ನಾಗಿಸಲು ಅವರು ಸಂಪರ್ಕಿಸಿದರು. ಆದ್ದರಿಂದ ರೈತ ಚಳುವಳಿ ಬ್ರಿಟಿಷರ ಕಾಲದಲ್ಲಿ ರಾಷ್ಟ್ರೀಯ ಚಳುವಳಿಯೊಂದಿಗೆ ವಿಲೀನವಾಯಿತು.

೪. ೬ ವರ್ಷಗಳವರೆಗೆ ನಿರಂತರವಾಗಿ ಭೂಮಿಯನ್ನು ಸಾಗುವಳಿ ಮಾಡುವವರಿಗೆ ಹಿಡುವಳಿ ಹಕ್ಕನ್ನು ನೀಡಬೇಕು.
೫. ಹಳ್ಳಿಗಳ ಭೂಮಿಯ ಸಾಮೂಹಿಕ ಒಡೆತನ ಮತ್ತು ಸಾಮೂಹಿಕ ಸಾಗುವಳಿ ಮತ್ತು ಅಭಿವೃದ್ಧಿ ಅಂತಿಮ ಉದ್ದೇಶವಾಗಿರಬೇಕು.

ತಕ್ಷಣದಲ್ಲಿ ಕಾಂಗ್ರೆಸ್ ಸರ್ಕಾರ ಜಮೀನುದಾರಿ ಪದ್ಧತಿಯನ್ನು ರದ್ದು ಮಾಡಲು ಮತ್ತು ಇತರ ಮಧ್ಯಸ್ಥಗಾರರನ್ನು ರದ್ದುಗೊಳಿಸಲು ಹೆಚ್ಚಿನ ಪ್ರಾಶಸ್ತ್ಯ ನೀಡಲು ನಿರ್ಧರಿಸಿತು. ೧೯೫೧ರ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂ ಸುಧಾರಣೆ ವಿಷಯವನ್ನು ಪ್ರಮುಖ ಅಂಶವಾಗಿ ಕೃಷಿ ಅಧ್ಯಾಯದಲಿ ಸೇರಿಸಿರಲಿಲ್ಲ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು 'ಭೂ ಸುಧಾರಣ ಕೃಷಿ ಪುನರ್ ಸಂಘಟನೆ' ಎಂದು ಕರೆಯಲಾಯಿತು. ಆದರೆ ಮೂರನೇ ಯೋಜನೆಯಲ್ಲಿ ಭೂಸುಧಾರಣೆಗಳು 'ಭೂ ಸುಧಾರಣೆ' ಎಂಬ ಶೀರ್ಷಿಕೆಯೊಂದಿಗೆ ಸ್ವತಂತ್ರ ವಿಷಯವಾಗುವ ಸವಲತ್ತು ಪಡೆದವು.

ಭಾರತ ಸರ್ಕಾರ ೧೯೬೦ರ ಪ್ರಾರಂಭಿಕ ಅವಧಿಯಲ್ಲಿ ಒಕ್ಕಲುತನ ಒಂದು ಪ್ರಮುಖ ಸಮಸ್ಯೆ ಎಂಬುದಾಗಿ ಪ್ರಾದೇಶಿಕ ಮಟ್ಟದಲ್ಲಿ ರೈತ ಚಳುವಳಿಗಳು ಇದ್ದುದರಿಂದ ಪರಿಗಣಿಸಿತು. ಆದ್ದರಿಂದ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು 'ಭೂ ಸುಧಾರಣೆ ನಮ್ಮ ರಾಜಕೀಯ ವ್ಯವಸ್ಥೆ ಉಳಿದು ಕೊಳ್ಳಲು ಅಂಗೀಕಾರ ಮಾಡಬೇಕಾಗಿರುವ ನಿರ್ಣಾಯಕ ಶಾಸನವಾಗಿದೆ' ಎಂದು ಒಮ್ಮೆ ಹೇಳಿದರು.

ರಾಜ್ಯಮಟ್ಟದಲ್ಲಿ ರೈತ ಚಳುವಳಿಗಳು ಮತ್ತು ಭೂಸುಧಾರಣೆಗಳು

ರಾಜ್ಯಗಳಲ್ಲಿ ಭೂಸುಧಾರಣೆ ಕ್ರಮಗಳನ್ನು ಜಾರಿಗೆ ತರುವಲ್ಲಿ ಮತ್ತು ಕಾರ್ಯಗತ ಗೊಳಿಸುವಲ್ಲಿನ ಯಶಸ್ಸು ಹಾಗೂ ವಿಫಲತೆ, ಕೃಷಿ ಹೋರಾಟಗಳ ತೀವ್ರತೆಯ ಪ್ರಮಾಣವನ್ನೇ ಅವಲಂಭಿಸಿದೆ. ಹಾಗೆಯೇ ಈ ಭೂ ಸುಧಾರಣಾ ನೀತಿಗಳನ್ನು ನಿರ್ಧಿಷ್ಟ ಪ್ರದೇಶಕ್ಕೆ ಸಂಬಂಧಿಸಿದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀರಿಯ ಪರಿಸ್ಥಿತಿಗಳನ್ನು ಆಧರಿಸಿ ರಚಿಸಿದ್ದರಿಂದ ಮತ್ತು ಜಾರಿಗೆ ತಂದಿದ್ದರಿಂದ ರಾಜ್ಯ ರಾಜ್ಯಗಳ ನಡುವೆ ಭೂ ಸುಧಾರಣೆಗಳು ಮತ್ತು ಅವುಗಳನ್ನು ಜಾರಿಗೆ ತರುವಲ್ಲಿ ವ್ಯತ್ಯಾಸಗಳಿದ್ದವು. ಪಿ. ಸಿ. ಜೋಶಿಯವರು ಭೂ ಸುಧಾರಣೆ ವಿಷಯದಲ್ಲಿ ಕೆಲವು ರಾಜ್ಯಗಳ ಹೋಲಿಕೆಯನ್ನು ಕೈಗೊಂಡರು. ಕೇರಳದಂತಹ ರಾಜ್ಯದಲ್ಲಿ, ಎಡಪಂಥೀಯ ಚಳುವಳಿ ಮತ್ತು ಹೆಚ್ಚಿನ ಅರಿವು ಹಾಗೂ ರೈತರ ಪರವಾಗಿ ಭೂ ಸುಧಾರಣೆಗಳನ್ನು ಜಾರಿಗೆ ತರುವಂತೆ ಸಂಘಟಿತ ರೈತರು ಸರ್ಕಾರದ ಮೇಲೆ ಒತ್ತಡ ಹೇರಿರುವುದನ್ನು ಕಾಣಬಹುದು. ಆದರೆ ಬಿಹಾರ, ಮಧ್ಯಪ್ರದೇಶ ಮತ್ತು

ರಾಜಸ್ಥಾನಗಳಂತಹ ರಾಜ್ಯಗಳಲ್ಲಿ ರಾಜಕೀಯ ಮಟ್ಟದಲ್ಲಿ ಭೂ ಮಾಲೀಕರ ಹೆಚ್ಚಿನ ಪ್ರಭಾವದಿಂದ ಮತ್ತು ರೈತರಲ್ಲಿ ಸಂಘಟನೆಯ ಅರಿವಿನ ಕೊರತೆಗಳು ಭೂ ಮಾಲೀಕರ ಪರವಾದ ಶಾಸನಗಳ ರಚನೆ ಮತ್ತು ಕಾರ್ಯಚರಣೆಗೆ ಹೊಣೆಯಾಗಿದ್ದವು.

ಔದ್‌ನಲ್ಲಿ, ೧೯೨೦-೨೧ರಲ್ಲಿ ಬಡ ರೈತರಿಂದ ಕೃಷಿ ಹೋರಾಟ ಪಾರಂಭವಾಯಿತು. ಆದರೆ ೧೯೩೦-೩೨ರಲ್ಲಿ ಶ್ರೀಮಂತ ಹಾಗೂ ಮಾಧ್ಯಮಿಕ ರೈತರು ಆರ್ಥಿಕ ಮುಗ್ಗಟ್ಟಿನ ಪರಿಣಾಮಕ್ಕೆ ಒಳಗಾದರು. ತಕ್ಷಣ ಅವರು ಗೇಣಿ ರಹಿತ ಅಭಿಯಾನವನ್ನು ಪ್ರಾರಂಭಿಸಿದರು. ಕೆಲವು ಬಡ ರೈತರು ಹಾಗೂ ಭೂ ರಹಿತ ಕಾರ್ಮಿಕರು ಸೇರಿಕೊಂಡರು, ನಂತರದಲ್ಲಿ ಅದನ್ನು 'ಗೇಣಿ ರಹಿತ ಹೋರಾಟ'ವೆಂದು ಕರೆಯಲಾಯಿತು.

ರೈತರು ಹಲವಾರು ಸಂಘಗಳ ಆಶ್ರಯದಲ್ಲಿ ಸಂಘಟಿತರಾದರು. ಭಾರತೀಯ ಕಮ್ಯುನಿಷ್ಟ್ ಪಕ್ಷದ ಕಾರ್ಯಕರ್ತರು ರೈತರನ್ನು ಒಗ್ಗೂಡಿಸಲು ಬಹಳ ಶ್ರಮವಹಿಸಿ ಕೆಲಸ ಮಾಡಿದರು. ಭಾರತೀಯ ಕಮ್ಯುನಿಷ್ಟ್ ಪಕ್ಷ ಕಾರ್ಮಿಕರ ಮತ್ತು ರೈತರ ಪಕ್ಷವನ್ನು ಆರಂಭಿಸಿತು. ಇದು ೪ ಪ್ರಾಂತ್ಯಗಳಲ್ಲಿ ಚೆನ್ನಾಗಿ ಕಾರ್ಯ ನಿರ್ವಹಿಸಿತು. ಅವುಗಳೆಂದರೆ, ಬಾಂಬೆ, ಬಂಗಾಳ, ಸಂಯುಕ್ತ ಪ್ರಾಂತ್ಯ ಮತ್ತು ಪಂಜಾಬ್.

ಭಾರತೀಯ ಕಿಸಾನ್ ಸಭಾ ಸಂಘಟಿಸುವಲ್ಲಿ ಸಹಾಯ ಮಾಡಿದ ಪ್ರಾಂತೀಯ ರೈತ ಸಂಘಟನೆಗಳಲ್ಲಿ ಪ್ರಾಂತೀಯ ಬಿಹಾರ ಕಿಸಾನ್ ಸಭಾ ತುಂಬಾ ಪ್ರಮುಖವಾದದ್ದಾಗಿದೆ. ಅವರು ಕೃಷಿ ಸುಧಾರಣೆ ಮತ್ತು ಜಮೀನುದಾರಿ ಪದ್ಧತಿಯ ನಿರ್ಮೂಲನೆಯ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡರು. ಭಾರತೀಯ ಕಿಸಾನ್ ಸಭಾ ನಾಗರೀಕ ಸ್ವಾತಂತ್ರ್ಯವನ್ನು ಕೇಳಿಕೊಂಡಿತು. ಭಾರತದ ವಿವಿಧ ಭಾಗಗಳಲ್ಲಿ ರೈತ ಸಂಘಟನೆಗಳು ಬೆಳೆದು ಬಂದ ದಾರಿ ಅವರ ಸಂಘಟನಾ ಲಕ್ಷಣಗಳನ್ನು ಹೊರಗೆಡುಹುತ್ತದೆ.

೧೯೪೬-೪೭ರಲ್ಲಿ ತೆಭಾಗ ಚಳುವಳಿ ಪಾಲುಗಾರಿಕೆ ಬೆಳೆಗಾರರ ಹೋರಾಟವಾಗಿತ್ತು. ಅವರು ಜೋತೆದಾರರಿಗೆ ಕೊಡಬೇಕಾದ ಗೇಣಿಯನ್ನು ಕಡಿಮೆಮಾಡಲು ೨/೩ ಭಾಗದಷ್ಟು ಬೆಳೆಯನ್ನು ತಾವೇ ಉಳಿಸಿಕೊಳ್ಳಲು ಒತ್ತಾಯಿಸಿದರು. ಭಾರತದ ಸ್ವಾತಂತ್ರ್ಯದ ಅವಧಿಯಲ್ಲಿ ತೆಭಾಗ ಚಳುವಳಿ ಆಂಧ್ರ ಪ್ರದೇಶದಲ್ಲಿ ಆರಂಭವಾಯಿತು. ಇದು ಪ್ರಮುಖವಾಗಿ ರೈತರ ಕುರಿತಂತೆ ಹೈದರಾಬಾದ್ ನಿಜಾಮನ ಶೋಷಣೆಯ ಚಟುವಟಿಕೆಗಳನ್ನು ವಿರೋಧಿಸಲು ಕೈಗೊಳ್ಳಲಾಗಿತ್ತು.

ಚಳುವಳಿಯ ಮುಖ್ಯ ಬೇಡಿಕೆ ಭೂಮಾಲೀಕತ್ವ ಮತ್ತು ಲೇವಾದೇವಿಗಾರರ ನಿರ್ಮೂಲನೆಯೇ ಆಗಿತ್ತು.

ಭಾರತದ ಇತಿಹಾಸದಲ್ಲೇ ನಕ್ಸಲ್ ಬಾರಿಯಲ್ಲಿ ಊಳಿಗಮಾನ್ಯ ಪದ್ಧತಿಯಲ್ಲಿ ಸಾವಿರಾರು ಬಡ ಹಾಗೂ ಭೂ ರಹಿತ ರೈತರು ತೊಂದರೆ ಅನುಭವಿಸಿದ್ದ ಪ್ರದೇಶದಲ್ಲಿ ಉಗ್ರಗಾಮಿ ಎಡಪಂಥೀಯ ಹಿಂಸಾತ್ಮಕ ಚಳುವಳಿ ಆರಂಭವಾಯಿತು. ಆಕಸ್ಮಿಕವೆಂಬಂತೆ ಅದೇ ಅವಧಿಯಲ್ಲಿ (ಸಂದರ್ಭದಲ್ಲಿ) ನಕ್ಸಲೈಟ್ ಪಕ್ಷ (ಸಿ.ಪಿ.ಐ–ಎಂ.ಎಲ್) ಸರ್ಕಾರವನ್ನು ಊಳಿಗಮಾನ್ಯ ರಾಜಕುಮಾರರ, ದೊಡ್ಡ ಭೂಮಾಲೀಕರ ಮತ್ತು ಅಧಿಕಾರೀಧೋರಣೆ ಹೊಂದಿದ ಬಂಡವಾಳದಾರರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಸರ್ಕಾರವೆಂದು ಟೀಕಿಸಿತು, ಅಲ್ಲದೆ ಒಗ್ಗೂಡಿದ ಚಳುವಳಿಯ ನೀತಿಯನ್ನು ಈ ಮೇಲಿನ ೩ ವರ್ಗಗಳ ವಿರುದ್ಧ ಹೋರಾಡಲು ಅಳವಡಿಸಿಕೊಂಡಿತು ಮತ್ತು ಬಡವರು ಹಾಗೂ ಭೂರಹಿತ ಕಾರ್ಮಿಕರಿಗೆ ಮುಂಚೂಣಿಯಲ್ಲಿನ ಸ್ಥಾನವನ್ನು ನೀಡಲಾಯಿತು. ೧೯೬೭ರಲ್ಲಿ ಈ ಚಳುವಳಿಯನ್ನು ಚೀನಾದ ಪೀಕಿಂಗ್‌ನ ದಿನಪತ್ರಿಕೆಯಾದ 'ಪೀಪಲ್ಸ್ ಡೈಲಿ' ತನ್ನ ಸಂಪಾದಕೀಯದಲ್ಲಿ ಬರೆಯುತ್ತಾ : "ಭಾರತ ಒಂದು ಬೃಹತ್ ಅರೆ ಸಾಮಾಜ್ರ್ಯಶಾಹಿ ಮತ್ತು ಅರೆ ಊಳಿಗಮಾನ್ಯ ರಾಷ್ಟ್ರವಾಗಿದ್ದು ೫೦೦ ದಶಲಕ್ಷ ಜನಸಂಖ್ಯೆ ಹೊಂದಿದೆ. ಇದರಲ್ಲಿ ಅಧಿಕ ಸಂಖ್ಯೆ ರೈತರದ್ದೇ ಆಗಿದೆ. ಒಮ್ಮೆ ಬಡಿದೆಬ್ಬಿಸಿದರೆ ಈ ಹಲವು ಶತದಶಲಕ್ಷ ಭಾರತೀಯ ರೈತರು ಭಾರತೀಯ ಕ್ರಾಂತಿಯ ಅದಮ್ಯ ಶಕ್ತಿಯಾಗುತ್ತಾರೆ. ಭಾರತೀಯ ಕೂಲಿ ಕಾರ್ಮಿಕರು ರೈತರೊಂದಿಗೆ ಒಂದುಗೂಡಿ, ಭೂಮಿಯನ್ನೇ ಅಲುಗಾಡಿಸುವ ಬದಲಾವಣೆಯನ್ನು ಭಾರತದ ಗ್ರಾಮೀಣ ಭಾಗಗಳಲ್ಲಿ ತರಬಹುದಾಗಿದೆ ಮತ್ತು ಯಾವುದೇ ಶಕ್ತಿಶಾಲಿ ಶತ್ರುವನ್ನು ಸೋಲಿಸುವ ಆತ್ಮವನ್ನು ಪ್ರೇರೆಪಿಸುವ ಜನರ ಯುದ್ಧ ಮಾಡಬಹುದಾಗಿದೆ." ಎಂದು ವಿವರಿಸಿದೆ.

ಒರಿಸ್ಸಾ ಸರ್ಕಾರ ೧೯೪೮ರಲ್ಲಿ ಒರಿಸ್ಸಾ ಗೇಣಿದಾರರ ರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದಿತು. ಅದು ರೈತರನ್ನು ಮತ್ತು ಭೂ ಮಾಲೀಕರನ್ನು ಮುಕ್ತವಾಗಿ ವ್ಯಾಖ್ಯಾನಿಸಿತು. ಅದರ ಪ್ರಕಾರ, ಗೇಣಿದಾರ ಎಂದರೆ ಯಾರ ಭೂಮಿಯನ್ನು ಒಬ್ಬ ಸಾಗುವಳಿ ಮಾಡುತ್ತಾನೋ ಆ ವ್ಯಕ್ತಿ ಗೇಣಿದಾರ, ಎಂದರೆ ಸಾಮಾನ್ಯವಾಗಿ ಭಾಗ್, ಸಂಜ ಅಥವಾ ಕಾಥ ಇವನು ಇನ್ನೊಬ್ಬ ವ್ಯಕ್ತಿಯ ಭೂಮಿಯನ್ನು ಭೂಮಿಯಲ್ಲಿ ಬೆಳೆದ ಬೆಳೆಯಲ್ಲಿ ಒಂದು ಪಾಲನ್ನು ಅದರ ಮಾಲೀಕನಿಗೆ ಕೊಡುವ ಷರತ್ತಿನ ಮೇಲೆ ಸಾಗುವಳಿ ಮಾಡುತ್ತಾನೆ ಅಥವಾ ಭೂಮಿಯಲ್ಲಿ ಬೆಳೆದ ಉತ್ಪನ್ನದ ಮೌಲ್ಯವನ್ನು ಲೆಕ್ಕಿಸದೆ ಅಥವಾ ಉತ್ಪನ್ನದ ಪ್ರಮಾಣವನ್ನು ಲೆಕ್ಕಿಸದೆ ಉತ್ಪನ್ನದ ಒಂದು ನಿರ್ದಿಷ್ಟವಾದ ಭಾಗವನ್ನು ಕೊಡಲು ಒಪ್ಪಿ ಸಾಗುವಳಿ ಮಾಡುತ್ತಾನೆ. ಈ ಗೇಣಿದಾರಕಾಯ್ದೆ ರೈತ

ಭೂ ಮಾಲೀಕನಿಗೆ ಕೊಡಬೇಕಾದ ಗೇಣಿಯನ್ನು ಶೇಕಡಾ ೫೦ ರಿಂದ ಶೇಕಡಾ ೩೩.೩೩ ಕ್ಕೆ ಇಳಿಸಿತು. ಈ ಕಾಯ್ದೆ ಜಾರಿಗೆ ಬಂದ ಮೇಲೆ ಭೂ ಮಾಲೀಕರು ಒತ್ತಾಯ ಪೂರ್ವಕವಾಗಿ ಅನೇಕ ಸಾಗುವಳಿದಾರರನ್ನು ತಮ್ಮ ಭೂಮಿಯಿಂದ ತೆಗೆದುಹಾಕಿದರು. ಇದು ಒರಿಸ್ಸಾದಲ್ಲಿ ಗೇಣಿದಾರರ ಚಳುವಳಿಗೆ ದಾರಿ ಮಾಡಿಕೊಟ್ಟಿತು.

೧೯೬೯ರಲ್ಲಿ ಪಶ್ಚಿಮ ಬಂಗಾಲದಲ್ಲಿ ಗೇಣಿದಾರರು ಭೂ ಮಾಲೀಕರು ಗೇಣಿದಾರರನ್ನು ಭೂಮಿಯಿಂದ ತೆಗೆದುಹಾಕುತ್ತಿರುವ ಕ್ರಮದ ವಿರುದ್ಧ ಗೇಣಿದಾರರು ಒಂದು ಬಲಯುತವಾದ ಚಳುವಳಿಯನ್ನು ಕೈಗೊಂಡರು. ಅದರಲ್ಲಿ ಪಾಲುಗಾರಿಕೆ ಬೆಳೆಗಾರರು ಭೂಮಾಲೀಕರು ಭೀಕರ ಆಕ್ರಮಣದ ವಿರುದ್ಧ ಸಿಡಿದೆದ್ದು ನಿಂತರು ಮತ್ತು ತಮ್ಮ ಭೂಮಿಯನ್ನು ಬಿಟ್ಟುಕೊಡಲಿಲ್ಲ. ಆದ್ದರಿಂದ ಭೂಮಿಯಿಂದ ರೈತರನ್ನು ತೆಗೆದುಹಾಕುವ ವಿರುದ್ಧದ ಹೋರಾಟ ಮತ್ತು ಭೂಮಿಗಾಗಿ ನಡೆಯುತ್ತಿದ್ದ ಹೋರಾಟಗಳು ಒಂದಾದವು. ತಕ್ಷಣ ೧೯೬೯ರಲ್ಲಿ ಸಂಯುಕ್ತ ಸರ್ಕಾರ ಒಂದು ಕಾನೂನನ್ನು ಜಾರಿಗೆ ತಂದಿತಲ್ಲದೆ, ಅದು ಭೂ ಮಾಲೀಕರು ರೈತರ ವಿರುದ್ಧ ಹೊಂದಿದ್ದ ಎಲ್ಲಾ ವ್ಯಾಜ್ಯ ವ್ಯವಹಾರಗಳನ್ನು ತಡೆ ಹಿಡಿಯಿತು. ನಂತರದಲ್ಲಿ ಇದು ಪಶ್ಚಿಮ ಬಂಗಾಲದ ೧೯೭೦ರ ಭೂ ಸುಧಾರಣಾ ಕಾಯ್ದೆಯ ಮೇಲೆ ಒತ್ತಡ ಹೆಚ್ಚಿಸಿತು.

ಭಾರತೀಯ ಖೇತ್ ಮಜದೂರ್ ಸಂಘ ಮೋಗಾದಲ್ಲಿ ತನ್ನ ಪ್ರಥಮ ಸಮ್ಮೇಳನವನ್ನು ಸೆಪ್ಟೆಂಬರ್ ೧೯೬೮ರಲ್ಲಿ ನಡೆಸಿತು. ಅದು ನವೆಂಬರ್ ೧, ೧೯೬೮ನ್ನು ಚಾರ್ಟರ್ ದಿನವನ್ನಾಗಿ ಆಚರಿಸಿತು ಮತ್ತು ೮ ಬೇಡಿಕೆಗಳನ್ನು ಪ್ರಕಟಿಸಿತು. ಅದರಲ್ಲಿ ೩ ಭೂಸುಧಾರಣೆಗಳಿಗೆ ಸಂಬಂಧಿಸಿದ್ದವು. ಅವುಗಳೆಂದರೆ : ಭೂಮಾಲೀಕತ್ವವನ್ನು ರದ್ದುಗೊಳಿಸುವುದು, ಕೃಷಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಭೂಮಿಯ ಹಂಚಿಕೆ ಮತ್ತು ಎಲ್ಲಾ ರೀತಿಯ ಸಾಗುವಳಿಯಾಗದೆ ಇರುವ ವ್ಯರ್ಥವಾದ ಭೂಮಿಯನ್ನು ಉಚಿತವಾಗಿ ಕೃಷಿ ಕಾರ್ಮಿಕರಿಗೆ ಹಂಚಿಕೆ ಮಾಡುವುದು.

ಹೋರಾಟವನ್ನು ೨ ಹಂತಗಳಲ್ಲಿ ಕೈಗೊಳ್ಳಲಾಯಿತು. ಮೊದಲ ಹಂತದ ಚಳುವಳಿ ೧೯೭೦ರ ಜುಲೈ ೧ರಂದು ಪ್ರಾರಂಭವಾಯಿತು. ಇದರಲ್ಲಿ ಸರ್ಕಾರಿ ಭೂಮಿ ಮತ್ತು ನಾಮಮಾತ್ರ ಅರಣ್ಯ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು. ಎರಡನೇ ಹಂತ ೧೯೭೦ರ ಆಗಸ್ಟ್ ೯ರಂದು ಪ್ರಾರಂಭವಾಯಿತು. ಇದರಲ್ಲಿ ಖಾಲಿ ಬಿದ್ದಿರುವ ಸರ್ಕಾರದ ಭೂಮಿ ಮತ್ತು ದೊಡ್ಡ ಭೂಮಾಲೀಕರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು. ಇದರ ಫಲವಾಗಿ ಸುಮಾರು ೩,೩೫,೦೦೦ ಎಕರೆಗಳಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು. ಅದರಲ್ಲಿ ೨,೧೨,೦೦೦

ಎಕರೆಗಳಷ್ಟು ಭೂಮಿಯನ್ನು ತಕ್ಷಣದಲ್ಲಿ ಸಾಗುವಳಿಗೆ ಒಳಪಡಿಸಲಾಯಿತು.

ನೂರು ವರ್ಷಗಳಿಗೂ ಮೇಲ್ಪಟ್ಟು, ಭಾರತದ ಇತರ ಭಾಗಗಳಲ್ಲಿ ಇರುವಂತೆ ಬಿಹಾರದ ಬುಡಕಟ್ಟು ಜನಾಂಗಗಳು ಬಯಲು ಪ್ರದೇಶದ ವ್ಯಾಪಾರಸ್ಥರು ಹಾಗೂ ಲೇವಾದೇವಿಗಾರರಿಂದ ಶೋಷಣೆಗೆ ಒಳಗಾಗಿದ್ದಾರೆ. ದಮನ ಮಾಡಲ್ಪಟ್ಟಿದ್ದಾರೆ ಮತ್ತು ಮೋಸಕ್ಕೆ ಒಳಗಾಗಿದ್ದಾರೆ. ಅವರ ಭೂಮಿಯನ್ನು ವಶಪಡಿಸಿಕೊಳ್ಳಲಾಯಿತು, ಅವರ ಮಕ್ಕಳನ್ನು ಟೀ ತೋಟಗಳಲ್ಲಿ ಗುಲಾಮಗಿರಿಗೆ ತಳ್ಳಲಾಯಿತು ಮತ್ತು ಉಳಿದವರನ್ನು ಅರೆ ಗುಲಾಮ ಸ್ಥಿತಿಗೆ ಇಳಿಸಲಾಯಿತು, ಆದ್ದರಿಂದ ಅವರು ಲೇವಾದೇವಿಗಾರರಿಗೆ ಜೀತದಾಳುಗಳಾಗಬೇಕಾಯಿತು. ಮತ್ತೊಮ್ಮೆ ಬುಡಕಟ್ಟು ಜನರು ಈ ಎಲ್ಲಾ ಶೋಷಣೆಗಳನ್ನು ವಿರೋಧಿಸಲು ಮೇಲೆದ್ದರು. ೧೯ನೇ ಶತಮಾನದಲ್ಲಿ ಸಂತಾಲ ಬಂಡಾಯಗಳು ಬಿರ್ಸಾ ಭಗವಾನರ ನಾಯಕತ್ವದಲ್ಲಿ ಒಂದು ಬಂಡಾಯ ಕೈಗೊಂಡವು. ತಾನಾ ಭಗತ್ ಚಳುವಳಿ ಮತ್ತು ಪ್ರತ್ಯೇಕ ರಾಜ್ಯಕ್ಕಾಗಿ ಜಾರ್ಕಂಡ ಚಳುವಳಿಗಳ (ಜಾರ್ಕಂಡ್, ನವೆಂಬರ್ ೧೫, ೨೦೦೦ರಂದು ಭಾರತದ ೨೮ನೇ ಪ್ರತ್ಯೇಕ ರಾಜ್ಯವಾಗಿ ಸ್ಥಾಪನೆಯಾಯಿತು) ಮೂಲಕ ಶೋಷಣಾ ಬುಡಕಟ್ಟು ಜನ ಶೋಷಣಾ ಆಡಳಿತವನ್ನು ತಲ್ಲಣಗೊಳಿಸಲು ಎಲ್ಲಾ ರೀತಿಯಿಂದ ಪ್ರಯತ್ನಿಸಿದವು.

ಸ್ವಾತಂತ್ರ್ಯ ನಂತರದ ವರ್ಷಗಳು ರಾಜ್ಯಗಳಲ್ಲಿ ಭೂ ಸುಧಾರಣಾ ಕಾನೂನುಗಳನ್ನು ಒಂದು ಸಾಮಾನ್ಯ ಕ್ರಿಯೆಯನ್ನಾಗಿಸಿದವು. ಅವುಗಳು ರಾಜ್ಯದ ಒಳಗೆ ಹೊರಗೆ ಕೃಷಿ ಹೋರಾಟಗಳಿಗೆ ಪ್ರತಿಕ್ರಿಯಿಸಿದವು. ಸಾಮಾನ್ಯವಾಗಿ ೧೯೬೦ರಲ್ಲಿ ಎಲ್ಲಾ ರಾಜ್ಯಗಳು ಕೇಂದ್ರ ಸರ್ಕಾರ ನೀಡಿದ ರಾಷ್ಟ್ರೀಯ ಮಾರ್ಗದರ್ಶನದಂತೆ ತಮ್ಮದೇ ಆದ ಭೂ ಸುಧಾರಣಾ ಮಾದರಿಗಳನ್ನು ಜಾರಿಗೆ ತಂದವು.

ಪಟ್ಟಿ ಸಂಖ್ಯೆ ೧.೧

೧೯೬೦ರಲ್ಲಿ ರಾಜ್ಯಗಳು ಜಾರಿಗೆ ತಂದ ಭೂಸುಧಾರಣ ಕಾಯ್ದೆಗಳನ್ನು ಮತ್ತು ಅವುಗಳ ಭೂ ಒಡೆತನ ಗರಿಷ್ಠ ಮಿತಿಯನ್ನು ತೋರಿಸುತ್ತದೆ.

ಕ್ರ. ಸಂ.	ರಾಜ್ಯದ ಹೆಸರು	ಶಾಸನಗಳು		ಅಸ್ತಿತ್ವದಲ್ಲಿದ್ದ ಭೂ ಶ್ರೇಣಿ ಮಿತಿ ಎಕರೆಗಳಲ್ಲಿ
		ಜಾರಿಗೆ ಬಂದದ್ದು	ಕಾರ್ಯಗತ ಗೊಂಡಿದ್ದು	
೧	ಆಂಧ್ರಪ್ರದೇಶ	೧೯೬೧	ಜೂನ್ ೧೯೬೧	೨೭.೩೨೪

೨	ಅಸ್ಸಾಂ	೧೯೫೬	ಫೆಬ್ರವರಿ ೧೯೫೬	೫೦
೩	ಬಿಹಾರ	೧೯೬೧	ಏಪ್ರಿಲ್ ೧೯೬೨	೨೦–೬೦
೪	ಗುಜರಾತ್	೧೯೬೧	ಸೆಪ್ಟೆಂಬರ್ ೧೯೬೧	೧೯–೧೩೨
೫	ಹರಿಯಾಣ	೧೯೬೧	೧೯೬೧	೩೦ ಸ್ಟಾಂಡರ್ಡ್ ಎಕರೆ*
೬	ಜಮ್ಮು ಮತ್ತು ಕಾಶ್ಮೀರ	೧೯೫೦	೧೯೫೧	೨೫–೭೫
೭	ಮಧ್ಯಪ್ರದೇಶ	೧೯೫೯	ನವೆಂಬರ್ ೧೯೬೩	೨೫–೭೫
೮	ಮಹಾರಾಷ್ಟ್ರ	೧೯೬೧	ಜನವರಿ ೧೯೬೨	೩೮–೧೨೬
೯	ಕರ್ನಾಟಕ	೧೯೬೨	ಫೆಬ್ರವರಿ ೧೯೬೫	೨೭–೩೨೬
೧೦	ಒರಿಸ್ಸಾ	೧೯೬೦	ಆಗಸ್ಟ್ ೧೯೬೦	೨೦–೮೦
೧೧	ಪಂಜಾಬ್	೧೯೬೧	೧೯೬೧	೩೦ ಸ್ಟಾಂಡರ್ಡ್ ಎಕರೆ*
೧೨	ರಾಜಸ್ಥಾನ	೧೯೬೦	ಡಿಸೆಂಬರ್ ೧೯೬೩	೨೨–೩೩೬
೧೩	ತಮಿಳುನಾಡು	೧೯೬೨	ಅಕ್ಟೋಬರ್ ೧೯೬೨	೨೭–೩೧೬

೧೪	ಉತ್ತರ ಪ್ರದೇಶ	೧೯೬೧	ಜನವರಿ ೧೯೬೧	೪೦-೮೦
೧೫	ಪಶ್ಚಿಮ ಬಂಗಾಲ	೧೯೫೪	ಏಪ್ರಿಲ್ ೧೯೫೬	೨೫
೧೬	ಹಿಮಾಚಲ ಪ್ರದೇಶ	೧೯೫೫	ಏಪ್ರಿಲ್ ೧೯೬೦	೩೦
೧೭	ಕೇರಳ	೧೯೬೩	ಏಪ್ರಿಲ್ ೧೯೬೪	೧೫-೩೬

***'ಸ್ಟಾಂಡರ್ಡ್ ಎಕರ'** ಎಂದರೆ ಒಂದು ಎಕರೆ ನೀರಾವರಿ ಪಡೆದ ಅತ್ಯುತ್ಕೃಷ್ಟ ಭೂಮಿ. ಅದು ವರ್ಷಕ್ಕೆ ೨೫ ಅಂಗುಲಕ್ಕಿಂತ ಕಡಿಮೆ ಮಳೆಯಾಗುವ ಪ್ರದೇಶದಲ್ಲಿನ ಸುಮಾರು ಎಂಟು ಎಕರೆ ಖುಷ್ಕಿ ಜಮೀನು ಅದಕ್ಕೆ ಸಮ ಎಂದು ಪರಿಗಣಿತವಾಯಿತು.
ಟಿಪ್ಪಣಿ : ೧೯೬೧ರ ಕಾಯ್ದೆಯಲ್ಲಿ ೧ ಎಕರೆ ಉತ್ತಮ ನೀರಾವರಿ ಭೂಮಿ ಕನಿಷ್ಟ ಗುಣಮಟ್ಟದ ಭೂಮಿ ೮ ಎಕರೆ.
ಮೂಲ : ಉಲ್ಲೇಖ ಎ. ಎನ್. ಶಾರಯ ಪಿಹೆಚ್. ಡಿ. 'ಭಾರತೀಯ ಕೃಷಿಯ ಆರ್ಥಿಕ ಸ್ವರೂಪ' ಹಿಮಾಲಯ ಪಬ್ಲಿಷಿಂಗ್ ಹೌಸ್, ಬಾಂಬೆ, ೧೯೮೪, ಪುಟ ೧೩೩-೧೩೪.

ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಸರ್ಕಾರಗಳು ಭೂ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ಕೇಂದ್ರ ಸರ್ಕಾರದಿಂದ ಸಲಹೆ ಹಾಗೂ ಪ್ರೋತ್ಸಾಹವನ್ನು ಪಡೆಯುತ್ತಿವೆ. ರಾಜ್ಯದಿಂದ ರಾಜ್ಯಕ್ಕೆ ಭೂ ಸುಧಾರಣೆ ಮತ್ತು ಅದರ ಆಡಳಿತ ಭಿನ್ನವಾಗಿದೆ (ಪಟ್ಟಿ ಸಂಖ್ಯೆ ೧.೧). ಆದರೆ ಭೂ ಸುಧಾರಣೆಗಳ ಮೂಲ ಲಕ್ಷಣಗಳು ಒಂದೇ ರೀತಿ ಇದೆ. ಹಲವು ರಾಜ್ಯಗಳಲ್ಲಿ ಭೂ ಸುಧಾರಣೆಗಳ ಅನುಭವ ಮತ್ತು ಪರಿಣಾಮಕಾರಿ ಕಾರ್ಯಚರಣೆ ಸೂಚಿಸುವುದೇನೆಂದರೆ ಕೇರಳ, ಕರ್ನಾಟಕ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳನ್ನು ಹೊರತುಪಡಿಸಿ ಒಟ್ಟಾರೆ ಫಲಿತಾಂಶ ಸರ್ಕಾರ ಪ್ರತಿಪಾದಿಸಿದ್ದಕ್ಕಿಂತ ಕಡಿಮೆ ತೃಪ್ತಿಕರವಾಗಿದೆ.

೬೦ರ ದಶಕದಲ್ಲಿ ಗ್ರಾಮೀಣ ಚಳುವಳಿಗಳು, ಹೋರಾಟಗಳು ಮತ್ತು ಭೂ ಸ್ವಾಧೀನ ಚಳುವಳಿಗಳು ಹಲವು ರಾಜ್ಯಗಳಲ್ಲಿ ಅಧಿಕ ಸಂಖ್ಯೆಯಲಿ ಕಂಡು ಬಂದವು. ಪ್ರಮುಖವಾಗಿ ಪಶ್ಚಿಮ ಬಂಗಾಲ, ಬಿಹಾರ, ಕೇರಳ ಮತ್ತು ಆಂಧ್ರಪ್ರದೇಶ

ರಾಜ್ಯಗಳಲ್ಲಿ ಉದಾಹರಣೆಗೆ, ಗ್ರಾಮೀಣ ಅಶಾಂತಿ ಮತ್ತು ಚಳುವಳಿಗಳು ಭೂ ಮಾಲೀಕರ ವಿರುದ್ಧ ಹಿಂಸಾತ್ಮಕ ರೂಪ ತಾಳಿದವು. ಕೇಂದ್ರ ಸರ್ಕಾರದ ಗೃಹ ಮಂತ್ರಿಮಂಡಳ ಕೃಷಿ ಉದ್ವೇಗದ ಕಾರಣ ಮತ್ತು ಪರಿಣಾಮಗಳನ್ನು ಪರಿಶೀಲಿಸಿ, ಭೂ ಒಡೆತನದ ವಿತರಣೆಯಲ್ಲಿನ ಅಸಮಾನ ಹಂಚಿಕೆಯೇ ಇಂತಹ ಪರಿಸ್ಥಿತಿಗೆ ಮುಖ್ಯಕಾರಣವೆಂದು ಅಭಿಪ್ರಾಯ ಪಟ್ಟಿತು. ಆದ್ದರಿಂದ ಕೇಂದ್ರ ಸರ್ಕಾರ ತಮ್ಮ ಸಂಬಂಧಪಟ್ಟ ರಾಜ್ಯಗಳಲ್ಲಿ ರಾಷ್ಟ್ರೀಯ ಮಾರ್ಗದರ್ಶಿಯಂತೆ ಪರಿಣಾಮಕಾರಿ ಭೂ ಸುಧಾರಣೆಗಳನ್ನು ಜಾರಿಗೆ ತರಲು ಅನುಮೋದನೆ ನೀಡಿತು.

ರಾಷ್ಟ್ರೀಯ ಮಾರ್ಗದರ್ಶಿ ಪ್ರಕಾರ ಉತ್ತಮ ವರ್ಗದ ಭೂಮಿ ಅಂದರೆ ನೀರಾವರಿಯುಳ್ಳ ಮತ್ತು ವರ್ಷಕ್ಕೆ ಎರಡು ಬೆಳೆ ತೆಗೆಯಬಹುದಾದ ಭೂಮಿ. ಈ ಭೂಮಿಗೆ ೧೦ ರಿಂದ ೧೮ ಎಕರೆ ಮಿತಿ ಇರಬೇಕು (೪ ರಿಂದ ೬ ಹೆಕ್ಟೇರುಗಳು). ನೀರಾವರಿ ಸೌಲಭ್ಯವುಳ್ಳ ಕಡಿಮೆ ವರ್ಗದ ಭೂಮಿ ೫೪ ಎಕರೆಗಳ ಮಿತಿ ಹೊಂದಿರಬೇಕು (ಸುಮಾರು ೨೨ ಹೆಕ್ಟೇರುಗಳು). ಮಿತಿಗೆ ಇಟ್ಟಂತಹ ಘಟಕವೆಂದರೆ ೫ ಜನ ಸದಸ್ಯರಿರುವ ಒಂದು ಕುಟುಂಬವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಭೂರಹಿತತೆಯನ್ನು ಹೋಗಲಾಡಿಸಲು ಹೆಚ್ಚುವರಿ ಭೂಮಿಯನ್ನು ವ್ಯಕ್ತಪಡಿಸಬೇಕು, ಸ್ವಾಧೀನ ಪಡಿಸಿಕೊಳ್ಳಬೇಕು ಮತ್ತು ಭೂರಹಿತರಿಗೆ ಹಂಚಬೇಕು. ಎಲ್ಲಾ ರಾಜ್ಯಗಳು ತಮ್ಮ ಭೂ ಸುಧಾರಣಾ ಕಾನೂನುಗಳಲ್ಲಿ ಈ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಿದವು.

ರೈತರ ಸಮಸ್ಯೆಗಳು ಎಲ್ಲಾ ಭಾಗಗಳಲ್ಲಿ ಒಂದೇ ರೀತಿ ಇದ್ದವು ಆದರೆ ಅವರ ವಿಷಯಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಇದ್ದವು. ಅವರ ಹೋರಾಟಗಳು ಹಾಗೂ ಹೋರಾಟದ ದೃಷ್ಟಿ ಕೋನಗಳು ಇಂದಿಗೂ ಆಳವಾದ ಐತಿಹಾಸಿಕ ಅರ್ಥವನ್ನು ಹೊಂದಿವೆ.

ಕರ್ನಾಟಕದಲ್ಲಿ ಭೂಸುಧಾರಣೆಗಳು

ಕರ್ನಾಟಕ ಪ್ರಮುಖವಾಗಿ ಒಂದು ಕೃಷಿ ರಾಜ್ಯವಾಗಿದೆ ಮತ್ತು ಶೇಕಡಾ ೬೦ರಷ್ಟು ಜನರಿಗೆ ಭೂ ಸಾಗುವಳಿ ಜೀವನೋಪಾಯ ಒದಗಿಸಿದೆ. ಅಧಿಕ ಭೂಮಿ ಮಳೆಯನ್ನೇ ಅವಲಂಬಿಸಿದೆ. ಆದರೆ ಎಲ್ಲಾ ಪ್ರದೇಶಗಳಲ್ಲೂ ಮಳೆ ಒಂದೇ ರೀತಿಯಾಗಿಲ್ಲ. ಕೆಲವು ಪ್ರದೇಶಗಳಲ್ಲಿ ಅದು ಕ್ರಮಬದ್ಧ ಹಾಗೂ ಸಾಕಷ್ಟು ಪ್ರಮಾಣದಲಿದ್ದರೆ ಮತ್ತೆ ಕೆಲವೆಡೆ ಅದು ಅನಿಶ್ಚಿತ ಹಾಗೂ ಕೊರತೆಯಲ್ಲಿದೆ.

ಒಟ್ಟು ೧೯೧ ಲಕ್ಷ ಹೆಕ್ಟೇರುಗಳಷ್ಟು ಭೌಗೋಳಿಕ ಪ್ರದೇಶದಲಿ ನಿವ್ವಳ

ಬಿತ್ತನೆಯಾದ ಪ್ರದೇಶ ೧೦೭ ಲಕ್ಷ ಹೆಕ್ಟೇರುಗಳಾಗಿದ್ದು ಶೇಕಡಾ ೫೬ ರಷ್ಟಿದೆ. ಪ್ರಮುಖ ಆಹಾರ ಬೆಳೆಗಳು ಅಕ್ಕಿ, ರಾಗಿ, ಜೋಳ, ಬಾಜ್ರಾ, ಮುಸುಕಿನ ಜೋಳ ಮತ್ತು ದ್ವಿದಳ ಧಾನ್ಯಗಳಾಗಿವೆ. ಕರ್ನಾಟಕ, ರಾಷ್ಟ್ರದ ಕಾಫಿ ಉತ್ಪಾದನೆಯಲ್ಲಿ ಶೇಕಡಾ ೫೯ರಷ್ಟು ಉತ್ಪಾದನೆ ಹೊಂದಿದೆ ಮತ್ತು ಪ್ರತಿ ಹೆಕ್ಟೇರು ಪ್ರದೇಶದಲ್ಲಿ ಬೆಳೆಯುವ ಉತ್ಪಾದನೆಯಲ್ಲಿ ಪ್ರಥಮ ಸ್ಥಾನ ಹೊಂದಿದೆ. ಇತರ ಬೆಳೆಗಳೆಂದರೆ ಏಲಕ್ಕಿ, ಅಡಿಕೆ, ಸೂರ್ಯಕಾಂತಿ, ತೆಂಗು, ಗೋಡಂಬಿ, ಹತ್ತಿ, ನೆಲಗಡಲೆ, ಮೆಣಸಿನಕಾಯಿ, ಹರಳೆಬೀಜ, ಕಬ್ಬು ಮತ್ತು ತಂಬಾಕುಗಳಾಗಿವೆ.

ನೀರಾವರಿಯಲ್ಲಿ ಕರ್ನಾಟಕ ಗೋದಾವರಿ, ಕೃಷ್ಣ, ಕಾವೇರಿ, ಪಲಾರ್ ಮತ್ತು ಪೆನ್ನಾರ್ ನದಿ ತೀರಗಳನ್ನು ಹೊಂದಿದ್ದು ೧,೯೧,೧೭೦ ಚದರ ಕಿಲೋ ಮೀಟರ್‌ಗಳಷ್ಟು ಕಾಲುವೆ ಪ್ರದೇಶ ಹೊಂದಿದೆ ಪ್ರಮುಖವಾಗಿ ಪೂರ್ವಕ್ಕೆ ಹರಿಯುವ ನದಿಗಳು ನೀರಾವರಿಗೆ ಉಪಯುಕ್ತವಾಗಿವೆ.

ಭೂಸುಧಾರಣೆಗಳು ಕರ್ನಾಟಕದಲ್ಲಿ ಆಸ್ತಿಹಕ್ಕಿನ ಹಂಚಿಕೆಯನ್ನು ಸಣ್ಣ ರೈತರ ಮತ್ತು ಕೃಷಿ ಕಾರ್ಮಿಕರ ಒಳಿತಿಗಾಗಿ ಕೈಗೊಂಡವು. ಭೂ ಸುಧಾರಣಾ ಕಾಯ್ದೆಯ ಪ್ರಮುಖ ಉದ್ದೇಶ ಉತ್ಪಾದನಾಂಗಗಳ ಸಮಾನವಾದ ಹಂಚಿಕೆಯನ್ನು ಸಾಗುವಳಿದಾರರಿಗೆ ಅಥವಾ ಬಡವರು ಅದರಲ್ಲೂ ಹರಿಜನ, ಕುಶಲಕರ್ಮಿಗಳಿಗೆ, ಭೂರಹಿತ ಕೃಷಿ ಕಾರ್ಮಿಕರಿಗೆ ಸೀಮಾಂತ ರೈತರಿಗೆ ಮತ್ತು ಹಿಂದುಳಿದ ಪಂಗಡಗಳಿಗೆ ಮಾಡುವುದೇ ಆಗಿತ್ತು. ಈ ಪಂಗಡಗಳ ರೈತರಲ್ಲಿ ಬಹಳಷ್ಟು ಜನ ಇಂದು ಭೂ ಒಡೆಯರಾಗಿದ್ದಾರೆ ಮತ್ತು ಭೂ ಮಾಲೀಕರ ಹಿಡಿತದಿಂದ ಮುಕ್ತರಾಗಿದ್ದಾರೆ.

ಕರ್ನಾಟಕದಲ್ಲಿ ಭೂಪದ್ಧತಿಯ ಐತಿಹಾಸಿಕ ಹಿನ್ನಲೆ

ಪ್ರಾರಂಭಿಕ ಪದ್ಧತಿಗಳು

ಮೈಸೂರಿನ ವಿಜಯನಗರದ ಅರಸರು ಸೋತ ರಾಜರುಗಳನ್ನು ಹಿಡುವಳಿದಾರರಾಗಿ ಪುನರ್ ಸ್ಥಾಪಿಸಿದರು ಮತ್ತು ಸಾಗುವಳಿಗಾಗಿ ಬೀಳು ಭೂಮಿಯನ್ನು ಅಭಿವೃದ್ಧಿ ಪಡಿಸುವಂತೆ ಅವರನ್ನು ಕೇಳಿಕೊಂಡರು. ಗ್ರಾಮೀಣ ಮಟ್ಟದಲ್ಲಿ ೨ ಪ್ರಕಾರದ ಅಧಿಕಾರಿಗಳಿದ್ದರು ಶಾನುಭೋಗರು ಮತ್ತು ಗೌಡರು (ಸ್ಥಳೀಯ ಸಾಂಪ್ರದಾಯಿಕ ಆದಾಯ ಅಧಿಕಾರಿಗಳು) ಇವರು ಭೂ ಕಂದಾಯ ಸಂಗ್ರಹಿಸುವ ಜವಾಬ್ದಾರಿ ಹೊಂದಿದ್ದರು. ರೈತರು ಅವರ ಕೈಕೆಳಗಿದ್ದರು ಮತ್ತು ಅವರಿಂದ ಶೋಷಿತರಾಗಿದ್ದರು.

ಮೈಸೂರು ರಾಜರ ಕಾಲದಲ್ಲಿ

ಚಿಕ್ಕ ದೇವರಾಜರ (೧೬೭೨-೧೭೦೪) ಆಳ್ವಿಕೆಯವರೆಗೂ ವಿಜಯನಗರ ಭೂ ಪದ್ಧತಿ ಮೈಸೂರು ರಾಜರ ಆಡಳಿತದಲ್ಲೂ ಮುಂದುವರೆಯಿತು. ಆದರೆ ಅವರು ಒಂದು ಕ್ರಾಂತಿಕಾರಿ ಕ್ರಮವನ್ನು ಅನುಸರಿಸಿ ಭೂ ಸುಧಾರಣೆಗಳ ಕ್ರಮದಲ್ಲಿ ಎಲ್ಲಾ ಮಠಗಳ ಖಾಸಗಿ ಆಸ್ತಿಯನ್ನು ನಿರ್ದಾಕ್ಷಿಣ್ಯವಾಗಿ ರಾಜ್ಯದ ನಿಯಂತ್ರಣಕ್ಕೆ ಒಳಪಡಿಸಿದರು. ಆದ್ದರಿಂದ ಮಠದ ಆಶ್ರಯದಲ್ಲಿ ಭೂಮಿ ಹೊಂದಿದ ಸಾಗುವಳಿದಾರರನ್ನು ರೈತರನ್ನಾಗಿ ರಾಜ್ಯದ ಆಡಳಿತದಲ್ಲಿ ಪರಿವರ್ತಿಸಲಾಯಿತು.

ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ

ಹಿಂದೆ ಅಸ್ತಿತ್ವದಲ್ಲಿದ್ದ ರೆವಿನ್ಯೂ ಪದ್ಧತಿಯಲ್ಲಿ ಹೈದರ್ ಆಲಿಯವರ ಆಡಳಿತ ಕಾಲದಲ್ಲೂ ಯಾವುದೇ ಬದಲಾವಣೆಗಳನ್ನು ಮಾಡಲಿಲ್ಲ. ಅವರು ಪ್ರತಿ ಜಿಲ್ಲೆಯಲ್ಲೂ ಇಬ್ಬರು ಬ್ರಾಹ್ಮಣ ಅಧಿಕಾರಿಗಳನ್ನು ಸ್ಥಳೀಯ ರೆವಿನ್ಯೂ ಅಧಿಕಾರಿಗಳಿಂದ ರೈತರು ಎದುರಿಸುವ ಸಮಸ್ಯೆಗಳನ್ನು ಪರಿಹರಿಸಲು ನೇಮಕ ಮಾಡಿದರು. ಆದರೆ ಸಮಸ್ಯೆಗಳು ಉಲ್ಬಣಗೊಂಡವು. ದೂರು ಕೊಟ್ಟವರ ಆಸ್ತಿಗಳನ್ನು ರಾಜ್ಯದ ಬೊಕ್ಕಸದ ಆಸ್ತಿ ಹೆಚ್ಚಿಸಲು ವಶಪಡಿಸಿಕೊಳ್ಳಲಾಯಿತು. ಟಿಪ್ಪು ಆಡಳಿತದಲ್ಲೂ ಅದೇ ಪದ್ಧತಿ ಮುಂದುವರೆಯಿತು. ಆದರೆ ಅವರ ಆಡಳಿತವು ಹಿಂದೂಗಳು ಅದರಲ್ಲೂ ಬ್ರಾಹ್ಮಣರು ಹೊಂದಿದ ವಿವಿಧ ಕೊಡುಗೆಗಳನ್ನು (೧೭೯೯-೧೮೧೦) ಪೂರ್ಣಯ್ಯನವರ ಪ್ರಾತಿನಿಧಿತ್ವದಲ್ಲಿ ವಶಪಡಿಸಿಕೊಂಡರು.

ದಿವಾನ ಪೂರ್ಣಯ್ಯನವರು ತುಳಿತಕ್ಕೊಳಗಾದ ರೈತರು, ಹೊರದೂಡಲ್ಪಟ್ಟ ಇನಾಂದಾರರು ಮತ್ತು ದಬ್ಬಾಳಿಕೆಯುಳ್ಳ ಪಾಳೇಗಾರರ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಈ ಸಮಸ್ಯೆಗಳನ್ನು ಪರಿಹರಿಸಲು ಅವರು ಹಲವು ಕ್ರಮಗಳನ್ನು ಕೈಗೊಂಡರು. ಮೊದಲನೆಯದಾಗಿ, ರೈತರ ಬಾಕಿ ಕಂದಾಯಗಳನ್ನು ರದ್ದುಗೊಳಿಸಿದರು ಮತ್ತು ಪುರಾತನ ಹಿಂದು ಕಂದಾಯ ಪದ್ಧತಿಯನ್ನು ಪುನರ್ ಸ್ಥಾಪಿಸಿದರು ಹಾಗೂ ಹಿಂದಿನ ಕಂದಾಯ ದರವನ್ನು ನಿಗದಿಪಡಿಸಿದರು. ಎರಡನೆಯದಾಗಿ, ಭಾರತದಲ್ಲಿ ಮುಸ್ಲಿಮರ ಆಡಳಿತಕ್ಕೆ ಮುನ್ನ ಹಿಂದೂಗಳು ಹೊಂದಿದ ಇನಾಮುಗಳನ್ನು ಅವರಿಗೇ ನೀಡಿದರು. ಸಾಗುವಳಿಯ ಪಿತ್ರಾರ್ಜಿತ ಹಕ್ಕು ಭೂ ಪದ್ಧತಿಯನ್ನು ಜಾರಿಗೆ ತಂದರು. ಇದರಂತೆ ಒಬ್ಬ ಗೇಣಿದಾರ ಮತ್ತು ಅವನ ವಂಶಜರು ಎಲ್ಲಿಯವರೆಗೆ ಸಾಂಪ್ರದಾಯಿಕ ಗೇಣಿ ಕೊಡುವರೋ ಅಲ್ಲಿಯವರೆಗೆ ಭೂಮಿಯನ್ನು ಇಟ್ಟುಕೊಳ್ಳಲು ಅವಕಾಶ ನೀಡಲಾಯಿತು.

ಮಹಾರಾಜ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ೧೮೧೧-೧೮೩೧

ಅವರ ಆಳ್ವಿಕೆಯು ಕೊನೆಯಲ್ಲಿ ೬ ಪ್ರಕಾರದ ಹಿಡುವಳಿಯನ್ನು ಕಾಣಬಹುದಾಗಿತ್ತು. ಅವುಗಳೆಂದರೆ,

೧. **ಕಂದಾಯ ಭೂಮಿ :** ಇದು ನೇರವಾಗಿ ರೈತನ ಒಡೆತನದಲ್ಲಿರುವ ಭೂಮಿ ಇದಕ್ಕೆ ನಿಗಧಿತ ಹಣದ ರೂಪದಲ್ಲಿ ಕಂದಾಯ ನೀಡಬೇಕಾಗಿತ್ತು.

೨. **ಭತಾಯಿ ಭೂಮಿ :** ಇದು ವ್ಯವಸಾಯ ಮಾಡುವವನ ಒಡೆತನದಲ್ಲಿರುತ್ತದೆ ಹಾಗೂ ಬೆಳೆಯನ್ನು ಅವನ ಮತ್ತು ಸರ್ಕಾರದ ನಡುವೆ ಸಮಾನವಾಗಿ ಹಂಚಿಕೆ ಮಾಡಿಕೊಳ್ಳಲಾಗುತ್ತದೆ. ವಾಸ್ತವಿಕವಾಗಿ ಅವರುಗಳೆಲ್ಲ ಸರ್ಕಾರದ ಜೊತೆ ಬೆಳೆಯನ್ನು ಹಂಚಿಕೆ ಮಾಡಿಕೊಳ್ಳಲು ಒಪ್ಪಿಕೊಂಡ ಕೂಲಿ ಕಾರ್ಮಿಕರು ಅಥವಾ ಗೇಣಿದಾರರಾಗಿದ್ದರು.

೩. **ಅಮಾನಿ ತಲಾನ :** ಅಮಾನಿ ಎಂದರೆ ಯಾವುದೇ ಆಸ್ತಿ ಟ್ರಸ್ಟ್ ವ್ಯವಸ್ಥೆಗೆ ಒಳಪಟ್ಟದ್ದು, ತಲಾನ ಎಂದರೆ ಕೆರೆ. ಇದು ಇನ್ನೊಂದು ಬಗೆಯ ಭೂಮಿ ಇದನ್ನು ಸಾರ್ವಜನಿಕ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ರೈತರು ವ್ಯವಸಾಯ ಮಾಡುವುದು.

೪. **ಶ್ರಯ ಸಾಗುವಳಿ ಭೂಮಿ :** ಇದು ರೈತರ ಒಡೆತನದಲ್ಲಿರುವ ಭೂಮಿ, ಇದಕ್ಕೆ ನಿಗಧಿತ ಅವಧಿಯವರೆಗೆ ಕಡಿಮೆ ಕಂದಾಯವನ್ನು ನೀಡಲು ಅವಕಾಶವಿತ್ತು. ಸಾಮಾನ್ಯವಾಗಿ ಇದು ೩ ಅಥವಾ ೪ ವರ್ಷದ ತನಕ, ಆ ಕಾಲಾವಧಿಯ ನಂತರ ಪೂರ್ಣ ನಿಗಧಿತ ಕಂದಾಯವನ್ನು ನೀಡಬೇಕಾಗಿತ್ತು.

೫. **ಕಾಯಂಗುಟ್ಟ ಭೂ ಪದ್ಧತಿ :** ಇದು ಮಹಾರಾಜರು ದತ್ತಿಯಾಗಿ ನೀಡಿದ ಹಳ್ಳಿಗಳು.

೬. **ಜೋಡಿದಾರ ಭೂಮಿಗಳು :** ಇದು ಜೋಡಿದಾರರ ಅಧೀನದಲ್ಲಿರುವ ಕಡಿಮೆ ಕಂದಾಯದ ಭೂಮಿ. (ಜೋಡಿದಾರರೆಂದರೆ ಜೋಡಿ ಅಥವಾ ಕಂದಾಯ ರಿಯಾಯಿತಿಯಿರುವ ಭೂಮಿಯನ್ನು ಪಡೆದವರಾಗಿರುತ್ತಾರೆ.)

ಬ್ರಿಟಿಷರ ಆಳ್ವಿಕೆ ೧೮೩೧-೧೮೮೧

ರಾಜ್ಯದ ಸುಧಾರಣೆಯ ಇತಿಹಾಸದಲ್ಲಿ ಈ ಅವಧಿಯನ್ನು ಅತ್ಯಂತ ಪ್ರಮುಖವೆಂದು ಪರಿಗಣಿಸಬಹುದು. ಬ್ರಿಟಿಷ್ ಸರ್ಕಾರ ಭೂ ಮಾಪನ ಮತ್ತು ಪರಿಹಾರ ಇಲಾಖೆಯನ್ನು ಸ್ಥಾಪಿಸಿತು ಅಲ್ಲದೆ ಅದರ ಮೂಲಕ ಸರ್ಕಾರೀ ಭೂಮಿಯ ಸಮಸ್ಯೆಗಳನ್ನು ಪರಿಹರಿಸಿತು ಮತ್ತು ಅದು ರಾಜ್ಯದಲ್ಲಿ ಅವ್ಯವಸ್ಥಿತ ಇನಾಂ ಗೇಣಿ ಪದ್ಧತಿಯನ್ನು ನಿರ್ಮೂಲನೆಯ ಪ್ರಾರಂಭ ಎನಿಸಿತು.

ವಿಲಿಯಂ ಬೆಂಟಿಂಕ್ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಪ್ರತಿಪಾದಿಸಿದ ರೈತವಾರಿ

ಪದ್ಧತಿ ಮೈಸೂರಿನ ಜನರ ಅವಶ್ಯಕತೆ ಮತ್ತು ಸಂಪ್ರದಾಯಗಳಿಗೆ ತಕ್ಕ ಭೂಪದ್ಧತಿ ಎಂದು ಪರಿಗಣಿಸಲ್ಪಟ್ಟಿತು. ಈ ಅವಧಿಯ ಕೊನೆಯಲ್ಲಿ ಕೇವಲ ಎರಡು ರೀತಿಯ ಭೂಗೇಣಿ ಪದ್ಧತಿಗಳು ಅಸ್ತಿತ್ವದಲಿದ್ದವು, ಅವುಗಳೆಂದರೆ ಸರ್ಕಾರ ಅಥವಾ ಸರ್ಕಾರದ ಭೂಮಿ ಮತ್ತು ಇನಾಂ ಭೂಮಿ. ರೈತವಾರಿ ಪದ್ಧತಿಯಲ್ಲಿ ಸರ್ಕಾರಿ ಭೂಮಿ ಇತ್ತು. ಈ ಭೂಮಿಯಿಂದ ೩೦ ವರ್ಷಗಳವರೆಗೆ ನಿಗದಿತ ಆದಾಯ ಹೊಂದಿದ್ದವು ಮತ್ತು ವಿವಿಧ ಷರತ್ತುಗಳ ಮೇಲೆ ಗೇಣಿದಾರರಿಂದ ಅಥವಾ ಪಾಯಕಾರಿಗಳಿಂದ ಸಾಗುವಳಿ ಮಾಡಲ್ಪಟ್ಟಿದ್ದವು. ಅವುಗಳೆಂದರೆ,

೧) **ವಾರಂ ಪದ್ಧತಿ** : ಇದರ ಪ್ರಕಾರ ಬೆಳೆಯನ್ನು ಜಮೀನ್ದಾರ ಮತ್ತು ಗೇಣಿದಾರನ ನಡುವೆ ಸಮಾನವಾಗಿ ಹಂಚಿಕೆ ಮಾಡಿಕೊಳ್ಳುವುದು, ಸರ್ಕಾರಕ್ಕೆ ಭೂ ಕಂದಾಯವನ್ನು ಜಮೀನ್ದಾರನೇ ನೀಡುವುದು.

೨) **ಮುಕುಪ್ಪ ಪದ್ಧತಿ** : ಇದರ ಪ್ರಕಾರ ಬೆಳೆಯಲ್ಲಿ ಮೂರನೆ ಎರಡು ಭಾಗ ಗೇಣಿದಾರನ ಪಾಲಾದರೆ ಮೂರನೆ ಒಂದು ಭಾಗ ಜಮೀನ್ದಾರನಿಗೆ. ಜಮೀನ್ದಾರ ಸರ್ಕಾರಕ್ಕೆ ಭೂ ಕಂದಾಯವನ್ನು ಕಟ್ಟುತ್ತಾನೆ.

೩) **ಅರೆ ಕಂದಾಯ ಪದ್ಧತಿ ಅಥವಾ ಚತುರ್ಭಾಗ ಪದ್ಧತಿ** : ಈ ಪದ್ಧತಿಯಲ್ಲಿ ಬೆಳೆಯಲ್ಲಿ ನಾಲ್ಕನೆ ಒಂದು ಭಾಗವನ್ನು ಪಡೆದು ಕೊಂಡು, ಭೂ ಕಂದಾಯದ ಅರ್ಧಭಾಗವನ್ನು ನೀಡುತ್ತಾನೆ. ಉಳಿದ ಅರ್ಧಭಾಗವನ್ನು ಗೇಣಿದಾರ ನೀಡುತ್ತಾನೆ.

೪) **ಹೊಲ ಕಂದಾಯ ಪದ್ಧತಿ** : ಈ ಪದ್ಧತಿಯಲ್ಲಿ ನಿಗಧಿತ ಬೆಲೆಯನ್ನು ಗೇಣಿದಾರ ಜಮೀನ್ದಾರನಿಗೆ ನೀಡಬೇಕು. ಇದು ಭೂ ಕಂದಾಯಕ್ಕೆ ಸಮಾನವಾಗಿರಬಹುದು ಅಥವಾ ಹೆಚ್ಚಾಗಿರಬಹುದು.

೫) **ಭತಾಯಿ ಭೂಮಿ ಪದ್ಧತಿ** : ಈ ಪದ್ಧತಿಯಲ್ಲಿ, ಗೇಣಿದಾರ ನೇರವಾಗಿ ಸರ್ಕಾರದಿಂದ ಈ ಭೂಮಿಯನ್ನು ಪಡೆಯುವುದು ಆದರೆ ಮೊದಲು ಭೂ ಕಂದಾಯಕ್ಕೆ ಬೆಳೆಯಲ್ಲಿ (ಫಸಲಿನಲ್ಲಿ) ಪಾಲನ್ನು ನೀಡುತ್ತಿದ್ದರು ಈಗ ಹಣದ ರೂಪದಲ್ಲಿ ನೀಡಬೇಕಾಗಿತ್ತು.

ರಾಜ್ಯದಲ್ಲಿ ಇನಾಂ ಗೇಣಿ ಪದ್ಧತಿ

ಇನಾಂ ಅಂದರೆ ಸರ್ಕಾರ ವ್ಯಕ್ತಿಗತ ಅನುಕೂಲಕ್ಕಾಗಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ, ಧಾರ್ಮಿಕ ದಾನದ ಮತ್ತು ಇತರ ಉದ್ದೇಶಗಳಿಗೆ ಅಥವಾ ಹಳ್ಳಿ ಸಮುದಾಯಕ್ಕೆ ಅಥವಾ ರಾಜ್ಯಕ್ಕೆ ಅವರು ನೀಡಿದ ಸೇವೆಗಳಿಗೆ ಪ್ರತಿಯಾಗಿ ಕೊಡಲಾದ ಕಂದಾಯ ರಹಿತ ಭೂಮಿಯಾಗಿದೆ. ಇದನ್ನು ೧೮೮೮ರ ಭೂ ಕಂದಾಯ ಸಂಹಿತೆಯಲ್ಲಿ ಕಾಣಬಹುದು. ಅದರ ಪ್ರಾರಂಭಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ದಿನಾಂಕವನ್ನು ಹೇಳಲು ಸಾಧ್ಯವಿಲ. ಮೈಸೂರಿನ ರಾಜರು ಕಾಲಕಾಲಕ್ಕೆ ವಿವಿಧ

ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಇನಾಂಗಳನ್ನು ನೀಡಿತ್ತು. ಪೂರ್ಣಯ್ಯನವರ ಅವಧಿಯಲ್ಲಿಯೂ ಕೆಲವು ಇನಾಂಗಳನ್ನು ನೀಡಿದ ಸಂದರ್ಭಗಳಿವೆ, ಆದರೆ ರಾಜ್ಯದಲ್ಲಿ ಬ್ರಿಟಿಷರ ಆಡಳಿತದಲ್ಲಿ ಅದು ಶೂನ್ಯವಾಗಿತ್ತು.

ರಾಜ್ಯದ ಭೂ ಕಂದಾಯ ಇತಿಹಾಸದಲ್ಲಿ, ಇನಾಂದಾರರು ಇನಾಂ ಪರಿಹಾರದ ಅಡಿಯಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡಲು ೧೯೧೮ರಲ್ಲಿ ಮೊದಲ ಬಾರಿಗೆ ಒಂದು ಸಂಘವನ್ನು ರಚಿಸಿಕೊಂಡರು. ಕ್ರಮೇಣ ಗೇಣಿದಾರರು ಇನಾಂದಾರರಿಗಿಂತ (ಸರ್ಕಾರ ಧನ ಸಹಾಯ ಪಡೆದು ಭೂಮಿ ಹೊಂದಿದವರು) ಅಧಿಕ ಸಮಸ್ಯೆಯನ್ನು ಎದುರಿಸಿದರು. ಆದರೆ ಅವರ ಸಮಸ್ಯೆಗಳು ಸಾರ್ವಜನಿಕರ ಚರ್ಚೆಗೆ ಬರಲಿಲ್ಲವಾದ್ದರಿಂದ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಇನಾಂದಾರರ ಮಾದರಿಯಲ್ಲಿ ಸಂಘವನ್ನು ರಚಿಸಿಕೊಳ್ಳಲಾಗಲಿಲ್ಲ.

ಇನಾಂದಾರರು ಮತ್ತು ಗೇಣಿದಾರರ ನಡುವಣ ಜಗಳಗಳು ೧೯೩೨ರಲ್ಲಿ ಇನಾಂ ಸಮಿತಿ ರಚನೆಗೆ ದಾರಿ ಮಾಡಿಕೊಟ್ಟಿತು. ಈ ಸಮಿತಿ ಭೂ ಕಂದಾಯದ ಅನಿಶ್ಚಿತತೆ ಮತ್ತು ಗೇಣಿದಾರರ ಆದಾಯ ಅನಿಶ್ಚಿತತೆ ನಿವಾರಿಸಿ ಭೂಮಿ ಮತ್ತು ಕಂದಾಯದ ಸಮೀಕ್ಷೆ ಮತ್ತು ತೀರ್ಮಾನವನ್ನು ಜಾರಿಗೆ ತಂದಿತು.

೧೯೪೭ ರಿಂದ ೧೯೫೬

೧೯೫೬ರಲ್ಲಿ ರಾಜ್ಯಗಳ ಪುನರ್ ವಿಂಗಡಣೆ ಆಗುವುದಕ್ಕೆ ಮೊದಲು ಮೈಸೂರು ರಾಜ್ಯವು (ನಂತರ ೧೯೭೩ರಲ್ಲಿ ಕರ್ನಾಟಕವೆಂದು ನಾಮಕರಣ ಮಾಡಲ್ಪಟ್ಟಿತು.) ಅದು ಮೈಸೂರು, ಬಾಂಬೆ (ಪ್ರೆಸಿಡೆನ್ಸಿ), ಮದ್ರಾಸ್, ಹೈದ್ರಾಬಾದ್ ಮತ್ತು ಟ್ರಾವಂಕೂರು ಕೊಚ್ಚಿನ್‌ಗೆ ಸೇರಿದ ರಾಜ ಪ್ರತಿನಿಧಿಗಳನ್ನು ಹೊಂದಿತ್ತು.

ಭೂಮಿಗೆ ಗೇಣಿ ನಿಗದಿಪಡಿಸುವ ರೀತಿ ಮತ್ತು ಭೂಮಿ ನೊಂದಣಿಯ ಷರತ್ತುಗಳು ಈ ಪ್ರದೇಶಗಳಲ್ಲಿ ಭಿನ್ನವಾಗಿದ್ದವು. ಹೊಸ ರಾಜ್ಯದ ಹಲವು ಭಾಗಗಳಲ್ಲಿ ಪ್ರಮುಖವಾಗಿ ಹಿಂದಿನ ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ರೈತವಾರಿ ಪದ್ಧತಿ ಅಸ್ತಿತ್ವದಲ್ಲಿತ್ತು ಅಂದರೆ ಮಧ್ಯಸ್ಥಗಾರರಿಲ್ಲದೆ ರೈತರು ಭೂ ಕಂದಾಯವನ್ನು ನೇರವಾಗಿ ಸರ್ಕಾರಕ್ಕೆ ನೀಡುತ್ತಿದ್ದರು. ಹೀಗೇ, ಮೊದಲಿನ ಮೈಸೂರಿನಲ್ಲಿ ಒಟ್ಟು ಸಾಗುವಳಿಯಲ್ಲಿ ರೈತರ ಪಾಲು ಬಹಳ ಕಡಿಮೆ ಇತ್ತು. ಇಲ್ಲ ಎಲ್ಲ ಭೂಮಿ ಮಹಾರಾಜರ ಅಧೀನದಲ್ಲಿತ್ತು ಮತ್ತು ಅದನ್ನು ಅಧಿಕಾರಿಗಳಿಗೆ ಕೊಡುವ ಇನಾಂ ಭೂಮಿ, ಧಾರ್ಮಿಕ ಸಂಸ್ಥೆಗಳಿಗ ನೀಡುವ ಭೂಮಿ ಹೊರತುಪಡಿಸಿ ಉಳಿದ ಎಲ್ಲಾ ಭೂಮಿಯನ್ನು ನೇರವಾಗಿ

ಸಾಗುವಳಿದಾರರಿಗೆ ನೀಡಲಾಗುತ್ತಿತ್ತು. ಹಿಂದಿನ ಹೈದ್ರಾಬಾದ್‌ನಲ್ಲೂ ಇನಾಂಗಳು ಅಸ್ತಿತ್ವದಲ್ಲಿದ್ದವು.

ಸಾಮಾನ್ಯವಾಗಿ ಇನಾಂದಾರರು ಉಚ್ಚ ಜಾತಿಗೆ ಸೇರಿದವರಾಗಿದ್ದು ಅವರ ಕೆಲಸ ಗ್ರಾಮೀಣ ಸಮಾಜವನ್ನು ನಿಯಂತ್ರಿಸುವುದೇ ಆಗಿತ್ತು. ಅವರು ಭೂಮಿಯನ್ನು ಸ್ವತಃ ಸಾಗುವಳಿ ಮಾಡುತ್ತಿರಲಿಲ್ಲ, ಆದರೆ ಉಳುಮೆ ಮಾಡಿ ಅಂತಿಮವಾಗಿ ಉತ್ಪಾದಿಸುವರಿಗೆ ಗುತ್ತಿಗೆ ಕೊಡುತ್ತಿದ್ದರು ಅವರು ಇವರ ಸಾಗುವಳಿದಾರರಾಗುತ್ತಿದ್ದರು. ಮದ್ರಾಸ್ ಮತ್ತು ಮೈಸೂರುಗಳಲ್ಲಿ, ಸರಿಯಾದ ಭೂ ದಾಖಲೆಗಳಿರಲಿಲ್ಲ; ಆದರೆ ಬಾಂಬೆ ಮತ್ತು ಹೈದ್ರಾಬಾದ್‌ಗಳಲ್ಲಿ ಗೇಣಿ ಕಾಯಿದೆಗಳು ಪ್ರಗತಿ ಪರವಾಗಿದ್ದವು.

ಸ್ವಾತಂತ್ರ್ಯನಂತರದಲ್ಲಿ ಭೂ ಸುಧಾರಣೆಗಳಲ್ಲಿ ಕೈಗೊಂಡ ಎರಡು ಪ್ರಮುಖ ಕ್ರಮಗಳೆಂದರೆ ಮಧ್ಯಸ್ಥಗಾರರ ನಿರ್ಮೂಲನೆ ಮತ್ತು ಜಮೀನ್ದಾರರ–ಗೇಣಿದಾರರ ನಡುವಿನ ಸಂಬಂಧ ನಿಯಂತ್ರಿಸುವ ಕಾಯ್ದೆಗಳನ್ನು ಜಾರಿಗೆ ತಂದಿದ್ದು. ೧೯೪೭ರ ಡಿಸೆಂಬರ್‌ನಲ್ಲಿ ರಾಜ್ಯ ಶಾಸಕಾಂಗ, ರಾಜ್ಯದಲ್ಲಿನ ಭೂ ಕಂದಾಯ ಪದ್ಧತಿಯನ್ನು ಅಧ್ಯಯನ ಮಾಡಲು ಒಂದು ಸಮಿತಿ ರಚನೆಗೆ ಶಿಫಾರಸು ಮಾಡಿತು. ೧೯೪೮ರ ಆಗಸ್ಟ್‌ನಲ್ಲಿ ಹೆಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ಬಾಂಬೆ ಕೃಷಿ ಕಾನೂನು ರಾಜ್ಯಕ್ಕೆ ಉತ್ತಮವಾಗಿ ಸರಿಹೊಂದುತ್ತದೆಂದು ಶಿಫಾರಸು ಮಾಡಿತು ಮತ್ತು ಜೋಡಿ, ಇನಾಂ ಮತ್ತು ಜಹಗೀರು ಗೇಣಿಗಳನ್ನು ಪ್ರತಿಯೊಂದು ವರ್ಗಕ್ಕೆ ನ್ಯಾಯಯುತ ಸಂಭಾವನೆ ನೀಡಿ ರದ್ದುಗೊಳಿಸಬೇಕೆಂದು ಶಿಫಾರಸು ಮಾಡಿತು. ಈ ಸಮಿತಿ ಗೇಣಿದಾರರ ಪರವಾಗಿತ್ತು. ಸ್ವ ಇಚ್ಛೆಯಿಂದ ಒಬ್ಬ ಗೇಣಿದಾರ ೧೯೪೮ರ ಜುಲೈ ೧ಕ್ಕಿಂತ ಮೊದಲು ೬ ವರ್ಷಗಳವರೆಗೆ ಭೂಮಿಯನ್ನು ನಿರಂತರವಾಗಿ ಸಾಗುವಳಿ ಮಾಡಿದ್ದರೆ ಅವನನ್ನು ನೊಂದಾಯಿತ ಹಿಡುವಳಿದಾರನೆಂದು ಪರಿಗಣಿಸಬೇಕು ಎಂದಿತು.

ಸ್ವಾತಂತ್ರ್ಯ ನಂತರದಲ್ಲಿ ಚುನಾಯಿತ ಸರ್ಕಾರ ಜಮೀನ್ದಾರರ ಗುಂಪಿನ ಉದ್ದೇಶಗಳಿಗೆ ತಕ್ಕಂತೆ ನಡೆದು ಕೊಂಡಿತು. ಆಗಿನ ಮೈಸೂರು ರಾಜ್ಯದಲ್ಲಿ ೩ ಪ್ರಮುಖ ವರ್ಗಗಳು ಭೂಮಿಯನ್ನು ಹೊಂದಿದ್ದವು, ಅವುಗಳೆಂದರೆ, ಲಿಂಗಾಯಿತರು, ಒಕ್ಕಲಿಗರು ಮತ್ತು ಬ್ರಾಹ್ಮಣರು. ಬ್ರಾಹ್ಮಣರು ಇನಾಂ ಭೂಮಿಯನ್ನು ಅವರ ಸೇವೆಗಳ ಪ್ರಶಂಸೆಗೆ ರಾಜನಿಂದ ಪಡೆದಿದ್ದರು. ಬ್ರಾಹ್ಮಣರು ಸರ್ಕಾರಿ ಸೇವೆಗಳಿಗಾಗಿ ನಗರಗಳಿಗೆ ವಲಸೆ ಹೋಗಿದ್ದರಿಂದ ಅವರು ವಾಸವಾಗಿಲ್ಲದ ಜಮೀನ್ದಾರರಾಗಿದ್ದರು. ಇನಾಂ ಭೂಮಿಗಳು, ಇನಾಂ ರಹಿತ ಭೂಮಿಗಳನ್ನು ಒಕ್ಕಲಿಗರು, ಲಿಂಗಾಯಿತರು ಮತ್ತು ಭೂ ರಹಿತ ಜಾತಿಗಳಾದ ಹಿಂದುಳಿದ ಅಲ್ಪ ಸಂಖ್ಯಾತ ವರ್ಗಗಳು ಮತ್ತು

ಹರಿಜನ ಗೇಣಿದಾರರು ಸಾಗುವಳಿ ಮಾಡುತ್ತಿದ್ದರು.

ಸ್ವಾತಂತ್ರ್ಯನಂತರದಲ್ಲಿ ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ರಚಿತವಾದ ಪ್ರಜಾಪ್ರಭುತ್ವ ಚೌಕಟ್ಟು ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಬದಲಾಯಿಸಿತು. ಅಧಿಕ ಸಂಖ್ಯೆಯಲ್ಲಿದ್ದ ಮತ್ತು ಭೂ ರಹಿತರು ಮತ ಬ್ಯಾಂಕುಗಳಾಗಿ ಗೇಣಿದಾರರು ರೂಪಿತವಾಗಿದ್ದರು. ಬ್ರಾಹ್ಮಣೇತರ ಭೂ ಹಿತಾಸಕ್ತಿಗಳಾದ ಅಂದರೆ ಒಕ್ಕಲಿಗರು ಮತ್ತು ಲಿಂಗಾಯಿತರು ಹಾಗೂ ಇತರ ಹಿಂದುಳಿದವರು ರಾಜ್ಯ ಸರ್ಕಾರವನ್ನು ನಿಯಂತ್ರಿಸಿದ್ದರು. ಈ ಜಾತಿಯವರೇ ಪ್ರಮುಖ ಸಚಿವ ಖಾತೆಗಳನ್ನು, ಮುಖ್ಯಮಂತ್ರಿ ಪದವಿಯನ್ನೂ ಹೊಂದಿದ್ದರು.

ಇನಾಂ ರದ್ಧತಿ ಕಾಯ್ದೆ ಕೆಲವು ಕಾರಣಗಳಿಂದ ಸುಲಭವೆನಿಸಿತು. ಮೊದಲನೆಯದಾಗಿ, ಇನಾಂದಾರರ ಸಂಖ್ಯೆ ಬಹಳ ಕಡಿಮೆಯಿದ್ದರಿಂದ ಯಾವುದೇ ರಾಜಕೀಯ ಅಧಿಕಾರ ಪಡೆಯಲಾಗಲಿಲ್ಲ ಮತ್ತು ಎರಡನೆಯದಾಗಿ, ಇತರ ಭೂಮಿ ಹೊಂದಿದ ವರ್ಗಗಳ ಸದಸ್ಯರಲ್ಲಿ ಅಸೂಯೆ ಹುಟ್ಟಿಸಿದ ವರ್ಗಕ್ಕೆ ಇನಾಂದಾರರು ಸೇರಿದ್ದರು. ಇದು ರಾಜ್ಯದಲ್ಲಿನ ಬ್ರಾಹ್ಮಣ ವಿರೋಧಿ ಚಳುವಳಿಯಿಂದ ತಿಳಿದು ಬರುತ್ತದೆ. ಆದ್ದರಿಂದ ಇನಾಂ ರದ್ದುಗೊಳಿಸುವಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ರಾಜಕೀಯ ಬಿಕ್ಕಟ್ಟು ಇರಲಿಲ್ಲ. ಆದರೆ ಅಧಿಕಾರಶಾಹಿ ವರ್ಗ ಬಹುತೇಕವಾಗಿ ಬ್ರಾಹ್ಮಣರಿಂದ ಕೂಡಿದ್ದರಿಂದ ಆ ಕಾಯ್ದೆಯನ್ನು ಅಷ್ಟೊಂದು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಲಿಲ್ಲ.

ಅದರಿಂದ ಇನಾಂದಾರರಿಂದ ಸಾಗುವಳಿ ಮಾಡದೇ ಇರುವ ಅಥವಾ ಒಬ್ಬ ಗೇಣಿದಾರ ೧೯೪೮ರ ಜುಲೈ ೧ರ ಮೊದಲು ನಿರಂತರವಾಗಿ ೬ ವರ್ಷಗಳವರೆಗೆ ಸಾಗುವಳಿ ಮಾಡದೆ ಇದ್ದ ಭೂಮಿ ಸರ್ಕಾರಕ್ಕೆ ಸೇರಿತ್ತು. ಸರ್ಕಾರ ಅದನ್ನು ಯೋಗ್ಯ ಫಲಾನುಭವಿಗಳಿಗೆ ನೀಡಿ ಸಂಬಂಧಪಟ್ಟ ಇನಾಂದಾರರಿಗೆ ಪರಿಹಾರ ಧನ ನೀಡಿತು.

ಕೆಳಸ್ತರದಲ್ಲಿ ಭೂ ಸುಧಾರಣಾ ಕಾಯಿದೆ ರಚನೆಗೆ ಅನೇಕ ಚಳುವಳಿಗಳು ನಡೆದರೂ, ಅವುಗಳನ್ನು ಅನೇಕ ಸಂಘಟನೆಗಳು ಹಲವು ರೀತಿಯಲ್ಲಿ ದಮನ ಮಾಡಿದವು. ರಾಜನ್ ಹೇಳುವಂತೆ, "ಹೀಗಿದ್ದರೂ, ಹಲವು ರೀತಿಯ ಸಂದರ್ಭಗಳಲ್ಲಿ ಭಯದ ಕಾರಣದಿಂದ ಮತ್ತು ಭೌತಿಕವಾಗಿ ಪ್ರತೀಕಾರದ ಭಯ ಅಥವಾ ಸಾಲದ ಬಲ ಅಥವಾ ಇತರ ಸಾಧನಗಳ ಮೂಲಕ ಗೇಣಿದಾರರ ಮೇಲೆ ಒತ್ತಡ ಹೇರಿ ಅರ್ಜಿ ಸಲ್ಲಿಸದಂತೆ ತಡೆಯಲಾಗುತಿತ್ತು. ಉಳಿಗಮಾನ್ಯ ಜಮೀನ್ದಾರಿಕೆ ಪ್ರದೇಶಗಳಲ್ಲಿ

ಆಡಳಿತಗಾರರು ರೈತರ ಭೀತಿ ಹೋಗಲಾಡಿಸಿ ಅವರು ಅರ್ಜಿ ಸಲ್ಲಿಸಲು ಮುಂದೆ ಬರುವಂತೆ ಅವರನ್ನು ಮನವೊಲಿಸಬೇಕಾಗಿತ್ತು."

ಆ ನಿಟ್ಟಿನಲ್ಲಿ ಕೆಳಸ್ತರದ ಪ್ರಮುಖ ಚಳುವಳಿ ಎಂದರೆ ಕಾಗೋಡು ಸತ್ಯಾಗ್ರಹ. ಮಲೆನಾಡಿನಲ್ಲಿ ೧೯೪೬ರಲ್ಲಿ ಎರಡು ಸಂಘಟನೆಗಳನ್ನು ಸ್ಥಾಪಿಸಲಾಯಿತು. ಅವುಗಳೆಂದರೆ ಮಲೆನಾಡು ಗೇಣಿದಾರರ ಸಂಘ ಮತ್ತು ಸಾಗರ ತಾಲ್ಲೂಕು ರೈತ ಸಂಘ. ಮಲೆನಾಡು ಗೇಣಿದಾರರ ಸಂಘ ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸ್ಥಾಪಿಸಲ್ಪಟ್ಟಿತು. ತೀರ್ಥಹಳ್ಳಿಯಲ್ಲಿ ಇದರ ಮೊದಲ ಅಧಿವೇಶನ ಜರುಗಿದಾಗ ಪ್ರಮುಖ ಸಮಾಜವಾದಿ ನಾಯಕರಾದ ರಮಾನಂದ ಮಿಶ್ರ, ಕಮಲಾದೇವಿ ಚಟ್ಟೋಪಾಧ್ಯಾಯ, ಕೆ. ಜಿ. ಒಡೆಯರ್ ಮತ್ತು ಮೈಸೂರಿನಿಂದ ಹಲವು ಕಾಂಗ್ರೆಸ್ ಸದಸ್ಯರು ಭಾಗವಹಿಸಿದ್ದರು.

ಕಡಿದಾಳ್ ಮಂಜಪ್ಪನವರ ಪ್ರಕಾರ (ಕರ್ನಾಟಕ ರಾಜ್ಯದ ಹಿಂದಿನ ಕಂದಾಯ ಮಂತ್ರಿಗಳು) ಜಿ. ರಾಜಶೇಖರ್, ತಮ್ಮ ಕಾಗೋಡು ಸತ್ಯಾಗ್ರಹ ಗ್ರಂಥದಲ್ಲಿ ನಮೂದಿಸಿರುವಂತೆ, ಈ ಸಂಘಟನೆ ಶಿವಮೊಗ್ಗ ಜಿಲ್ಲೆಯ ಕೊಪ್ಪ, ಶೃಂಗೇರಿ, ಹೊಸ ನಗರ ಮತ್ತು ಸಾಗರ ತಾಲ್ಲೂಕುಗಳಿಂದ ೩೦೦೦ಕ್ಕೂ ಹೆಚ್ಚು ಅನುಯಾಯಿಗಳನ್ನು ಹೊಂದಿತ್ತು. ಹೆಚ್ಚಾಗಿ ಈ ಸಂಘಟನೆಯ ಸಭೆಗಳನ್ನು ಕಾಂಗ್ರೆಸ್ ನಾಯಕರು ಅಥವಾ ಸ್ಥಳೀಯ ಜಮೀನ್ದಾರರು ನಡೆಸುತ್ತಿದ್ದರು.

ಸಂಘದ ಪ್ರಮುಖ ಬೇಡಿಕೆಗಳು ಈ ಕೆಳಗಿನಂತಿದ್ದವು.

೧) ಗೇಣಿದಾರರು ಮತ್ತು ಜಮೀನ್ದಾರರ ನಡುವಣ ಭೂಮಿಯ ನೊಂದಣಿ ಮತ್ತು ಗೇಣಿ ಪಾವತಿಗೆ ರಸೀದಿಯನ್ನು ಕೊಡತಕ್ಕದ್ದು.

೨) ಗೇಣಿಯ ದರ ಒಟ್ಟು ಉತ್ಪನ್ನದ ೧/೩ ಭಾಗಕ್ಕಿಂತ ಹೆಚ್ಚಾಗಿರಬಾರದು.

೩) ಮಠಗಳು, ಧಾರ್ಮಿಕ ಸಂಸ್ಥೆಗಳು, ಇನಾಂ ಮತ್ತು ಖಾಸಗಿ ಭೂಮಿಗಳ ಗೇಣಿ ಹರಾಜು ಹಾಕುವ ಪದ್ಧತಿಯನ್ನು ನಿಲ್ಲಿಸಬೇಕು ಅಥವಾ ಹರಾಜಿನ ಅವಧಿಯನ್ನು ವಿಸ್ತರಿಸಬೇಕು.

೪) ಭೂ ಮಾಲೀಕ ತನಗಿಷ್ಟ ಬಂದಂತೆ ಯಾವುದೇ ಕಾರಣವಿಲ್ಲದೆ ಗೇಣಿದಾರರನ್ನು ತೆಗೆದು ಹಾಕುವುದನ್ನು ನಿಲ್ಲಿಸಬೇಕು.

ಈ ಬೇಡಿಕೆಗಳ ಮೂಲಕ ಅವರು ಗೇಣಿದಾರರ ಸಮಸ್ಯೆಗಳನ್ನು ನಿವಾರಿಸಲು ಬಯಸಿದರು. ಆದರೆ ಭೂಮಾಲೀಕರ ಶೋಷಣೆಯನ್ನಲ್ಲವೆಂದು ಹೇಳಬಹುದು. ವಾಸ್ತವವಾಗಿ ಅದು ಭೂ ಮಾಲೀಕತ್ವದ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು

ವಿಫಲವಾಯಿತು. ೧೯೪೮ರ ಜನವರಿಯಲ್ಲಿ ಇದೇ ಮಾದರಿಯಲ್ಲಿ ಮತ್ತೊಂದು ಸಂಘ ಅಸ್ತಿತ್ವಕ್ಕೆ ಬಂದಿತು, ಅದೆಂದರೆ "ಸಾಗರ ತಾಲ್ಲೂಕು ರೈತರ ಸಂಘ" ಇದರಲ್ಲಿ ಕೇವಲ ದೀವರು ಪಂಗಡಕ್ಕೆ ಸೇರಿದ ರೈತರು ಮಾತ್ರ ಇದ್ದರು ಹಿಂದಿನ ಸ್ವಾತಂತ್ರ್ಯ ಹೋರಾಟಗಾರ ಗಣಪತಿಯಪ್ಪ ಮಲೆನಾಡು ಗೇಣಿದಾರರ ಸಂಘದ ನಾಯಕರಾಗಿದ್ದರು ನಂತರದಲ್ಲಿ ಅವರೇ ೧೯೫೧ರಲ್ಲಿ ಕಾಗೋಡು ಸತ್ಯಾಗ್ರಹದ ನಾಯಕರಾದರು.

ಸಾಗರ ತಾಲ್ಲೂಕು ರೈತ ಸಂಘ ಆಗಿನ ರಾಜ್ಯ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿತು. ಅದು ಈ ಕೆಳಗಿನ ಬೇಡಿಕೆಗಳನ್ನು ಒಳಗೊಂಡಿತ್ತು.

೧) ಗೇಣಿದರವನ್ನು ನಿಗದಿಗೊಳಿಸಬೇಕು ಮತ್ತು ಅದು ಒಟ್ಟು ಉತ್ಪನ್ನದ ೧/೩ ಭಾಗಕ್ಕಿಂತ ಹೆಚ್ಚಾಗಿರಬಾರದು.

೨) ಭೂ ವ್ಯವಹಾರಗಳನ್ನು ನಿಯಂತ್ರಿಸಲು ಕಾನೂನು ರಚಿಸಬೇಕು ಅವುಗಳೆಂದರೆ ಭೂಮಿಯ ನೊಂದಣಿ, ಗೇಣಿ ಪಾವತಿಗೆ ರಸೀದಿ ನೀಡುವುದು ಹಾಗೂ ಇತರ ಗೇಣಿದಾರ ಮತ್ತು ಭೂಮಾಲೀಕನ ನಡುವಣ ದಾಖಲೆಗಳನ್ನಿಡುವುದು.

೩) ಜಮೀನ್ದಾರರ ನಿರಂಕುಶ ಹಿಡಿತದಿಂದ ಸಾಗುವಳಿ ಭೂಮಿ ಮುಕ್ತವಾಗಿರಬೇಕು ಮತ್ತು ಗೇಣಿದಾರನ ಸುರಕ್ಷತೆಯನ್ನು ಬೆಂಬಲಿಸುವುದು.

೪) ಮಠ ಮತ್ತು ಇನಾಂ ಭೂಮಿಗಳ ಹರಾಜು ಪದ್ಧತಿಯನ್ನು ನಿಲ್ಲಿಸಬೇಕು ಮತ್ತು ಸರ್ಕಾರ ಶಾಶ್ವತ ಗೇಣಿ ಪದ್ಧತಿ ಜಾರಿಗೆ ತರಬೇಕು.

೫) ಮಲೆನಾಡು ರೈತರಿಗೆ ಬಂದೂಕನ್ನು ಇಟ್ಟುಕೊಳ್ಳಲು ಅನುಮತಿಯನ್ನು ನೀಡಿ, ಕ್ರೂರ ಪ್ರಾಣಿಗಳಿಂದ ಅವರ ಬೆಳೆ ರಕ್ಷಿಸಿಕೊಳ್ಳಲು ಅವಕಾಶ ನೀಡಬೇಕು.

೬) ರೈತರ ಬೇಗಾರ ಅಥವಾ ಬಿಟ್ಟಿ ಅಥವಾ ಪಾವತಿಯಿಲ್ಲದ ಶ್ರಮವನ್ನು ನಿಲ್ಲಿಸಬೇಕು.

೭) ಸರ್ಕಾರದ ರಸಗೊಬ್ಬರ ಮತ್ತು ಬ್ಯಾಂಕು ಸಾಲಗಳು ರೈತರಿಗೆ ನೇರವಾಗಿ ಜಮೀನ್ದಾದರರ ಯಾವುದೇ ಮಧ್ಯಸ್ಥಿಕೆಯಿಲ್ಲದೆ ತಲುಪಬೇಕು.

ಮಲೆನಾಡು ಗೇಣಿದಾರರ ಸಂಘದ ಬೇಡಿಕೆಗಳಿಗಿಂತ ಸಾಗರ ರೈತ ಸಂಘದ ಬೇಡಿಕೆಗಳು ತುಲನಾತ್ಮಕವಾಗಿ ಹೆಚ್ಚು ಮಹತ್ವದ ಬೇಡಿಕೆಗಳಾಗಿದ್ದವು. ಅಲ್ಲದೇ ಅವು ಗೇಣಿದಾರರು ಮತ್ತು ಭೂ ಹಿಡುವಳಿ ಪದ್ಧತಿಯ ಬಗ್ಗೆ ಹೆಚ್ಚು ನಿರ್ದಿಷ್ಟವಾಗಿದ್ದವು. ಆದರೆ ಕಾಗೋಡು ಸತ್ಯಾಗ್ರಹ ದ್ವಿತೀಯ ಹಂತದ ವಿಷಯವನ್ನು ಅಂದರೆ ಗೇಣಿ ಪ್ರಮಾಣದ ಪ್ರಮಾಣೀಕೃತವಲ್ಲದ ಮಾಪನದ ಮೇಲೆ ಬೆಳಕು ಚೆಲ್ಲಿತು. ಗೇಣಿದಾರರು ಸರ್ಕಾರ ಸ್ಥಾಪಿಸಿದ ಅಳೆಯುವ ಮಾಪನವನ್ನು ಅಂದರೆ ಕೊಳಗ (ಮಾಪನದ ಪಾತ್ರೆ) ಒಪ್ಪಿಕೊಳ್ಳುವಂತೆ ಒತ್ತಾಯಿಸಿದರು, ಆದರೆ ಜಮೀನ್ದಾರರು ಒಪ್ಪಲಿಲ್ಲ. ಭೂಮಾಲೀಕರು ಭೂಮಿಗೆ ಬೇಲಿ ಹಾಕಿದಾಗ ರೈತರು ಗುಂಪುಗಳಲ್ಲಿ ಭೂಮಿಯನ್ನು ಆಕ್ರಮಿಸಲು ಪ್ರಯತ್ನಿಸಿದರು. ಹಳ್ಳಿಯನ್ನು ಪೋಲಿಸರು ಪ್ರವೇಶಿಸಿ ರೈತರನ್ನು

ಬಂಧಿಸಿದರು ಮತ್ತು ಅವರ ವ್ಯವಸಾಯದ ಉಪಕರಣಗಳನ್ನು ನಾಶಗೊಳಿಸಿದರು. ಭೂಮಿಯನ್ನು ಸಾಗುವಳಿ ಮಾಡುವ ಗೇಣಿದಾರರ ಪ್ರಯತ್ನಗಳು ಮುಂದುವರಿದವು ಈ ಪ್ರಯತ್ನಗಳು ಕ್ರಮೇಣ ಎಲ್ಲಾ ಪುರುಷ ಗೇಣಿದಾರರ ಬಂಧನಕ್ಕೆ ಕಾರಣವಾದವು.

ಮೂಲಭೂತ ವಿಷಯ ಅವರನ್ನು ವಿಂಗಡಿಸಿದ್ದರೂ ಭೂಮಾಲೀಕರು ಮತ್ತು ಸರ್ಕಾರ ಗೇಣಿದಾರರ ವಿರುದ್ಧವಾದ ನಿಲುವಿನಲ್ಲಿ ಒಂದುಗೂಡಿದರು. ಜಮೀನ್ದಾರರು ಅದನ್ನು ರಾಜಕೀಯ ಶಕ್ತಿ ಮತ್ತು ನಿಯಂತ್ರಣಕ್ಕೆ ಸಂಬಂಧಪಟ್ಟ ವಿಷಯವೆಂದು ಪರಿಗಣಿಸಿದ್ದರು. ಯಾವುದೇ ರೀತಿಯ ರಿಯಾಯಿತಿ ಅಥವಾ ರಾಜಿ ಗೇಣಿದಾರರನ್ನು ಅವರ ಸಂಘಗಳನ್ನೂ ಹಾಗೂ ಸ್ವನಂಬಿಕೆಯನ್ನು ಬಲಪಡಿಸುತ್ತದೆ ಎಂದು ಭಾವಿಸಿದ್ದರು.

ಎರಡರಲ್ಲಿ ಯಾವುದೇ ಸಂಘದ ಗೇಣಿದಾರರು (ಮಲೆನಾಡಿನ ಗೇಣಿದಾರರ ಸಂಘ ಮತ್ತು ಸಾಗರ ತಾಲ್ಲೂಕು ರೈತ ಸಂಘ) ಭೂಮಿ ತಮ್ಮದಾಗಬೇಕೆಂದು ಕೇಳುತ್ತಿರಲಿಲ್ಲ. ಆದರೆ ಜಮೀನ್ದಾರರು ಗೇಣಿದಾರರ ಅಂದಿನ ಬೇಡಿಕೆಗಳ ಯಶಸ್ಸಿನ ದೀರ್ಘಾವಧಿ ಪರಿಣಾಮ ಇದಾಗಬಹುದೆಂದು ಊಹಿಸಿದರು. ಸರ್ಕಾರ ರಾಜಿ ರೂಪದಲ್ಲಿ ಗೇಣಿದಾರರು ತಮ್ಮ ನಾಗರೀಕ ಅವಿಧೇಯತೆ ಅಥವಾ ಅಹಿಂಸಾತ್ಮಕ ಹೋರಾಟವನ್ನು ನಿಲ್ಲಿಸುವುದಾದರೆ, ಅವರಿಗೆ ಕಾಗೋಡಿನಿಂದ ಕೆಲವು ಮೈಲು ದೂರದಲ್ಲಿ, ಕೆಂಜಿಗಪುರ ಎನ್ನುವಲ್ಲಿ ಸರ್ಕಾರಿ ಜಮೀನನ್ನು ನೀಡಲು ಒಪ್ಪಿತು. ಈ ನಿರ್ಧಾರ ಎರಡೂ ಸಂಘಟನೆಗಳನ್ನು ಬೇರ್ಪಡಿಸಿತು. ಅಲ್ಲದೆ ಈ ಸಂಧಾನ ನಿಜವಾದ ಅರ್ಥದಲ್ಲಿ ರಾಜಕೀಯ ಉದ್ದೇಶದಿಂದ ಕೂಡಿತ್ತು ಹಾಗೂ ಬಂಜರು ಭೂಮಿಯನ್ನು ಕೊಡುವುದರ ಮೂಲಕ ಸಾಮಾಜಿಕ ಅಶಾಂತಿ ಹುಟ್ಟಿದ ಸ್ಥಳ, ರಾಜಕೀಯ ವಿರೋಧಿಗಳ ಬೆಳವಣಿಗೆ ಮತ್ತು ಅವರ ಉದ್ದೇಶಗಳನ್ನು ಭೌತಿಕವಾಗಿ ಬೇರೆಡೆ ಸೆಳೆಯಲು ಕಾರಣವಾಯಿತು. ಸಾಗರ ತಾಲ್ಲೂಕು ರೈತ ಸಂಘ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿತು, ಅಲ್ಲಿಂದ ಮುಂದೆ ಅದಕ್ಕೆ ಸಮಾಜವಾದಿ ಪಕ್ಷದ ಸಕ್ರಿಯವಾದ ಬೆಂಬಲ ದೊರಕಿತು. ಆ ಪಕ್ಷ ಎಲ್ಲಾ ಗೇಣಿದಾರರಿಗೆ ಸರ್ಕಾರ ಸಾಕಷ್ಟು ಭೂಮಿಯನ್ನು ಕೊಡಲಾಗಲಿಲ್ಲವೆಂಬುದನ್ನು ನ್ಯಾಯಯುತವಾಗಿ ಹಕ್ಕು ಸಾಧಿಸಿತು. ಇಡೀ ರಾಜ್ಯದಿಂದ ಅದು ತನ್ನ ಸದಸ್ಯರನ್ನು ಒಟ್ಟುಗೂಡಿಸಿತು. ಕೇಂದ್ರದಿಂದಲೂ ಪಕ್ಷದ ಕಾರ್ಯಕರ್ತರಾದ ರಾಮ ಮನೋಹರ ಲೋಹಿಯಾ ಸೇರಿದಂತೆ ಹಲವು ನಾಯಕರು ಸತ್ಯಾಗ್ರಹಕ್ಕೆ ಸೇರಿದರು. ಅವರಲ್ಲಿ ಅನೇಕರು ಬಂಧಿಸಲ್ಪಟ್ಟರು. ಒಂದು ವರ್ಷದವರೆಗೆ ಗೇಣಿದಾರರಿಗೆ ಅವರ ಭೂಮಿಯನ್ನು ಸಾಗುವಳಿ ಮಾಡಲು ಕೊಡಲಿಲ್ಲವಾದ್ದರಿಂದ ನಿಜವಾದಂತಹ ಹಸಿವು ಅವರ ಸಾಮರ್ಥ್ಯ ಮತ್ತು ಸ್ಥೈರ್ಯವನ್ನು ಕುಂದಿಸಿತು. ಈ ಸುತ್ತಲಿನ ಪ್ರದೇಶದ ಗೇಣಿದಾರರನ್ನು

ಒಗ್ಗೂಡಿಸಲು ಸಮಾಜವಾದಿಗಳು ಪ್ರಯತ್ನಿಸಿದರು. ಆದರೆ ಅವರ ಜೀವನಾಧಾರದ ಮಟ್ಟದ ಕಾರಣದಿಂದ ಮತ್ತು ಜಮೀನ್ದಾರರಿಗೆ ಬೆಳೆಯ ಹೆಚ್ಚುವರಿಯನ್ನು ಕಡ್ಡಾಯವಾಗಿ ಕೊಡಬೇಕಾದ್ದರಿಂದ, ಆಹಾರ ಉತ್ಪನ್ನ ಕಡಿಮೆ ಪ್ರಮಾಣದಲ್ಲಿ ಬರುತ್ತಿತ್ತು. ಇದು ಗೇಣಿದಾರರನ್ನು ಈಗಾಗಲೇ ನಿರ್ಗತಿಕರನ್ನಾಗಿ ಮಾಡಿತ್ತು ಮತ್ತು ಅವರಲ್ಲಿ ಅನೇಕರು ಭಿತ್ತನೆ ಹತ್ತಿರವಾದಾಗ ಜಮೀನ್ದಾರರ ಷರತ್ತಿನ ಮೇರೆಗೆ ಅವರ ಭೂಮಿಯನ್ನು ಸಾಗುವಳಿ ಮಾಡಲು ಅನುಮತಿ ಕೇಳಬೇಕಾದ ಸ್ಥಿತಿ ನಿರ್ಮಾಣವಾಗಿತ್ತು. ಚಳುವಳಿ ಮೇಲ್ನೋಟಕ್ಕೆ ಸೋಲು ಕಂಡರೂ ಕೆಲವೊಂದು ಧನಾತ್ಮಕ ಫಲಿತಾಂಶ ಪಡೆಯಿತು. ಅದು ಬದಲಿ ನಾಯಕತ್ವವನ್ನು ಸೃಷ್ಟಿಸಿತು ಮತ್ತು ಬದಲಿ ಸಂಘವನ್ನು ಸಾಗರ ತಾಲ್ಲೂಕು ಮಟ್ಟದಲ್ಲಿ ಸೃಷ್ಟಿಸಿತು. ಇಲ್ಲವಾದರೆ ರಾಜಶೇಖರ ಅವರು ಕಾಗೋಡು ತಿಮ್ಮಪ್ಪ ಅವರ ಹೇಳಿಕೆಯನ್ನು ಉಲ್ಲೇಖಿಸಿರುವಂತೆ, ದಕ್ಷಿಣ ಕನ್ನಡದಲ್ಲಿ ಕಂಡುಬಂದತೆ ಸಾಗರ ತಾಲ್ಲೂಕಿನ ಗೇಣಿದಾರರನ್ನು ಜಮೀನ್ದಾರರು ತೆಗೆದು ಹಾಕುತ್ತಿದ್ದರು, ಈ ಚಳುವಳಿ ರಾಜ್ಯದಲ್ಲಿ ಭೂಸುಧಾರಣ ಶಾಸನ ರಚನೆಗೆ ಹೊಸ ಉತ್ತೇಜನವನ್ನು ನೀಡಿತು.

ಕಾಗೋಡು ಸತ್ಯಾಗ್ರಹದ ಕೊಡುಗೆಯೆಂದರೆ ಅದು ಒಂದು ಗುಂಪು ನಾಯಕರನ್ನು ನೀಡಿತು ಅವರು ನಂತರದಲ್ಲಿ ಕರ್ನಾಟಕ ರಾಜ್ಯ ವಿಧಾನ ಸಭೆಯಲ್ಲಿ ಹಾಗೂ ಇತರೆಡೆ ಭೂ ಸುಧಾರಣಾ ಶಾಸನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಅಂತಹ ಸದಸ್ಯರಲ್ಲಿ ಕಡಿದಾಳ್ ಮಂಜಪ್ಪನವರು ಅಂದಿನ ಕಾಂಗ್ರೆಸ್ ಪಕ್ಷದ ಒಬ್ಬ ಪ್ರಮುಖ ಸದಸ್ಯರಾಗಿದ್ದರು. ಅವರು ಬಡ ಕುಟುಂಬದ ಹಿನ್ನೆಲೆಯಿಂದ ಬಂದಿದ್ದರು ಮತ್ತು ಬಡ ಗೇಣಿದಾರರ ಸಮಸ್ಯೆಗಳನ್ನು ವಾಸ್ತವವಾಗಿ ತಿಳಿದಿದ್ದರು. ಆದರೆ ಈ ಸಮಸ್ಯೆ ನಿವಾರಣೆಯಲ್ಲಿ ಸಂಘಗಳಲ್ಲಿ ಮತ್ತು ಚಳುವಳಿಗಳಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಅವರು ಗಾಂಧೀಜಿಯವರ ತತ್ವಗಳಲ್ಲಿ ನಿಜವಾದ ನಂಬಿಕೆ ಹೊಂದಿದ್ದರು. ಆದ್ದರಿಂದ, ಶಾಸನ ಸಭೆಯಲ್ಲಿ ಚರ್ಚೆ ವಿಧಾನದಲ್ಲಿ ನಂಬಿಕೆ ಇಟ್ಟಿದ್ದರು ಮತ್ತು ಶಾಂತಿಯುತವಾಗಿ ಸಮಸ್ಯೆಗಳನ್ನು ಜಮೀನ್ದಾರರ ಮತ್ತು ಗೇಣಿದಾರರ ನಡುವೆ ಪರಿಹರಿಸಬೇಕೆಂದು ಸಲಹೆ ಮಾಡಿದರು. ಕಡಿದಾಳ್ ಮಂಜಪ್ಪನವರು ೧೯೫೨ ರಿಂದ ೧೯೬೨ ರವರೆಗೆ ೧೦ ವರ್ಷಗಳಾ ಕಾಲ (೧೦ ತಿಂಗಳು ಹೊರತು ಪಡಿಸಿ) ಕರ್ನಾಟಕ ರಾಜ್ಯ (ಅಂದಿನ ಮೈಸೂರು ರಾಜ್ಯ)ದ ಕಂದಾಯ ಮಂತ್ರಿಗಳಾಗಿದ್ದರು. ಮಂತ್ರಿಯಾಗಿದ್ದ ತಮ್ಮ ಅವಧಿಯಲ್ಲಿ ಅವರು ಇನಾಂ ರದ್ಧತಿ ಕಾಯ್ದೆಯನ್ನು ಜಾರಿಗೆ ತಂದರು, ಆ ಅವಧಿಯಲ್ಲಿ ಅದು ಕ್ರಾಂತಿಕಾರಿ ಕಾನೂನಾಗಿತ್ತು. ಆದರೆ ಅದನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲಿಲ್ಲ.

ಕಾಗೋಡು ತಿಮ್ಮಪ್ಪ ಈ ಸತ್ಯಾಗ್ರಹದ ಅವಧಿಯಲ್ಲಿ ಗುರುತಿಸಿಕೊಂಡ

ಮತ್ತೊಬ್ಬ ನಾಯಕರು, ರೈತ ಪರವಾದ ಭೂ ಸುಧಾರಣೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಯ್ಕೆ ಸಮಿತಿಯ ಸಭೆಯಲ್ಲಿ ಅವರ ಪಕ್ಷದ ಸದಸ್ಯರೇ ನಿರ್ದಿಷ್ಟವಾಗಿ ಭೂ ಸುಧಾರಣೆಯಲ್ಲಿನ ಧನಾತ್ಮಕವಾದ (ಒಳ್ಳೆಯ) ತತ್ವಗಳನ್ನು ಹಾಳುಗೆಡಹಲು ಪ್ರಯತ್ನಿಸಿದರು, ಆಗ ತಮ್ಮದೇ ಆದ ವಿರೋಧ ಪಕ್ಷದ ಸದಸ್ಯರ ವಿರುದ್ಧವಾಗಿ ನಿಂತು ದೇವರಾಜ ಅರಸು ಅವರ ಆಡಳಿತ ಪಕ್ಷದ ಪರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಅದನ್ನು ಅವರು ಪೇಚಿಗೆ ಸಿಲುಕಿಸುವಂತದ್ದು ಎಂದು ಹೇಳಿದರು.

ಈ ಪ್ರದೇಶದಲ್ಲಿ ಶಾಂತವೇರಿ ಗೋಪಾಲ ಗೌಡರು ಮತ್ತೊಬ್ಬ ಪ್ರಮುಖ ನಾಯಕರಾಗಿದ್ದರು. ಶಿವಮೊಗ್ಗಾ ಜಿಲ್ಲೆಯ ಸಾಗರ ತಾಲ್ಲೂಕು ವಿಧಾನಸಭಾ ಕ್ಷೇತ್ರದಿಂದ ರಾಜ್ಯ ವಿಧಾನ ಸಭೆಗೆ ಮೊದಲ ವಿಧಾನ ಸಭೆ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿದ್ದರು. ನಿಸ್ಸಂದೇಹವಾಗಿ ಅವರು ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ಸಾವಿರಾರು ದೀವರು ಪಂಗಡದ ಮತಗಳನ್ನು ಪಡೆದಿದ್ದರು. ಅವರು ಶಾಸನ ಸಭೆಯಲ್ಲಿ ಭೂಮಿಯ ಸಮಸ್ಯೆ ನಿವಾರಣೆಗೆ ಮೂರು ಐತಿಹಾಸಿಕ ಪರಿಹಾರಗಳನ್ನು ನೀಡಿದರು. ಅವುಗಳೆಂದರೆ, ತೆಲಂಗಾಣ ಮಾದರಿಯ ಸಮತಾವಾದದ ಹೋರಾಟ, ಸರ್ಕಾರದಿಂದ ಭೂ ಸುಧಾರಣೆ ಮತ್ತು ವಿನೋಬಾ ಭಾವೆಯವರ ಭೂ ಧಾನ ಚಳುವಳಿ. ಶಾಂತವೇರಿ ಗೋಪಾಲ ಗೌಡರು ಭೂಮಿಯ ಸಮಸ್ಯೆಯ ಬಗ್ಗೆ ಹೆಚ್ಚು ಕಾಳಜಿ ಹೊಂದಿದ್ದರು, ಆದ್ದರಿಂದ ಅವರು ಒಂದು ಕಾರ್ಯ ಯೋಜನೆಯನ್ನು ಸಲಹೆ ಮಾಡಿದರು. ಅದರಂತೆ ಸರ್ಕಾರ ಭೂ ರಹಿತ ಕೃಷಿ ಕಾರ್ಮಿಕರು ಮತ್ತು ಎಲ್ಲಾ ರೀತಿಯ (ಜೋಡಿದಾರ, ಇನಾಂದಾರ, ಜಮೀನ್ದಾರ, ಧಾರ್ಮಿಕ ದತ್ತಿ ಸಂಸ್ಥೆ ಮತ್ತು ಸರ್ಕಾರದ ಅಡಿಯಲ್ಲಿದ್ದ ಗೇಣಿದಾರರು) ಹಾಗೂ ಅಗತ್ಯಕ್ಕಿಂತ ಹೆಚ್ಚು ಭೂಮಿ ಹೊಂದಿದ ಜಮೀನ್ದಾರರ ಸಂಖ್ಯೆಯನ್ನು ಕಂಡು ಹಿಡಿಯಲು ಒಂದು ಸಮೀಕ್ಷೆ ಕೈಗೊಳ್ಳಬೇಕು. ಸಮೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಗೇಣಿದಾರರ ಪರವಾಗಿ ಸರ್ಕಾರ ಭೂ ಸುಧಾರಣೆಗಳನ್ನು ಜಾರಿಗೆ ತರಬೇಕು. ಹೆಚ್ಚುವರಿ ಭೂಮಿ ಹೊಂದಿದ ವರ್ಗದಿಂದ ಭೂಮಿಯನ್ನು ವಶಪಡಿಸಿಕೊಂಡ ಮೇಲೆ ಅದನ್ನು ಭೂ ರಹಿತರಿಗೆ, ಗೇಣಿದಾರರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಹಂಚಬೇಕು.

ನಂತರದಲ್ಲಿ ೧೯೫೨ರ ಮೈಸೂರು ಗೇಣಿ ಕಾಯಿದೆ ಮತ್ತು ೧೯೫೪ರ ಇನಾಂತಿ ರದ್ಧತಿ ಕಾಯಿದೆಗಳನ್ನು ಜಾರಿಗೆ ತರಲಾಯಿತು. ಅವುಗಳು ಹಿಂದಿನ ಆದೇಶಗಳಿಗಿಂತ ಭಿನ್ನವಾಗೇನೂ ಇರಲಿಲ್ಲ. ಆದರೆ ಬೇರೆ ಬೇರೆ ಮಾದರಿಯ ನಿಯಂತ್ರಕರಲ್ಲಿದ್ದ ಹಳ್ಳಿಗಳನ್ನು ಸರ್ಕಾರದ ನಿಯಂತ್ರಣದಲ್ಲಿ ಅವು ತಂದವು. ೧೯೫೫ರ

ಮೈಸೂರು (ಧಾರ್ಮಿಕ ಮತ್ತು ದತ್ತಿ) ಇನಾಂತಿ ರದ್ಧತಿ ಕಾಯಿದೆ ಎಲ್ಲಾ ಧಾರ್ಮಿಕ ಇನಾಂತಿಗಳನ್ನು ಹಾಗೂ ಶೃಂಗೇರಿ ಜಹಗೀರು ಮತ್ತು ದತ್ತಿ ಇನಾಂತಿಗಳನ್ನು ಒಳಗೊಂಡಿತ್ತು. ಈ ಕಾಯಿದೆ ಅನ್ವಯ ಧಾರ್ಮಿಕ ಭೂಮಿ ಸರ್ಕಾರದ ಭೂಮಿ ಎಂದು ಘೋಷಣೆ ಮಾಡಿದ್ದರಿಂದ ಆ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ, ಗೇಣಿದಾರರೆಂದು ಪರಿಗಣಿಸಿದ್ದವರನ್ನು ತಕ್ಷಣದಿಂದಲೆ ಸರ್ಕಾರದ ಅಡಿಯಲ್ಲಿ ಗೇಣಿದಾರರೆಂದು ಪರಿಗಣಿಸಲ್ಪಟ್ಟರು.

ಮಸೂದೆ ಜಾರಿಗೆ ಬಂದ ನಂತರ, ಕಾಗೋಡಿನ ಗೇಣಿದಾರರು ಭೂಮಿಯ ಮೇಲೆ ಒಡೆತನದ ಹಕ್ಕನ್ನು ಕೋರಿದರು ಮತ್ತು ತಮ್ಮ ಬೇಡಿಕೆಯುನ್ನು ಈಡೇರಿಸಿಕೊಂಡರು. ಸಮಾಜವಾದಿ ಪಕ್ಷವು ತನ್ನ ಬಲವನ್ನು ಹೆಚ್ಚಿಸಿಕೊಳ್ಳುವ ಕಾರ್ಯದ ಜೊತೆಗೆ ಶಿವಮೊಗ್ಗಾ ಜಿಲ್ಲೆಯಲ್ಲಿ ಗೇಣಿ ಪದ್ಧತಿಯಲ್ಲಿ ಸುಧಾರಣೆಯನ್ನು ತರಲು ಪ್ರೋತ್ಸಾಹಿಸಿತು.

ಕರ್ನಾಟಕದಲ್ಲಿ ಒಂದು ಪ್ರಬಲ ಗೇಣಿದಾರರ ಹೋರಾಟದಿಂದ ಭೂ ಸುಧಾರಣಾ ಶಾಸನವನ್ನು ಜಾರಿಗೆ ತರುವಂತೆ ಒತ್ತಡ ಹೇರಿದ ಮತ್ತೊಂದು ಜಿಲ್ಲೆಯೆಂದರೆ ಉತ್ತರ ಕನ್ನಡ. ಕರಾವಳಿ ಪ್ರದೇಶವೆಲ್ಲವೂ ಬಹುತೇಕ ಬ್ರಾಹ್ಮಣ ಜಮೀನ್ದಾರರಿಂದ ಕೂಡಿತ್ತು. ಒಳಗಿನ ಪ್ರದೇಶಗಳೆಲ್ಲವೂ ಜೈನರು ಮತ್ತು ಭಂಟರುಗಳ ಪ್ರಭಾವಕ್ಕೆ ಒಳಪಟ್ಟಿತ್ತು. ಬ್ರಾಹ್ಮಣರು ಬೇರೆ ರೀತಿಯ ವ್ಯಾಪಾರ ಮತ್ತು ಸೇವೆಗಳಲ್ಲಿ ತೊಡಗಿದ್ದರಿಂದ ಭೂಮಿ ಕಡಿಮೆ ಪ್ರಾಮುಖ್ಯತೆ ಪಡೆಯಿತು ಮತ್ತು ಗೇಣಿದಾರರಿಗೆ ವರ್ಗಾವಣೆಯಾಯಿತು. ಆದರೆ ಅಂತಹ ವರ್ಗಾವಣೆಗಳು ಜೈನರು ಮತ್ತು ಭಂಟ ಸಮುದಾಯದಲ್ಲಿ ನಡೆಯಲಿಲ್ಲ. ಆದ್ದರಿಂದ ಗೇಣಿ ಪದ್ಧತಿಯು ಕೃಷಿಯ ಪ್ರಬಲ ಲಕ್ಷಣವಾಗಿತ್ತು. ಭೂ ಒಡೆತನ ಕೇವಲ ಒಂದೇ ಜಾತಿಗೆ ಅಥವಾ ಸಮುದಾಯಕ್ಕೆ ಸೇರಿರಲಿಲ್ಲ. ಅಂದರೆ ಹಿಂದೆ ಯಾವುದೇ ಪ್ರಬಲ ವರ್ಗ ಇರಲಿಲ್ಲ ಮತ್ತು ಸ್ವಲ್ಪ ಮಟ್ಟಿಗೆ ಅದು ಈಗಲೂ ಅನ್ವಯವಾಗುತ್ತದೆ.

ಭೂತಗಳ ಬಗ್ಗೆ ಬ್ರಾಹ್ಮಣರ ಮತ್ತು ಬ್ರಾಹ್ಮಣೇತರ ಜಮೀನ್ದಾರರ ಮನೋಭಾವ ಒಂದೇ ರೀತಿಯದಾಗಿತ್ತು. ಅವರು ಗೇಣಿದಾರರಲ್ಲಿ ಮತ್ತು ಕೃಷಿ ಕಾರ್ಮಿಕರಲ್ಲಿ ಭೀತಿ ಹುಟ್ಟಿಸಲು ಅವುಗಳನ್ನು ಬಳಸುತ್ತಿದ್ದರು ಅದು ಅವರಲ್ಲಿ ನೈತಿಕತೆ ಎಂದರೆ ಜಮೀನ್ದಾರರ ಅಧಿಕಾರ ಮತ್ತು ಆಸ್ತಿಯನ್ನು ಗೌರವಿಸುವುದರಲ್ಲಿಯೇ ಇದೆ ಎಂದು ನಂಬುವಂತೆ ಮಾಡಿತು. ಆದರೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ಸುಧಾರಣೆಗಾಗಿ ಗೇಣಿದಾರರ ಚಳುವಳಿಗಳಿಂದ ಮೇಲುಗೈ ಸಾಧಿಸಿತ್ತು. ಆದ್ದರಿಂದ ಉತ್ತರ ಕನ್ನಡ ಜಿಲ್ಲೆ ಕರ್ನಾಟಕದಲ್ಲಿ ಭೂ ಸುಧಾರಣಾ ಶಾಸನ ರಚನೆ ದೃಷ್ಟಿಯಿಂದ ಒಂದು ಸೂಕ್ಷ್ಮ ಪ್ರದೇಶವೆಂದು

ಪರಿಗಣಿಸಲ್ಪಟ್ಟಿದೆ.

ಗೇಣಿದಾರರ ಚಳುವಳಿ ೧೯೪೦ರ ಮಾರ್ಚ್‌ನಲ್ಲಿ ಅಂಕೋಲಾದಲ್ಲಿ ಭೂಮಿಯ ಗೇಣಿಯನ್ನು ಕಡಿಮೆ ಮಾಡಲು ನಡೆಯಿತು. ಭಾರತೀಯ ಸೇವಕರ ಸಮಾಜದ ಆಜೀವ ಸದಸ್ಯರು ಅದರ ನಾಯಕತ್ವ ವಹಿಸಿದ್ದರು. ಈ ಚಳುವಳಿಯ ಉತ್ತಮ ಫಲಿತಾಂಶವೆಂದರೆ ಹಾಲಕ್ಕಿ ವಕ್ಕಲಿನವರು, ಕೋಮಾರ ಪಾಯಿಕರು ಮತ್ತು ನಂಧಾರರು ೧೯೪೦ರ ಮಾರ್ಚ ೧೬ರಂದು ಅಂಕೋಲಾ ತಾಲ್ಲೂಕು ರೈತ ಸಂಘವನ್ನು ರಚಿಸಿಕೊಂಡರು. ಅದು ಭೂಮಿಯ ಗೇಣಿಯನ್ನು ಒಟ್ಟು ಉತ್ಪನ್ನದ ೧/೩ ಭಾಗಕ್ಕೆ ಮಿತಗೊಳಿಸಲು ಕಾಯಿದೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿತು ಮತ್ತು ೧೯೩೯ರ ಬಾಂಬೆ ಕೃಷಿ ಸಾಲ ಪರಿಹಾರ ಕಾಯಿದೆಯನ್ನು ಬಡ ರೈತರ ಸಾಲವನ್ನು ಮನ್ನಾ ಮಾಡಲು ಅನ್ವಯಿಸಬೇಕೆಂದು ಕೇಳಿಕೊಂಡಿತು, ಇಲ್ಲದಿದ್ದರೆ 'ಗೇಣಿ ರಹಿತ' ಪ್ರಚಾರವನ್ನು ಕೈಗೊಳ್ಳಲು ನಿರ್ಧರಿಸಿತು. ಹಿಂದಿನ ದುಬಾರಿ ದರಕ್ಕೆ ಬದಲಾಗಿ ಗೇಣಿದಾರರು ಒಟ್ಟು ಉತ್ಪನ್ನದ ೧/೩ ಭಾಗವನ್ನು ಗೇಣಿಯಾಗಿ ಕೊಡಲು ಪ್ರಾರಂಭಿಸಿದರು. ಇದು ಪ್ರಮುಖವಾಗಿ ಅಂಬಾರಕೊಡ್ಲ ಎಂಬ ಹಳ್ಳಿಯಲ್ಲಿ ಪ್ರಾರಂಭವಾಯಿತು. ಇದು ಜಮೀನ್ದಾರರು ಮತ್ತು ಗೇಣಿದಾರರ ನಡುವಣ ಸಂಬಂಧದಲ್ಲಿ ಬದಲಾವಣೆಯನ್ನು ತಂದಿತು.

೧೯೪೦ರ ಮೇ ೧೨ರಂದು ಜಿಲ್ಲಾ ಮಟ್ಟದ ರೈತರ ಸಮ್ಮೇಳನ ಅಂಕೋಲಾದಲ್ಲಿ ನಡೆಯಿತು. ಸುಮಾರು ೫೦೦೦ ರೈತರು ಸಮ್ಮೇಳನದಲ್ಲಿ ಭಾಗವಹಿಸಿದ್ದರು ಮತ್ತು ಉತ್ತರ ಭಾರತದ ನಾಯಕರು ಭಾಷಣ ನೀಡಿದರು. ಅವರು ಜಮೀನ್ದಾರರನ್ನು ಸಮಾಜದ ಪರಾತಂತ್ರ ಜೀವಿಗಳೆಂದು ಪರಿಗಣಿಸಿದರು ಮತ್ತು ಭೂಮಿಯ ಗೇಣಿಯನ್ನು ತಡೆಹಿಡಿಯಲು ಒತ್ತಾಯ ಪೂರ್ವಕವಾಗಿ ಸಲಹೆ ಮಾಡಿದರು. ಇದು ಅಂಕೋಲಾದಿಂದ ಗೋಕರ್ಣದವರೆಗೆ ಹಬ್ಬಿತು. ಜಮೀನ್ದಾರರಲ್ಲಿ ಹೆಚ್ಚಿನವರು ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದರು. ಅವರು ಬಾಂಬೆ ಸರ್ಕಾರವನ್ನು, ದೇಸಾಯಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ೧೯೪೦ರ ಮೇ ತಿಂಗಳ ಕೊನೆಯ ವಾರದಲ್ಲಿ ಅವರನ್ನು ಬಂಧಿಸಲಾಯಿತು ಮತ್ತು ಉತ್ತರ ಕನ್ನಡ ಜಿಲ್ಲೆಯಿಂದ ಐದು ವರ್ಷಗಳವರೆಗೆ ಹೊರ ಹಾಕಲಾಯಿತು. ದೇಸಾಯಿಯವರ ಬಂಧನದಿಂದ ಚಳುವಳಿಯ ಮೊದಲ ಹಂತ ಕೊನೆಗೊಂಡಿತು. ಈ ಹಂತ ಶ್ರೀಮಂತ ಮತ್ತು ಬಡ ರೈತರನ್ನು ಜಮೀನ್ದಾರರ ವಿರುದ್ಧವಾಗಿ ಒಂದುಗೂಡಿಸಿತು.

ಅಂಕೋಲಾ ತಾಲ್ಲೂಕು ರೈತ ಸಂಘದ ೧೯೩೯ರ ಗೇಣಿ ಕಾಯ್ದೆಯನ್ನು ಅನ್ವಯಿಸಬೇಕೆಂಬ ಬೇಡಿಕೆ ಪೂರೈಕೆಯಾಗದೇ ಹಾಗೇ ಉಳಿಯಿತು. ಆದರೆ ೧೯೪೬ರ

ನವೆಂಬರ್ ೮ರಂದು ಜಾರಿಗೆ ಬಂದ ಬಾಂಬೆ ಗೇಣಿ ಕಾಯಿದೆಯು ಉತ್ತರ ಕನ್ನಡಕ್ಕೆ ಸಂಬಂಧಿಸಿದಂತೆ ರೈತರ ವ್ಯವಸ್ಥಿತ ಹೋರಾಟದಿಂದ ಬಂದ ನೇರ ಪ್ರತಿಫಲವಾಗಿತ್ತು.

ಎಡಪಂಥೀಯರ ನಾಯಕತ್ವದಲ್ಲಿ ಕಾರವಾರ ತಾಲ್ಲೂಕಿನಲ್ಲಿ ೨೮ರಂದು ಅಸ್ತಿತ್ವಕ್ಕೆ ಬಂದ ಕೆನರಾ ಜಿಲ್ಲಾ ಕಿಸಾನ್ ಸಂಘ ಧರ್ಮವೀರ ಸಿಂಘರ ನೇತೃತ್ವದಲ್ಲಿ ಒಂದು ಪ್ರಮುಖ ಪಾತ್ರ ವಹಿಸಿತು. ಥಾನಾ ಜಿಲ್ಲೆಯಲ್ಲಿ ರೈತರನ್ನು ಅಸ್ತ್ರಗಳನ್ನು ಬಳಸಿ ಹೋರಾಡುವ ರೀತಿಯಲ್ಲಿ ವ್ಯವಸ್ಥೆಗೊಳಿಸುವಲ್ಲಿ ಹೆಸರುವಾಸಿಯಾಗಿದ್ದರು. ಅವರು ಜಮೀನ್ದಾರರನ್ನು ಬಹಿಷ್ಕರಿಸುವಲ್ಲಿ ಸಫಲರಾದರು ಮತ್ತು ಅಂಕೋಲಾ ತಾಲ್ಲೂಕು ರೈತ ಸಂಘದ ಮೊದಲಿನ ಬೇಡಿಕೆಗಳನ್ನು ಪ್ರೇರೇಪಿಸಿದರು.

ಅಂಕೋಲಾ ತಾಲ್ಲೂಕು ರೈತ ಸಂಘ ೧೯೪೫ರ ಮೇ ನಲ್ಲಿ ದೇಸಾಯಿಯವರು ಮರಳಿ ಬಂದ ಮೇಲೆ ಮತ್ತೆ ಕಾರ್ಯತತ್ಪರವಾಯಿತು. ಬಾಂಬೆ ವಿಧಾನ ಸಭೆ ೧೯೪೬ರ ಗೇಣಿ ಕಾಯಿದೆಯನ್ನು ಈ ಜಿಲ್ಲೆಯಲ್ಲಿ ಜಾರಿಗೆ ತಂದಿತು ಅದು ನಿಶ್ಚಿತವಾಗಿ ಗೇಣಿದಾರರ ಚಳುವಳಿಯ ಫಲವಾಗಿತ್ತು.

೧೯೪೬ರ ಗೇಣಿ ಕಾಯಿದೆಯು ಜಾರಿಗೆ ಬರುವುದರ ಮೂಲಕ ೧೯೪೬ ಜನವರಿ ೧ಕ್ಕಿಂತ ಹಿಂದೆ ೬ ವರ್ಷಗಳವರೆಗೆ ಭೂಮಿಯನ್ನು ನಿರಂತರವಾಗಿ ಹೊಂದಿದ ಗೇಣಿದಾರನ್ನು ಗೇಣಿ ಪಾವತಿ ಮಾಡದೇ ಇರುವುದು ಅಥವಾ ಭೂಮಿಯನ್ನು ಇನ್ನೊಬ್ಬರಿಗೆ ನೀಡುವುದು ಮುಂತಾದ ತಪ್ಪುಗಳನ್ನು ಮಾಡದ ಹೊರತು ಗೇಣಿದಾರನನ್ನು ಭೂಮಿಯಿಂದ ತೆಗೆದು ಹಾಕುವಂತಿಲ್ಲ ಎಂಬ ರಕ್ಷಣೆಯನ್ನು ಗೇಣಿದಾರರಿಗೆ ನೀಡಿತು. ಆದರೆ ಜಮೀನ್ದಾರನು ಸಾಗುವಳಿ ಮಾಡಲು ಬಯಸಿದರೆ, ಆಗ ಅವನು ಗೇಣಿದಾರನನ್ನು ತೆಗೆದುಹಾಕಬಹುದು. ಇತರ ಷರತ್ತುಗಳೆಂದರೆ ಜಮೀನ್ದಾರ ಗೇಣಿ ಪಡೆದುದಕಾಗಿ ರಸೀದಿ ನೀಡಬೇಕು ಮತ್ತು ಗೇಣಿ ದಾಖಲೆ ಇಡಬೇಕು ಎಂಬುದು.

ಆದರೆ ಜಮೀನ್ದಾರರ ಸ್ವಂತ ಸಾಗುವಳಿಗೆ ಭೂಮಿಯನ್ನು ಹಿಂದೆ ಪಡೆದುಕೊಳ್ಳುವ ಸೌಲಭ್ಯ ಅದನ್ನು ಜಮೀನ್ದಾರ ಪರ ಕಾಯ್ದೆಯಾಗಿ ಮಾಡಿತು ಮತ್ತು ಜಿಲ್ಲೆಯಲ್ಲಿ ಕೃಷಿಕರ ಅಶಾಂತಿಯನ್ನು ಹೆಚ್ಚಿಸಿತು. ಕೆನರಾ ಜಿಲ್ಲಾ ಕಿಸಾನ್ ಸಂಘ ಮತ್ತು ಅಂಕೋಲಾ ತಾಲ್ಲೂಕು ರೈತ ಸಂಘ, ಗೇಣಿ ಕಾಯಿದೆಯಲ್ಲಿನ ದೋಷಗಳನ್ನು ಹೊರಕ್ಕೆಳೆದವು. ದಿನಕರ ದೇಸಾಯಿ ಮತ್ತು ಎಸ್. ವಿ. ಪಿಕ್ಲೆ ಕಾಯಿದೆಯನ್ನು ಟೀಕಿಸಿದರು ಮತ್ತು ದೇಸಾಯಿಯವರು 'ಉಳುವವನಿಗೇ ಭೂಮಿ'

ಘೋಷಣೆ ಕೂಗಿದರು.

ಈ ಅವಧಿಯಲ್ಲಿ ರೈತ ಚಳುವಳಿ ಸಿದ್ಧಾಪುರ ವಲಯಕ್ಕೂ ಹರಡಿತು. ಆದ್ದರಿಂದ ಸರ್ಕಾರ ತಕ್ಷಣ ಸಾಲ ಪರಿಹಾರ ಕಾಯಿದೆಯನ್ನು ಜಾರಿಗೆ ತಂದಿತು ಮತ್ತು ಎಲ್ಲಾ ಗೇಣಿಗೆ ಸಂಬಂಧಿಸಿದ ದಾವೆಗಳನ್ನು ಸಾಲ ಹೊಂದಾಣಿಕೆ ಮಂಡಳಿಗಳಿಗೆ ವರ್ಗಾಯಿಸಿತು ಇದು ಜಮೀನ್ದಾರರು ಮತ್ತು ಶ್ರೀಮಂತ ರೈತರ ಮೇಲೆ ಕೆಟ್ಟ ಪರಿಣಾಮ ಬೀರಿತು. ಅದೇ ಸಂದರ್ಭದಲ್ಲಿ, ದೇಸಾಯಿ ಕಾಂಗ್ರೆಸ್‌ನಿಂದ ಪ್ರಜಾ ಸಮಾಜವಾದಿ ಪಕ್ಷಕ್ಕೆ ಹೋದುದು ಜಮೀನ್ದಾರರ ಮೈತ್ರಿಯನ್ನು ಕಾಂಗ್ರೆಸ್ಸಿನೊಂದಿಗೆ ಬಲಪಡಿಸಿತು ಮತ್ತು ನಂತರ ಶ್ರೀಮಂತ ರೈತರ ಪಿತೂರಿಯಿಂದ ವಿನಾಶದ ಹಾದಿ ಹಿಡಿಯಿತು. ಕಾಂಗ್ರೆಸ್ ಪಕ್ಷ ತನ್ನದೇ ಆದ ರೈತ ವಿಭಾಗವನ್ನು ಕೆನರಾ ಜಿಲ್ಲಾ ಕಾಂಗ್ರೆಸ್ ರೈತ ಸಂಘ ಎಂಬ ಹೆಸರಿನಿಂದ ಕೆನರಾ ಜಿಲ್ಲಾ ಕಿಸಾನ್ ಸಂಘಕ್ಕೆ ಪ್ರತಿಯಾಗಿ ಕೆಲಸ ಮಾಡಲು ಸ್ಥಾಪಿಸಿತು. ಕೆನರಾ ಜಿಲ್ಲಾ ಕಾಂಗ್ರೆಸ್ ರೈತ ಸಂಘದ ಸಂಚಾಲಕರಾದ ಎಂ. ಎಂ. ಜಲಿಸತಿಯವರನ್ನು ನೇಮಿಸಲಾಯಿತು. ಇವರು ೧೯೪೬ರ ಗೇಣಿ ಕಾಯಿದೆಯನ್ನು ಜಮೀನ್ದಾರರ ಪರ ಎಂದು ಟೀಕಿಸಿದರು. ಆದ್ದರಿಂದ ಅವರ ಪಕ್ಷದ ಜನರೇ ಅವರನ್ನು ಸಮತಾವಾದಿ ಎಂದು ಬಿರುದು ಕೊಟ್ಟರು. ಈ ಸಂದರ್ಭದಲ್ಲೆ ಪ್ರಜಾ ಸಮಾಜವಾದಿ ಪಕ್ಷ ಜಿಲ್ಲಾ ಮಟ್ಟದಲ್ಲಿ ರೈತ ಕೂಟ ಎಂಬ ಹೆಸರಿನಿಂದ ರೈತ ವಿಭಾಗವನ್ನು ೧೯೪೮ರಲ್ಲಿ ಪ್ರಾರಂಭಿಸಿತು.

೧೯೪೮ರ ಡಿಸೆಂಬರ್ ೨೮ರಲ್ಲಿ ಜಾರಿಗೆ ಬಂದ ಬಾಂಬೆ ಗೇಣಿ ಮತ್ತು ಕೃಷಿ ಭೂಮಿ ಕಾಯಿದೆ ಜಿಲೆಯಲ್ಲಿ ಗೇಣಿ ಪರಿಸ್ಥಿತಿಯ ಮೇಲೆ ಯಾವುದೇ ಅನುಕೂಲಕರ ಪರಿಣಾಮ ಬೀರಲಿಲ್ಲ. ಬದಲಾಗಿ ಅದು ಅನೇಕ ಗೇಣಿ ಕಲಹಗಳಿಗೆ ದಾರಿ ಮಾಡಿಕೊಟ್ಟಿತು. ಕೇವಲ ೫ ವರ್ಷಗಳ ಅವಧಿಯಲ್ಲಿ (೧೯೪೮-೪೯ ರಿಂದ ೧೯೫೨-೫೩) ಜಿಲ್ಲೆಯಲ್ಲಿ ೨೦,೫೪೪ ದಾವೆಗಳನ್ನು ಈ ಕಾಯಿದೆ ಅಡಿ ಹೂಡಿದ್ದರು, ಅದರಲ್ಲಿ ಶೇಕಡ ೯೬ ದಾವೆಗಳನ್ನು ಜಮೀನ್ದಾರರು ಹೂಡಿದ್ದರು. ೮೬೨೬ ದಾವೆಗಳನ್ನು ಜಮೀನ್ದಾರರು ಗೇಣಿದಾರರ ವಿರುದ್ಧ ಗೇಣಿ ಪಾವತಿ ಮಾಡದೇ ಇದ್ದುದಕ್ಕಾಗಿ ಹೂಡಲಾಗಿತ್ತು. ಅದರ ಮೂಲಕ ಜಮೀನ್ದಾರರು ಗೇಣಿದಾರರನ್ನು ತಮ್ಮ ಭೂಮಿಯನ್ನು ಬಿಡುವಂತೆ ಒತ್ತಾಯಿಸಿದರು ಮತ್ತು ಅನೇಕ ಗೇಣಿದಾರರು ತಾವಾಗಿಯೇ ತಮ್ಮ ಸಾಗುವಳಿ ಭೂಮಿಯನ್ನು ಜಮೀನ್ದಾರರಿಗೆ ಬಿಟ್ಟುಕೊಟ್ಟರು.

೧೯೫೨ರ ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರಜಾ ಸಮಾಜವಾದಿ ಪಕ್ಷ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ಅದು ಭೂ ಸುಧಾರಣಾ ಶಾಸನಕ್ಕೆ ಒತ್ತು ನೀಡಿತು. ಆದರೆ ಉತ್ತರ ಕನ್ನಡದಿಂದ ಲೋಕಸಭೆಗೆ ಆಯ್ಕೆಯಾಗುವಲ್ಲಿ

ದೇಸಾಯಿ ವಿಫಲರಾದರು. ಪ್ರಜಾ ಸಮಾಜವಾದಿ ಪಕ್ಷ ಕೇವಲ ಅಂಕೋಲಾ ಕಾರವಾರ ಕ್ಷೇತ್ರದಲ್ಲಿ ಜಯಗಳಿಸಿತು, ಅಲ್ಲಿ ಬಿ. ಪಿ. ಕದಂ, ಬಾಂಬೆ ವಿಧಾನ ಸಭೆಗೆ ಆಯ್ಕೆಯಾದರು. ಅದನ್ನು ರೈತಕೂಟದ ವಿಜಯವೆಂದೇ ಪರಿಗಣಿಸಲಾಯಿತು.

೧೯೫೩ ಜನವರಿ ೭ರಂದು ರೈತ ಕೂಟ ಅಂಕೋಲಾದಿಂದ ಕಾರವಾರದವರೆಗೆ ೩೩ ಕಿ. ಮೀ. ದೂರದ ಒಂದು ಬೃಹತ್ ಮೆರವಣಿಗೆಯನ್ನು ಏರ್ಪಡಿಸಿತು. ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗೆ ಗೇಣಿ ರದ್ಧತಿಯ ಶಾಸನ ರಚನೆಗಾಗಿ ಒತ್ತುಕೊಟ್ಟು ಒಂದು ಮನವಿಯನ್ನು ಸಲ್ಲಿಸಿತು. ೧೯೫೫ರಲ್ಲಿ ಅದು ಫಲ ನೀಡಿತು. ೧೯೫೬ರ ಆಗಸ್ಟ್ ೬ ರಂದು ಬಾಂಬೆ ಗೇಣಿ ಮತ್ತು ಕೃಷಿ ಭೂಮಿ ಕಾಯಿದೆಯನ್ನು ತಿದ್ದುಪಡಿ ಮಾಡಿ 'ಉಳುವವನಿಗೇ ಭೂಮಿ' ಎಂದು ಜಾರಿಗೊಳಿಸಿತು.

ಆದರೆ ೧೯೫೫ರ ಕಾಯಿದೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯಗತಗೊಳ್ಳಲು ಸಮಯಾವಕಾಶವೇ ಇರಲಿಲ್ಲ. ಏಕೆಂದರೆ ೧೯೫೬ರ ನವೆಂಬರ್‌ನಲ್ಲಿ ಆ ಜಿಲ್ಲೆ, ಮೈಸೂರಿನ ಆಡಳಿತದ ಹಿಡಿತಕ್ಕೆ ಬಂದಿತು. ೧೯೫೭ರ ಮಾರ್ಚ್ ೧೧ರಂದು ಮೈಸೂರು ಸರ್ಕಾರ ಒಂದು ವಿಶೇಷ ಕಾಯಿದೆಯನ್ನು ಹೊರಡಿಸಿತು ಮತ್ತು ಗೇಣಿದಾರರಿಗೆ ಒಡೆತನ ನೀಡುವ ಉದ್ದೇಶ ಹೊಂದಿದ್ದ ೧೯೫೭ರ ಕಾಯಿದೆಯ ಸಂಖ್ಯೆ ೧೩ರ ಕಾರ್ಯಚರಣೆಯನ್ನು ರದ್ದುಗೊಳಿಸಿತು. ಆದರೂ ೧೯೬೫ರ ಅಕ್ಟೋಬರ್ ೨ರವರೆಗೂ ಜಿಲ್ಲೆಯಲ್ಲಿ ಆ ಕಾಯಿಧೆ ನಿಗದಿಪಡಿಸಿದ ಭೂಮಿಯ ಗೇಣಿ ದರ ಕಾರ್ಯಾಚರಣೆಯಲ್ಲಿತ್ತು.

ಶಿವಮೊಗ್ಗಾ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ನಡೆದ ರೈತರ ಚಳುವಳಿಗಳ ಪ್ರಭಾವ ಅಥವಾ ಏರಿದ ಒತ್ತಡ ರಾಜ್ಯದಲ್ಲಿ ಭೂ ಸುಧಾರಣಾ ಶಾಸನ ರಚನೆಗೆ ಅವಕಾಶ ಮಾಡಿ ಕೊಟ್ಟಿತು. ಪೂರ್ವ ಸಿದ್ಧಾಂತದಲ್ಲಿ ಹೇಳಿರುವಂತೆ ರೈತ ಚಳುವಳಿಗಿಂತಲೂ ಮುಖ್ಯವಾದ ಇತರ ಮೂಲಗಳು ಇದ್ದವಲ್ಲದೆ ಅವು ರಾಜ್ಯ ಸರ್ಕಾರವನ್ನು ಭೂ ಸುಧಾರಣೆಗಳನ್ನು ಜಾರಿಗೊಳಿಸುವಂತೆ ಒತ್ತಾಯಿಸಿದ್ದವು. ಆದರೆ ಈ ಎರಡು ಜಿಲ್ಲೆಗಳ ರೈತ ಚಳುವಳಿಗಳನ್ನು ಪರಿಶೀಲಿಸಿದ ಬಳಿಕ ೧೯೫೫ರ ಇನಾಂ ರದ್ಧತಿ ಕಾಯಿದೆಗಳಿಗಿಂತ ಮೊದಲು, ರೈತರ ಚಳುವಳಿಗಳು ಒಟ್ಟಾರೆಯಾಗಿ ಇತರ ಮೂಲಗಳಂತೆಯೇ ರಾಜ್ಯದಲ್ಲಿ ಭೂ ಸುಧಾರಣಾ ಶಾಸನಗಳ ರಚನೆಯ ಹಂತದಲ್ಲಿ ಪ್ರಮುಖವಾದ ಪಾತ್ರ ವಹಿಸಿದೆಯೆಂದು. ಅಧಿಕಾರಯುಕ್ತವಾಗಿ ಹೇಳಬಹುದು.

ಭೂಸುಧಾರಣೆಗಳ ಜಾರಿಯಿಂದಾದ ಸಾಮಾಜಿಕ–ರಾಜಕೀಯ ರಚನೆಯ ಬದಲಾವಣೆ

ಪ್ರಸ್ತುತ ಅಧ್ಯಯನ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವರ್ಗಗಳಲ್ಲಿ ಆದ ಸಾಮಾಜಿಕ ರಾಜಕೀಯ ಸ್ಥಾನಮಾನಗಳ ಪರಿಶೀಲನೆಗೆ ಸೀಮಿತಗೊಂಡಿದೆ. ಏಕೆಂದರೆ ಭೂಸುಧಾರಣಾ ಕ್ರಮಗಳು ಹೆಚ್ಚುವರಿ ಭೂಮಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಕ್ಕೆ ವಿತರಿಸುವ ಉದ್ದೇಶ ಹೊಂದಿದ್ದವು. ಆದ್ದರಿಂದ ಈ ಅಧ್ಯಯನ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಮಾಜಿಕ ರಾಜಕೀಯ ಸ್ಥಾನಮಾನದಲ್ಲಿ ಆದ ಬದಲಾವಣೆಯ ಅನ್ವೇಷಣೆಯಾಗಿದೆ ಹಾಗೂ ೧೯೫೫, ೧೯೬೧ ಮತ್ತು ೧೯೭೪ರ ಭೂ ಸುಧಾರಣಾ ಶಾಸನಗಳ ನ್ಯಾಯಯುತ ಜಾರಿಯನ್ನು ಅಧ್ಯಯನ ಮಾಡಲು ನಿಜವಾದ ಮಾನದಂಡವೆಂದು ಭಾವಿಸುತ್ತದೆ.

ರಾಜ್ಯದ ಪುನರ್ ಸಂಘಟನೆಯ ನಂತರ, ಲಿಂಗಾಯಿತರು ಪ್ರಬಲ ಜಾತಿಯಾಗಿ ಹೊರಬಂದರು, ಆಡಳಿತ ವರ್ಗ ಬ್ರಾಹ್ಮಣ ನಿಯಂತ್ರಣದಲ್ಲಿದ್ದರೆ ಭೂಮಿ ಲಿಂಗಾಯತರು ಮತ್ತು ಒಕ್ಕಲಿಗರ ಕೈಯಲ್ಲಿತ್ತು ಹಾಗೂ ಬಹುಸಂಖ್ಯಾತ ಮತಗಳು ಅಲ್ಪ ಸಂಖ್ಯಾತರಾದ ಗೇಣಿದಾರರ ಮತ್ತು ಭೂರಹಿತರ ಕೈಯಲ್ಲಿದ್ದುದು ೧೯೫೬ರ ಭೂ ಸುಧಾರಣಾ ಕಾಯ್ದೆ ಜಾರಿಯ ವೈಫಲ್ಯಕ್ಕೆ ಕಾರಣವಾಯಿತು.

೧೯೫೭ರ ಮೇ ತಿಂಗಳಲ್ಲಿ ರಾಜ್ಯ ಸರ್ಕಾರವು ಶ್ರೀ ಬಿ. ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿ ಮತ್ತು ಕೃಷಿ ಭೂಮಿ ಕಾಯಿದೆ ಸಮಿತಿ ಎಂಬ ಸಮಿತಿಯನ್ನು ರಚಿಸಿತು. ಜತ್ತಿ ಸಮಿತಿ ಎಂದು ಹೆಸರಾದ ಈ ಸಮಿತಿ ೧೯೫೭ರ ಸೆಪ್ಟೆಂಬರ್ ತಿಂಗಳಿನಲ್ಲಿ ತನ್ನ ವರದಿಯನ್ನು ಸಲ್ಲಿಸಿತು ಹಾಗೂ ಅದೇ ವರ್ಷದಲ್ಲಿ ಆ ವರದಿಯ ಆಧಾರದ ಮೇಲೆ ಮಸೂದೆಯನ್ನು ರಚಿಸಲಾಯಿತು. ಅದನ್ನು ಉಭಯ ಸದನಗಳ ಜಂಟಿ ಪರಿಶೀಲನ ಸಮಿತಿಯು ಪರಿಶೀಲಿಸಿತ್ತು. ನಂತರ ೧೯೬೧ರಲ್ಲಿ ಅದು ಕರ್ನಾಟಕ ವಿಧಾನಸಭೆಯ ಒಪ್ಪಿಗೆ ಪಡೆಯಿತು. ಇದು ೧೯೬೨ರ ಮಾರ್ಚ್ ೫ ರಂದು ಭಾರತದ ರಾಷ್ಟ್ರಪತಿಯವರ ಒಪ್ಪಿಗೆಯನ್ನು ಪಡೆಯಿತು. ೧೯೬೫ರ ಅಕ್ಟೋಬರ್‌ನಿಂದ ಅದನ್ನು ಜಾರಿಗೆ ತರಲಾಯಿತು. ಇಂತಹ ದೀರ್ಘವಾದ ವಿಳಂಬಕ್ಕೆ ಗುಂಪು ಹಿತಾಸಕ್ತಿಗಳು ರಾಜಕೀಯ ಒತ್ತಡದೊಂದಿಗೆ ಕೆಲಸ ಮಾಡಿವೆ ಎಂಬುದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಭೂ ಹಿತಾಸಕ್ತಿಗಳು ಯಾವ ರೀತಿ ತಮ್ಮ ಕಾರ್ಯ ವಿಧಾನವನ್ನು ಜಾರಿಗೊಳಿಸುತ್ತಿದ್ದವೆಂದರೆ ಮೊದಲಿಗೆ ತಮ್ಮ ಪ್ರತಿನಿಧಿಗಳನ್ನು ಶಾಸಕಾಂಗಕ್ಕೆ ಕಳುಹಿಸಿ ಅವರಿಗೆ ಮಂತ್ರಿಮಂಡಲದಲ್ಲಿ ಸೂಕ್ತ ಸಚಿವ ಸ್ಥಾನಗಳನ್ನು ದೊರೆಯುವಂತೆ ನೋಡಿಕೊಂಡು, ಆ ಪ್ರಭಾವದ ಮೂಲಕ

ರಾಜ್ಯ ಸರ್ಕಾರದ ನಿರ್ಧಾರಕೈಗೊಳ್ಳುವ ತಂತ್ರವನ್ನು ತಮ್ಮ ನಿಯಂತ್ರಣದಲ್ಲಿಟ್ಟು ಕೊಳ್ಳುವುದು ಅದರ ಉದ್ದೇಶವಾಗಿತ್ತು.

ಈ ಭೂ ಸುಧಾರಣೆಗಳಲ್ಲಿ ಕಂಡಂತಹ ಮತ್ತೊಂದು ಗಮನಾರ್ಹ ಅಂಶವೆಂದರೆ ಭೂ ಒಡೆತನ ಹೊಂದಿದ ವರ್ಗಗಳಲ್ಲಿ ಲಿಂಗಾಯಿತರು ಮತ್ತು ಒಕ್ಕಲಿಗರಷ್ಟೇ ಅಲ್ಲದೆ ಕುರುಬ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು, ಬ್ರಾಹ್ಮಣರು ಮತ್ತು ಇತರ ಹಿಂದುಗಳು, ಮುಸ್ಲಿಮರು, ಕ್ರೈಸ್ತರು ಹಾಗೂ ಜೈನರು ಗ್ರಾಮೀಣ ಪ್ರದೇಶಗಳಲ್ಲಿ ಪ್ರಬಲರಾಗಿದ್ದರು. ಈ ವರ್ಗಗಳು ೧೦ ಎಕರೆಗಳಿಗಿಂತ ಹೆಚ್ಚು ಭೂಮಿ ಹೊಂದಿದ ಕುಟುಂಬಗಳಲ್ಲೂ ಪ್ರಮುಖವಾಗಿವೆ. ಇದನ್ನು ೧.೨ ಪಟ್ಟಿಯದಲ್ಲಿ ಸೂಚಿಸಲಾಗಿದೆ.

ಪಟ್ಟಿ ೧.೨
ಜಾತಿ ಮತ್ತು ಅವುಗಳ ಸಾಗುವಳಿ ಭೂಮಿಯ ಆಧಾರದ ಮೇಲೆ ಕುಟುಂಬಗಳ
ವಿಂಗಡಣೆ ೧೯೬೧

ಜಾತಿ/ ಪಂಗಡ/ ವರ್ಗ	ಹಿಡುವಳಿ ಗಾತ್ರ (ಎಕರೆಗಳಲ್ಲಿ)					ಒಟ್ಟು ಕುಟುಂ-ಬಗಳು	ಶೇಕಡವಾರು ಒಟ್ಟು ಕುಟುಂಬಗಳಲ್ಲಿ ಪ್ರತಿ ಜಾತಿಯ ಕುಟುಂಬಗಳ ಸಂಖ್ಯೆ
	೧.೦೦ ಕ್ಕಿಂತ ಕಡಿಮೆ	೧.೦೦–೨.೫೦	೨.೫೦–೫.೦೦	೫.೦೦–೧೦.೦೦	೧೦.೦೦		
ಒಕ್ಕಲಿಗ	೯ (೧.೧೮)	೮೭ (೧೧.೪೩)	೧೭೮ (೨೩.೩೮)	೨೪೪ (೩೨.೦೬)	೨೪೩ (೩೧.೯೪)	೭೬೧ (೧೦೦)	೧೫.೧೮
ಲಿಂಗಾಯಿತ	೧೦ (೦.೮೦)	೮೭ (೬.೮೮)	೧೭೬ (೧೩.೯೪)	೨೬೩ (೨೦.೮೨)	೭೨೭ (೫೭.೫೬)	೧೨೬೩ (೧೦೦)	೨೫.೧೯
ಕುರುಬ	೮ (೧.೫೦)	೭೨ (೧೩.೪೪)	೧೪೫ (೨೭.೦೫)	೧೬೧ (೩೦.೦೦)	೧೫೦ (೨೭.೯೮)	೫೩೬ (೧೦೦)	೧೦.೬೯

ಎಸ್. ಸಿ.	೪೧ (೭.೨೬)	೨೦೧ (೩೫.೬೪)	೧೮೪ (೩೨.೬೪)	೧೦೨ (೧೩.೦೮)	೩೬ (೬.೩೮)	೫೬೪ (೧೦೦)	೧೧.೨೫
ಎಸ್. ಟಿ.	–	೧ (೧೬.೬೭)	೪ (೬೬.೬೬)	–	೧ (೧೬.೬೭)	೬ (೧೦೦)	೦.೧೨
ಬ್ರಾಹ್ಮಣ	೧೯ (೬.೮೦)	೨೫ (೮.೯೨)	೪೦ (೧೪.೨೮)	೬೩ (೨೨.೫೦)	೧೩೩ (೪೭.೫೦)	೨೮೦ (೧೦೦)	೫.೫೯
ಇತರ ಹಿಂದೂಗಳು	೮೨ (೮.೨೦)	೨೦೯ (೨೦.೯೦)	೨೫೧ (೨೫.೧೦)	೨೪೭ (೨೪.೭೦)	೨೧೧ (೨೧.೧೦)	೧೦೦೦ (೧೦೦)	೧೯.೯೫
ಮುಸ್ಲಿಮರು	೫೦ (೯.೧೬)	೧೦೫ (೧೯.೨೪)	೧೨೧ (೨೨.೧೬)	೧೧೯ (೨೧.೭೯)	೧೫೧ (೨೧.೬೫)	೫೪೬ (೧೦೦)	೧೦.೮೯

ಕ್ರೈಸ್ತರು	೪	೭	೮	೯	೨	೩೦	೦.೬೦
ಜೈನರು	೪	೩	೧೦	೧೦	೨೭	೦.೫೪	–
ಒಟ್ಟು	೨೨೩	೭೫೮	೧೧೧೦	೧೨೧೮	೧೬೬೪	೫೦೧೩	೧೦೦.೦೦

ಸೂಚನೆ : ಆವರಣ ಚಿಹ್ನೆಯಲ್ಲಿರುವವುಗಳು ಶೇಕಡಾವಾರು ಅಂಕಿಗಳು

ಮೂಲ : ಜಿ. ತಿಮ್ಮಯ್ಯ ಮತ್ತು ಅಬ್ದುಲ್ ಅಜೀಜ್, ದಿ ಪೊಲಿಟಿಕಲ್ ಇಕಾನಮಿ ಆಫ್ ಲ್ಯಾಂಡ್ ರಿಫಾರ್ಮ್ಸ್

೧೯೬೧ರ ಭೂಸುಧಾರಣಾ ಕಾಯಿದೆಯು ಅನೇಕ ಗುಂಪು ಹಿತಾಸಕ್ತಿಗಳ ಪರಸ್ಪರ ಕಾರ್ಯಚರಣೆಯ ಫಲವಾಗಿದೆ. ವಾಸವಾಗಿಲ್ಲದ ಜಮೀನ್ದಾರರೆಂದರೆ ಬ್ರಾಹ್ಮಣರು, ಅವರು ನಗರ ಪ್ರದೇಶಗಳಿಗೆ ವಲಸೆ ಹೋಗಿ ಸರ್ಕಾರಿ ಉದ್ಯೋಗಗಳಲ್ಲಿ ಹಾಗೂ ಖಾಸಗಿ ಉದ್ಯಮಗಳಲ್ಲಿ ತೊಡಗಿಸಿಕೊಂಡರು. ಪ್ರಬಲ ಜಾತಿಗಳಾದ ಅಂದರೆ ಒಕ್ಕಲಿಗ ಮತ್ತು ಲಿಂಗಾಯಿತ ಜಾತಿಗೆ ಸೇರಿದ ಗೇಣಿದಾರರಿಗೆ ತಮ್ಮ ಭೂಮಿಯನ್ನು ಗೇಣಿಗೆ ಕೊಟ್ಟರು. ಈ ಗೇಣಿದಾರರು ರಾಜ್ಯ ಸರ್ಕಾರದ ಶಾಸನ ರಚನಾಕಾರರ ಸಹಾನುಭೂತಿಯನ್ನು ಪಡೆದಿದ್ದರು. ಅವರು ಇದೇ ವರ್ಗಕ್ಕೆ ಸೇರಿದ ರಾಜಕೀಯ ನಾಯಕರಿಂದ ನಿಯಂತ್ರಿಸಲ್ಪಟ್ಟಿದ್ದರು. ಆದ್ದರಿಂದ ೧೯೬೧ರ ಕಾಯಿದೆಯ ಫಲಕಾರಿ ಜಾರಿಗೆ ಗ್ರಾಮೀಣ ಕರ್ನಾಟಕದಲ್ಲಿ ಯಾವುದೇ ರೀತಿಯ ಪರಿಣಾಮಕಾರಿ ಬದಲಾವಣೆಯನ್ನು ಉಂಟು ಮಾಡಲಿಲ್ಲ ಹಾಗೂ ರಾಜ್ಯದ ಯಾವುದೇ ಪ್ರಬಲ ವರ್ಗದ ಮೇಲೆ ಈ ಕಾಯಿದೆಯಲ್ಲಿನ ವಿಧಿಗಳು ಯಾವುದೇ ಪರಿಣಾಮ ಬೀರಲಿಲ್ಲ.

೧೯೭೧ರ ಅವಧಿ, ವಿಭಿನ್ನವಾದ ಹಿತಾಸಕ್ತಿ ಗುಂಪುಗಳನ್ನು ಬಯಲಿಗೆ ತಂದಿತು. ೧೯೬೯ರಲ್ಲಿ ಕಾಂಗ್ರೆಸ್ ಪಕ್ಷದ ವಿಭಜನೆ ಕರ್ನಾಟಕದ ರಾಜಕಾರಣದಲ್ಲಿ ಹಿಂದುಳಿದ ವರ್ಗವನ್ನು ಸಾರಥ್ಯದಲ್ಲಿ ಇರಿಸಿತು. ಅವರು ಯಾವುದೇ ಭೂ ಹಿತಾಸಕ್ತಿಗಳ ನಿಯಂತ್ರಣದಲ್ಲಿ ಇರದಿದ್ದುದರಿಂದ ಇದು ಕ್ರಾಂತಿಕಾರಿ ಭೂ ಸುಧಾರಣೆಗಳಿಗೆ ಸರಿಯಾದ ಭೂಮಿಕೆಯನ್ನು ಸಿದ್ಧಪಡಿಸಿತು.

ಕರ್ನಾಟಕದ ರಾಜಕಾರಣದಲ್ಲಿ, ೧೯೭೨ರಲ್ಲಿ ಲಿಂಗಾಯಿತರಿಂದ ಹಿಂದುಳಿದ ವರ್ಗಗಳಿಗೆ ಎರಡನೆ ಹಂತದ ಅಧಿಕಾರ ಹಸ್ತಾಂತರವಾಯಿತು. (ಮೊದಲನೆಯದು, ೧೯೫೬ರಲ್ಲಿ ಒಕ್ಕಲಿಗರಿಂದ ಲಿಂಗಾಯಿತರಿಗೆ) ಇದು ಕಾಂಗ್ರೆಸ್ ಪಕ್ಷದ ಸಾಮಾಜಿಕ ಆರ್ಥಿಕ ತಳಹದಿಯನ್ನು ಮಾತ್ರ ಬದಲಾಯಿಸಲಿಲ್ಲ. ಇದು ಕರ್ನಾಟಕದ ರಾಜಕಾರಣದಲ್ಲೂ ಕೂಡ ಒಂದು ನಿಶ್ಚಿತ ಬದಲಾವಣೆಗೆ ಆರಂಭವನ್ನು ನೀಡಿತು. ಕರ್ನಾಟಕದಲಿ ಪರಂಪರಾಗತ ಭೂ ಒಡೆತನದ ಜಾತಿಗಳಾದ ಒಕ್ಕಲಿಗರು ಮತ್ತು ಲಿಂಗಾಯಿತರು ೧೯೭೨ರವರೆಗೆ ರಾಜ್ಯದ ಶಾಸಕಾಂಗದಲ್ಲಿ ಒಟ್ಟಾಗಿ ಪ್ರಾಬಲ್ಯ ಪಡೆದಿದ್ದರು (ಶೇ ೬೦ಕ್ಕೂ ಹೆಚ್ಚು ಸ್ಥಾನಗಳನ್ನು ವಿಧಾನ ಸಭೆಯಲ್ಲಿ ಹೊಂದಿದ್ದರು) ಅದು ೧೯೭೨ರಲ್ಲಿ ಸ್ವಲ್ಪ ಕಡಿಮೆಯಾಯಿತು.

ಪಟ್ಟಿ ೧.೩
ಕರ್ನಾಟಕ ವಿಧಾನಸಭೆಯಲ್ಲಿ ಜಾತಿವಾರು ಸ್ಥಾನಮಾನಗಳು ೧೯೫೭–೭೭ ಚುನಾವಣೆಗಳು

ಜಾತಿ/ವರ್ಗ	ಚುನಾವಣೆಯ ವರ್ಷಗಳು									
	೧೯೫೭		೧೯೬೨		೧೯೬೭		೧೯೭೨		೧೯೭೭	
	ಸಂಖ್ಯೆ	ಒಟ್ಟು %ವಾರು	ಸಂಖ್ಯೆ	ಒಟ್ಟು %ವಾರು	ಸಂಖ್ಯೆ	ಒಟ್ಟು %ವಾರು	ಸಂಖ್ಯೆ	ಒಟ್ಟು %ವಾರು	ಸಂಖ್ಯೆ	ಒಟ್ಟು %ವಾರು
ಬ್ರಾಹ್ಮಣರು	೧೪	೧೧	೯	೬೭೫	೮	.೬	೮	೬	೧೧	೪
ಲಿಂಗಾಯಿತರು	೪೫	೪೫	೪೨	೩೩	೪೫	೩೪	೪೯	೩೬	೪೩	೨೪
ಒಕ್ಕಲಿಗರು	೩೩	೨೬	೩೫	೮.೨೫	೩೫	೨೨	೩೬	೨೬	೫೭	೨೯
ಇತರ ಹಿಂದೂಗಳು	೧೭	೯	೨೭	೧೫	೨೦	೧೪	೧೨	೧೭	೩೨	೨೭

ಎಸ್. ಸಿ.	೨೦	೧೬	೨೨	೧೫	೨೧	೧೬	೨೪	೧೭	೨೩	೧೨.೫
ಎಸ್. ಟಿ.	–	–	೨	೧.೫೦	೧	೧	–	–	೨	೧
ಕ್ರೈಸ್ತರು	–	–	೧	೦.೭೫	–	–	೧	೦.೭೫	೫	೩
ಜೈನರು	೨	೨	೩	೨.೨೫	೧	೧	೧	೦.೭೫	೧	೦.೫
ಮುಸ್ಲಿಮರು	೧	೧	೧	೦.೭೫	೧	೧	೨	೧.೫೦	೪	೨
ಒಟ್ಟು	೧೨೭	೧೦೦	೧೪೨	೧೦೦	೧೩೨	೧೦೦	೧೩೮	೧೦೦	೧೭೮	೧೦೦

ಮೂಲಗಳು : ಕರ್ನಾಟಕ ಹಿಂದುಳಿದ ವರ್ಗ ಆಯೋಗದ ವರದಿ, ಸಂಪುಟ–೪, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೭೫ ಪುಟಗಳು ೮೨೨–೨೩.

ಉಲ್ಲೇಖಿಸಿದವರು : ಜಿ. ತಿಮ್ಮಯ್ಯ ಮತ್ತು ಅಬ್ದುಲ್ ಅಜೀಜ್, ದಿ ಪೊಲಿಟಿಕಲ್ ಇಕಾನಮಿ ಆಫ್ ಲ್ಯಾಂಡ್ ರಿಫಾರ್ಮ್ಸ್, ಪುಟಗಳು ೫೭.

ಪಟ್ಟಿ ೧.೩ ಗುಂಪು ಆಸಕ್ತಿಗಳ ಪರಸ್ಪರ ಕಾರ್ಯಾಚರಣೆಯಲ್ಲಿ ಭೂ ಮಾಲೀಕರು ಕಾನೂನು ರಚಿಸುವ ಸಾಧನದ ಮೇಲೆ ತಮ್ಮ ಸಾಂಪ್ರದಾಯಿಕ ಹಿಡಿತವನ್ನು ಕಳೆದು ಕೊಂಡರೆಂಬ ಅಂಶವನ್ನು ಸೂಚಿಸುತ್ತದೆ.

ಕಾಂಗ್ರೆಸ್ ಪಕ್ಷದ ಉನ್ನತ ಆದೇಶ, ನಿರ್ದಿಷ್ಟವಾಗಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ದೇವರಾಜ ಅರಸು ಅವರನ್ನು ರಾಜ್ಯ ಕಾಂಗ್ರೆಸ್‌ನ ಮುಖ್ಯಸ್ಥರನ್ನಾಗಿ ಆಯ್ಕೆ ಮಾಡಿದರು, ಏಕೆಂದರೆ ಅವರು ಗ್ರಾಮೀಣ ಪ್ರದೇಶದಲ್ಲಿ ಬದಲಾವಣೆಯ ವೇಗವನ್ನು ಹೆಚ್ಚಿಸುವಲ್ಲಿ ಆಸಕ್ತಿ ಹೊಂದಿದ್ದರು. ಅಭಿವೃದ್ಧಿಪರ ಕ್ರಮಗಳನ್ನು ಜಾರಿಗೊಳಿಸಲು ವಿರೋಧಿಸುವ ಗುಂಪುಗಳನ್ನು ಸರಿಯಾದ ರೀತಿಯಲ್ಲಿ ನಿಯಂತ್ರಿಸುವ ಆಸಕ್ತಿ ಹೊಂದಿದ್ದರು. ಬದಲಾವಣೆಯ ವೇಗವನ್ನು ಹೆಚ್ಚಿಸುವಲ್ಲಿ ವೇಗವರ್ಧಕ ಶಕ್ತಿಯಾಗಿ ತಮ್ಮ ಪಾತ್ರ ನಿರ್ವಹಿಸುವ ಆಸಕ್ತಿ ದೇವರಾಜ ಅರಸು ಹೊಂದಿದ್ದರು. ಏಕೆಂದರೆ ರಾಜ್ಯದ ರಾಜಕೀಯದ ಮೇಲೆ ಲಿಂಗಾಯಿತ, ಒಕ್ಕಲಿಗರ ಮೇಲುಗೈಯನ್ನು ಭೇದಿಸಲು ಇದೊಂದೇ ದಾರಿ ಎಂದು ಅವರಿಗೆ ತಿಳಿದಿತ್ತು.

ತಮ್ಮ ರಾಜಕೀಯ ತಳಹದಿಯನ್ನು ಭದ್ರಪಡಿಸಲು, ದೇವರಾಜ ಅರಸು ಅವರು ಕುರುಬ, ಯಾದವ, ಬೇಡರು, ಬೆಸ್ತರು, ಕ್ಷೌರಿಕರು ಮತ್ತು ಅಕ್ಕಸಾಲಿಗರು ಮುಂತಾದ ಜಾತಿ ಮತ್ತು ವರ್ಗಗಳೊಂದಿಗೆ ಒಳ್ಳೆಯ ಸಂಬಂಧ ಬೆಳೆಸಿಕೊಂಡರು. ಕಾಂಗ್ರೆಸ್‌ನ ಸಾಂಪ್ರದಾಯಿಕ ಮತದಾರರಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮುಸ್ಲಿಮರ ಬೆಂಬಲ ಪಡೆಯುವಲ್ಲಿ ಜಾಗರೂಕರಾಗಿ ವರ್ತಿಸಿದರು. ಹೀಗೆ ಬ್ರಾಹ್ಮಣೇತರ ಹಿಂದುಳಿದ ಜಾತಿ ವರ್ಗಗಳ ಚಳುವಳಿ ದೇವರಾಜ ಅರಸು ಅವರ ನಾಯಕತ್ವದಲ್ಲಿ ೧೯೭೦ರ ದಶಕದಲ್ಲಿ ವ್ಯಕ್ತವಾಗತೊಡಗಿತು. ದೇವರಾಜ ಅರಸು ಅವರು ಕರ್ನಾಟಕ ಸಮಾಜದ ರಾಜಕೀಯ ಮತ್ತು ಸಾಮಾಜಿಕ ಸ್ವರೂಪದಲ್ಲಿ ಕ್ರಾಂತಿಕಾರಿ ಸುಧಾರಣೆ ತರುವ ಘೋಷಣೆಯೊಂದಿಗೆ ಅಧಿಕಾರಕ್ಕೆ ಬಂದರು. ಅವರು ಜಾರಿಗೆ ತಂದ ಪ್ರಮುಖ ಬದಲಾವಣೆಗಳೆಂದರೆ :

೧) ಭೂ ಸುಧಾರಣೆಗಳು
೨) ಸುಧಾರಿತ ವಿಶೇಷ ಸವಲತ್ತುಗಳಿಗೆ ಯೋಗ್ಯರನ್ನಾಗಿಸುವಂತೆ ಹಿಂದುಳಿದ ಜಾತಿ/ಪಂಗಡಗಳನ್ನು ಪುನರ್ ವ್ಯಾಖ್ಯಾನಿಸುವುದು ಮತ್ತು
೩) ಗ್ರಾಮೀಣ ಬಡ ಜನರ ಸುಧಾರಣೆಗಾಗಿ ಕೆಲವು ಶಾಸನಗಳು

ದೇವರಾಜ ಅರಸು ಅವರ ಆಡಳಿತದಲ್ಲಿ, ೧೯೭೩ರಲ್ಲಿ ಒಂದು ಹೊಸ ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತರಲಾಯಿತು. ಅದು ೧೯೭೪ರಲ್ಲಿ

ಕಾರ್ಯರೂಪಕ್ಕೆ ಬಂದಿತು. ಈ ಕಾಯ್ದೆ ಅಡಿಯಲ್ಲಿ ಯಾರು ಸ್ವಂತ ಸಾಗುವಳಿ ಮಾಡುತ್ತಾರೋ ಅವರು ಮಾತ್ರ ಭೂಮಿ ಒಡೆತನ ಹೊಂದಬಹುದು ಅಂದರೆ 'ಉಳುವವನೇ ಭೂಮಿಯ ಒಡೆಯ' ಸೈನಿಕರು ಮತ್ತು ನಾವಿಕರಿಗೆ ರಿಯಾಯ್ತಿ ಇತ್ತು. ವಿಧವೆಯರು, ಬಾಲಕರು ಮತ್ತು ಅಂಗವಿಕಲರು ಭೂಮಿಯನ್ನು ಹೊಂದುವಂತಿರಲಿಲ್ಲ. ೧೯೬೧ರ ಕಾಯ್ದೆಯಂತೆ ಭೂಮಿಯ ಮಿತಿ ೨೭ ಎಕರೆ ಇದ್ದುದು ೧೦ ಎಕರೆಗೆ ಕಡಿಮೆ ಮಾಡಲಾಯಿತು. ಹೈನುಗಾರಿಕೆ, ಕೋಳಿಸಾಕಾಣಿಕೆ, ದನಕರುಗಳ ಸಾಕಣಿಕೆಗೆ ಬೇಕಾದ ಭೂಮಿಯನ್ನು ಹಿಂದೆ ಕೃಷಿಯೆಂದು ಪರಿಗಣಿಸಿರಲಿಲ್ಲ. ಈಗ ಅದನ್ನು ಕೃಷಿ ಭೂಮಿಯೆಂದು ಪರಿಗಣಿಸಲಾಯಿತು. ಇದರ ಜೊತೆಗೆ, ೫ ಜನರಿಗಿಂತ ಹೆಚ್ಚಿರುವ ಕುಟುಂಬಗಳಲ್ಲಿ ಪ್ರತಿಯೊಬ್ಬ ಹೆಚ್ಚಿನ ಸದಸ್ಯರಿಗೆ ೨ ಹೆಚ್ಚುವರಿ ಯೂನಿಟ್‌ಗಳು ಒಟ್ಟಾರೆಯಾಗಿ ೨೦ ಯೂನಿಟ್‌ಗಳ ಮಿತಿಯನ್ನು ಹಾಕಲಾಯಿತು, ಮೂಲ ಕಾಯ್ದೆಯಲ್ಲಿ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ೬ ಎಕರೆಗಳು ಒಟ್ಟು ೫೪ ಎಕರೆಗಳು ಇಡೀ ಕುಟುಂಬಕ್ಕೆ ಹೊಂದಲು ಅವಕಾಶವಿತ್ತು. ೧೯೭೪ರ ಕಾಯ್ದೆಯಲ್ಲಿ, ಕುಟುಂಬ ಎಂದರೆ ಗಂಡ, ಹೆಂಡತಿ, ಮದುವೆಯಾಗದ ಹೆಣ್ಣುಮಕ್ಕಳು ಮತ್ತು ಚಿಕ್ಕ ಹುಡುಗರು ಮಾತ್ರ, ಪ್ರೌಢ ಗಂಡು ಮಕ್ಕಳನ್ನು ಕುಟುಂಬದ ವ್ಯಾಖ್ಯೆಯಲ್ಲಿ ಸೇರಿಸಿರಲಿಲ್ಲ.

ರಾಜ್ಯಾದಾದ್ಯಂತ ಸುಮಾರು ೧೯೪ ಭೂ ನ್ಯಾಯಾಲಯಗಳು ಪ್ರತಿ ತಾಲ್ಲೂಕಿಗೆ ಒಂದರಂತೆ ಅಸ್ತಿತ್ವಕ್ಕೆ ಬಂದವು. ವ್ಯಾಜ್ಯಗಳನ್ನು ಸುಧಾರಿಸುವುದು ಅದರ ಕೆಲಸ ಮತ್ತು ಅದರ ತೀರ್ಮಾನವೇ ಅಂತಿಮ. ಅಧ್ಯಕ್ಷರು ಅಧಿಕಾರಿಯಾಗಿದ್ದರು ಮತ್ತು ಅಧಿಕಾರೇತರ ೪ ಜನರು ಸದಸ್ಯರಾಗಿದ್ದರು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಭೂ ಸುಧಾರಣಾ ಕಾಯ್ದೆಗಳ ಪ್ರಮುಖ ಫಲಾನುಭವಿಗಳಾದರು, ಈ ಎರಡು ಜಿಲ್ಲೆಯಲ್ಲಿ ದೇವರಾಜ ಅರಸು ಅವರಿಗೆ ಹೆಚ್ಚಿನ ಪ್ರಶಂಸೆ ದೊರೆಯಿತು.

ಇಡೀ ರಾಜ್ಯದಲ್ಲಿ ಭೂ ಸುಧಾರಣೆಯ ಪ್ರಗತಿಯ ಸಾಮಾನ್ಯ ನೋಟ ಪಟ್ಟಿ ೧.೪ರಲ್ಲಿದೆ.

ಪಟ್ಟಿ ೧.೪

ಕರ್ನಾಟಕ ರಾಜ್ಯದಲ್ಲಿ ೧೯೮೧ರವರೆಗೆ ಭೂ ನ್ಯಾಯಾಲಯಗಳ ಕಾರ್ಯ ಚಟುವಟಿಕೆಗಳು :

ಕ್ರ. ಸಂ.	ಜಿಲ್ಲೆಗಳು	ನ್ಯಾಯಲಯಗಳು			ಗೇಣಿ ಅರ್ಜಿಗಳು		ಮಿತಿ ಘೋಷಣೆ		ಒಪ್ಪಿ ಕೇಸುಗಳು	
		೧೯೭೬	ಮಧ್ಯ ೧೯೮೧	ಕೊನೆ ೧೯೮೧	ಪಡೆದವು	ಕೊಟ್ಟವು	ಪಡೆದವು	ಕೊಟ್ಟವು	ಪಡೆದವು	ಕೊಟ್ಟವು
೧	ಬೆಂಗಳೂರು	೧೧	೧೧	೧೮	೪೮೨೦೨	೪೫೦೩೪	೨೨೨೯	೧೨೭೧	೫೦೪೩೧	೪೬೩೦೫
೨	ಬೆಳಗಾಂ	೧೦	೧೧	೧೮	೭೦೩೦೦	೬೭೦೯೪	೧೨೩೭೨	೧೧೬೫೭	೮೨೬೭೨	೭೮೭೫೧
೩	ಬಳ್ಳಾರಿ	೮	೮	೧೨	೧೮೦೧೯	೧೬೭೯೪	೬೦೨೭	೪೩೨೯	೨೪೦೪೬	೨೧೧೨೩
೪	ಬೀದರ್	೫	೫	೫	೬೦೯೧	೬೦೮೦	೪೬೩೦	೪೬೨೩	೧೦೭೨೧	೧೦೭೦೩
೫	ಬಿಜಾಪುರ	೧೧	೧೧	೧೪	೪೧೪೨೯	೪೧೪೨೯	೨೩೪೮೨	೨೩೪೧	೧೬೪೯೧೧	೬೪೮೪೦

೬	ಚಿಕ್ಕಮಗ–ಳೂರು	೭	೭	೭	೧೯೫೫೩	೧೯೪೮೩	೨೧೩೩	೧೪೨೭	೨೧೬೮೬	೨೦೯೧೦
೭	ಚಿತ್ರದುರ್ಗ	೯	೯	೯	೭೪೫೨	೭೩೮	೮೮೭೫	೮೮೭೫	೧೬೩೨೭	೧೬೨೬೩
೮	ದಕ್ಷಿಣ ಕನ್ನಡ	೮	೨೨	೫೫	೧೭೯೮೩೯	೧೭೮೪೬೬	೩೧೨೨	೧೬೦೪	೧೮೨೯೬೧	೧೮೦೦೭೦
೯	ಧಾರವಾಡ	೧೭	೧೭	೨೧	೬೦೭೩೩	೫೯೭೫೭	೧೭೧೪೧	೧೫೦೬೪	೭೭೮೭೪	೭೪೮೨೧
೧೦	ಗುಲ್ಬರ್ಗಾ	೧೦	೧೧	೨೦	೬೧೬೩೦	೫೯೮೬೦	೧೮೬೦೪	೧೬೧೩೯	೮೦೨೩೪	೭೫೯೯೯
೧೧	ಹಾಸನ	೮	೮	೧೦	೨೯೩೩೧	೨೯೧೦೧	೧೨೬೩	೧೨೧೬	೩೦೫೯೪	೩೦೩೧೭
೧೨	ಕೊಡಗು	೩	೩	೩	೩೭೬೦	೩೭೩೧	೭೪೫	೭೧೩	೪೫೦೫	೪೪೪೪
೧೩	ಕೋಲಾರ	೧೧	೧೧	೧೨	೨೪೬೬೯	೨೪೧೬೧	೧೫೦೨	೧೪೦೭	೨೬೧೭೧	೨೫೫೬೮

೧೪	ಮಂಡ್ಯ	೭	೭	೯	೧೪೮೩೩	೧೪೧೭೫	೨೧೯೬	೧೬೦೬	೧೭೦೨೯	೧೫೭೮೧
೧೫	ಮೈಸೂರು	೧೧	೧೧	೧೭	೩೬೬೬೨	೩೫೫೩೫	೩೬೯೨	೩೩೦೭	೪೦೩೫೪	೩೮೮೪೨
೧೬	ರಾಯ ಚೂರು	೯	೯	೧೪	೨೧೭೫೪	೨೧೭೪೬	೧೯೭೩೬	೧೯೪೩೪	೪೧೪೯೦	೪೧೧೮೦
೧೭	ಶಿವ ಮೊಗ್ಗಾ	೯	೧೦	೨೧	೫೯೫೬೬	೫೮೮೪೮	೭೩೪೮	೬೫೫೧	೬೬೯೧೪	೬೫೩೯೯
೧೮	ತುಮ ಕೂರು	೧೦	೧೦	೧೧	೧೪೩೦೮	೧೨೭೦೫	೨೫೦೭	೧೭೯೯	೧೬೮೧೫	೧೪೫೦೪
೧೯	ಉತ್ತರ ಕನ್ನಡ	೧೧	೧೩	೧೬	೯೮೯೭೬	೯೬೭೫೩	೩೯೪೨	೩೬೪೦	೧೦೨೯೧೮	೧೦೦೩೯೩
ಒಟ್ಟು		೧೭೫	೧೯೪	೨೯೪	೮೧೭೧೦೭	೭೯೮೧೪೦	೧೪೧೫೪೬	೧೨೮೦೭೩	೯೫೮೬೫೩	೯೨೬೨೧೩

ಮೂಲ : ರೆವೊನ್ಯೂ ಸೆಕ್ರೆಟೇರಿಯಟ್, ಕರ್ನಾಟಕ ಸರ್ಕಾರ (ಜೆ. ಬರ್ಗ್‌ಮನ್, ೧೯೮೪, ಉಲ್ಲೇಖಿಸಿರುವಂತೆ)

ಕಡಿದಾಳ್ ಮಂಜಪ್ಪ, ಕರ್ನಾಟಕ ಭೂರಹಿತರ ಪರವಾದಿ ಶೇಕಡ ೩೦ ಭೂ ನ್ಯಾಯಾಲಯಗಳು ಭ್ರಷ್ಟವಾಗಿದ್ದವು ಎಂದು ಟೀಕಿಸಿದ್ದರು, ಆದರೂ ಬಡ ರೈತರ ಅನುಕೂಲಕ್ಕೆ ಕಾನೂನು ಕೆಲಸ ಮಾಡಿದೆ ಎಂದು ಪ್ರಶಂಸಿಸಿದ್ದಾರೆ.

ಕೆಲವು ವಿಮರ್ಶಕರ ಅಭಿಪ್ರಾಯದಂತೆ ದೇವರಾಜ್ ಅರಸು ಅವರೇ ಈ ಅಂಶವನ್ನು ಒಪ್ಪಿದ್ದರು ಮತ್ತು ಏನೇ ಮಾಡಿದ್ದರೂ ಮಿತಿಯನ್ನು ಕಡಿಮೆ ಮಾಡುವಲ್ಲಿ ಅಂತಿಮವಾಗಿ ಭೂರಹಿತತೆ ನಿವಾರಿಸುವ ಮೊದಲು ಅದು ಸರ್ಕಾರದ ತಳಹದಿಯನ್ನು ತಮ್ಮತ್ತ ಒಟ್ಟು ಗೂಡಿಸುವಲ್ಲಿನ ಪ್ರಥಮ ಮೆಟ್ಟಲಾಗಿತ್ತು.

ಆದರೆ ಅದುವರೆಗೂ ಕರ್ನಾಟಕದ ರಾಜಕಾರಣದಲ್ಲಿ ಅಸ್ಪಷ್ಟವಾದ ಗುಂಪು ೧೯೭೨ರಲ್ಲಿ ರಾಜಕೀಯ ಅಧಿಕಾರವನ್ನು ಪಡೆಯಿತು. ಈ ಜಾತಿ ಗುಂಪುಗಳು ರೈತರು ಮತ್ತು ಭೂರಹಿತರೊಂದಿಗೆ ಒಪ್ಪಂದ ಮಾಡಿಕೊಂಡು ಭೂಮಿಯ ಪಡೆಯುವಿಕೆ ಮತ್ತು ಭೂ ರಹಿತರಿಗೆ ಭೂಮಿ ಹಂಚಿಕೆ ಮಾಡುವುದನ್ನು ಅಧಿಕಾರದಲ್ಲಿ ಮುಂದುವರೆಯಲು ತಮ್ಮ ಪ್ರಣಾಳಿಕೆಯ ಪ್ರಮುಖ ಅಂಶವಾಗಿಸಿಕೊಂಡರು. ಹೊಸ ಆಡಳಿತ ವರ್ಗದ ಈ ಉದ್ದೇಶವೂ ಅಲ್ಲಿಯವರೆಗೂ ಭೂ ಒಡೆತನ ಹೊಂದಿದ ಆದರೆ ಸ್ವ ಇಚ್ಛೆಯಿಂದ ಭೂಮಿ ಮಾರಾಟ ಮಾಡಿ ಇಲ್ಲವೆ ಮೊದಲಿನ ಭೂ ಸುಧಾರಣೆಗಳಿಂದ ಭೂಮಿಯನ್ನು ಕಳೆದುಕೊಂಡ. ಅಧಿಕಾರಶಾಹಿ, ಪ್ರಬಲ ವರ್ಗದೊಂದಿಗೆ ಸಂಯೋಜಿತಗೊಂಡಿತು. ಕಠಿಣವಾದ ಭೂ ಕಾಯ್ದೆಯ ಸವಲತ್ತುಗಳು ಭೂಮಿ ರಹಿತ ಆಸಕ್ತಿ ಪ್ರಬಲವಾದುದರ ಹಿಂದೆ ರಾಜ್ಯ ಸರ್ಕಾರ ಮತ್ತು ಭೂಮಿ ಕಳೆದುಕೊಂಡ ಅಧಿಕಾರಶಾಹಿ ನಡುವಣ ಅಪರೂಪದ ಸಂಬಂಧದ ಫಲವಾಗಿತ್ತು. ಭೂ ಸುಧಾರಣೆಗಳು ಗೇಣಿದಾರರಿಗೆ ಮಾತ್ರ ಪರಿಹಾರ ನೀಡಿದ್ದರಿಂದ ಅಥವಾ ಭೂ ಒಡೆತನದ ವಿತರಣೆಯ ಬದಲಿಕೆಯಿಂದ ಪರಿಣಾಮಕಾರಿ ಆಗಲಿಲ್ಲ.

ಆ ದಿಕ್ಕಿನಲ್ಲಿ ಕರ್ನಾಟಕದಲ್ಲಿ ಭೂ ಸುಧಾರಣೆಗಳು ಬಹಳ ಯಶಸ್ವಿಯಾಗಿ ಅದರಲ್ಲೂ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ) ಶೋಷಿತ ವರ್ಗಗಳ ಸದಸ್ಯರಿಗೆ ಮಿತಿಗಿಂತ ಹೆಚ್ಚಾಗಿದ್ದ ಭೂಮಿಯ ವಿತರಣೆಯ ವಿಷಯದಲ್ಲಿ ಕಾರ್ಯವೆಸಗಿದ್ದವು. ಇದು ಕಾರ್ಮಿಕರ ರೂಪದಲ್ಲಿದ್ದ ಸಾಗುವಳಿದಾರರ ಚೌಕಾಶಿ ಶಕ್ತಿಯನ್ನು ಬಲಪಡಿಸಿತ್ತು. ಇದಲ್ಲದೆ ಕೃಷಿಯೇತರ ಉದ್ಯೋಗದ ಅವಕಾಶ ಈ ಜನರನ್ನು ಸೀಮಾಂತ ಮತ್ತು ಸಣ್ಣ ಸಾಗುವಳಿದಾರರಾಗಲು ಸಹಾಯ ಮಾಡಿತು. ಈ ಕಾರ್ಯ ವಿಧಾನದಲ್ಲಿ ಆರ್ಥಿಕ ಶಕ್ತಿಯ ಸಮತೋಲನ ಸಾಪೇಕ್ಷವಾಗಿ ಬದಲಾಯಿತು. ಇದು ಗ್ರಾಮೀಣ ಗುಂಪುಗಳ ಸಾಮಾಜಿಕ ರಾಜಕೀಯ ಶಕ್ತಿಯನ್ನು ಬದಲಾಯಿಸಿತು. ಹೀಗೆ ಭೂ ಸುಧಾರಣೆಗಳು ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದ್ದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ

ಅಗಾಧವಾದ ಬದಲಾವಣೆ ತಂದಿತು.

ಈ ಸಂಬಂಧದಲ್ಲಿ (೧೯೫೫, ೧೯೬೧, ೧೯೭೪)ರ ಕರ್ನಾಟಕದ ಭೂ ಸುಧಾರಣ ಕಾಯ್ದೆಗಳು ಪರಿಶಿಷ್ಠ ಜಾತಿ ಮತ್ತು ಪಂಗಡಗಳನ್ನು ರಕ್ಷಿಸುವಲ್ಲಿ ಹಿಂದೆ ಬಿದ್ದಿದ್ದವು. ಪಟ್ಟಿ ೧.೫ರಲ್ಲಿ ೧೯೮೬ರ ಮಾರ್ಚ್ ಕೊನೆಯ ವೇಳೆಗೆ ಕರ್ನಾಟಕದಲ್ಲಿ ಪ್ರತಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ಜನರಿಗೆ ವಿತರಣೆಯಾದ ಹೆಚ್ಚುವರಿ ಭೂಮಿಯ ಪ್ರಮಾಣವನ್ನು ಸೂಚಿಸುತ್ತದೆ.

ಪಟ್ಟಿ ೧.೫

ಜಿಲ್ಲಾವರು ಹೆಚ್ಚುವರಿ ಭೂಮಿಯ ಹಂಚಿಕೆ ೧೯೮೬ರ ಮಾರ್ಚ್ ಅಂತ್ಯದ ವೇಳೆಗೆ (ಎಕರೆಗಳಲ್ಲಿ)

ಜಿಲ್ಲೆ	ಹೆಚ್ಚುವರಿ ಎಂದು ಘೋಷಣೆ	ಸ್ವಾಧೀನ ಪಡಿಸಿಕೊಂ-ಡ ಪ್ರಮಾಣ	ಪ. ಜಾತಿ ಮತ್ತು ಪ. ಪಂಗಡಕೆ ವಿತರಿಸಿದ್ದು	ಪ. ಜಾತಿ ಮತ್ತು ಪ. ಪಂಗಡಕ್ಕೆ ಹಂಚಿಕೆಯಾದ ಶೇಕಡಾವಾ-ರು ಪ್ರಮಾಣ
ಬೆಂಗಳೂರು	೮೮೩	೪೧೯	–	–
ಚಿತ್ರದುರ್ಗ	೭೮೧೧	೨೩೮೨	೧೭೦೫	೭೧.೮
ಕೋಲಾರ	೧೪೯೮	೪೪೭	೨೭೬	೬೧.೭೪
ಶಿವಮೊಗ್ಗಾ	೫೦೬೯	೧೮೭೬	೮೪೮	೪೫.೩
ತುಮಕೂರು	೩೩೭೧	೧೨೮೫	೮೪೪	೮೦.೪
ಬೆಳಗಾಂ	೨೮೮೬೪	೧೬೮೨೬	೬೧೪೦	೩೭.೭

ಬಿಜಾಪುರ	೫೨೩೯೫	೩೦೪೫೧	೧೨೪೬೫	೫೨.೩
ಧಾರವಾಡ	೨೨೭೧೮	೧೩೧೯೨	೪೬೪೭	೪೭.೦
ಉತ್ತರಕನ್ನಡ	೩೭೦	೨೩೫	೧೦೫	೬೨.೧
ಬಳ್ಳಾರಿ	೨೫೭೩೬	೧೭೧೬೪	೭೫೬೩	೫೮.೬
ಬೀದರ್	೭೪೪೧	೩೩೯೫	೧೦೭೩	೫೬.೮
ಗುಲ್ಬರ್ಗಾ	೪೬೫೦೧	೨೬೦೭೪	೧೧೭೩೫	೬೦.೩
ರಾಯಚೂರು	೮೬೪೨೦	೩೪೭೨೭	೧೩೬೬೮	೬೬.೦
ಚಿಕ್ಕಮಗಳೂರು	೯೯೬	೫೦೪	೨೯೭	೬೬.೬
ಕೊಡಗು	೪೮೨	೨	೨	೧೦೦.೦
ಹಾಸನ	೧೨೯೦	೧೦೪೫	೪೫೮	೪೪.೦
ಮಂಡ್ಯ	೮೯೭	೫೫೫	೮೦	೧೮.೮
ಮೈಸೂರು	೧೬೨೫	೮೦೯	೫೪೯	೬೮.೧
ದಕ್ಷಿಣಕನ್ನಡ	೩೨೪೮	೨೫೮೮	೪೫೩	೪೪.೭
ಒಟ್ಟು	೨೯೭೬೧೭	೧೫೧೯೭೬	೬೨೯೧೦	೫೪.೮

ಮೂಲಗಳು : ದಾಖಲೆ ಪರಿಶೀಲನಾ ವಿಭಾಗ, ಸಾಂಖ್ಯಿಕ ಹಣಕಾಸು ಮತ್ತು ಸಂಖ್ಯಾ ವಿಭಾಗ, ಕರ್ನಾಟಕ ಸರ್ಕಾರ ಸೆಕ್ರೆಟರಿಯೆಟ್, ಬೆಂಗಳೂರು. ಅಕ್ಟೋಬರ್ ೧೯೮೭, ಪುಟ ೬೦.

೧೯೯೩ರ ಜನವರಿ ವೇಳೆಗೆ ೨.೭೬ ಲಕ್ಷ ಎಕರೆ ಹೆಚ್ಚುವರಿ ಭೂಮಿ ಎಂದು ನಿರ್ಧರಿತವಾಗಿತ್ತು. ಆದರೆ ೧.೨೮ ಲಕ್ಷ ಎಕರೆಗಳಷ್ಟು ಹೆಚ್ಚುವರಿ ಭೂಮಿ ಮಾತ್ರ ವಿತರಣೆಯಾಗಿತ್ತು. ಈ ಹೆಚ್ಚುವರಿ ಭೂಮಿಯನ್ನು ೩೦,೦೦೦ ಫಲಾನುಭವಿಗಳಿಗೆ ಹಂಚಲಾಗಿತ್ತು. ಸರಾಸರಿ ಪ್ರತಿಯೊಬ್ಬರಿಗೆ ೪.೧೮ ಎಕರೆಗಳಷ್ಟು ನೀಡಲಾಗಿತ್ತು. ಇದರಲ್ಲಿ ಆಸಕ್ತಿ ಪೂರ್ಣ ವಿಷಯವೆಂದರೆ ಹೆಚ್ಚುವರಿ ಭೂಮಿಯಲ್ಲಿ ಅಧಿಕ ಭಾಗವನ್ನು ಮೀಸಲಾತಿ ಅಥವಾ ಬೇರೆ ರೀತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನೀಡಲಾಗಿದೆ. ಶೇಕಡ ೬೭.೫ ರಷ್ಟು ಸಿಂಹಪಾಲು ಭೂಮಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಹೋಗಿದೆ ಮತ್ತು ಉಳಿದ ಶೇಕಡ ೩೨.೫ ಭೂಮಿ ಇತರರಿಗೆ ಹೋಗಿದೆ. ಪಟ್ಟಿ ೧.೬ ಹೆಚ್ಚುವರಿ ಭೂಮಿಯ ವಿತರಣೆಯನ್ನು ಸೂಚಿಸುತ್ತದೆ.

ಪಟ್ಟಿ ೧.೬

೧೯೯೩ ಜನವರಿ ಅಂತ್ಯದ ವೇಳೆಗೆ ನಿರ್ಧಾರವಾದ ಹೆಚ್ಚುವರಿ ಭೂಮಿ ಮತ್ತು ವಿತರಣೆ

ಕ್ರಮ ಸಂಖ್ಯೆ	ವಿವರಣೆ	ಪ್ರಕರಣಗಳ ಸಂಖ್ಯೆ	ಭೂಮಿಯ ವಿಸ್ತಾರ (ಎಕರೆಗಳಲ್ಲಿ)
೧	ಹೆಚ್ಚುವರಿ ಎಂದು ಘೋಷಿಸಿದ್ದು	೧೦೬೭೩	೨೭೫೯೪೫
೨	ವಿತರಿಸಲಾಗಿದ್ದು ಈ ವರ್ಗಗಳಲ್ಲಿ	೩೦೬೬೭	೧೨೮೨೯
ಅ)	ಪರಿಶಿಷ್ಟ ಜಾತಿ	೧೮೩೬೧	೬೯೮೯೩
ಆ)	ಪರಿಶಿಷ್ಟ ಪಂಗಡ	೮೬೨	೨೮೫೭
ಇ)	ಇತರರು	೧೧೪೪೪	೪೧೬೫೩
ಈ)	ಮೀಸಲಾತಿಯಿಂದ ೭೭(೩) ವಿಭಾಗದ ಅಡಿಯಲ್ಲಿ	ಲಭ್ಯ ಇಲ್ಲ	೧೩೮೯೫

ಮೂಲಗಳು : ಅಬ್ದುಲ್ ಅಜೀಜ್, ಕರ್ನಾಟಕದಲ್ಲಿ ಭೂಮಿತಿ ಕಾಯ್ದೆಯ ಕೆಲವು ಪ್ರತಿಬಿಂಬಗಳು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು. ಪುಟ ೪.

(ಸೂಚನೆ) ಟಿಪ್ಪಣಿ : ಸಮಷ್ಟಿ ಮಟ್ಟದಲ್ಲಿ ಯಾವುದೇ ಮಾಹಿತಿ ಲಭ್ಯವಿರಲಿಲ್ಲ ಅಂದರೆ ರೈತರು ಕೃಷಿ ಕಾರ್ಮಿಕರು ಮತ್ತು ಸೀಮಾಂತ ರೈತರ ವೃತ್ತಿ ಗುಂಪುಗಳಿಗೆ ಅದು ಎಷ್ಟು ಉಪಯುಕ್ತವಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಹಿಡುವಳಿಗಳ ರಕ್ಷಣೆಯಲ್ಲೂ ಕರ್ನಾಟಕ ಹಿಂದೆ ಬೀಳಲಿಲ್ಲ. ಒಂದು ಪರಿಣಾಮಕಾರಿ ಕಾಯ್ದೆಯನ್ನು ಜಾರಿಗೆ ತರಲಾಯಿತು. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಭೂಮಿಯ ವರ್ಗಾವಣೆ ಅಥವಾ ಮಾರಾಟ ನಿಷೇಧಿಸಲಾಯಿತು. ಅದನ್ನು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಾಯ್ದೆ, ೧೯೭೮ (ಕೆಲವು ಭೂಮಿಯ ವರ್ಗಾವಣೆ ನಿಷೇಧ) ಎನ್ನುತ್ತಾರೆ. ೧.೭ ಪಟ್ಟಿಯಲ್ಲಿ ಈ ಕಾಯ್ದೆಯಿಂದ ಪ್ರಯೋಜನ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಂಖ್ಯೆಯನ್ನು ಸೂಚಿಸಲಾಗಿದ.

ಪಟ್ಟಿ ಸಂಖ್ಯೆ ೧.೭

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಾಯ್ದೆ ೧೯೭೮ (ಕೆಲವು ಭೂಮಿಯ ವರ್ಗಾವಣೆ ನಿಷೇಧ) ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಭೂಮಿಯ ರಕ್ಷಣೆ ಪಟ್ಟಿ

ಭೂಮಿಯ ವಿಸ್ತರಣೆ	ಪ್ರಯೋಜನ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಂಖ್ಯೆ
೬೧,೦೦೦	೧೯,೧೦೫

ಮೂಲಗಳು : ಕರ್ನಾಟಕದಲ್ಲಿ ಭೂ ಸುಧಾರಣೆಗಳ ಮೇಲಿನ ಕಮ್ಮಟದ ದಾಖಲೆಗಳು, ದಿನಾಂಕ ೧ ರಿಂದ ೩ ಸೆಪ್ಟೆಂಬರ್ ೧೯೯೩ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು. ಪುಟ–೫.

ಭೂಮಿ ಸಾಮಾಜಿಕ ಸ್ಥಾನಮಾನದ ಪ್ರತೀಕವೆಂದು ಮತ್ತು ಭಾರತದಲ್ಲಿ ಜನರ ಶಕ್ತಿಯೆಂದು ಹೇಳಲಾಗುತ್ತದೆ. ಕರ್ನಾಟಕ ಸರ್ಕಾರ, ಸರ್ಕಾರಿ ಭೂಮಿಯನ್ನು ಭೂರಹಿತರಿಗೆ ಕೊಡುವ ಮತ್ತು ಕೃಷಿ ಕಾರ್ಮಿಕರಿಗೆ ಬಡತನ ರೇಖೆಗಿಂತ ಮೇಲ್ಮಟ್ಟದಲ್ಲಿಡಲು ಕಾಯ್ದೆಗಳನ್ನು ಜಾರಿಗೆ ತಂದಿತು. ಹಾಗೆಯೇ ಕರ್ನಾಟಕ ಸರ್ಕಾರ ಭೂ ರಹಿತರ ಮತ್ತು ಕೃಷಿ ಕಾರ್ಮಿಕರ ಸರ್ಕಾರದ ಭೂಮಿಯ ಅಕ್ರಮ ಸಾಗುವಳಿಯನ್ನು ಸಕ್ರಮ ಗೊಳಿಸಲು ಮತ್ತೊಂದು ಕ್ರಮ ಕೈಗೊಂಡಿತು. ಈ ಕಾಯ್ದೆಯನ್ನು ೧೯೯೧ರಲ್ಲಿ ಜಾರಿಗೆ ತರಲಾಯಿತು. ಪಟ್ಟಿ ೧.೮, ಈ ಸಕ್ರಮದಡಿಯಲ್ಲಿ ಪ್ರಯೋಜನ ಪಡೆದ ಅಕ್ರಮ ಸಾಗುವಳಿದಾರರ ಸಂಖ್ಯೆ ಮತ್ತು ಪ್ರದೇಶದ ಪ್ರಮಾಣವನ್ನು ಸೂಚಿಸುತ್ತದೆ.

ಪಟ್ಟಿ ಸಂಖ್ಯೆ ೧.೮

ಸರ್ಕಾರಿ ಭೂಮಿಯ ಸಕ್ರಮಗೊಂಡ ಸಾಗುವಳಿದಾರರು ೧೯೯೧

ಫಲಾನುಭವಿಗಳು	ಸಕ್ರಮಗೊಂಡ ಸಾಗುವಳಿದಾರರು	ಸಕ್ರಮಗೊಂಡ ಸರ್ಕಾರೀ ಭೂಮಿಯ ಸಾಗುವಳಿ ಪ್ರದೇಶ (ಎಕರೆಗಳಲ್ಲಿ)
ಒಟ್ಟು	೭೫೦೦೦	೧೩.೨೦೦೦
ಪರಿಶಿಷ್ಟ ಜಾತಿ ಮತ್ತು ಪಂಗಡಗಳು	೨೯೫೦೦	೫೭೦೦೦

ಮೂಲ : ಕರ್ನಾಟಕದಲ್ಲಿ ಭೂ ಸುಧಾರಣೆಗಳ ಮೇಲಿನ ಕಮ್ಮಟ ೧ ರಿಂದ ೩ ಸೆಪ್ಟೆಂಬರ್ ೧೯೯೩. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು. ಪುಟ ೫.

ಇಲ್ಲಿ ನಾನು ರಾಜ್ಯ ಸರ್ಕಾರ ರೂಪಿಸಿದ, ಜಾರಿಗೆ ತಂದ ಭೂ ಸುಧಾರಣಾ ನೀತಿಗಳು ಮತ್ತು ಕಾಯ್ದೆಗಳನ್ನು ಮತ್ತು ರೈತ ಹೋರಾಟಗಳು ಮತ್ತು ಭೂಸುಧಾರಣೆಗಳ ನಿಕಟ ಸಂಬಂಧ ಹಾಗೂ ಕೃಷಿ ರಚನೆಯ ಮೇಲೆ ಭೂಸುಧಾರಣೆಗಳ ಪರಿಣಾಮ ಮತ್ತು ಕೊನೆಯಲ್ಲಿ ಬದಲಾಗುತ್ತಿರುವ ಗ್ರಾಮೀಣ ರಚನೆ ಮತ್ತು ಭೂ ಸಂಬಂಧಗಳು ಹಾಗೂ ಕಾನೂನು ರಚನಾಕಾರರ ಮೇಲೆ ಅದರ ಪರಿಣಾಮದ ಬಗ್ಗೆ ಚರ್ಚಿಸಿದ್ದೇನೆ. ದೇವರಾಜ ಅರಸುರವರ ಆಡಳಿತದಲ್ಲಿ ಪ್ರಬಲ ವರ್ಗಗಳು ಕಾನೂನು ರಚನಾ ಯಂತ್ರದ ಮೇಲೆ ತಮ್ಮ ಸಾಂಪ್ರದಾಯಿಕ ಹತೋಟಿಯನ್ನು ಕಳೆದುಕೊಂಡ ಅಂಶವನ್ನು

ಸೂಚಿಸುತ್ತದೆ. ದೇವರಾಜ ಅರಸು ಅವರೇ ಹೇಳಿದಂತೆ ನಮ್ಮ ಸಾಮಾಜಿಕ ರಾಜಕೀಯ ರಚನೆ ಬದಲಾವಣೆ ಹಂತದಲ್ಲಿದ್ದು ಆಳಿಸಿಕೊಳ್ಳುವವರು ಆಳುವವರಾಗಿ ಮೇಲೆದ್ದರು. ವಿಮರ್ಶಕರ ಅಭಿಪ್ರಾಯದಂತೆ ಹಿಂದಿನ ಭೂಸುಧಾರಣೆಗಳ ರಕ್ಷಿಸುವ ಅಂಶಗಳ ಬಗ್ಗೆ ತಿಳಿದ ಒಬ್ಬ ವಿಮರ್ಶಕ ಸುಧಾರಕರು ಈ ಅವಧಿಯಲ್ಲಿ ಬೇರೆ ವಂಶಜರಂತೆ ಕಂಡುಬರುತ್ತಾರೆ. ಈ ಅವಧಿಯಲ್ಲಿ ಎಲ್ಲ ರೀತಿಯ ಪರಿಣಾಮಕಾರಿ ಭಾಷಣ ಕಲೆ ರೂಢಿಸಿಕೊಂಡ ಕಾನೂನು ರಚನಾಕಾರರು ಭೂಮಾಲೀಕರ ರಕ್ಷಣೆಯಲ್ಲಿ ಎದ್ದು ನಿಲ್ಲುತ್ತಾರೆ ಮತ್ತು ಅದರ ಕಾಯ್ದೆಗಳು ಹಾಗೂ ಶಿಫಾರಸ್ಸುಗಳು ಸ್ವಯಂ ವ್ಯಾಖ್ಯಾನಿಸುತ್ತದೆ.

ಕ.ರಾ.ರೈ.ಸಂ.ದ ಆಶ್ರಯದಲ್ಲಿ ಭೂಸುಧಾರಣಾ ಚಳುವಳಿಗಳು :

೭೦ರ ಮಧ್ಯಭಾಗದವರೆಗೆ ಕರ್ನಾಟಕದಲ್ಲಿ ರೈತ ಚಳುವಳಿಗಳು ಒಳ್ಳೆಯ ಮಟ್ಟದಲ್ಲಿದ್ದವು, ಅವು ಭೂಸುಧಾರಣೆಗಳನ್ನು ರೂಪಿಸುವಂತೆ ಸರ್ಕಾರವನ್ನು ಒತ್ತಾಯಿಸಿದವು. ಆದರೆ ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಿಲ್ಲ. ೭೦ರ ನಂತರದಲ್ಲಿ ಭೂ ಆಸಕ್ತಿಯಿಲ್ಲದ ಗುಂಪುಗಳಿಂದ ಅಥವಾ ಸಾಂಪ್ರದಾಯಿಕವಾಗಿ ಪ್ರಬಲವಲ್ಲದ ಜಾತಿಗಳು ಮೇಲ್ಪಂಕ್ತಿಯಲ್ಲಿದ್ದ ಸರ್ಕಾರ ಹಿಂದಿನ ಭೂ ಸುಧಾರಣೆ ಕಾಯ್ದೆಗಳನ್ನು ತಿದ್ದುಪಡಿ ಮಾಡಿತು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿತು, ಆ ಸಂದರ್ಭದಲ್ಲಿ ಪ್ರಬಲ ಭೂ ವರ್ಗಗಳು ಸರ್ಕಾರವನ್ನು ನಿಯಂತ್ರಿಸಲು ಬದಲಿ ಶಕ್ತಿಗಳನ್ನು ಹುಡುಕಿದವು ಮತ್ತು ರೈತ ಚಳುವಳಿಯನ್ನು ಅವುಗಳಲ್ಲಿ ಒಂದಾಗಿ ಗುರಿತಿಸಿದವು.

ನಾಡಕರ್ಣಿಯವರು, ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಉಲ್ಲೇಖಿಸಿರುವಂತೆ, ೧೯೮೦ರ ಮಲಪ್ರಭಾ ಹೋರಾಟ, ಭೂ ಹಿಡುವಳಿದಾರರ ಭೂ ಸುಧಾರಣೆಗಳ ವಿರುದ್ಧ ಹೋರಾಟವಾಗಿತ್ತು. ಪ್ರಮುಖವಾಗಿ ನೀರಾವರಿ ಫಲವಾಗಿ ಭೂ ಮಿತಿಯನ್ನು ಕಡಿಮೆ ಮಾಡುವುದು ಮತ್ತು ಅದಕ್ಕಿಂತ ಮಿಗಿಲಾಗಿ ಸುಧಾರಿತ ಲೆವಿ ವಿರುದ್ಧವಾಗಿತ್ತು.

ಅಂತಹ ಸಂದರ್ಭದಲ್ಲಿ ಮೂಲಭೂತವಾಗಿ ಎಚ್. ಎಸ್. ರುದ್ರಪ್ಪನವರು ಕಬ್ಬು ಬೆಳೆಗಾರರ ಶೋಷಣೆ ವಿರುದ್ಧ ೧೯೭೦ರಲ್ಲಿ ಶಿವಮೊಗ್ಗಾದಲ್ಲಿ ವ್ಯವಸ್ಥಿತ ಗೊಳಿಸಿದ್ದ ಒಂದು ರೈತ ಚಳುವಳಿ ಬೇಗನೆ ರಾಜ್ಯದ ಇತರ ಭಾಗಗಳಿಗೆ ಹರಡಿತು ಮತ್ತು ೧೯೮೦ರಲ್ಲಿ ಕ.ರಾ.ರೈ.ಸಂ.ವಾಗಿ ಬೆಳೆಯಿತು.

ಕ.ರಾ.ರೈ.ಸಂ. ಅಸ್ತಿತ್ವಕ್ಕೆ ಬಂದಾಗಿನಿಂದ ಕೃಷಿ ಆಧಾರಿತ ಸಮಸ್ಯೆಗಳನ್ನು ಒಳಗೊಂಡಂತೆ ಹಲವು ಪ್ರತಿಭಟನೆಗಳನ್ನು ನಡೆಸಿತು. ಕ.ರಾ.ರೈ.ಸಂ. ರಾಜ್ಯ ಸರ್ಕಾರಕ್ಕೆ ಅಕ್ಟೋಬರ್ ೧೭ರಂದು ೧೯೮೦ರಲ್ಲಿ ೧೯ ಬೇಡಿಕೆಗಳನ್ನೊಳಗೊಂಡ ಬೇಡಿಕೆಯ ಪಟ್ಟಿಯನ್ನು ಸಲ್ಲಿಸಿತು. ಅವುಗಳಲ್ಲಿ ೨ ಮಾತ್ರ ಭೂ ಸುಧಾರಣೆಗಳ ಪರವಾಗಿದ್ದವು. ಅವು ಹೀಗೆವೆ, ಬೇಡಿಕೆ ಸಂಖ್ಯೆ ೧೧, ಸರ್ಕಾರ ಭೂ ಸುಧಾರಣೆಗಳ ಫಲವಾಗಿ ಬಂದ ರೈತರ ಭೂ ಒಡೆತನವನ್ನು ಯಾವುದೇ ಹಿಡುವಳಿ ಬೆಲೆಯನ್ನು ಪಾವತಿಸದೇ ಸರ್ಕಾರ ಘೋಷಿಸಬೇಕು. ಅಲ್ಲದೇ ಸರ್ಕಾರ ತಕ್ಷಣ ಒಂದೇ ಕಂತಿನಲ್ಲಿ ಪೂರ್ಣ ಪರಿಹಾರ ಸಂಭಾವನೆಯನ್ನು ಭೂ ಸುಧಾರಣೆಗಳ ಜಾರಿಯಿಂದ ತಮ್ಮ ಭೂಮಿಯನ್ನು ಕಳೆದುಕೊಂಡ ಭೂ ಮಾಲೀಕರಿಗೆ ನೀಡಬೇಕು. ಮತ್ತೊಂದು ಬೇಡಿಕೆ ಸಂಖ್ಯೆ ೧೩. ಭೂಮಿಯ ಮೇಲೆ ಜನರ ಒತ್ತಡವನ್ನು ಕಡಿಮೆ ಮಾಡುವ ಬೇಡಿಕೆ, ಸರ್ಕಾರ ಅದರ ಸಾಗುವಳಿ ಯೋಗ್ಯ ಭೂಮಿಯನ್ನು ಭೂರಹಿತ ಕಾರ್ಮಿಕರಿಗೆ ಹಂಚಬೇಕು ಮತ್ತು ಸಾಗುವಳಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡಬೇಕು. ಕ.ರಾ.ರೈ.ಸಂ. ಪಟ್ಟಿಯಲ್ಲಿನ ಎಲ್ಲಾ ೧೯ ಬೇಡಿಕೆಗಳು ದೊಡ್ಡ ರೈತರಿಗೆ ಅನುಕೂಲ ಮಾಡಿಕೊಟ್ಟವು. ಈ ೨ ಬೇಡಿಕೆಗಳೂ ಬೇಡಿಕೆ ೧೧ ಮತ್ತು ೧೩ ಕೂಡ ಭೂರಹಿತರ ಪರವಾಗಿ ಇಲ್ಲ ಆದರೆ ಭೂ ಮಾಲೀಕರ ಪರವಾಗಿ ಇವೆ.

ಬೇಡಿಕೆ ಸಂಖ್ಯೆ ೧೧ರಲ್ಲಿ ಕ.ರಾ.ರೈ.ಸಂ. ಸರ್ಕಾರ ತಕ್ಷಣ ಒಂದೇ ಕಂತಿನಲ್ಲಿ ತಮ್ಮ ಭೂಮಿ ಕಳೆದು ಕೊಂಡ ಭೂಮಾಲೀಕರಿಗೆ ಪರಿಹಾರವನ್ನು ಕೊಡಬೇಕು ಎಂದು ಬಯಸಿತು. ಬೇಡಿಕೆ ೧೩ರಲ್ಲಿ ಸರ್ಕಾರ ಭೂರಹಿತರಿಗೆ ಸರ್ಕಾರದ ಸಾಗುವಳಿ ಯೋಗ್ಯ ಭೂಮಿಯನ್ನು ಸಾಕಷ್ಟು ಸಾಗುವಳಿ ಸೌಲಭ್ಯಗಳೊಂದಿಗೆ ಹಂಚಬೇಕು. ಆದರೆ ಅದು ಎಲ್ಲಿ ಸರ್ಕಾರದ ಸಾಗುವಳಿ ಯೋಗ್ಯ ಭೂಮಿ ಇದೆ ಎಂದು ಸ್ಪಷ್ಟ ಪಡಿಸಲಿಲ್ಲ ಅಥವಾ ಭೂರಹಿತ ಕಾರ್ಮಿಕರನ್ನು ಹೇಗೆ ಗುರುತಿಸಬೇಕು ಮತ್ತು ಒಂದು ವೇಳೆ ಗುರುತಿಸಿದರೆ ಹೇಗೆ ಭೂಮಿಯನ್ನು ಹಂಚಬೇಕು ಎಂದು ನಿರ್ದಿಷ್ಟವಾಗಿ ಹೇಳಲಿಲ್ಲ. ಕ.ರಾ.ರೈ.ಸಂ. ಈ ಕೆಲಸಕ್ಕೆ ಯಾವುದೇ ಕಾರ್ಯ ವಿಧಾನವನ್ನು ಸಲಹೆ ಮಾಡಲಿಲ್ಲ.

ಆಗಿನ ಕರ್ನಾಟಕದ ಮುಖ್ಯ ಮಂತ್ರಿಗಳಾಗಿದ್ದ ಆರ್. ಗುಂಡೂರಾವ್ ಕ.ರಾ.ರೈ.ಸಂ. ಬೇಡಿಕೆಯ ಪಟ್ಟಿಯ ಕುರಿತು ಜಾರಿಗೊಳಿಸಲ್ಪಟ್ಟ ಬೇಡಿಕೆಗಳ ಶ್ವೇತ ಪತ್ರವನ್ನು ೧೯೮೦ರ ಅಕ್ಟೋಬರ್ ೨೯ರಂದು ನೀಡಿದರು. ೧೯ ಬೇಡಿಕೆಗಳಲ್ಲಿ ೧೨ ಬೇಡಿಕೆಗಳನ್ನು ಕೇಂದ್ರ ಸರ್ಕಾರದೊಂದಿಗೆ, ಕೇಂದ್ರ ಬ್ಯಾಂಕ್‌ನೊಂದಿಗೆ ಪರಿಶೀಲಿಸಿ ಗಮನಕ್ಕೆ ತೆಗೆದುಕೊಳ್ಳುವುದಾಗಿ ಹೇಳಿದರು. ಇವುಗಳಲ್ಲಿ ೧೨ರಲ್ಲಿ ೨ ಭೂರಹಿತರಿಗ

ಭೂಮಿ ನೀಡುವ ಕುರಿತು ಮತ್ತು ಹಿಡುವಳಿ ಬೆಲೆಗೆ ಸಂಬಂಧಿಸಿವೆ.

ಭೂ ರಹಿತರಿಗೆ ಭೂಮಿ ನೀಡುವ ಬಗ್ಗೆ ಬೇಡಿಕೆ ಸಂಖ್ಯೆ ೧೫ರಲ್ಲಿ ಶ್ವೇತ ಪತ್ರ, ಕೃಷಿ ಎಸ್ಟೇಟುಗಳನ್ನು ಸ್ಥಾಪಿಸುವ ಭರವಸೆ ನೀಡಿತು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮುಕ್ತರಾದ ಜೀತ ಕಾರ್ಮಿಕರ ಕುಟುಂಬಗಳನ್ನು ಸ್ಥಾಪಿಸಲು ಪ್ರತಿ ಕುಟುಂಬಕ್ಕೆ ೪ ಎಕರೆ ಭೂಮಿಯನ್ನು ಒಂದು ವೇಳೆ ಅವರು ಎಸ್ಟೇಟಿನಲ್ಲಿ ನೆಲೆಸಿದರೆ ಮತ್ತು ಸಾಗುವಳಿ ಮಾಡಿದರೆ ಪಡೆಯಬಹುದಾಗಿತ್ತು. ಸಾಗುವಳಿ ಜೊತೆಯಲ್ಲಿ ಪೂರಕ ಉದ್ಯೋಗಗಳನ್ನು ಅಂತಹ ಎಸ್ಟೇಟುಗಳಲ್ಲಿ ಅಭಿವೃದ್ಧಿ ಪಡಿಸಬೇಕಾಗಿತ್ತು. ಸರ್ಕಾರ ೬೦ ಎಕರೆಯ ೪೦೦ ಅಂತಹ ಎಸ್ಟೇಟುಗಳನ್ನು ೧೫ ಕುಟುಂಬಗಳಿಗೆ ಸ್ಥಾಪಿಸುವ ಯೋಜನೆ ಹೊಂದಿತ್ತು. ಬೇಡಿಕೆ ಸಂಖ್ಯೆ ೧೬ರಲ್ಲಿ ಶ್ವೇತ ಪತ್ರ ಹಿಡುವಳಿ ಬೆಲೆಯ ಪ್ರಥಮ ಕಂತನ್ನೇ ಕೊಡದಿದ್ದರೂ ರೈತರಿಗೆ ಭೂಮಿಯನ್ನು ಕೊಡಲಾಗಿದೆಯೆಂದು ಹೇಳಿತು, ಆದರೆ ಅದು ನೇರವಾಗಿ ಒಂದೇ ಕಂತಿನಲ್ಲಿ ಪೂರ್ಣ ಪರಿಹಾರವನ್ನು ಭೂ ಮಾಲೀಕರಿಗೆ ಕೊಡುವುದನ್ನು ಅಲ್ಲಗಳೆಯಿತು. ಈ ೨ ಬೇಡಿಕೆಗಳನ್ನು ಭಾಗಶಃ ಭೂ ಸಂಬಂಧೀ ಅಂಶಗಳೆಂದು ಪರಿಗಣಿಸಲಾಯಿತು.

ಕ.ರಾ.ರೈ.ಸಂ.ದ ಪಕ್ಷಪಾತ ಬೇಡಿಕೆಗಳ ಬಗ್ಗೆ ನಾಡಕರ್ಣಿಯವರು, ಕಂದಾಯ ಮಂತ್ರಿ ವಿ. ಎಲ್. ಪಾಟೀಲರು ಶಾಸನ ಸಭೆಯಲ್ಲಿ ನೀಡಿದ ಹೇಳಿಕೆಯನ್ನು ಉಲ್ಲೇಖಿಸಿ ಪ್ರಬಲ ರೈತರು ಸೀಮಾಂತ ರೈತರನ್ನು ಮತ್ತು ಭೂ ರಹಿತ ಕಾರ್ಮಿಕರನ್ನು ಸರ್ಕಾರೀ ಭೂಮಿಯನ್ನು ಅವರ ರಕ್ಷಣೆ ಮತ್ತು ಭರವಸೆಯಲ್ಲಿ ಆಕ್ರಮಿಸಲು ಬೆಂಬಲಿಸಿದರು ಮತ್ತು ಅವುಗಳನ್ನು ಪೂರ್ಣವಾಗಿ ಇಲ್ಲವೆ ಭಾಗಶಃ ತಮಗೆ ಪುನರ್ ವರ್ಗಾವಣೆ ಮಾಡಿಸಿಕೊಂಡರು. ಈ ಆಕ್ರಮಿತ ಭೂಮಿಯನ್ನೂ ಭೂ ರಹಿತ ಕಾರ್ಮಿಕರಿಗೆ ನಾಮ ಮಾತ್ರ ಬೆಲೆಗೆ ನೀಡಿದರು. ಹೀಗೆ ಅಂತಿಮವಾಗಿ ಸರ್ಕಾರೀ ಭೂಮಿ ಹೆಚ್ಚು ಬಲಶಾಲಿಗಳ ಕೈಗೆ ಸೇರಿತು. ಇದು ಪ್ರಮುಖವಾಗಿ ಚಿಕ್ಕಮಗಳೂರು ಜಿಲ್ಲೆಯಿಂದ ವರದಿಯಾಯಿತು. ನಂತರ ಸರ್ಕಾರ ಅವರನ್ನು ಆಕ್ರಮಿತ ಭೂಮಿಯಿಂದ ತೆಗೆದುಹಾಕಲು ನಿರ್ಧರಿಸಿತು.

ಇಂತಹದೇ ಸಂಗತಿಗಳು ಶಿವಮೊಗ್ಗಾ ಜಿಲ್ಲೆಯಿಂದಲೂ ವರದಿಯಾದವು. ಕ.ರಾ.ರೈ.ಸಂ.ದ ಒಬ್ಬ ಪ್ರಜ್ಞಾವಂತ ನಾಯಕರಾದ ಕಡಿದಾಳ್ ಶಾಮಣ್ಣನವರು ಭೂ ರಹಿತ ಮುಸ್ಲಿಮರು ಮತ್ತು ದಲಿತರ ಕುಟುಂಬಗಳ ಒಂದು ಗುಂಪನ್ನು ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹೆದ್ದೂರು ಅರಣ್ಯ ಇಲಾಖೆಗೆ ಸೇರಿದ ೧೦೦ ಎಕರೆಗಳಷ್ಟು ಸಾಗುವಳಿ ಭೂಮಿಯನ್ನು ಆಕ್ರಮಿಸಲು ೧೯೮೫ರಲ್ಲಿ ಮುನ್ನಡೆಸಿದರು.

ತಕ್ಷಣ ಸರ್ಕಾರ ಆಕ್ರಮಣಕಾರರನ್ನು ಬಂಧಿಸಲು ಆದೇಶ ಹೊರಡಿಸಿತು. ಸ್ಥಳೀಯ ಪೋಲಿಸ್ ಅಧಿಕಾರಿಗಳು ಆಕ್ರಮಣಕಾರರನ್ನು ಬಂಧಿಸಿದರು. ಬಂಧಿತರಲ್ಲಿ ಒಬ್ಬಳು ಎರಡು ತಿಂಗಳ ಮಗುವನ್ನು ಹೊಂದಿದ ಮುಸ್ಲಿಂ ಮಹಿಳೆ ಇದ್ದಳು. ಪೋಲೀಸ್ ಅಧಿಕಾರಿಗಳು ಅವಳನ್ನು ಮಗುವಿಗೆ ಹಾಲುಣಿಸಲು ಬಿಡುಗಡೆ ಮಾಡಲು ನಿರಾಕರಿಸಿದರು. ಈ ವಿಷಯದಲ್ಲಿ ಶಾಮಣ್ಣನವರ ಕೋರಿಕೆಯನ್ನು ಪೋಲಿಸರು ಅಲಕ್ಷಿಸಿದರು. ಅವರು ಆ ಮಗುವನ್ನು ಮ್ಯಾಜಿಸ್ಟ್ರೇಟರ ಮನೆಗೆ ಕರೆದೊಯ್ದರು ಮತ್ತು ಅವರ ಮನೆ ಮುಂದೆ ಕಾಯುತ್ತಾ ಇಡೀ ರಾತ್ರಿ ಕಳೆದರು. ರಾತ್ರಿ ಮ್ಯಾಜಿಸ್ಟ್ರೇಟರು ಏನೂ ಮಾಡಲಾಗಲಿಲ್ಲ ಆದರೆ ಬೆಳಿಗ್ಗೆ ಕಾನೂನು ಆಧಾರದ ಮೇಲೆ ಆಕೆಯನ್ನು ಬಿಡುಗಡೆ ಮಾಡಲು ಪೋಲೀಸ್ ಅಧಿಕಾರಿಗಳಿಗೆ ಆದೇಶ ನೀಡಿದರು. ಅವಳನ್ನು ತಕ್ಷಣ ಬಿಡುಗಡೆ ಮಾಡಲಾಯಿತು. ಆದರೆ ಈ ಬಾರಿ ಅವಳೇ ಇತರ ಬಂಧಿತರು ಹೊರ ಬರುವವರೆಗೆ ತಾನು ಬಿಡುಗಡೆ ಹೊಂದಲು ನಿರಾಕರಿಸಿದಳು. ನಂತರ ಎಲ್ಲರನ್ನೂ ಬಿಡುಗಡೆ ಮಾಡಲಾಯಿತು. ಇಷ್ಟೆಲ್ಲಾ ನೋವಿನ ನಂತರ ಅರಣ್ಯ ಭೂಮಿಯನ್ನು ಸ್ಥಳೀಯ ತೋಟದ ಮಾಲೀಕರು ಆಕ್ರಮಿಸಿದರು, ಆದರೆ ಈ ಬಾರಿ ಸರ್ಕಾರ ಮತ್ತು ಕ.ರಾ.ರೈ.ಸಂ.ದ ಕ್ರಾಂತಿಕಾರಿಗಳು ಸುಮ್ಮನಿದ್ದರು ಮತ್ತು ನಂತರ ಅದನ್ನು ಅಲಕ್ಷಿಸಿದರು. ಇಂತಹ ಸನ್ನಿವೇಶಗಳು ಕ.ರಾ.ರೈ.ಸಂ. ರೈತರು ಮತ್ತು ಭೂರಹಿತರ ಬಗೆಗಿನ ಪ್ರಾಮಾಣಿಕತೆಯ ಬಗ್ಗೆ ಸಂಶಯಕ್ಕೆ ದಾರಿಮಾಡಿಕೊಡುತ್ತವೆ.

ಕ.ರಾ.ರೈ.ಸಂ. "ಪಟ್ಟಾ" (ಭೂ ಒಡೆತನದ ಪತ್ರ) ವಿತರಣೆ ಕಾರ್ಯಕ್ರಮದ ಬಗ್ಗೆ ವಿಚಾರಿಸಿತು. ಈ ಕಾರ್ಯಕ್ರಮದಡಿಯಲ್ಲಿ ಸರ್ಕಾರೀ ಭೂಮಿಯನ್ನು ಆಕ್ರಮಿಸಿದವರಿಗೆ ಪಟ್ಟಾ ನೀಡಲಾಗಿತ್ತು. ಆದರೆ ಈ ಕಾರ್ಯಕ್ರಮ ಯಶಸ್ವಿಯಾಗಲಿಲ್ಲ, ಏಕೆಂದರೆ ನಂತರದಲ್ಲಿ ಸರ್ಕಾರ ಅವರಲ್ಲಿ ಹಲವರನ್ನು ತೆಗೆದು ಹಾಕಿತು. ೧೯೯೫ರ ಕರ್ನಾಟಕ ಭೂ ತಿದ್ದುಪಡಿ ಕಾಯ್ದೆ ರಾಜ್ಯ ಸರ್ಕಾರದ ಭೂ ಸುಧಾರಣಾ ತಿದ್ದುಪಡಿಗಳಲ್ಲಿ ಮತ್ತೊಂದು ಅಂಶವಾಗಿದೆ. ೧೯೯೫ರ ತಿದ್ದುಪಡಿ ಕಾಯ್ದೆ ದೇವರಾಜ ಅರಸು ಅವರ ಸರ್ಕಾರದ ನೀತಿಯ ತದ್ವಿರುದ್ಧ ನೀತಿಯಾಗಿತ್ತು ೧೯೭೪ರ ಕಾಯ್ದೆಯು ಕೆಲವು ಕ್ರಾಂತಿಕಾರಿ ಅಂಶಗಳನ್ನೊಳಗೊಂಡಿತ್ತು. ೧೯೭೪ರ ಕಾಯ್ದೆ ವಾರ್ಷಿಕ ಆದಾಯ ಕೃಷಿ ಹೊರತು ಪಡಿಸಿ ಇತರ ಮೂಲದಿಂದ ೧೨,೦೦೦ ರೂಪಾಯಿ ಇದ್ದ ವ್ಯಕ್ತಿಗಳು ಕೃಷಿ ಭೂಮಿಯನ್ನು ಹೊಂದಲು ಅನುಮತಿ ನೀಡಿರಲಿಲ. ೧೯೯೫ರ ತಿದ್ದುಪಡಿ ಕಾಯ್ದೆ ಈ ಮೊತ್ತವನ್ನು ೨ ಲಕ್ಷ ರೂಪಾಯಿಗೆ ಹೆಚ್ಚಿಸಿದೆ. ೧೯೭೪ರ ಕಾಯ್ದೆ ಭೂಮಿಯ ಗುತ್ತಿಗೆಯನ್ನು ರದ್ದು ಪಡಿಸಿತು. ೧೯೯೫ರ ಕಾಯ್ದೆ ೨೦ ವರ್ಷಗಳವರೆಗೆ ಕೃಷಿ ಭೂಮಿಯನ್ನು ಗೇಣಿಗೆ ಕೊಡುವ ಅವಕಾಶ ನೀಡಿತು. ಹೀಗೆ ೧೯೯೫ರ ಕಾಯ್ದೆ ರಾಜ್ಯ ಸರ್ಕಾರಕ್ಕೆ ಯಾವುದೇ ಪ್ರದೇಶದಲ್ಲಿ ಯಾವುದೇ ಭೂಮಿಗೆ ವಿನಾಯಿತಿ ನೀಡುವ ಅವಕಾಶಗಳನ್ನು ಪುನಃ ಜಾರಿಗೆ ತಂದಿತು. ಕೆಲವು ಸನ್ನಿವೇಶಗಳಲ್ಲಿ

ವಿನಾಯಿತಿ. ಅವುಗಳೆಂದರೆ

೧) ರಾಜ್ಯದಿಂದ ಗುರುತಿಸಲ್ಪಟ್ಟ ಶಿಕ್ಷಣ ಸಂಸ್ಥೆಗಳು ಅಥವಾ ಕೃಷಿಯೇತರ ಉದ್ದೇಶಕ್ಕೆ ಬಳಸಲು ಕೇಂದ್ರ ಸರ್ಕಾರ ಗುರುತಿಸಿದ ಭೂಮಿ ಇದು ೪ ಯೂನಿಟ್‌ಗಳಿಗಿಂತ ಹೆಚ್ಚಿರಬಾರದು (೧ ಯೂನಿಟ್ = ೨ ಎಕರೆ)

೨) ಸರ್ಕಾರ ವಿಜ್ಞಾಪನೆ ಮೂಲಕ ಗುರುತಿಸಲ್ಪಟ್ಟ ಸಂಸ್ಥೆ ಅಥವಾ ನೊಂದಾಯಿತ ಸಂಸ್ಥೆಗಳಿಂದ ಕೃಷಿಯೇತರ ಉದ್ದೇಶಕ್ಕೂ ಸ್ಥಾಪಿಸಲ್ಪಟ್ಟ ಪೂಜಾ ಸ್ಥಳಗಳನ್ನು ವಿಶ್ಲೇಷಿಸಬೇಕು, ಇದರ ವಿಸ್ತಾರ ಒಂದು ಯೂನಿಟ್‌ಗಿಂತ ಜಾಸ್ತಿ ಇರಬಾರರು.

೩) ರಾಜ್ಯ ಸರ್ಕಾರ ಒಪ್ಪಿಕೊಂಡ ವಸತಿ ಕಾರ್ಯಕ್ರಮ ಅದರ ವಿಸ್ತಾರ ೧೦ ಯೂನಿಟ್‌ಗಿಂತ ಹೆಚ್ಚಿರಬಾರದು.

೪) ತೋಟಗಾರಿಕೆ, ಹೂವು ಬೆಳೆಯುವುದನ್ನೂ ಒಳಗೊಂಡಂತೆ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು ಅವುಗಳ ವಿಸ್ತಾರ ೨೦ ಯೂನಿಟ್‌ಗೆ ಮೀರಬಾರದು.

ಕಾಯ್ದೆಯಲ್ಲಿ ತುಂಬಾ ಕಟುವಾದ ಸಮಸ್ಯೆಯೆಂದರೆ, ಅದು ರಾಜ್ಯ ಸರ್ಕಾರವನ್ನು "ಸಾರ್ವಜನಿಕ ಹಿತದಲ್ಲಿ" ತೋರಿಕೆಯ ಸಶಕ್ತೀಕರಣ ಮಾಡಿತು ಮತ್ತು "ಕಾರಣಗಳನ್ನು ಬರವಣಿಗೆ ರೂಪದಲ್ಲಿ ದಾಖಲು ಮಾಡುವ" "ಎಷ್ಟಾದರೂ ಭೂಮಿಯನ್ನು ಯಾವುದೇ ನಿರ್ದಿಷ್ಟ ಉದ್ದೇಶಕ್ಕೆ" ಭೂಮಿತಿ ಕಾಯ್ದೆಯ ವ್ಯಾಪ್ತಿಯಲ್ಲಿ ಅಧಿಕಾರ ನೀಡಿತು. ಒಮ್ಮೆ ಒಂದು ಕಾನೂನು ಯಾವುದಾದರೂ ಉದ್ದೇಶಕ್ಕೆ ಎಷ್ಟಾದರೂ ಭೂಮಿಯನ್ನು ಭೂ ಮಿತಿ ಕಾಯ್ದೆಯಂತೆ ರಿಯಾಯ್ತಿಗೆ ಒಳಪಡಿಸಿದರೆ ಇದು ಸ್ಪಷ್ಟವಾಗಿ ಪ್ರವಾಹದ ಬಾಗಿಲನ್ನು ತೆರೆದಂತೆಯೆ. ತಿದ್ದುಪಡಿ ಕೃಷಿ ಕ್ಷೇತ್ರವನ್ನು ಖಾಸಗಿ ಹೂಟೆಗೆ ತೆರವು ಮಾಡಿದೆ ಮತ್ತು ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ಅಥವಾ ಕಂಪೆನಿ ಹೊಂದಬಹುದಾದ ಭೂಮಿಯ ಮೇಲಿನ ಎಲ್ಲಾ ನಿಯಂತ್ರಣಗಳನ್ನು ತೆಗೆದುಹಾಕಿದೆ ಮತ್ತು ಸಾಗುವಳಿದಾರರಲ್ಲದವರು ಸಾಗುವಳಿ ಭೂಮಿಯನ್ನು ಹೊಂದಲು ಅನುಮತಿ ನೀಡಿದೆ. ಬುದ್ಧಿವಂತ ವರ್ಗ ಮತ್ತು ಇತರ ಸಂಬಂಧೀ ಗುಂಪುಗಳು ತಿದ್ದುಪಡಿಯನ್ನು ಪ್ರಬಲ ಜಾತಿಯ ಗುಂಪುಗಳಿಗೆ ಖಾಸಗಿ ಕಂಟ್ರಾಕ್ಟರು, ಬಹು ರಾಷ್ಟ್ರೀಯ ಕಂಪನಿಗೆ ನೀಡಿದ ಪ್ರಮುಖ ರಿಯಾಯ್ತಿ ಎಂದು ಮತ್ತು ಶೈಕ್ಷಣಿಕ ಪ್ರಭಾವ ಸಾಮಾಜಿಕ ಆರ್ಥಿಕ ನಿರ್ಲಕ್ಷಿಸುವಿಕೆಯನ್ನು ಹೆಚ್ಚಿಸಿದೆಯಂದು ಮತ್ತು ಸಾಮಾಜಿಕ. ಅರ್ಥಿಕವಾಗಿ ಹಿಂದುಳಿದ ವರ್ಗದ ಜನರ ಅಸಮಾನತೆಯೆಂದು ಪರಿಗಣಿಸುತ್ತದೆ. ಕ.ರಾ.ರೈ.ಸಂ. ತಟಸ್ಥವಾಗಿತ್ತು ಅಥವಾ ಯಾವುದೇ ಕಠಿಣ ಕ್ರಮಗಳನ್ನು ಈ ಭೂ ಸುಧಾರಣೆ ತಿದ್ದುಪಡಿಗಳನ್ನು ನಿವಾರಿಸಲು ಶಾಸಕಾಂಗ ಯಾವುದೇ ಚರ್ಚೆ ಅಥವಾ ಪರಿಶೀಲನೆಯಿಲ್ಲದೆ ಅಭಿವೃದ್ಧಿ ಹೆಸರಿನಲ್ಲಿ ವಿಧಾನ ಸಭೆಯಲಿ

ಮಂಡಿಸಿದಾಗ ಕೈಗೊಳ್ಳಲಿಲ್ಲ.

ಇದ್ದೆಲ್ಲದರ ನಡುವೆ, ಕ.ರಾ.ರೈ.ಸಂ. ಭೂಮಿ ವಿಷಯವನ್ನು ಅದರ ಬೇಡಿಕೆಗಳಲ್ಲಿ ಒಂದು ವಿಷಯವಾಗಿ ಸೇರಿಸಿತ್ತು. ಆದರೆ ಎಲ್ಲಾ ಕ.ರಾ.ರೈ.ಸಂ. ಪ್ರಕಟಿಸಿದ ಕರ ಪತ್ರಗಳಲ್ಲಿ ಒಂದು ಪ್ರಮುಖ ಬೇಡಿಕೆಯಾಗಿ ಸೇರಿಸಲಿಲ್ಲ ಮತ್ತು ಈ ನಿರ್ದಿಷ್ಟ ಬೇಡಿಕೆಯನ್ನು ಈಡೇರಿಸಲು ಯಾವುದೇ ವಿಧಾನಗಳನ್ನು ರೂಪಿಸಲಿಲ್ಲ. ಆದ್ದರಿಂದ ಈ ಬೇಡಿಕೆ ಕ.ರಾ.ರೈ.ಸಂ.ದ ಬೇಡಿಕೆ ಪಟ್ಟಿಯಲ್ಲಿ ಒಂದು ಸಂಪ್ರದಾಯದಂತೆ ಮುಂದುವರಿಯುತ್ತಿದೆ.

ಅಧ್ಯಾಯ. ೩.

ಬೆಲೆ ಮತ್ತು ಮಾರುಕಟ್ಟೆ ಅಂಶಗಳು : ರಾಜ್ಯ ಮತ್ತು ಕ.ರಾ.ರೈ.ಸಂ.ದ ಸ್ವಾಯತ್ತತೆ

೧೯೭೦ರ ಮತ್ತು ೧೯೮೦ರ ಮಧ್ಯಭಾಗದ ದಶಕಗಳು ಕೃಷಿ ಬೆಲೆಗಳಲ್ಲಿ ಪ್ರಚಾರ ಯೋಗ್ಯ ಗಮನಾರ್ಹ ಏರಿಕೆಯನ್ನು ಕಂಡವು. ಇವು ಪ್ರಮುಖ ವಾರ್ತೆಗಳ ಸಾಲುಗಳಲ್ಲಿ ಕಾಣಿಸಿ ಕೊಂಡವು ಏಕೆಂದರೆ ಇದಕ್ಕೆ ಕಾರಣ ರೈತರ ಚಳುವಳಿಗಳು ಅಥವಾ ಅರ್ಥಶಾಸ್ತ್ರಜ್ಞರು ನೀಡಿದ ಆಹಾರ ವಸ್ತುಗಳ ಬೆಲೆ ಏರಿಕೆಯಿಂದ ಕಂಡು ಬರಬಹುದಾದ ಚಕ್ರೀಯ ಹಣದುಬ್ಬರದ ಮುನ್ನೆಚ್ಚರಿಕೆ (ಭವಿಷ್ಯ) ಅಥವಾ ಅಧಿಕಾರದಲ್ಲಿದ್ದ ಪಕ್ಷಗಳು ನೀಡಿದ ಆಶ್ವಾಸನೆಗಳು.

೧೯೬೦ರ ದಶಕದ ಮಧ್ಯಭಾಗದಲ್ಲಿ ಕಂಡುಬಂದ ಹಸಿರು ಕ್ರಾಂತಿಯ ಆರಂಭ ನೀತಿ ರಚನೆಕಾರರನ್ನು ನಗರಗಳ ಅನುಭೋಗಿಗಳು ಮತ್ತು ಕೈಗಾರಿಕೋದ್ಯಮಿಗಳ ಹಿತದೃಷ್ಟಿಯಿಂದ ಬೆಲೆಗಳನ್ನು ಕಡಿಮೆ ಮಟ್ಟದಲ್ಲಿ ಕಾಯ್ದುಕೊಳ್ಳುವಂತೆ ಮಾಡಿದವು. ಆದರೆ ೭೦ರ ದಶಕದಲ್ಲಿ ಹಸಿರು ಕ್ರಾಂತಿಯಿಂದ ಗೋಧಿ ಉತ್ಪಾದನೆಯ ಹೆಚ್ಚಳ ಮತ್ತು ನಂತರ ಅಕ್ಕಿಯ ಹೆಚ್ಚಳ ರೈತರು ಬೆಲೆಗಳಿಗೆ ಸ್ಪಂದಿಸುವುದಷ್ಟೇ ಅಲ್ಲದೇ ಪ್ರಮುಖವಾಗಿ ಆಶ್ಚರ್ಯಕರ ವೇಗದಲ್ಲಿ ಹೊಸ ತಂತ್ರಜ್ಞಾನವನ್ನು ತಮ್ಮದಾಗಿಸಿಕೊಳ್ಳುವ ದಿಶೆಯಲ್ಲಿ ಆಲೋಚಿಸುವಂತೆ ಮಾಡಿತು. ಹಸಿರು ಕ್ರಾಂತಿಯ ನಂತರದ ಅವಧಿಯಲ್ಲಿ ರೈತರ ಇಂತಹ ಉದ್ದೇಶದ ಪ್ರಮುಖ ಪರಿಣಾಮ ಎಂದರೆ ಇದು ಬೆಳವಣಿಗೆಗೆ ಪೂರಕವಾದ ಕೃಷಿ ಬೆಲೆಯ ಸಾಂಸ್ಥೀಕರಣಕ್ಕೆ ಬೆಂಬಲ ಬೆಲೆ ಮತ್ತು ಸಂಗ್ರಹ ಬೆಲೆ ಕಾಲಕಾಲಕ್ಕೆ ಶಿಫಾರಸು ಮಾಡಲು ಕೃಷಿ ಬೆಲೆ ಆಯೋಗದ ರೂಪದಲ್ಲಿ ಬರಲು ದಾರಿ ಮಾಡಿಕೊಟ್ಟಿತು.

೧೯೭೦ರ ದಶಕದಲ್ಲಿ ಕೃಷಿ ಬೆಳವಣಿಗೆ ಅಧಿಕ ಹೂಡಿಕೆ, ಆಧುನಿಕ ವಿಧಾನಗಳ ಬಳಕೆಯ ಆಧಾರದ ಮೇಲೆ ಬಂಡವಾಳಶಾಹಿ ಕೃಷಿಯತ್ತ ಚಲಿಸಿತು ರೈತ ಸಂಘಗಳು ತಮ್ಮ ಹಿತಾಸಕ್ತಿಗಳನ್ನು ಬೆಂಬಲಿಸಲು ಶಾಸಕರ ಮೇಲೆ ದುಸ್ಸಾಧ್ಯವಾದ ಪ್ರಭಾವ ಬೀರಲು ಮುಂದೆ ಬರುವಂತೆ ಮಾಡಿತು (ಬಂಡವಾಳಶಾಹಿ ರೈತರು)

ಅವರು ಲಾಭದಾಯಕ ಬೆಲೆಗಳಿಗಾಗಿ ಮತ್ತು ಬೇಡಿಕೆಯ ಪಟ್ಟಿಗಾಗಿ ಒಂದು ಮೇಳವನ್ನು ಕರೆದಿದ್ದರು. ಈ ರೀತಿಯ ತಂತ್ರಗಳಿಂದ ಯಶಸ್ವಿಯಾಗಬಹುದೆಂದು ಭಾವಿಸಿದ್ದರು. ಇದು ಸರ್ಕಾರದ ಬೆಲೆ ಮತ್ತು ಸಂಬಂಧಿತ ಕೃಷಿ ಬೆಲೆಗಳ ಮೇಲೆ ಪರಿಣಾಮಕಾರಿ ಪ್ರಭಾವ ಬೀರುವಂತೆ ಪ್ರೋತ್ಸಾಹ ನೀಡಿತು.

೧೯೭೦ರ ಕೊನೆಯ ಅವಧಿಯಲ್ಲಿ ಭಾರತಾದ್ಯಂತ ರೈತ ಚಳುವಳಿಗಳು ಬೇರೆ ಬೇರೆ ಹೆಸರಿನಲ್ಲಿ ನಿರ್ದಿಷ್ಟ ಸಂದರ್ಭಗಳಲ್ಲಿ ಕಾರ್ಯವೆಸಗಿದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ : ಕ.ರಾ.ರೈ.ಸಂ. (ದಿವಂಗತ ಹೆಚ್. ಎಸ್. ರುದ್ರಪ್ಪ, ಹಿಂದಿನ ಕೃಷಿ ಮಂತ್ರಿಗಳು, ಕರ್ನಾಟಕ ಸರ್ಕಾರ, ಸಂಸ್ಥಾಪಕ ಅಧ್ಯಕ್ಷರಾಗಿದ್ದರು) ಪ್ರೊ. ಎಂ. ಡಿ. ನಂಜುಂಡಸ್ವಾಮಿ ಅದನ್ನು ಮುನ್ನೆಡೆಸಿದರು. ಮಹಾರಾಷ್ಟ್ರದಲ್ಲಿ ಶರದ್ ಜೋಶಿ (ವಿಶ್ವಸಂಸ್ಥೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು) ನೇತೃತ್ವದಲ್ಲಿ ಮಹಾರಾಷ್ಟ್ರ ಶೇತ್ಕಾರಿ ಸಂಘಟನೆ ಭಾರತೀಯ ಕಿಸಾನ್ ಸಂಘ ಉತ್ತರ ಪ್ರದೇಶದಲ್ಲಿ ಎಂ. ಎಸ್. ಟಿಕಾಯತ್ ನೇತೃತ್ವದಲ್ಲಿ ಮತ್ತು ಅಜಮೀರ್ ಸಿಂಗ್, ಲಾಖೋವಾಲ, ಬಲಬೀರ್ ಸಿಂಗ್ ರಾಜ್‌ವಾಲ ಮತ್ತು ಭೂಪಿಂದರ್ ಸಿಂಗ್ ಮಾನ್ ಪಂಜಾಬಿನಲ್ಲಿ ಭಾರತೀಯ ಕಿಸಾನ್ ಸಂಘ ಗುಜರಾತ್‌ನಲ್ಲಿ, ತಮಿಳುನಾಡಿನ ತಮಿಳ್ ವ್ಯವಸಾಯಿಗಳ್ ಸಂಘಂ ಸಂಸ್ಥಾಪಕ ಅಧ್ಯಕ್ಷರು ದಿವಂಗತ ನಾರಾಯಣ ಸ್ವಾಮಿ ನಾಯ್ಡು, ಜಗನ್ನಾಥನ್ ನೇತೃತ್ವದಲ್ಲಿ ಕಾರ್ಯವೆಸಗುತ್ತಿದೆ.

ಈ ಎಲ್ಲಾ ರೈತ ಸಂಘಗಳು ನಿರ್ದಿಷ್ಟವಾಗಿ ಕೃಷಿ ಸರಕುಗಳಿಗೆ ಲಾಭದಾಯಕ / ವೈಜ್ಞಾನಿಕ / ಸಂಗ್ರಹ / ಬೆಂಬಲ ಬೆಲೆಗಳಿಗೆ ಬೇಡಿಕೆ ಸಲ್ಲಿಸುವ ದೃಷ್ಟಿಯಿಂದ ಮತ್ತು ಇತರ ಬೇಡಿಕೆಗಳನ್ನು (ಬ್ಯಾಂಕುಸಾಲ ಮನ್ನಾ, ಕಂದಾಯ ರದ್ಧತಿ, ಉಚಿತ ವಿದ್ಯುಚ್ಛಕ್ತಿ, ಜೈವಿಕ ಪರಿಸರ, ಮಹಿಳೆಯರ ಸಮಾನತೆ) ಸಾಮಾನ್ಯವಾಗಿ ಮುಂದಿರಿಸಿಕೊಂಡು ಅಸ್ತಿತ್ವಕ್ಕೆ ಬಂದಿದ್ದವು.

ಜಿ. ಎಸ್. ಭಲ್ಲಾ, ಕೃಷಿ ಬೆಲೆಗಳು ರೈತರು ತಮ್ಮ ಶ್ರಮ, ಬಂಡವಾಳ ಮತ್ತು ಭೂ ಸಂಪನ್ಮೂಲಗಳಿಗೆ ಸ್ವ ಒಡೆತನದ ಅಥವಾ ಬಾಡಿಗೆಗೆ ಪಡೆದ ಸಾಗುವಳಿ ವೆಚ್ಚವನ್ನು ಪಾವತಿಸಿದ ನಂತರ ನ್ಯಾಯಯುತ ಪ್ರತಿಫಲ ನೀಡುವ ರೀತಿಯಲ್ಲಿ ನಿಗಧಿಯಾಗಬೇಕು ಎಂದು ಪ್ರತಿಪಾದಿಸುತ್ತಾರೆ. ನಿರ್ಧಾರವಾದ ಬೆಲೆಗಳು ಉತ್ಪಾದನಾಂಗಗಳ ಬೆಲೆಗಳಲ್ಲಿ ಆಗುವ ಹೆಚ್ಚಳ ಮತ್ತು ಉತ್ಪಾದನಾ ಕ್ರಿಯೆಯಲ್ಲಿ ಕಂಡು ಬರುವ ಗಂಡಾಂತರಗಳಿಗೆ ಪರಿಹಾರ ಕೊಡುವಂತೆ ಇರಬೇಕು. ಇಲ್ಲವಾದರೆ ಆಹಾರ ವಸ್ತುಗಳ ನಿಗದಿತ ಮತ್ತು ಸಮಂಜಸ ಬೆಳವಣಿಗೆ ದರ ಸಾಧಿಸಲು ಸಾಧ್ಯವಾಗುವುದಿಲ್ಲ ಮತ್ತು ಸಮರ್ಪಕ ಬೆಲೆ ಮತ್ತು ಬೆಲೆಯೇತರ ಪ್ರೇರಕಗಳನ್ನು

ನೀಡದೆ ಒಟ್ಟು ಕೃಷಿ ಉತ್ಪನ್ನದಲ್ಲಿ ನಿಗಧಿತ ಬೆಳವಣಿಗೆ ದರ ಸಾಧಿಸಲು ಸಾಧ್ಯವಾಗುವುದಿಲ್ಲ. ರಾಷ್ಟ್ರದ ದೃಷ್ಟಿಯಿಂದಲೂ ಸಾಗುವಳಿದಾರರಿಗೆ ಬೆಂಬಲ ಬೆಲೆ ನೀಡುವುದು ಅವಶ್ಯಕವಾಗಿತ್ತು. ಒಟ್ಟು ಶ್ರಮ ಬಲದಲ್ಲಿ ೨/೩ ಭಾಗ ಕೃಷಿಯಲ್ಲಿ ತೊಡಗಿತ್ತು ಮತ್ತು ಸುಮಾರು ಒಟ್ಟು ವರಮಾನಕ್ಕೆ ಶೇಕಡ ೪೦ ಭಾಗ ಕೊಡುಗೆ ನೀಡುವ ಮೂಲಕ ಭಾರತೀಯ ಅರ್ಥ ವ್ಯವಸ್ಥೆಯಲ್ಲಿ ಅದನ್ನು ದೊಡ್ಡ ವಲಯವಾಗಿ ಮಾಡಿತ್ತು. ಆದ್ದರಿಂದ, ರೈತರು ತಮ್ಮ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಪಡೆಯದಿದ್ದರೆ ಅದು ಭಾರತೀಯ ಅರ್ಥ ವ್ಯವಸ್ಥೆಯ ಮೇಲೆ ಒಟ್ಟಾರೆಯಾಗಿ ದುಷ್ಪರಿಣಾಮ ಬೀರುತ್ತದೆ. ಅದೇ ವೇಳೆಗೆ, ಒಂದು ವೇಳೆ ಕೃಷಿ ಸರಕು ಬೆಲೆಗಳು ಅತಿಯಾಗಿ ಹೆಚ್ಚಿದರೆ, ಮುಖ್ಯ ಪ್ರಯೋಜನಕಾರರು ಒಟ್ಟು ಸಾಗುವಳಿದಾರರಲ್ಲಿ ಸಣ್ಣ ಭಾಗವಾದ ಹೆಚ್ಚುವರಿ ರೈತರಾಗುತ್ತಾರೆ ಎಂದು ಎಚ್ಚರಿಕೆ ನೀಡಿದರು. ಹಳ್ಳಿಗಳಲ್ಲಿ ಭೂ ರಹಿತ ಕಾರ್ಮಿಕರು, ಕೊರತೆ, ಸೀಮಾಂತ ಮತ್ತು ಸಣ್ಣ ರೈತರು ಮತ್ತು ದುಡಿಯುವ ವರ್ಗ ಮತ್ತು ನಗರ ಜನ ಸಂಖ್ಯೆಯು ಇತರ ವರ್ಗಗಳು ಮುಖ್ಯವಾಗಿ ನಷ್ಟಕ್ಕೆ ಒಳಗಾಗುತ್ತಾರೆ. ಆದ್ದರಿಂದ ಈ ಸಮಯದ ಅವಶ್ಯಕತೆ ಎಂದರೆ ಕೃಷಿ ಸರಕುಗಳು ಅತೀ ಕಡಿಮೆ ಮಟ್ಟದಲ್ಲಿ ಅಥವಾ ಅತೀ ಹೆಚ್ಚು ಮಟ್ಟದಲ್ಲಿ ನಿಗಧಿಯಾಗದೆ ಬೆಂಬಲ ಮಟ್ಟದಲ್ಲಿ ನಿಗದಿಯಾಗುವಂತೆ ಮಾಡಲು ಒಂದು ವಿಧಾನ ಕಂಡು ಹಿಡಿಯುವುದೇ ಆಗಿದೆ.

ಈ ಸಂದರ್ಭದಲ್ಲಿ ಇಲ್ಲಿ ಸಂಕ್ಷಿಪ್ತವಾಗಿ ಪರಿಶೀಲಿಸಿರುವುದೇನೆಂದರೆ ಕೃಷಿ ಸರಕುಗಳಿಗೆ ಬೆಂಬಲ ಬೆಲೆ ನೀಡುವ ವಿಷಯ ಸರ್ಕಾರ ಮತ್ತು ರೈತ ಸಂಘಗಳ ನಡುವೆ ಭಿನ್ನಾಭಿಪ್ರಾಯದ ವಿಷಯವಾಗಿತ್ತು. ಎಲ್ಲಾ ರೈತ ಸಂಘಗಳ ರಚನೆ ಮತ್ತು ಮುಂದುವರಿಕೆ ಈ ಕಾರಣಕ್ಕಾಗಿಯೇ ಆಗಿತ್ತು. ಶೇತ್ಕಾರಿ ಸಂಘಟನೆ ನೆಹರೂರವರ ಕೈಗಾರೀಕರಣವನ್ನು ಏಕಪಕ್ಷೀಯ ಅಭಿವೃದ್ಧಿ ಕ್ರಿಯೆ ಎಂದು ವಿರೋಧಿಸಿತು ಮತ್ತು ಅದನ್ನು ಕೃಷಿಯ ಹಿಂದುಳಿವಿಕೆಯನ್ನು ಮುಂದುವರೆಸುವ ಮತ್ತು ರಾಜ್ಯದ/ವರ್ಗದ ಮುಂದಾಳ್ತನ ಎಂದು ಪರಿಗಣಿಸಿತು. ಮಹಾರಾಷ್ಟ್ರ ಚಳುವಳಿ ಹೊರಗಿನ ಮಾರುಕಟ್ಟೆ ಅವಲಂಬನೆಯನ್ನು ವಿರೋಧಿಸಿತು, ತನ್ಮೂಲಕ ಜೈವಿಕ ಗೊಬ್ಬರಗಳ "ನಿಯಮಿತ ಸಂಸ್ಥೆ"ಗಳ ಮೂಲಕ ಗೃಹ ಮತ್ತು ಗ್ರಾಮೀಣ ಸಂಸ್ಕರಣ ಘಟಕಗಳನ್ನು ಬೆಂಬಲಿಸಿತು.

ಮಹಾರಾಷ್ಟ್ರ ರೈತ ಚಳುವಳಿಯು ಪ್ರಸ್ತುತ ರಾಜಕೀಯ ವ್ಯವಸ್ಥೆಯನ್ನು ರೈತರಿಗೆ ಸ್ವಾತಂತ್ರ್ಯ ನಿರಾಕರಿಸಿರುವುದನ್ನು ಟೀಕಿಸಿತು. ಅದು ನಾಲ್ಕು ಹಂತಗಳಲ್ಲಿ ಸ್ವಾತಂತ್ರ್ಯದ ನಿರಾಕರಣೆಯನ್ನು ವಿರೋಧಿಸಿದೆ. ಅವುಗಳೆಂದರೆ,

೧) ರಾಜಕೀಯ ಮತ್ತು ಆರ್ಥಿಕ ಬದಲಿ ಅವಕಾಶಗಳನ್ನು ಆಯ್ಕೆ ಮಾಡುವ ಹಂತದಲ್ಲಿ

೨) ಬೆಲೆ ನಿರ್ಧಾರದಲ್ಲಿ
೩) ಉತ್ಪನ್ನದ ಮಾರಾಟದಲ್ಲಿ
೪) ಕಾರ್ಯ ವಿಧಾನದ ಆಯ್ಕೆಯಲ್ಲಿ

ಶೇತ್ಕಾರಿ ಸಂಘಟನೆ ಹೇಳುವಂತೆ ಈ ನ್ಯಾಯಯುತ ಸ್ವಾತಂತ್ರ್ಯಗಳನ್ನು ನೀಡದ ಹೊರತು ಅದರಲ್ಲೂ, ಮಾರುಕಟ್ಟೆ ನಿರ್ಧರಿಸುವ ಸ್ವಾತಂತ್ರ್ಯ ನೀಡದ ಹೊರತು ಸ್ವರಾಜ್ಯವನು ಪಡೆಯಲು ಸಾಧ್ಯವಿಲ್ಲ. ಇದು ಭಾರತೀಯ ರಾಜ್ಯವನ್ನು ಸರ್ಕಾರದಿಂದ ಭಿನ್ನವಾಗಿಸಿತು ಮತ್ತು ಶ್ರೀಮಂತ ರೈತರಿಗೆ ಆಡಳಿತ ವರ್ಗದ ಸ್ಥಾನ ಕೊಡುವುದನ್ನು ಅಲ್ಲಗೆಳೆಯಿತು. ರಾಜ್ಯದ ರೈತ ವಿರೋಧಿ, ಕೃಷಿ ವಿರೋಧಿ ನೀತಿಗಳಿಗಾಗಿ ರಾಜ್ಯದ ವಿರುದ್ಧ ತನ್ನ ಟೀಕೆಗಳನ್ನು ಮಾಡಿದ್ದೇ ಅಲ್ಲದೇ, ಚಳುವಳಿ ರಾಜ್ಯವನ್ನು ನಿರಾಕರಿಸಿತಲ್ಲದೆ, ಅದು ಕಡಿಮೆ ಪ್ರಮಾಣದ ಅಥವಾ ಮುಕ್ತ ರಾಜ್ಯಕ್ಕಾಗಿ ವಾದಿಸಿತು. ಆದರೆ ಶೇತ್ಕಾರೀ ಸಂಘಟನೆ ಅದರ ಆರಂಭದಿಂದ ಒಂದೇ ಅಂಶದ ಸೂತ್ರಕ್ಕೆ ಬದ್ಧವಾಗಿತ್ತು ಅದೇನೆಂದರೆ ಕೃಷಿ ಸರಕುಗಳಿಗೆ ನ್ಯಾಯಯುತ ಬೆಲೆ (ಪ್ರಾರಂಭದಲ್ಲಿ ಕೇವಲ ನೀರುಳ್ಳಿಗಾಗಿ ನಂತರ ಕಬ್ಬು ಮತ್ತು ಇತರ ಕೃಷಿ ಸರಕುಗಳಿಗೆ ವಿಸ್ತರಿಸಲಾಯಿತು).

ಗೇಲ್ ಓಂವೆಟ್ ಹೇಳುವಂತೆ, ರೈತರ ಚಳುವಳಿಗಳು ಭಾರತದಲ್ಲಿ ಪ್ರಾದೇಶೀಕ ಭಾಷಾ ಆಧಾರದ ಮೇಲೆ ಪ್ರಾರಂಭಿಸಲ್ಪಟ್ಟಿದ್ದವು. ಆದರೆ ಚಳುವಳಿಯ ಉದ್ದೇಶ ಕೇಂದ್ರ ಸರ್ಕಾರದ ವಿರುದ್ಧವಾಗಿತ್ತು. ಭಾರತೀಯ ಸಂವಿಧಾನದಲ್ಲಿ ಕೃಷಿ ರಾಜ್ಯದ ವಿಷಯವಾಗಿದ್ದರೂ ವಾಣಿಜ್ಯ ಬೆಳೆಗಳ ಬೆಲೆಗಳು ಮತ್ತು ಕೃಷಿ ನೀತಿಗಳನ್ನು ಕೇಂದ್ರ ಸರ್ಕಾರ ನಿರ್ಧರಿಸುತ್ತಿತ್ತು.

ಹಸಿರು ಕ್ರಾಂತಿಯ ನಂತರ ವಾಣಿಜ್ಯ ಬೆಳೆಗಳ ಉತ್ಪಾದನೆ ಅಧಿಕ ಪ್ರಮಾಣದಲ್ಲಿ ಹೆಚ್ಚಿತು, ಸರ್ಕಾರ ಪ್ರಾಸಂಗಿಕ ಕಂದಾಯವನ್ನು ಶಾಶ್ವತವಾಗಿಸಿತು. ಇದರೊಂದಿಗೆ ಪ್ರಾದೇಶಿಕ ನಿಯಂತ್ರಣಗಳು ಮತ್ತು ರಫ್ತು ಸರಕುಗಳ ಮೇಲೆ ಆಯ್ಕೆ ಆಧಾರದ ಮೇಲೆ ನಿರ್ಬಂಧವನ್ನು ಬೆಲೆ ನಿಯಂತ್ರಣಕ್ಕಾಗಿ ಬಳಸಿತು. ಇದರೊಂದಿಗೆ ಬೆಲೆ ಮತ್ತು ಉತ್ಪಾದನೆ ಕಾಯ್ದುಕೊಳ್ಳುವಲ್ಲಿ ಕೇಂದ್ರ ಸರ್ಕಾರದ ಪ್ರತ್ಯಕ್ಷ ಪಾತ್ರವನ್ನು, ಅದರಲ್ಲೂ ಅನುಮತಿ ರಾಜ್ ಕೃಷಿ ವರ್ಗದಿಂದ ಉತ್ಪನ್ನದ ಕ್ರಿಯೆಗೆ ಸಂಬಂಧಿಸಿದ ಸ್ವಾತಂತ್ರ್ಯಗಳನ್ನು ವಾಪಸ್ಸು ಪಡೆಯಿತು ಮತ್ತು ಅಧಿಕಾರಶಾಹಿ ಮತ್ತು ರಾಜ್ಯದ ಮೇಲೆ ಅವಲಂಬಿಸಿರುವ ಕೈಗಾರಿಕೆಗಳೊಂದಿಗೆ ಅವರ ಒಪ್ಪಂದವನ್ನು ಬೆಂಬಲಿಸಿತು. ತಮ್ಮ ಪ್ರಾಥಮಿಕ ಸಂಸ್ಕರಣವನ್ನು ಸರ್ಕಾರೀ ಸಂಸ್ಥೆಗಳ ವಿಶೇಷ ಅನುಮತಿಯಿಲ್ಲದೆ ಕೈಗೊಳ್ಳುವುದನ್ನು ನಿಷೇಧಿಸಲಾಗಿತ್ತು. ಉದಾಹರಣೆಗೆ ಮಹಾರಾಷ್ಟ್ರದಲ್ಲಿ, ಹತ್ತಿ ಬೆಳೆಗಾರರು

ತಮ್ಮ ಕಚ್ಚಾ ಹತ್ತಿಯನ್ನು ಖರೀದಿ ಏಕಸ್ವಾಮ್ಯ ಸಂಸ್ಥೆಗೆ ಮಾತ್ರ ಮಾರಾಟ ಮಾಡುವಂತೆ ಒತ್ತಾಯಿಸಲಾಗುತಿತ್ತು ಮತ್ತು ಒಂದು ವೇಳೆ ಕಬ್ಬು ಬೆಳೆಗಾರರು ಬೆಲ್ಲ ಉತ್ಪಾದಿಸಲು ಬಯಸಿದರೆ ಅವರು ಅದನ್ನು ಸರ್ಕಾರದ ಅನುಮತಿಯಿಂದ ಮಾತ್ರ ಮಾಡಬಹುದಾಗಿತ್ತು ಮತ್ತು ಭತ್ತ ಬೆಳೆಗಾರರು ತಮದೇ ಭತ್ತದ ಧಾನ್ಯ ಬೀಸುವ ಯಂತ್ರವನ್ನು ಹೊಂದಲು ಅನುಮತಿಯಿರಲಿಲ್ಲ.

ಈ ನಿಯಂತ್ರಣಗಳನ್ನು ಸರ್ಕಾರ ಬೆಲೆಗಳನ್ನು ನಿಯಂತ್ರಿಸುವ ಉದ್ದೇಶದಿಂದ ಕೃಷಿ ಸರಕುಗಳ ಮೇಲೆ ಸರ್ಕಾರ ವಿಧಿಸಿತ್ತು. ಆದ್ದರಿಂದ, ಮಹಾರಾಷ್ಟ್ರ ರೈತರ ಚಳುವಳಿ ಸರ್ಕಾರದ ರೈತ ವಿರೋಧೀ ಬೆಲೆ ನೀತಿ ಮತ್ತು ನಿಯಂತ್ರಣಗಳ ವಿರುದ್ಧ ಪ್ರತಿಭಟಿಸಿತು.

ಭಾರತೀಯ ಕಿಸಾನ್ ಸಂಘ ೧೯೭೮ರಲ್ಲಿ ರಚನೆಯಾಯಿತು, ತನ್ನ ಘಟಕಗಳನ್ನು ದೆಹಲಿ, ಹರ್ಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶಗಳಲ್ಲಿ ಹೊಂದಿತ್ತು. ೧೯೮೦ರಲ್ಲಿ ಪಂಜಾಬ್ ಖೇತಿ ಬಾರಿ ಜಮೀನುದಾರರ ಸಂಘ, ರೈತರ ಸಂಘವಾಗಿದ್ದುದು ಭಾರತೀಯ ಕಿಸಾನ್ ಸಂಘದ ಪಂಜಾಬ್ ಘಟಕವಾಗಿ ಪರಿವರ್ತಿಸಲ್ಪಟ್ಟಿತು. ೧೯೮೮ರಲ್ಲಿ ಭಾರತೀಯ ಕಿಸಾನ್ ಸಂಘವು ಮಹೇಂದ್ರ ಸಿಂಗ್ ಟಿಕಾಯತ್ ಅವರ ನಾಯಕತ್ವದಲ್ಲಿ ಪ್ರಬಲವಾಯಿತು. ೧೯೮೮ರಲ್ಲಿ ಅದರ ಬೆಂಬಲಿಗರು ಕಬ್ಬಿನ ಬೆಲೆ ಹೆಚ್ಚಿಸುವುದು, ಕೃಷಿ ಉಪಕರಣ ಬೆಲೆ ಇಳಿಕೆ, ಸಾಲ ಮನ್ನಾ, ಹೆಚ್ಚಿನ ಗ್ರಾಮೀಣ ಹೊಟೆ ಮತ್ತು ಐದು ಪ್ರಕಾರದ ನೀರು ದರ, ವಿದ್ಯುಚ್ಛಕ್ತಿ ದರಗಳನ್ನು ಇಳಿಸುವ ಬೇಡಿಕೆಗಳ ಈಡೇರಿಕಾಗಿ ಪಶ್ಚಿಮ ಉತ್ತರ ಪ್ರದೇಶದ ಮೀರತನ್ನು ಸ್ವಾಧೀನ ಪಡಿಸಿಕೊಂಡರು. ಈ ಚಳುವಳಿ ಬೆಲೆ ವಿಷಯವನ್ನು ತನ್ನ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿ ಪರಿಗಣಿಸಿತು.

ತಮಿಳುನಾಡು ಕೃಷಿಕರ ಸಂಘ ೧೯೭೦ರ ಮಧ್ಯಭಾಗದಲ್ಲಿ ದಿವಂಗತ ನಾರಾಯಣ ಸ್ವಾಮಿ ನಾಯ್ಡು ನಾಯಕತ್ವದಲ್ಲಿ ರಚನೆಯಾಯಿತು. ಅದರ ರಚನೆಗೆ ಒಂದು ಪ್ರಮುಖ ಕಾರಣವೆಂದರೆ ಕೃಷಿ ಸರಕುಗಳಿಗೆ ನ್ಯಾಯಯುತ ಬೆಲೆ ದೊರಕಿಸಿಕೊಡುವುದುದೇ ಆಗಿತ್ತು.

ಕರ್ನಾಟಕ ರೈತರ ಚಳುವಳಿ ವ್ಯವಸ್ಥೆಯ ಮೇಲೆ ಸ್ಪಷ್ಟವಾದ ಮತ್ತು ನಿಶ್ಚಿತವಾದ ಪ್ರಭಾವ ಹೊಂದಿತು. ಕ.ರಾ.ರೈ.ಸಂ.ವು ಯಾವುದೇ ಒಬ್ಬ ವ್ಯಕ್ತಿ ಅಥವಾ ಒಂದು ನಿರ್ದಿಷ್ಟ ಸರ್ಕಾರದ ವಿರುದ್ಧವಾಗಿರದೆ ರೈತರನ್ನು ವಿರೋಧಿಸಿದ ಆರ್ಥಿಕ ವ್ಯವಸ್ಥೆಯ ವಿರುದ್ಧವಾಗಿತ್ತು. ಆರ್ಥಿಕ ವ್ಯವಸ್ಥೆ ರಾಜಕೀಯ ವ್ಯವಸ್ಥೆಯ ಒಂದು

ಭಾಗ. ಆದ್ದರಿಂದ ಅದು ಆರ್ಥಿಕ ವ್ಯವಸ್ಥೆ ಬದಲಿಗೆ ರಾಜಕೀಯ ವ್ಯವಸ್ಥೆಯನ್ನು ತನ್ನ ಗುರಿಯಾಗಿಸಿಕೊಂಡಿತು. ಕ.ರಾ.ರೈ.ಸಂ.ವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡನ್ನೂ ಅವುಗಳ ರಾಜಕೀಯ ಹೊದಿಕೆ ಮತ್ತು ತತ್ವಗಳು ಏನೇ ಇದ್ದರೂ, ಅವುಗಳನ್ನು ಕೈಗಾರಿಕಾ ಬಂಡವಾಳ ಶಾಹಿ ವರ್ಗದ ಉಪಕರಣವೆಂದು ಗುರುತಿಸಿತು. ಸರ್ಕಾರ ಅನುಸರಿಸಿದ ನೀತಿಗಳು ಯಾವಾಗಲೂ ರೈತರ ಹಿತಾಸಕ್ತಿಗೆ ವಿರುದ್ಧವಾಗಿದ್ದವು ಎಂದು ಸಮರ್ಥಿಸಿತು. ಕ.ರಾ.ರೈ.ಸಂ.ವು ಸರ್ಕಾರದ ಬಗ್ಗೆ ತನ್ನ ನಿಲುವನ್ನು ಹೀಗೆ ಸ್ಪಷ್ಟ ಪಡಿಸಿತು, ಅದೇನೆಂದರೆ "ರೈತರಿಗೆ ಆಹಾರ ವಸ್ತುಗಳ ಬೆಲೆ ನಿರ್ಧರಿಸಲು ಹಾಗೂ ಇತರ ಕೃಷಿ ಸರಕುಗಳ ಬೆಲೆ ನಿಗದಿಪಡಿಸಲು ಹಾಗೂ ನಿರ್ಬಂಧ ತೆಗೆದು ಹಾಕಲು ಪೂರ್ಣ ಅಧಿಕಾರ ಮತ್ತು ಸ್ವಾಯತ್ತತೆ ನೀಡಬೇಕೆಂದು ಹೇಳಿತು ಮತ್ತು ಮಹಾರಾಷ್ಟ್ರ ಮತ್ತು ಕರ್ನಾಟಕ ರೈತರ ಚಳುವಳಿಗಳ ನಡುವಣ ಚರ್ಚೆಯಲ್ಲಿ ಎರಡು ಅಂಶಗಳು ಕಂಡು ಬಂದಿದ್ದವು, ಅವುಗಳೆಂದರೆ ಎರಡೂ ಚಳುವಳಿಗಳು "ಕನಿಷ್ಟ ರಾಜ್ಯ" ಮತ್ತು ಅದರೊಂದಿಗೆ "ಪೂರ್ಣ ರೈತ ಸ್ವಾಯುತ್ತತೆ"ಯನ್ನು ಬಯಸಿದವು.

ಶೇತ್ಕಾರಿ ಸಂಘಟನೆ ಪ್ರತಿಪಾದಿಸುವುದೇನೆಂದರೆ, ಮುಕ್ತ ಆರ್ಥಿಕತೆಯತ್ತ ಕೊಂಡೊಯ್ಯಲು ಕನಿಷ್ಟ ರಾಜ್ಯ ಸಾಧ್ಯವಾಗಬಲ್ಲದು ಒಂದು ವೇಳೆ ರಾಜ್ಯದ ನಿರಂತರ ಮತ್ತು ಹಿಂಸಾತ್ಮಕ ಮಧ್ಯಸ್ಥಿಕೆ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ ಮಾತ್ರ ಸೀಮಿತವಾಗಿ ಮತ್ತು "ರೈತ ಸ್ವಾಯತ್ತತೆ"ಗೆ ಅವಕಾಶ ನೀಡಿದರೆ ಅಧಿಕಾರಶಾಹಿ ಕಡಿಮೆಯಾಗಿ, ಅನುಮತಿ ಪದ್ಧತಿ ರದ್ಧತಿಯಾಗಿ, ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆ ಕಡಿಮೆಯಾಗಿ, ಖಾಸಗಿವಲಯದ ಕೈಗಾರಿಕೆಗೆ ಪ್ರಾಮುಖ್ಯತೆ ಹೆಚ್ಚಿ, ಬಂಡವಾಳ ಮತ್ತು ಕಚ್ಚಾ ಸರಕು ಆಮದಿನ ಉದಾರೀಕರಣ, ಸಹಾಯಧನ ಹಿಂತೆಗೆಯುವುದು, ಅಧಿಕಾರ ಶಾಹಿ ಲೋಪದೋಷಗಳಿಂದ ಕೃಷಿ ವ್ಯಾಪಾರವನ್ನು ಮುಕ್ತಗೊಳಿಸುವುದು, ಕೃಷಿ ಸಂಬಂಧೀ ಕೈಗಾರಿಕೆಗಳ ಎಲ್ಲಾ ಅನುಮತಿಗಳನ್ನು ರದ್ದುಗೊಳಿಸುವುದು, ಕೃಷಿ ಸರಕುಗಳ ರಫ್ತುಗಳ ಮೇಲಿನ ನಿಯಂತ್ರಣ ರದ್ದುಗೊಳಿಸುವುದು, ಆಡಳಿತ ವೆಚ್ಚ ಕಡಿತಗೊಳಿಸುವುದು ಇತ್ಯಾದಿಗಳಿಂದ ಕಂಡುಬರುತ್ತದೆ. ಅಂತಹ "ರೈತ ಸ್ವಾಯುತ್ತತೆ" ಒಂದು ವೇಳೆ ಕಾಯ್ದುಕೊಂಡರೆ ಉತ್ಪಾದನೆ, ವಿತರಣೆ, ಬೆಳೆ ವಿಧಾನ ಇತ್ಯಾದಿ ಪೂರ್ಣವಾಗಿ ರೈತರಿಂದಲೇ ನಿರ್ಧರಿಸಲ್ಪಡುತ್ತದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ ರೈತರಿಗೆ ಸಹಾಯಧನ ಕೊಡುವುದನ್ನು ನೇರವಾಗಿ ನಿರಾಕರಿಸಿದರು ಮತ್ತು ರೈತರನ್ನು ರಾಷ್ಟ್ರದಲ್ಲಿ ಸಹಾಯಕರೆಂದು

ಗುರುತಿಸಿದರು. ಆದರೆ ಅವರು ಸಹಾಯಧನವನ್ನು ಅನಿವಾರ್ಯವೆಂದು ಒಪ್ಪಿಕೊಂಡರು, ಏಕೆಂದರೆ ಸರ್ಕಾರದ ಬೆಂಬಲ ಬೆಲೆಯ ಹೆಸರಿನಲ್ಲಿ ರೈತರು ಉತ್ಪಾದನಾ ವೆಚ್ಚದ ೧/೪ ಭಾಗವನ್ನು ಮಾತ್ರ ಪಡೆಯುತ್ತಿದ್ದರು. ಆದ್ದರಿಂದ ಅವರು ಏಕ ಬೆಲೆಯ ಮಾರುಕಟ್ಟೆ ಪದ್ಧತಿಯನ್ನು ಒತ್ತಾಯಿಸಿದರು ಮತ್ತು ಕೃಷಿ ಸರಕುಗಳಿಗೆ ವೈಜ್ಞಾನಿಕ ಬೆಲೆ ನೀತಿಯನ್ನು ಒತ್ತಾಯಿಸಿದರು. ಅವರು ಕೈಗಾರಿಕಾ ವಲಯದಲ್ಲಿ ಕೈಗಾರಿಕಾ ಸರಕುಗಳ ಬೆಲೆ ನಿರ್ಧಾರಕ್ಕೆ ಬಳಸಿದ ವಿಧಾನವಾದ ಉತ್ಪಾದನಾ ವೆಚ್ಚದ ಆಧಾರದ ಮೇಲೆ ಬೆಲೆ ನಿಗಧೀಕರಣ ವಿಧಾನವನ್ನು ಒತ್ತಾಯಿಸಿದರು.

ಭಾರತದಲ್ಲಿ, ನಂಜುಂಡಸ್ವಾಮಿ ಕಂಡಂತೆ, ರೈತ ಚಳುವಳಿಗಳು ಕೃಷಿ ಸರಕುಗಳಿಗೆ ವೈಜ್ಞಾನಿಕ ಬೆಲೆಯನ್ನು ಪಡೆಯುವುದಕ್ಕಾಗಿಯೇ ಪ್ರಮುಖವಾಗಿ ಸಂಘಟಿತವಾಗಿದ್ದವು. ಆದರೆ ರೈತ ಸಂಘಗಳ ನಡುವೆ ಬೆಲೆ ನೀತಿಯ ಬಗ್ಗೆ ಏಕರೀತಿಯ ಅಭಿಪ್ರಾಯ ಇರಲಿಲ್ಲ. ನಂಜುಂಡಸ್ವಾಮಿಯವರ ಪ್ರಕಾರ, "ವೈಜ್ಞಾನಿಕ ಬೆಲೆ ಎಂದರೇನು ಮತ್ತು ಅದನ್ನು ಹೇಗೆ ಲೆಕ್ಕಚಾರ ಮಾಡಬೇಕು?" ಹಾಗೂ ಶ್ರೀ ಮಹೇಂದ್ರ ಸಿಂಗ್ ಟಿಕಾಯತ್ ಭಾರತೀಯ ಕಿಸಾನ್ ಸಂಘದ ಅಧ್ಯಕ್ಷರು, ವೈಜ್ಞಾನಿಕ ಬೆಲೆ ಅಂಶವನ್ನು ಉತ್ತರ ಪ್ರದೇಶದಲ್ಲಿ ಎಬ್ಬಿಸಿದ್ದರು, ಅದು ಇತರ ಬೇಡಿಕೆಗಳಿಗೆ ಸಂಬಂಧಿಸಿದೆ. ಅವುಗಳೆಂದರೆ,

೧) ಕೃಷಿಯನ್ನು ಒಂದು ಕೈಗಾರಿಕೆ ಎಂದು ಘೋಷಿಸಬೇಕು.
೨) ಕೃಷಿ ಸರಕುಗಳಿಗೆ ಲಾಭದಾಯಕ ಬೆಲೆ
೩) ಕೈಗಾರಿಕೆ ಮತ್ತು ಕೃಷಿ ನಡುವೆ ಬೆಲೆ ಸಮಾನತೆ
೪) ಸೈನಿಕರು ಮತ್ತು ರೈತರಿಗೆ ಏಕರೀತಿಯ ಸಂಬಳ

ತುಲನಾತ್ಮಕವಾಗಿ ಮಹಾರಾಷ್ಟ್ರ ರೈತರ ಚಳುವಳಿ ಏಕ ಅಂಶ ಸೂತ್ರವನ್ನು, ಅಂದರೆ ಕೃಷಿ ಸರಕುಗಳಿಗೆ ವೈಜ್ಞಾನಿಕ ಬೆಲೆ ಬೇಡಿಕೆಯನ್ನು ಒಂದು ಭಾವನಾತ್ಮಕ ಘೋಷಣೆಯಾದ "ಜೈ ಜವಾನ್ ಜೈ ಕಿಸಾನ್" ಎಂದರೆ ಕೃಷಿ ಕಾರ್ಮಿಕರು ಮತ್ತು ಸೈನಿಕರಿಗೆ ಏಕ ರೀತಿಯ ಸಂಬಳಕ್ಕಾಗಿ ತನ್ನ ಹೋರಾಟವನ್ನು ನಡೆಸಿತು.

ಈ ಬೇಡಿಕೆಗಳು, ನಂಜುಂಡಸ್ವಾಮಿಯವರ ಪ್ರಕಾರ, ಅವೈಜ್ಞಾನಿಕವಾಗಿದ್ದವು. ಏಕೆಂದರೆ ಕೃಷಿ ಕಾರ್ಮಿಕರು ಮತ್ತು ಸೈನಿಕರಿಗೆ ಏಕ ರೀತಿಯ ವೇತನದ ಬಗ್ಗೆ ವಿವರಣೆ ನೀಡಲು ಅಸಮರ್ಥವಾಗಿದ್ದವು. ಒಂದು ವೇಳೆ ಸೈನಿಕನಿಗೆ ೧೨ ತಿಂಗಳ ಸಂಬಳ ಪ್ರತಿ ವರ್ಷ ಪಡೆದರೆ, ಕೃಷಿ ಕಾರ್ಮಿಕನಿಗೂ ಅದೇ ರೀತಿಯ ಸಂಬಳ ನೀಡಲು ಸಾಧ್ಯವೆ, ಒಂದು ವೇಳೆ ಕೊಡುವುದಾದರೆ ಕೃಷಿ ಸರಕುಗಳಿಗೆ ಲಾಭದಾಯಕ

ಬೆಲೆ ನಿರ್ಧರಿಸಲು ಎಷ್ಟು ಮತ್ತು ಹೇಗೆ ಅದನ್ನು ಲೆಕ್ಕಚಾರ ಹಾಕಬೇಕು ಎನ್ನುವ ಪ್ರಶ್ನೆಯನ್ನು ಹಾಕಿದರು. ಈ ಆಧಾರದ ಮೇಲೆ ಅವರ ಬೇಡಿಕೆಗಳನ್ನು ಹಾಸ್ಯಸ್ಪದ ಮತ್ತು ಅವೈಜ್ಞಾನಿಕವೆಂದು ಅವರು ಕರೆದರು.

ಅವರು ಕ.ರಾ.ರೈ.ಸಂ.ದ ಬೇಡಿಕೆಗಳನ್ನು ಇತರೆ ರೈತ ಸಂಘಟನೆಗಳ ಬೇಡಿಕೆಗಳಿಗೆ ಹೋಲಿಸಿದಾಗ ಹೆಚ್ಚು ವೈಜ್ಞಾನಿಕ, ಸಕಾರಣ ಮತ್ತು ಸಾರ್ವತ್ರಿಕ ಒಪ್ಪಿಗೆ ಪಡೆದವುಗಳಾಗಿವೆ ಎಂದು ಮಂಡಿಸಿದರು. ಕರ್ನಾಟಕದಲ್ಲಿ, ರೈತರ ಚಳುವಳಿ ಹೋರಾಡುತ್ತಿರುವುದು ವೈಜ್ಞಾನಿಕ ಬೆಲೆಗಾಗಿ ಆದರೆ ಲಾಭದಾಯಕ ಬೆಲೆಗಾಗಿ ಅಲ್ಲ ಎಂಬ ಅಂಶವನ್ನು ಒತ್ತಿ ಹೇಳಿದರು. ಈ ಕೆಳಗಿನ ಕ್ರಮಗಳು ಕೃಷಿಯನ್ನು ಒಂದು ಕೈಗಾರಿಕೆಯಾಗಿ ಪರಿಗಣಿಸಲು ಅವಶ್ಯಕವಾದ ಎಲ್ಲಾ ಕೈಗಾರಿಕಾ ಕಾರ್ಮಿಕರ ನಿಯಮಗಳನ್ನು ಕೃಷಿ ಕಾರ್ಮಿಕರಿಗೂ ಅನ್ವಯಿಸಬೇಕು, ಕೃಷಿ ಸರಕುಗಳ ಬೆಲೆ ನಿರ್ಧಾರಕ್ಕೆ ಕೈಗಾರಿಕೆಯಲ್ಲಿರುವಂತೆ ಉತ್ಪಾದನಾ ವೆಚ್ಚದ ವಿಧಾನವನ್ನು ಬಳಸುವ ಹಾಗೂ "ಅನುಭೋಗಿ ಸರಕುಗಳ ಸೂಚ್ಯಂಕ"ವನ್ನು ಅನುಭೋಗಿಗಳ ಹಿತರಕ್ಷಣೆಗೆ ಮಧ್ಯಸ್ಥಗಾರರನ್ನು ನಿವಾರಿಸಲು ಜಾರಿಗೆ ತರುವುದು.

ಕರ್ನಾಟಕ ರೈತರ ಚಳುವಳಿ ವೈಜ್ಞಾನಿಕ ಬೆಲೆ ನಿರ್ಧಾರಕ್ಕೆ ಮತ್ತೊಂದು ವಿಧಾನವನ್ನು ಕಂಡುಕೊಂಡಿತು ರೈತ ವರ್ಷದ ಎಲ್ಲಾ ೧೨ ತಿಂಗಳುಗಳು ಕಾರ್ಯತತ್ಪರನಾಗಿ ಇರುವುದಿಲ್ಲ. ಆದ್ದರಿಂದ ಅವನ ವಿಶ್ರಾಂತಿ ಅವಧಿಯನ್ನು ವೇತನ ರಹಿತ ಅವಧಿಯೆಂದು ಪರಿಗಣಿಸಬೇಕು, ಕನಿಷ್ಟ ಜೀವನ ವೆಚ್ಚವನ್ನು ಆ ಅವಧಿಗೆ ಲೆಕ್ಕಚಾರ ಮಾಡಬೇಕು ಮತ್ತು ಆ ಮೊತ್ತವನ್ನು ಕೃಷಿ ಸರಕುಗಳ ಉತ್ಪಾದನಾ ವೆಚ್ಚಕ್ಕೆ ಸೇರಿಸಬೇಕು. ಹಾಗೆಯೇ ವೈಜ್ಞಾನಿಕ ಬೆಲೆ ಸರಿಹೊಂದುವ ಅನುಭೋಗಿ ಸರಕು ಬೆಲೆ ಸೂಚ್ಯಂಕವಿಲ್ಲದೆ ಸಾಧ್ಯವಿಲ್ಲ ಮತ್ತು ಅದೇ ವೇಳೆಗೆ, ಕೃಷಿ ಮತ್ತು ಕೈಗಾರಿಕಾ ಸರಕುಗಳ ಬೆಲೆ ಸಮಾನತೆ ಸಾಧಿಸಲು ಉತ್ಪಾದನಾ ವೆಚ್ಚವನ್ನು ಕಂಡುಹಿಡಿಯಲು ಒಂದು ನಿರ್ಧಿಷ್ಟ ವಿಧಾನ ಇರಬೇಕು.

ನಂಜುಂಡಸ್ವಾಮಿಯವರು, ಆದ್ದರಿಂದ, ಎಲ್ಲಾ ರೈತ ಮುಖಂಡರನ್ನು ಒಮ್ಮತದಿಂದ ಸರ್ಕಾರದ ವಿರುದ್ಧ ಅವರು ಹೇಳಿದ ಅಂಶಗಳ ಆಧಾರದ ಮೇಲೆ ರೈತರ ಒಟ್ಟಾರೆ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಹೋರಾಡುವಂತೆ ಕೇಳಿಕೊಂಡರು. ಬಾಬಾಗೌಡ ಪಾಟೀಲರು, ಮೊದಲಿನ ಕ.ರಾ.ರೈ.ಸಂ.ದ ವಿಧಾನ ಸಭಾ ಸದಸ್ಯರು ನಂತರ ಭಾರತೀಯ ಜನತಾ ಪಕ್ಷ ಸೇರಿದ ಇವರು ಕೃಷಿ ಸರಕುಗಳ ಅಂತರರಾಜ್ಯ ಚಲನೆಯ ಮೇಲೆ ನಿಯಂತ್ರಣ ವಿಧಿಸುವ ಸರ್ಕಾರಿ ಆದೇಶಗಳನ್ನು ಪ್ರಶ್ನಿಸಿದರು. ಆ ಅದೇಶಗಳ ಪ್ರಕಾರ, ಕಬ್ಬಿನ ವಿಷಯದಲ್ಲಿ ಪರವಾನಿಗೆ ಹೊಂದಿದ ರೈತ ಎಲ್ಲೇ

ಆಗಲಿ ತನ್ನ ಕಬ್ಬನ್ನು ಮಾರಾಟಮಾಡಬಹುದು, ಆದರೆ ಪರವಾನಗಿ ಇಲ್ಲದವರಿಗೆ ಈ ಸೌಲಭ್ಯ ಇರಲಿಲ್ಲ. ಆದ್ದರಿಂದ ಕಬ್ಬು ಬೆಳೆದ ರೈತ ರಾಜ್ಯದ ಒಳಗೆ ಮತ್ತು ಹೊರಗೆ ಅದನ್ನು ಮಾರುವ ಹಕ್ಕು ಹೊಂದಿದ್ದಾನೆ ಎಂದು ವಾದಿಸಿದರು.

ಎಚ್. ಎಸ್. ರುದ್ರಪ್ಪನವರು ಕೇಂದ್ರ ಕೃಷಿ ಮಂತ್ರಿಗಳಾದ ಶ್ರೀ ರಾವ್ ಬೀರೇಂದ್ರ ಸಿಂಗ್ ರವರಿಗೆ, ಬರೆದ ತಮ್ಮ ಪತ್ರದಲ್ಲಿ ೨೫,೦೦೦ ಸಣ್ಣ ಮತ್ತು ದೊಡ್ಡ ಸಕ್ಕರೆ ಕಾರ್ಖಾನೆಗಳನ್ನು, ದಶಲಕ್ಷ ಉದ್ಯೋಗಿಗಳು ಮತ್ತು ಕೋಟಿಗಟ್ಟಲೆ ರೈತರು ಮತ್ತು ಕೃಷಿ ಕಾರ್ಮಿಕರನ್ನು ರಕ್ಷಿಸಲು ಸಕ್ಕರೆ ಬೆಲೆಯನ್ನು ಸ್ಥಿರಗೊಳಿಸುವಂತೆ ಕೇಳಿಕೊಂಡರು. ಈ ಎಲ್ಲಾ ರೈತ ಸಂಘಗಳು ಭಾರತದಲ್ಲಿ ರೈತ ಚಳುವಳಿಗಳು ನಿಸ್ಸಂದೇಹವಾಗಿ "ಅರ್ಥಿಕ" ಅಥವಾ "ಮಾರುಕಟ್ಟೆ ಅಂಶಗಳ"ನ್ನು ಕುರಿತಂತೆ ಇದ್ದವು ಎಂದು ಪ್ರತಿಪಾದಿಸಿವೆ.

ಕರ್ನಾಟಕದಲ್ಲಿ ನ್ಯಾಯಯುತ ಬೆಲೆಗಾಗಿ ನಡೆದ ಹೋರಾಟಗಳ ಐತಿಹಾಸಿಕ ಹಿನ್ನೆಲೆ

ಮಲೆನಾಡು ರೈತರ ಹೋರಾಟ ತಕ್ಷಣ ಅಸ್ತಿತ್ವಕ್ಕೆ ಬಂದುದಲ್ಲ ಅದು ಸುಪ್ತವಾಗಿ ಬಹಳ ಕಾಲದವರೆಗೂ ಹಾಗೂ ದೇವರಾಜ ಅರಸು ಅವರ ಆಡಳಿತದ ಅವಧಿಯಲ್ಲಿಯೂ ಇದ್ದಿತ್ತು, ಆದರೆ ೧೯೮೦ರಲ್ಲಿ ಅದು ಸ್ಫೋಟಗೊಂಡಿತು. ದೇವರಾಜ ಅರಸು ಅವರ ಆಡಳಿತಕ್ಕೆ ಮುನ್ನ, ಭತ್ತದ ಬೆಳೆಗಾರರು ಎಕರೆಗೆ ೧೦ ರೂಪಾಯಿಯಂತೆ ವಾರ್ಷಿಕವಾಗಿ ನೀರಿನ ತೆರಿಗೆ ಕೊಡುತ್ತಿದ್ದರು. ಅದನ್ನು ನಂತರದಲ್ಲಿ ೨೫ ರೂಪಾಯಿಗೆ ಹೆಚ್ಚಿಸಲಾಯಿತು, ನಂತರ ನೀರಿನ ತೆರಿಗೆ ಮೊತ್ತವನ್ನು ವಾರ್ಷಿಕವಾಗಿ ಒಂದು ಬೆಳೆಗೆ ಪರಿವರ್ತಿಸಲಾಯಿತು ಮತ್ತು ಪ್ರತಿ ಬೆಳೆಗೆ ೩೭ ರೂಪಾಯಿಗೆ ಹೆಚ್ಚಿಸಲಾಯಿತು.

ಕಬ್ಬು ಬೆಳೆಗಾರರ ಪರಿಸ್ಥಿತಿಯೂ ಅದೇ ಆಗಿತ್ತು. ಅದು ಎಕರೆಗೆ ೨೦ ರೂಪಾಯಿ ಇತ್ತು. ದೇವರಾಜ ಅರಸು ಆಡಳಿತ ಅದನ್ನು ಪ್ರಾರಂಭದಲ್ಲಿ ೪೦ ರೂಪಾಯಿಗೆ ನಂತರದಲ್ಲಿ ೮೦ ರೂಪಾಯಿಗೆ ಮತ್ತು ಅಂತಿಮವಾಗಿ ೩೦೦ ರೂಪಾಯಿಗೆ ಹೆಚ್ಚಿಸಲಾಯಿತು. ಅವುಗಳಲ್ಲಿ ತಕ್ಷಣದ ವಿರೋಧಕ್ಕೆ ಒಂದು ಪ್ರಮುಖ ಕಾರಣವೆಂದರೆ ಅತಿಯಾದ ಮಳೆಯಿಂದ ಬೆಳೆ ನಾಶ, ೧೯೮೦ರ ಏಪ್ರಿಲ್-ಮೇ ಮಳೆಗಾಲ ಒಂದು ತಿಂಗಳು ಮೊದಲೇ ಆರಂಭವಾಯಿತು ಆಗ ಭತ್ತದ ಬೆಳೆ ತುತ್ತ ತುದಿಯಲಿತ್ತು. ಅತಿ ಹೆಚ್ಚಿನ ಮಳೆಯಿಂದಾಗಿ ಶೇಕಡಾ ೫೦ ರಷ್ಟು ಅಂದರೆ ಅಂದಾಜು ೯ ಕೋಟಿ ರೂಪಾಯಿ ಮೌಲ್ಯದ ಭತ್ತ ಕೊಚ್ಚಿ ಹೋಯಿತು.

ಉಳಿದ ಶೇಕಡಾ ೫೦ರಷ್ಟು ಭತ್ತ ಒಳ್ಳೆಯ ಬೆಲೆಯನ್ನು ಪಡೆಯಲಿಲ್ಲ ಮತ್ತು ನಷ್ಟದಾಯಕ ಅತೀ ಕಡಿಮೆ ಬೆಲೆಗೆ ಅಂದರೆ ಪ್ರತಿ ಕ್ವಿಂಟಲಿಗೆ ೪೨

ರೂಪಾಯಿಯಂತೆ ಮಾರಲಾಯಿತು. ಭತ್ತದ ಬೆಳೆಗಾರರು ಸರ್ಕಾರದಿಂದ ಪರಿಹಾರ ಧನವನ್ನು ಒತ್ತಾಯಿಸಿದರು. ಇದಕ್ಕೆ ಪ್ರತಿಯಾಗಿ, ಸರ್ಕಾರಿ ಅಧಿಕಾರಿಗಳು ಒಂದು ಬೆಳೆ ನಷ್ಟದ ಅಂದಾಜು ಮಾಡಿ ಸರ್ಕಾರಕ್ಕೆ ಒಂದು ವರದಿ ನೀಡಿದರು. ಆದರೆ ಪರಿಹಾರ ಧನ ಬೆಳೆಗಾರರಿಗೆ ದೊರೆಯಲಿಲ್ಲ. ಆ ನಿರ್ಧಿಷ್ಟ ಬೆಲೆ ವಿಷಯ, ಎಲ್ಲಾ ಕಬ್ಬು ಮತ್ತು ಭತ್ತದ ಬೆಳೆಗಾರರನ್ನು ಕ.ರಾ.ರೈ.ಸಂ.ದ ಹೆಸರಿನ ಅಡಿಯಲ್ಲಿ ಒಟ್ಟುಗೂಡಿಸಿತು. ಅವರು ಇದನ್ನು ಇತರ ಜಿಲ್ಲಾ ಮಟ್ಟದ ರೈತ ಸಂಘಟನೆಗಳೊಂದಿಗೆ ಚರ್ಚಿಸಿ ೧೯ ಬೇಡಿಕೆಗಳನ್ನುಳ್ಳ ಒಂದು ಪಟ್ಟಿಯನ್ನು ತಯಾರಿಸಿದರು ಮತ್ತು ೧೯೮೦ರ ಅಕ್ಟೋಬರ್ ೧೭ರಂದು ಸರ್ಕಾರಕ್ಕೆ ಅದನ್ನು ಸಲ್ಲಿಸಿದರು.

ಕ.ರಾ.ರೈ.ಸಂ.ದ ತನ್ನ ಮೂಲ ಸಂಘವಾದ ಬೇಡಿಕೆಗಳನ್ನು ಶಿವಮೊಗ್ಗಾ ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಬೇಡಿಕೆಗಳನ್ನು ರಾಜ್ಯ ಮಟ್ಟದ ಸಂಘಟನೆಯಾದ ಮೇಲೂ ಉಳಿಸಿಕೊಂಡಿತು. ಆದ್ದರಿಂದ ಬೆಂಬಲ ಬೆಲೆಗಾಗಿ ಅದರ ಹೆಚ್ಚಿನ ಹೋರಾಟಗಳು ಪ್ರಮುಖವಾಗಿ ಎರಡು ಬೆಳೆಗಾಗಿ ಕಬ್ಬು ಮತ್ತು ಭತ್ತಕ್ಕಾಗಿ ಇದ್ದವು. ಕಬ್ಬಿನ ಬೆಲೆಯೊಂದಿಗೆ, ಇತರ ಸಂಬಂಧಿತ ವಿಷಯಗಳೆಂದರೆ ಸಕ್ಕರೆ ಕಾರ್ಖಾನೆಗಳಿಂದ ಬಾಕಿ ಪಾವತಿ ಮತ್ತು ಕಬ್ಬಿನ ಅಂತರರಾಜ್ಯ ಚಲನೆಯ ನಿಯಂತ್ರಣವನ್ನು ರದ್ದು ಪಡಿಸುವುದು. ಇನ್ನೊಂದು ಬೆಳೆಯಾದ ಭತ್ತ ಮತ್ತು ಅದರ ಲೆವಿ ಬೆಲೆಯ ವಿಷಯಗಳ ಮೇಲೂ ಕರ್ನಾಟಕದ ಮಟ್ಟದಲ್ಲಿ ಯಾವುದೇ ಹೋರಾಟ ನಡೆದಿರಲಿಲ್ಲ. ಆದರೆ ಅದು ಚಳುವಳಿಯಲ್ಲಿ ಒಂದು ಪ್ರಮುಖ ಕಾರ್ಯ ಸೂಚಿಯಾಗಿತ್ತು. ಕ.ರಾ.ರೈ.ಸಂ. ಹತ್ತಿ, ತಂಬಾಕು, ಆಲೂಗಡ್ಡೆ, ನೀರುಳ್ಳಿ ಹಾಲು ಇತ್ಯಾದಿ ಸರಕುಗಳಿಗೆ ಬೆಂಬಲ ಬೆಲೆ ಪಡೆಯಲು ಹೋರಾಟ ನಡೆಸಿತ್ತು. ಆದರೆ ಅದು ಕೇವಲ ಆ ಸರಕುಗಳ ಮಾರುಕಟ್ಟೆ ದುಸ್ಥಿತಿಯ ಬಗ್ಗೆ ಆಗಿತ್ತು.

ಬೆಂಬಲ ಬೆಲೆಗಾಗಿ ಹೋರಾಟ

೧೯೮೦ರ ಸೆಪ್ಟೆಂಬರ್ ೧ರಂದು, ಶಿವಮೊಗ್ಗಾ ಜಿಲ್ಲೆಯ ಎಲ್ಲಾ ಮೂಲೆಗಳಿಂದ ರೈತರು ದೊಡ್ಡ ಮೆರವಣಿಗೆಯನ್ನು, ಮಹಾತ್ಮ ಗಾಂಧೀಯವರ ಭಾವ ಚಿತ್ರದೊಂದಿಗೆ, ೧೯ ಬೇಡಿಕೆಯುಳ್ಳ ಪಟ್ಟಿಯ ತಕ್ಷಣದ ಪರಿಹಾರಕ್ಕಾಗಿ ಒತ್ತಾಯಿಸಿ ನಡೆಸಿದರು. ಅಕ್ಟೋಬರ್ ೨ರವರೆಗೆ, ಅವರ ಬೇಡಿಕೆಗಳ ಬಗ್ಗೆ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ. ರೈತರು ಶಿವಮೊಗ್ಗಾ ಜಿಲ್ಲೆಯ ತಾಲ್ಲೂಕು ಕೇಂದ್ರದಲ್ಲಿ ೨೪ ಗಂಟೆಗಳ ಉಪವಾಸ ಸತ್ಯಾಗ್ರಹ ನಡೆಸಿದರು. ಶಿವಮೊಗ್ಗಾದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ೫೦೦೦ಕ್ಕೂ ಹೆಚ್ಚು ರೈತರು ಉಪವಾಸ ಸತ್ಯಾಗ್ರಹ ನಡೆಸಿದರು. ಪಿ. ಲಂಕೇಶ್, ನಂಜುಂಡಸ್ವಾಮಿ, ರಾಮದಾಸ್, ಮಲ್ಲೇಶ್ ಮತ್ತು

ಕುಂದಾರನಾಥ ಪಾಟೀಲರಂಥ ನಾಯಕರು ಅಲ್ಲಿ ಸೇರಿದ್ದವರನ್ನು ಉದ್ದೇಶೀಸಿ ಮಾತನಾಡಿದರು. ಆದರೆ ಸರ್ಕಾರ ಅವರ ಬೇಡಿಕೆಗಳಿಗೆ ಯಾವುದೇ ಗಮನ ಕೊಡಲಿಲ್ಲ.

ಅಕ್ಟೋಬರ್ ೩ರಂದು ರೈತ ನಾಯಕರು ಒಂದು ಸಭೆಯನ್ನು ಕರೆದು ಹೋರಾಟದ ವಿಧಾನವನ್ನು ಬದಲಾಯಿಸಲು ನಿರ್ಧರಿಸಿದರು, ಆದರೆ ಅದನ್ನು ರಹಸ್ಯವಾಗಿಟ್ಟರು. ಅಕ್ಟೋಬರ್ ೪ರಂದು ಪ್ರತಿಯೊಂದು ಹಳ್ಳಿಯಲ್ಲಿ ೧೦ ರಿಂದ ೧೫ ರೈತರ ಗುಂಪು ರಸ್ತೆ ತಡೆ ಕೈಗೊಂಡರು ಮತ್ತು ಅವರು "ಓ ರೈತ ಎಲ್ಲಿಗೆ ಗುಂಡೂರಾವ್ ಜೈಲಿಗೆ" ಎಂಬ ಕೂಗನ್ನು ಸರ್ಕಾರದ ವಿರುದ್ಧ ಕೂಗಿದರು. ಮೊದಲ ದಿನ ಸುಮಾರು ೨೪೦ ರೈತರು ಬಂಧಿಸಲ್ಪಟ್ಟರು, ಅಕ್ಟೋಬರ್ ೮ರವರೆಗೂ ಇದು ಮುಂದುವರೆಯಿತು. ಹೀಗೆ ರೈತರ ಚಳುವಳಿ ಜಿಲ್ಲೆಗಳಿಗೆ ಹರಡಿತು ಆದರೆ ದಿನ ನಿತ್ಯದ ಅವಶ್ಯಕತೆಗಳಾದ ಹಾಲು, ತರಕಾರಿ ಇತ್ಯಾದಿಗಳ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡಲಿಲ್ಲ. ಮತ್ತೊಮ್ಮೆ ಅಕ್ಟೋಬರ್ ೮ರಂದು ರೈತ ನಾಯಕರು ಒಂದೆಡೆ ಸೇರಿ ಹೋರಾಟದ ಮುಂದಿನ ರೀತಿಯನ್ನು ಚರ್ಚಿಸಿದರು. ಅವರು ಒಂದು ಹೊಸ ಯೋಜನೆ ರೂಪಿಸಿದ್ದರು ಮತ್ತು ಅದನ್ನು ರಹಸ್ಯವಾಗಿಟ್ಟರು ಹಾಗೂ ಪ್ರತಿಯೊಂದು ಹಳ್ಳಿಗೂ ಸಂದೇಶಗಳನ್ನು ಕಳುಹಿಸಿದರು. ಅಕ್ಟೋಬರ್ ೧೧ರಂದು ಅವರು ಎಲ್ಲಾ ಸರ್ಕಾರಿ ಕಛೇರಿಗಳಿಗೆ ಬೀಗ ಹಾಕಿದರು. ಅದು ಎರಡನೇ ದಿನಕ್ಕೂ ಮುಂದುವರೆಯಿತು, ಆದರೆ ದುರದೃಷ್ಟವಶಾತ್, ಅದೇ ದಿನ ಭದ್ರಾವತಿಯಲ್ಲಿ ಕೋಮು ಗಲಭೆ ಭುಗಿಲೆದ್ದುದರಿಂದ ರೈತ ನಾಯಕರು ಹೋರಾಟವನ್ನು ಹಿಂದಕ್ಕೆ ತೆಗೆದು ಕೊಳ್ಳಬೇಕಾಯಿತು. ತಕ್ಷಣ, ಸರ್ಕಾರ ರೈತ ನಾಯಕರನ್ನು ಮಾತುಕತೆಗೆ ಆಹ್ವಾನಿಸಿತು ಮತ್ತು ಅಂತಿಮವಾಗಿ ಪಟ್ಟಿಯ ೧೯ ಬೇಡಿಕೆಗಳಲ್ಲಿ ೧೨ ಬೇಡಿಕೆಗಳ ಪರವಾಗಿ ನಿರ್ಧರಿಸಿತು.

ಆದ್ದರಿಂದಲೇ ಎಂ. ವಿ. ನಾಡಕರ್ಣಿಯವರು ಕರ್ನಾಟಕದಲ್ಲಿ ರೈತರ ಚಳುವಳಿಗಳ ಕಥೆಯನ್ನು ೧೯೮೦ರ ಅಕ್ಟೋಬರ್ ೧೭ರಂದು ಮನವಿ ಸಲ್ಲಿಸಿದ ನಂತರ, ಪೂರ್ಣವಾಗಿ ಅಲ್ಲದಿದ್ದರೂ ಬಹುಪಾಲು ಕ.ರಾ.ರೈ.ಸಂ.ದ ಕಥೆಯೆಂದು ಭಾವಿಸುತ್ತಾರೆ.

೧೯೮೦ರ ಅಕ್ಟೋಬರ್ ೧೭ರಂದು, ಮುಖ್ಯಮಂತ್ರಿಯವರಿಗೆ ಬೇಡಿಕೆಯ ಪಟ್ಟಿಯನ್ನು ಸಲ್ಲಿಸಲಾಯಿತು. ಪಟ್ಟಿಯಲ್ಲಿನ ೧೯ ಬೇಡಿಕೆಗಳಲ್ಲಿ ೩ ಬೇಡಿಕೆಗಳು ಕೃಷಿ ಸರಕುಗಳಿಗೆ ನ್ಯಾಯಯುತ ಬೆಲೆಗೆ ಸಂಬಂಧಿಸಿದವುಗಳಾಗಿದ್ದವು ಅವುಗಳೆಂದರೆ :

೧) (ಪಟ್ಟಿಯಲ್ಲಿ ೫ನೆಯದು) ಖರೀದಿ ತೆರಿಗೆ ರದ್ಧತಿ ಮತ್ತು ಕಬ್ಬಿನ ಲೆವಿ ತೆರಿಗೆಯನ್ನು ೧೯೭೯-೮೦ರಲ್ಲಿ ಜಾರಿಗೆ ಬರುವಂತೆ ರದ್ದುಪಡಿಸುವುದು. ಅದನ್ನು ೧೯೭೯-೮೦ರಲ್ಲಿ ಪಾವತಿಸಲಾಗಿತ್ತು.

೨) ಕೃಷಿ ಬೆಲೆ ನೀತಿ ವೈಜ್ಞಾನಿಕವಾಗಿರಬೇಕು (ಪಟ್ಟಿಯಲ್ಲಿ ೬ನೇ ಬೇಡಿಕೆ) ಅಂದರೆ ಅದು ವೆಚ್ಚ ಮಾಡಿದ ಶ್ರಮ ಗಂಟೆಗಳನ್ನು ಆಧರಿಸಿರಬೇಕು. ಹಾಗೆಯೇ ಸರ್ಕಾರ ಈ ಕೆಳಗಿನ ಬೆಲೆಗಳಲ್ಲಿ ಖರೀದಿಸಬೇಕು ಜೋಳ ಕ್ವಿಂಟಲಿಗೆ ೨೦೦ ರೂ, ಮೆಕ್ಕೆ ಜೋಳ ಕ್ವಿಂಟಲಿಗೆ ೨೫೦ ರೂ, ನೀರುಳ್ಳಿ ಕ್ವಿಂಟಲಿಗೆ ೧೦೦ ರೂ, ದ್ವಿದಳ ಧಾನ್ಯಗಳು ಕ್ವಿಂಟಲಿಗೆ ೪೦೦ ರೂ ನಿಂದ ೫೦೦ ರೂ ಮತ್ತು ತಂಬಾಕು ಪ್ರತಿ ಕೆ.ಜಿ.ಗೆ ೨೦ ರೂ ಹಾಗೂ ಇತರ ಸಂದರ್ಭಗಳಲ್ಲಿ ಬಂಗಾರಪ್ಪ ಸಮಿತಿ ಶಿಫಾರಸು ಮಾಡಿದ ಬೆಲೆಗೆ ಖರೀದಿಸಬೇಕು.

೩) ಬೆಲೆ ನಿರ್ಧಾರದ ತತ್ವ ಸತ್ಯಾಂಶವನ್ನು (ಹಣರೂಪಿ ಅಥವಾ ಸಾಮಾನ್ಯ ಅಂಶಕ್ಕೆ ವಿರುದ್ಧವಾಗಿ) ಆಧರಿಸಿರಬೇಕು ಅಂದರೆ ಅದು ಉತ್ಪಾದನಾಂಗಗಳ ಬೆಲೆ ಮತ್ತು ಶ್ರಮ ಗಂಟೆಗೆ ಸಮನಾಗಿರಬೇಕು. ಕೈಗಾರಿಕಾ ಸರಕುಗಳ ಬೆಲೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು, ಇದಕ್ಕಿಂತ ಹೆಚ್ಚಿರಬಾರದು. ಕೈಗಾರಿಕಾ ವೆಚ್ಚ ಮತ್ತು ಉತ್ಪಾದನೆಯ ಮೇಲೆ ನಿರ್ಬಂಧ ಇರಬೇಕು ಮತ್ತು ರಾಸಾಯನಿಕ ಗೊಬ್ಬರಗಳನ್ನು ೧೯೭೩ರ ಬೆಲೆಗಳಲ್ಲಿ ಪೂರೈಸಬೇಕು. ಈ ಬೇಡಿಕೆಗಳು ಕ.ರಾ.ರೈ.ಸಂ ಬೆಂಬಲ ಬೆಲೆ ಅಂಶಕ್ಕೆ ನೀಡಿದ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತವೆ.

ಸರ್ಕಾರ ಬೇಡಿಕೆ ಪಟ್ಟಿಯಲ್ಲಿನ ೧೯ ಬೇಡಿಕೆಗಳಲ್ಲಿ ೧೨ ಬೇಡಿಕೆಗಳಿಗೆ ತನ್ನ ಸಮ್ಮತಿ ನೀಡಿತು. ಸಮ್ಮತಿಸಲ್ಪಟ್ಟ ೧೨ ಬೇಡಿಕೆಗಳಲ್ಲಿ, ಬೆಲೆಗೆ ಸಂಬಂಧಿಸಿದ ೩ ಬೇಡಿಕೆಗಳೂ ಸೇರಿದ್ದವು. ಅವುಗಳೆಂದರೆ

೧) ಕಬ್ಬಿನ ಖರೀದಿ ತೆರಿಗೆಯನ್ನು ೧೯.೨೦ ರೂ ನಿಂದ ೧೨ ರೂ ಪ್ರತಿ ಟನ್ನಿಗೆ ಇಳಿಸಲಾಯಿತು. (ಸರ್ಕಾರದ ಶ್ವೇತ ಪತ್ರದಲ್ಲಿ ೭ನೆಯದು)

೨) (ಸರ್ಕಾರದ ಶ್ವೇತ ಪತ್ರದಲ್ಲಿ ೯ನೆಯದು) ಶ್ವೇತ ಪತ್ರ ಕೃಷಿ ಸರಕುಗಳಿಗೆ ಬೆಂಬಲ ಬೆಲೆ ನೀಡಬೇಕೆನ್ನುವ ಬೇಡಿಕೆ ಸಾಕಷ್ಟು ಗುರುತಿಸಲ್ಪಟ್ಟಿತ್ತು ಎಂದು ಕಂಡುಕೊಂಡಿತು ಮತ್ತು ಕೃಷಿ ಬೆಲೆ ಸಮಿತಿಯು ಈಗಾಗಲೇ ಕೈಗಾರಿಕೆಯ ಮೇಲೆ ಆಧರಿಸಿದ ವೆಚ್ಚದ ವಿಧಾನವನ್ನು ಅಳವಡಿಸಿಕೊಂಡಿತ್ತು. ಕರ್ನಾಟಕದಲ್ಲಿ (ಇತರ ರಾಜ್ಯಗಳಂತೆಯೇ) ಅದು ಕೃಷಿ ಬೆಲೆ ಸಮಿತಿ ಮತ್ತು ಕೇಂದ್ರ ಸರ್ಕಾರ ಶಿಫಾರಸ್ಸು ಮಾಡಿದ ಬೆಲೆಗಿಂತ ಹೆಚ್ಚಿನ ಮಟ್ಟದಲ್ಲಿ ಬೆಲೆಗಳನ್ನು ನಿರ್ಧರಿಸಿತ್ತು ಎಂದು ತೋರಿಸಿಕೊಟ್ಟಿತು.

೩) (ಸರ್ಕಾರದ ಶ್ವೇತ ಪತ್ರದಲಿ ೧೦ನೆಯದು) ಸಮಾನತೆ ತತ್ವವನ್ನು ಬೆಲ ನೀತಿಯಲ್ಲಿ ಸಮ್ಮಿತಿಸಲಾಯಿತು. ೧೯೮೦ರ ಆಗಸ್ಟ್‌ನಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಸಭೆಯಲ್ಲಿ ಮುಖ್ಯಮಂತ್ರಿಗಳು ಅದನ್ನು ಬೆಂಬಲಿಸಿದರು. ಕೃಷಿ ಆಯೋಗ ಕೃಷಿಯ ವ್ಯಾಪಾರದ ಕರಾರಿನ ಆಧಾರದಲ್ಲೂ ಸಮಾನತೆಯ ಅಂಶವನ್ನು ಪರಿಗಣಿಸಿತು.

ಮೊದಲ ಹೋರಾಟ (೧ನೇ, ಸೆಪ್ಟೆಂಬರ್ ನಿಂದ ೧೭ನೇ, ಅಕ್ಟೋಬರ್ ವರೆಗೆ) ವಿಷಯ, ಪ್ರದೇಶ, ವರ್ಗ ಇತ್ಯಾದಿ ಪರಿಗಣಿಸದೆ ರೈತರ ಎಲ್ಲಾ ೧೯ ಬೇಡಿಕೆಗಳಿಗಾಗಿ ವ್ಯವಸ್ಥೆಗೊಳಿಸಲಾಗಿತ್ತು. ಆದರೆ ೧೯೮೦ ಮತ್ತು ನಂತರ, ಹೋರಾಟಗಳನ್ನು ನಿರ್ದಿಷ್ಟ ವಿಷಯಗಳಿಗಾಗಿ ನಡೆಸಲಾಯಿತು. ಆದ್ದರಿಂದ ಈ ಅಧ್ಯಯನದಲ್ಲಿ ಕ.ರಾ.ರೈ.ಸಂ. ಅಡಿಯಲ್ಲಿ ಬೆಂಬಲ ಬೆಲೆಗಾಗಿ ನಡೆದ ಹೋರಾಟಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸಿದ್ದೇನೆ. ಅವುಗಳೆಂದರೆ :

೧) ಕಬ್ಬು ಬೆಲೆ ಮತ್ತು ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ನಡೆದ ಹೋರಾಟಗಳು
೨) ಭತ್ತದ ಬೆಲೆ ಮತ್ತು ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ನಡೆದ ಹೋರಾಟಗಳು
೩) ಇತರ ಬೆಳೆಗಳ ಬೆಂಬಲ ಬೆಲೆಗೆ ನಡೆದ ಹೋರಾಟಗಳು

ಕಬ್ಬು ಬೆಲೆ ಮತ್ತು ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ನಡೆದ ಹೋರಾಟಗಳು

ಕರ್ನಾಟಕದಲ್ಲಿ, ಪ್ರಾರಂಭದ ದಿನಗಳಲ್ಲಿ ರೈತರ ಚಳುವಳಿಯೆಂದರೆ ಕಬ್ಬು ಬೆಳೆಗಾರರ ಚಳುವಳಿಯೆಂದು ಅರ್ಥೈಸಲಾಗಿತ್ತು. ಇದನ್ನು ಪ್ರಾರಂಭದಲ್ಲಿ ೧೯೭೦ರಲ್ಲಿ ಶಿವಮೊಗ್ಗಾದ ಕಬ್ಬು ಬೆಳೆಗಾರ ರೈತರ ಶೋಷಣೆಯ ವಿರುದ್ಧ ವ್ಯವಸ್ಥೆ ಮಾಡಲಾಗಿತ್ತು. ನಂತರ ರಾಜ್ಯದ ಇತರ ಭಾಗಗಳಿಗೂ ಹರಡಿತು. ನಂತರ ಇದೇ ಕ.ರಾ.ರೈ.ಸಂ.ವಾಗಿ ಉದ್ಭವಿಸಿತು. ಕಬ್ಬು ಬೆಳೆಗಾರರ ಸಮಸ್ಯೆ ಕ.ರಾ.ರೈ.ಸಂಕ್ಕೆ ಪ್ರಮುಖವಾದ ಆಧಾರ ನೀಡಿತು. ಮತ್ತು ಮಲಪ್ರಭಾ ಅಚ್ಚುಕಟ್ಟು ಪ್ರದೇಶ ಹೋರಾಟದ ನಂತರ ರೈತರ ಚಳುವಳಿಗಳಲ್ಲಿ ಪ್ರಾಬಲ್ಯ ಸಾಧಿಸಿತ್ತು. ಕ.ರಾ.ರೈ.ಸಂ.ದ ತೀವ್ರಗಾಮಿ ಗುಂಪು ಮೂಲತಃ ಶಿವಮೊಗ್ಗಾದ ಕಬ್ಬು ಬೆಳೆಗಾರರನ್ನು ಹೊಂದಿತ್ತು ನಂತರ ಮಂಡ್ಯದವರು ಇದ್ದರು. ಕಬ್ಬು ಬೆಳೆಗಾರರ ಹೋರಾಟದ ಇತಿಹಾಸವು ೧೯೭೧ರ ಆಗಸ್ಟ್ ೧೪ರಂದು ಶಿವಮೊಗ್ಗ ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ರಚನೆಯೊಂದಿಗೆ ಪ್ರಾರಂಭವಾಯಿತು. ಸರ್ಕಾರ ಮತ್ತು ಶಿವಮೊಗ್ಗಾ ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ನಡುವೆ ಕಬ್ಬಿನ ಬೆಲೆ ವಿಷಯ ಒಂದು ಪ್ರಮುಖ ವಿವಾದದ ಅಂಶವಾಗಿತ್ತು. ಶಿ.ಜಿ.ಕ.ಬೆ.ಸಂ. ೧೯೭೦ರಲ್ಲಿ ಪ್ರಾರಂಭವಾದರೂ ಅದರ ಹೋರಾಟ ಶ್ರೀ. ಎಚ್. ಎಸ್. ರುದ್ರಪ್ಪನವರು

ಅಧ್ಯಕ್ಷರಾದ ಮೇಲೆ ಪ್ರಾರಂಭವಾಯಿತು. ೧೯೭೭ರಿಂದ ಅದು ನಿರ್ದಿಷ್ಟವಾಗಿ ಕಬ್ಬು ಬೆಳೆಗಾರರಿಗಾಗಿ ಒಟ್ಟಾರೆಯಾಗಿ ರಾಜ್ಯದ ರೈತರಿಗಾಗಿ ಹೋರಾಡುತ್ತಿದೆ. ಶಿವಮೊಗ್ಗಾ ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಬೇಡಿಕೆಗಳು ಅದರ ಪ್ರಾರಂಭದ ಉದ್ದೇಶವಾದ ಕಬ್ಬಿಗೆ ನಿರ್ದಿಷ್ಟವಾಗಿ ವೈಜ್ಞಾನಿಕ ಬೆಲೆ ಪಡೆಯುವುದು ಮತ್ತು ಇತರ ಕೃಷಿ ಸರಕುಗಳಿಗೆ ವೈಜ್ಞಾನಿಕ ಬೆಲೆ ಪಡೆಯುವುದು, ಲೆವಿ ಪದ್ಧತಿ ರದ್ಧತಿ, ಕೃಷಿ ಸರಕುಗಳ ಅಂತರ ರಾಜ್ಯ ಚಲನೆಯ ಮೇಲಿನ ನಿಯಂತ್ರಣ ರದ್ಧತಿ ಮತ್ತು ರೈತರ ಇತರ ಅನೇಕ ಸಮಸ್ಯೆಗಳಾಗಿದ್ದವು.

ಅಸಾದಿ ಹೇಳುವಂತೆ ಶಿವಮೊಗ್ಗಾ ಜಿಲ್ಲಾ ಕಬ್ಬು ಬೆಳೆಗಾರರ ಸಂಘ ಎರಡು ಹಂತಗಳನ್ನು ಹೊಂದಿದೆ. ಒಂದು ೧೯೮೦ರವರೆಗೆ, ೧೯೮೦ರ ನಂತರ ಮತ್ತೊಂದು ಹಂತ. ೧೯೮೦ರವರೆಗೆ ಅದು ನ್ಯಾಯಯುತ ಬೆಲೆಗಾಗಿ ಚರ್ಚೆ ಮತ್ತು ರಾಜಿ ವಿಧಾನವನ್ನು ಅಳವಡಿಸಿಕೊಂಡಿತ್ತು. ೧೯೮೦ರ ನಂತರ ಅಥವಾ ಕ.ರಾ.ರೈ.ಸಂ. ಪ್ರಾರಂಭವಾದಾಗಿನಿಂದ, ಕಬ್ಬಿನ ಪೂರೈಕೆಯನ್ನು ಹಿಂದಕ್ಕೆ ಪಡೆಯುವುದು, ರಸ್ತೆ ತಡೆ, ಉಪವಾಸ ಸತ್ಯಾಗ್ರಹ, ಸಕ್ಕರೆ ಕಾರ್ಖಾನೆಗಳಿಗೆ ಬೀಗ ಹಾಕುವುದು ಮತ್ತು ಅಂತಿಮವಾಗಿ ಕಾರ್ಖಾನೆಯ ಆಸ್ತಿಯನ್ನು ಜಪ್ತಿ ಮಾಡುವ ವಿಧಾನಗಳಿಗೆ ಬದಲಾಗಿದೆ.

ಕಬ್ಬಿನಿಂದ ಸಕ್ಕರೆಯವರೆಗೆ ಇರುವ ಎಲ್ಲಾ ಹಂತಗಳಲ್ಲಿ ಕಂಡು ಬಂದ ಸಮಸ್ಯೆಗಳನ್ನು ನಿವಾರಿಸಲು ಕಬ್ಬು ಬೆಳೆಗಾರರ ಹೋರಾಟ ನಡೆದಿತ್ತು. ಮೊದಲನೆಯದಾಗಿ, ಸರ್ಕಾರ ಪ್ರತಿಯೊಂದು ಸಕ್ಕರೆ ಕಾರ್ಖಾನೆ ಅರೆಯುವ ಕಬ್ಬಿನ ಪ್ರಮಾಣವನ್ನು ನಿರ್ಧರಿಸುತ್ತಿದ್ದರಿಂದ, ಕಬ್ಬು ಬೆಳೆಗಾರರು ಕಬ್ಬು ಉತ್ಪಾದನೆಯಲ್ಲಿ ಮತ್ತು ಅದರ ಅರೆಯುವಿಕೆಯಲ್ಲಿ ಹಿಡಿತ ಸಾಧಿಸಿದರು. ಏಕೆಂದರೆ ಕಬ್ಬಿನ ಅರೆಯುವಿಕೆ ಯಾವಾಗಲೂ ಉತ್ಪಾದನೆಯ ಪ್ರಮಾಣಕ್ಕಿಂತ ಕಡಿಮೆಯಿತ್ತು. ಉದಾಹರಣೆಗೆ ೧೯೮೦–೮೧ರಲ್ಲಿ, ಉತ್ಪಾದನೆ ೫೧.೪೭ ಲಕ್ಷ ಟನ್ನು ಇದ್ದರೆ, ಅದರ ಬಳಕೆ ಕೇವಲ ೪೯.೭ ಲಕ್ಷ ಟನ್ನುಗಳಾಗಿತ್ತು. ೧೯೮೧–೮೨ರಲ್ಲಿ, ಇವೆರಡರ ವ್ಯತ್ಯಾಸ ೮೪.೩೬ ಲಕ್ಷ ಟನ್ನು ಮತ್ತು ೫೭.೪ ಲಕ್ಷ ಟನ್ನುಗಳು. ೧೯೮೨–೮೩ರಲ್ಲಿ ವ್ಯತ್ಯಾಸ ೮೨.೩೦ ಲಕ್ಷ ಟನ್ನು ಮತ್ತು ៦೪.೯ ಲಕ್ಷ ಟನ್ನುಗಳು ಹಾಗೆಯೇ ೧೯೮೩–೮೪ರಲ್ಲಿ ೭೫.೪ ಲಕ್ಷ ಟನ್ನು ಮತ್ತು ೫೯.೦೭ ಲಕ್ಷ ಟನ್ನುಗಳು. ಈ ವ್ಯತ್ಯಾಸಗಳು ಇಂದಿಗೂ ಮುಂದುವರಿಯುತ್ತಿದೆ. ೧೯೯೫ರ ನವೆಂಬರ್‌ನಲ್ಲಿ ಕ.ರಾ.ರೈ.ಸಂ. ತುಂಗಭದ್ರಾ ಸಕ್ಕರೆ ಕಾರ್ಖಾನೆಯ ತೆರೆಯುವಿಕೆಯ ನಿಧಾನಗತಿಯ ವಿರುದ್ಧ ರಸ್ತೆ ತಡೆ ಚಳುವಳಿಗೆ ಕರೆ ನೀಡಿತು, ಏಕೆಂದರೆ ೪೦ ಕೋಟಿ ರೂ ಮೌಲ್ಯದ ಲಕ್ಷ ಟನ್ನುಗಳಷ್ಟು ಕಬ್ಬು ಫಸಲಿಗೆ ಬಂದಿತ್ತು.

ಕರ್ನಾಟಕದ ಮುಖ್ಯಮಂತ್ರಿಗಳಾದ ಎಚ್. ಡಿ. ದೇವೇಗೌಡರು ಏಪ್ರಿಲ್ ೧೯೯೬ರಲ್ಲಿ ಅಸ್ತಿತ್ವದಲ್ಲಿರುವ ಸಕ್ಕರೆ ಕಾರ್ಖಾನೆಗಳು ಕೇವಲ ೧೨೦ ಲಕ್ಷ ಟನ್ನುಗಳಷ್ಟು ಕಬ್ಬನ್ನು ಅರೆಯಬಹುದೆಂದು ಹೇಳಿದರು. ಆದರೆ ನಿರೀಕ್ಷಿತ ಉತ್ಪನ್ನ ೨೨೦ ಲಕ್ಷ ಟನ್ನುಗಳಷ್ಟಾಗಿತ್ತು. ಆದ್ದರಿಂದ ಉಳಿದ ೧೦೦ ಲಕ್ಷ ಟನ್ನುಗಳಷ್ಟು ಕಬ್ಬು ಯಾವುದೇ ಅರೆಯುವ ಸೌಲಭ್ಯ ಹೊಂದಿರಲಿಲ್ಲ. ಆದ್ದರಿಂದ ಅವರು ಅಸ್ತಿತ್ವದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಮತ್ತೆ ೨ ತಿಂಗಳು ಕಾಲ ಅರೆಯುವಿಕೆಯನ್ನು ಮುಂದುವರೆಸಬೇಕೆಂದು ಸರ್ಕಾರಕ್ಕೆ ೧೦ ಕೋಟಿ ನಷ್ಟವಾದರೂ ಲೆಕ್ಕಿಸದೆ ಆದೇಶ ನೀಡಿದರು. ನಷ್ಟ ಕುರಿತು ರಾಜ್ಯದ ಹಿತಾಸಕ್ತಿಗಿಂತ ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ಅವರು ಬಯಸುತ್ತಾರೆಂದು ಅವರು ವ್ಯಕ್ತಪಡಿಸಿದರು. ೧೯೯೫ರ ಅಕ್ಟೋಬರ್‌ನಲ್ಲಿ, ಕ.ರಾ.ರೈ.ಸಂ. ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಒಂದು ಹೋರಾಟವನ್ನು ಸಂಘಟಿಸಿದರು ಮತ್ತು ಶಿವಮೊಗ್ಗಾ ಜಿಲ್ಲೆಯಲ್ಲಿ ಅರೆಯುವ ಅವಧಿಯ ವಿಸ್ತರಣೆಗಾಗಿ ಒತ್ತಾಯಿಸಿದರು. ೨೦೦೮ರ ಸ್ಥಿತಿ ಭಿನ್ನವಾಗೇನೂ ಇಲ್ಲ. ಒಂದು ಟನ್ ಕಬ್ಬಿಗೆ ನೂರು ರೂಪಾಯಿ ಕೊಟ್ಟು ಕಟಾವು ಮಾಡಿಕೊಳ್ಳಿ ಎಂದರು ಯಾರು ಮುಂದೆ ಬರುತ್ತಿಲ್ಲ. ಆದ್ದರಿಂದ ಸಾವಿರಾರು ಎಕರೆ ಕಬ್ಬಿಗೆ ಬೆಂಕಿ ಹಾಕಿದ್ದಾರೆ, ಟ್ರಾಕ್ಟರ್ ಅನ್ನು ಹಾಯಿಸಿ ಉಳುಮೆ ಮಾಡಿದ್ದಾರೆ. ಕೃಷಿ ಇಲಾಖೆಯ ಮೂಲಗಳ ಪ್ರಕಾರ ೨೦೦೮ಕ್ಕೆ, ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾವತಿಯ ಎಂ.ಪಿ.ಎಂ. ಸಕ್ಕರೆ ಕಾರ್ಖಾನೆ ನಿಗದಿಪಿಸಿರುವ ಅರೆಯುವ ಸಾಮರ್ಥ್ಯ ೫.೫ ಲಕ್ಷ ಟನ್. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆದಿರುವ ಕಬ್ಬಿನ ಪ್ರಮಾಣ ೮ ಲಕ್ಷ ಟನ್ ಆಗಿದೆ. ಬೇರೆ ಜಿಲ್ಲೆಗಳಲ್ಲಿ ಸ್ಥಿತಿ ಇದಕ್ಕಿಂತ ಭಿನ್ನವಾಗೇನು ಇಲ್ಲ.

ಆಯುಕ್ತರ ಕಛೇರಿ ಸಕ್ಕರೆ ಅಭಿವೃದ್ಧಿ ಮತ್ತು ನಿರ್ದೇಶಕರ ಕಛೇರಿ, ನವೆಂಬರ್ ೧೯೯೫ರಲ್ಲಿ ಕಾರ್ಖಾನೆಗಳಿಗೆ ಕಬ್ಬು ಅರೆಯಲು ಆದೇಶ ನೀಡಿದ್ದವು. ಪಟ್ಟಿ ೧.೯ರಲ್ಲಿ ಕಾರ್ಖಾನೆಗಳ ಮತ್ತು ಕಬ್ಬು ಅರೆಯುವ ಪ್ರಮಾಣವನ್ನು ತೋರಿಸಲಾಗಿದೆ.

ಪಟ್ಟಿ ೧.೯

ಕಾರ್ಖಾನೆಗಳ ಕಬ್ಬು ಅರೆಯುವ ಪ್ರಮಾಣ

ಕ್ರಮ. ಸಂಖ್ಯೆ.	ಕಾರ್ಖಾನೆಯ ಹೆಸರು	ಕಬ್ಬಿನ ಪ್ರಮಾಣ ಮೆಟ್ರಿಕ್ ಟನ್ನುಗಳಲ್ಲಿ
೧	**ಮೈಸೂರು** ಕಾಗದ ಕಾರ್ಖಾನೆ, ಭದ್ರಾವತಿ	૩೦೦
೨	ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದಾವಣಗೆರೆ	૩೦೦

೩	ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ, ಹಿರಿಯೂರು	೨೦೦
೪	ದಾವಣಗೆರೆ ಸಕ್ಕರೆ ಕಾರ್ಖಾನೆ, ಕುಕ್ಕವಾಡ	೩೦೦
೫	ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ, ಹಾವೇರಿ	೨೦೦

ಮೂಲ : ಆಯುಕ್ತರ ಕಛೇರಿ, ಸಕ್ಕರೆ ಅಭಿವೃದ್ಧಿ ಮತ್ತು ನಿರ್ದೇಶಕರು, ಬೆಂಗಳೂರು. ನವೆಂಬರ್, ೧೯೯೫.

ಎಂ. ಪಿ. ಎಂ. ಸಕ್ಕರೆ ಕಾರ್ಖಾನೆ, ಭದ್ರಾವತಿ, ಮೇ ೨೨, ೧೯೯೬ರಂದು ತನ್ನ ನಿಗದಿತ ಅವಧಿಗೆ ತಕ್ಕಂತೆ ಕಬ್ಬಿನ ಅರೆಯುವಿಕೆಯನ್ನು ನಿಲ್ಲಿಸಿತು. ಸುಮಾರು ೨೫,೦೦೦ ಟನ್ನುಗಳಷ್ಟು ಕಬ್ಬು ಉಳಿಯಿತು. ತಕ್ಷಣ ಕ.ರಾ.ರೈ.ಸಂ.ದ ಪ್ರತಿನಿಧಿಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದರು ಮತ್ತು ಸಕ್ಕರೆ ಮಂತ್ರಿಗಳನ್ನು ಭೇಟಿ ಮಾಡಿ ಈ ವಿಷಯದತ್ತ ಗಮನ ಹರಿಸಬೇಕೆಂದು ಕೇಳಿಕೊಂಡರು. ತಿಂಗಳ ಕೊನೆಯವರೆಗೂ ಅರೆಯುವಿಕೆಯನ್ನು ಕಾರ್ಖಾನೆ ಮುಂದುವರೆಸಬೇಕೆಂದು ಮುಖ್ಯಮಂತ್ರಿಗಳು ಆದೇಶ ಹೊರಡಿಸಿದರು.

೧೯೯೬ರ ಆಗಸ್ಟ್‌ನಲ್ಲಿ ಮತ್ತೆ ಕಬ್ಬು ಬೆಳೆಗಾರರ ಪರಿಸ್ಥಿತಿ ಶೋಚನೀಯವಾಗಿತ್ತು. ಕ.ರಾ.ರೈ.ಸಂ. ಒಂದು ಮನವಿಯನ್ನು ಮುಖ್ಯ ಮಂತ್ರಿಗಳಿಗೆ ಸಲ್ಲಿಸಿ ಕಬ್ಬು ಅರೆಯುವಿಕೆಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಕಬ್ಬಿನ ಪ್ರಮಾಣ ನಿಶ್ಚಿತವಾಗಿ ಅಧಿಕ ಪ್ರಮಾಣದಲ್ಲಿ ಹೆಚ್ಚಿತು. ಆದರೆ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಅಷ್ಟೇ ಇತ್ತು (೧೩), ಆದ್ದರಿಂದ ಈ ಸಮಸ್ಯೆಯನ್ನು ಆಗಾಗ್ಗೆ ಎದುರಿಸಬೇಕಾಗಿತ್ತು. ನಂತರ ಮುಖ್ಯ ಮಂತ್ರಿ ಜೆ. ಹೆಚ್. ಪಟೇಲರು ನೆರೆ ರಾಜ್ಯವಾದ ಮಹಾರಾಷ್ಟ್ರಕ್ಕೆ ನಮ್ಮ ರಾಜ್ಯದಲ್ಲಿ ಬೆಳೆದ ಹೆಚ್ಚುವರಿ ಕಬ್ಬಿನ ಅರೆಯುವಿಕೆಗೆ ಕೇಳಿಕೊಂಡರು. ಮಹಾರಾಷ್ಟ್ರ ಸರ್ಕಾರ ಈ ಕೋರಿಕೆಯನ್ನು ಮನ್ನಿಸಿತು ಮತ್ತು ಉಳಿದುದನ್ನು ಅರೆಯಿಸಿತು. ಅದೇ ವೇಳೆಗೆ ಶ್ರೀ. ಎಚ್. ಡಿ. ದೇವೇಗೌಡರು ಭಾರತದ ಪ್ರಧಾನಿಯಾಗಿದ್ದರು, ಅವರು ರೈತ ಹಿನ್ನೆಲೆಯಿಂದ ಬಂದಿದ್ದರಿಂದ, ರಾಜ್ಯಕ್ಕೆ ೧೬ ಸಕ್ಕರೆ ಕಾರ್ಖಾನೆಗಳನ್ನು ಬಿಡುಗಡೆ ಮಾಡಿದರು ಮತ್ತು ಈಗಾಗಲೇ ಇರುವ ೧೩ ಕಾರ್ಖಾನೆಗಳ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸಿದರು. ಇದರಿಂದ ತಕ್ಷಣದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಕಂಡುಹಿಡಿಯಲು ಕ್ರಮ ಕೈಗೊಂಡರು.

ದೇವಿ ಸಕ್ಕರೆ ಕಾರ್ಖಾನೆ, ೧೯೯೫-೯೬ರಲ್ಲಿ ಅದರ ವ್ಯಾಪ್ತಿಯಲ್ಲಿ ಬೆಳೆದ ೪ ಲಕ್ಷ ಟನ್ನುಗಳಷ್ಟು ಕಬ್ಬಿನಲ್ಲಿ ಕೇವಲ ೯೮,೦೦೦ ಟನ್ನುಗಳಷ್ಟು ಕಬ್ಬನ್ನು ಮಾತ್ರ ಅರೆಯಿಸಿತು. ಉಳಿದುದನ್ನು ನೆರೆಯ ಸಕ್ಕರೆ ಕಾರ್ಖಾನೆಗಳು ಮತ್ತು ಬೆಲ್ಲ ಉತ್ಪಾದನೆಯ ಕೇಂದ್ರಗಳಿಗೆ ಹೆಚ್ಚು ಸಾರಿಗೆ ವೆಚ್ಚ ನೀಡಿ ವರ್ಗಾಯಿಸಲಾಯಿತು. ಈ ತೊಂದರೆಯಿಂದಾಗಿ ಈ ಪ್ರದೇಶದ ಕಬ್ಬು ಬೆಳೆಗಾರರು ಅಧಿಕ ನಷ್ಟ ಅನುಭವಿಸಬೇಕಾಯಿತು. ಮುಂದಿನ ಋತಮಾನದಲ್ಲಿ ೧೯೯೬-೯೭ರಲ್ಲಿ ಸಕ್ಕರೆ ಕಾರ್ಖಾನೆಯನ್ನೇ, ಆಡಳಿತ ವರ್ಗ ಅಧಿಕ ನಷ್ಟದಿಂದಾಗಿ ಮುಚ್ಚಿತು. ಕಾರ್ಖಾನೆಯನ್ನು ತೆರೆಯಿಸಲು ಕ.ರಾ.ರೈ.ಸಂ ಮತ್ತು ಕಾರ್ಖಾನೆಯ ಕಾರ್ಮಿಕ ಸಂಘ ಹಲವಾರು ಸತ್ಯಾಗ್ರಹ ಮತ್ತು ಉಪವಾಸ ಸತ್ಯಾಗ್ರಹಗಳನ್ನು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಕೈಗೊಂಡರು ಮತ್ತು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಇಷ್ಟೆಲ್ಲಾ ಆದರೂ ದೇವಿ ಸಕ್ಕರೆ ಕಾರ್ಖಾನೆ ಇನ್ನೂ ಪುನರಾರಂಭವಾಗಬೇಕಿದೆ.

ಎರಡನೇ ಸಮಸ್ಯೆಯೆಂದರೆ ಕಬ್ಬಿನ ಬೆಲೆ ನಿರ್ಧಾರ ಮತ್ತು ಬಾಕಿ ಪಾವತಿ. ಕಬ್ಬಿನ ಬೆಲೆ ಕ.ರಾ.ರೈ.ಸಂ. ಮತ್ತು ಸರ್ಕಾರದ ನಡುವೆ ಭಿನ್ನಾಭಿಪ್ರಾಯದ ವಿಷಯವಾಗಿತ್ತು. ಬಾಕಿ ಪಾವತಿಗೆ ಸಂಬಂಧಿಸಿದಂತೆ, ಸರ್ಕಾರದಲ್ಲಿ ಒಂದು ನಿಯಮವಿದೆ, ಅದೇನೆಂದರೆ, ಕಬ್ಬಿನ ಖರೀದಿಯ ೧೪ ದಿನಗಳ ಒಳಗೆ ಹಣವನ್ನು ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕು, ಆದರೆ ಬಾಕಿ ಪಾವತಿ ಹಲವಾರು ವರ್ಷಗಳನ್ನು ತೆಗೆದುಕೊಂಡಿತು. ಪಾವತಿ ಹಲವಾರು ವರ್ಷಗಳನ್ನು ತೆಗೆದುಕೊಂಡಿತು. ಈ ಸಮಸ್ಯೆ ನಿವಾರಿಸಲು ಸರ್ಕಾರ ಅಂತಹ ಕೈಗಾರಿಕೆಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಆದ್ದರಿಂದ, ಬಾಕಿ ಪಾವತಿಗಾಗಿ ಹೋರಾಟ, ಅಧಿಕ ಬೆಲೆಗಾಗಿ ನಡೆಯುವ ಹೋರಾಟದೊಂದಿಗೆ ಮುಂದುವರಿಯುತ್ತಿದೆ. ಕೇಂದ್ರ ಸರ್ಕಾರದ ಬೆಲೆ ಭರವಸೆಯ ಫಲವಾಗಿ, ಕಬ್ಬಿನ ಉತ್ಪಾದನೆ ಅಧಿಕ ಪ್ರಮಾಣದಲ್ಲಿ ಹೆಚ್ಚಿತು ಮತ್ತು ಸರ್ಕಾರ ಹಾಗೂ ಕಬ್ಬು ಬೆಳೆಗಾರರ ನಡುವೆ ಹಲವಾರು ಪರಿಣಾಮಗಳನ್ನು ಉಂಟುಮಾಡಿದೆ. ೧೯೮೧-೮೨ರಲ್ಲಿ ಕ.ರಾ.ರೈ.ಸಂ. ಮತ್ತು ಶಿವಮೊಗ್ಗಾ ಜಿಲ್ಲಾ ಕಬ್ಬು ಬೆಳೆಗಾರರ ಸಂಘಗಳು ಶಿವಮೊಗ್ಗಾದಲ್ಲಿ ೨೮೩.೮೦ ರೂಪಾಯಿಗಳನ್ನು ಪ್ರತಿ ಟನ್ನಿಗೆ ಶೇಕಡಾ ೮.೫ ರಷ್ಟು ಪ್ರತಿಯಾಗಿ ಒತ್ತಾಯಿಸಿದವು ಮತ್ತು ಅಂತಿಮ ತೀರ್ಮಾನ ೨೨೦.೦೦ ರೂಪಾಯಿ ಪ್ರತಿ ಟನ್ನಿಗೆ ಎಂದಾಯಿತು. ೧೯೮೩ರಲ್ಲಿ ಅದು ೪೨೨.೦೦ ರೂಪಾಯಿಗಳನ್ನು ಪ್ರತಿ ಟನ್ನಿಗೆ ಒತ್ತಾಯಿಸಿತು. ಸರ್ಕಾರ ಪ್ರತಿ ಟನ್ನಿಗೆ ರೂ. ೧೮೦ ಶೇಕಡಾ ೮.೫ರಷ್ಟು ಪ್ರತಿ ಪಾವತಿಯಾಗಿ ನಿರ್ಧರಿಸಿತು. ಆದರೆ ಪ್ರತಿ ಟನ್ನಿಗೆ ೨೨೦.೦೦ ರೂಪಾಯಿಗಳೆಂದು ನಿಗಧಿಸಿತು.

ಮಂಡ್ಯಾದಲ್ಲೂ ಇದೇ ವಿಧಾನ ಅನುಸರಿಸಲಾಯಿತು. ೧೯೮೦-೮೧ರಲ್ಲಿ,

ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶದ ರೈತರು ಧರಣಿ ಹೂಡಿದರು, ಇದು ೧೦೭ ದಿನಗಳವರೆಗೂ ಬಾಕಿ ಪಾವತಿಗಾಗಿ ಮುಂದುವರೆಯಿತು, ಅದು ३೭ ಲಕ್ಷ ರೂಪಾಯಿಗಳಷ್ಟಿತ್ತು. ಕ.ರಾ.ರೈ.ಸಂ ಮಂಡ್ಯ ಘಟಕ ಬಾಕಿ ಮೊತ್ತ ಪ್ರತಿ ವರ್ಷ ಹೆಚ್ಚುತ್ತಿದೆ ಎಂದು ಹೇಳಿತು. ಉದಾಹರಣೆಗೆ ರೈತರಿಗೆ ಮಂಡ್ಯ ಕಾರ್ಖಾನೆ ೧೯೮೦-೮೧ರಲ್ಲಿ ೪೨ ಲಕ್ಷ ರೂಪಾಯಿ ಮತ್ತು ೧೯೮೧-೮೨ರಲ್ಲಿ ೭೨ ಲಕ್ಷ ರೂಪಾಯಿಗಳನ್ನು ಬಾಕಿ ಹಣವೆಂದು ಉಳಿಸಿದೆ ಎಂದರು. ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ೧೯೮೧-೮೨ರಲ್ಲಿ ೮೦ ಲಕ್ಷ ರೂಪಾಯಿ ಮತ್ತು ೧೯೮೨-೮೩ರಲ್ಲಿ ೪೩.೫ ಲಕ್ಷ ರೂಪಾಯಿ ಬಾಕಿ ಆಗಿತ್ತು.

ಆಗಸ್ಟ್ ೧೯೮೩ರಲ್ಲಿ ಕ.ರಾ.ರೈ.ಸಂ. ಸಕ್ಕರೆ ಕಾರ್ಖಾನೆಗಳ ಬಾಕಿ ಕುರಿತು ವಿಧಾನ ಸೌಧದ ಒಳಗೆ ಧರಣಿಯೊಂದಕ್ಕೆ ಕರೆ ಕೊಟ್ಟಿತು. ಶಿವಮೊಗ್ಗಾದಿಂದ, ಮಂಡ್ಯ ಮತ್ತು ಹಾಸನದಿಂದ ಸುಮಾರು ೧೦೦ ಜನ ರೈತರು ಧರಣಿಯಲ್ಲಿ ಆಗಸ್ಟ್ ३ರಿಂದ ೯ರವರೆಗೆ ೧೯೮३ರಲ್ಲಿ ಪಾಲ್ಗೊಂಡರು (ಹಿಮ್ಮಡಿಯ ಮೇಲೆ ಕುಳಿತು, ಮುಂಗಾಲು ಮಡಚಿ ಕುಳಿತು). ಆಡಳಿತ ಪಕ್ಷದ ಎಂ.ಎಲ್.ಎ.ಗಳು (ಬಂಡಿ ಸಿದ್ದೇಗೌಡ ಮತ್ತು ಕೆಂಪೇಗೌಡ) ಧರಣಿಯಲ್ಲಿ ಪಾಲ್ಗೊಂಡರು. ಹಿಂದಿನ ಕಾಂಗ್ರೆಸ್‌ನ ಮೂವರು ಶಾಸಕರಾದ ಕೆ. ನಾಗೇಗೌಡ, ಎಂ.ಎಲ್.ಸಿ, ಎಚ್.ಸಿ.ಚೌಡಯ್ಯ ಮತ್ತು ಎಂ.ಎಸ್. ಆತ್ಮಾನಂದ, ಅವರನ್ನು ಬೆಂಬಲಿಸಿದರು. ಬಾಕಿ ಪಾವತಿಯ ಜೊತೆಗೆ ಹೋರಾಟದ ಅವಧಿಯಲ್ಲಿ ಚರ್ಚೆಗೆ ಬಂದ ವಿಷಯಗಳೆಂದರೆ ३ ಖಾಸಗಿ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಕರಣ (ತುಂಗಭದ್ರ, ಚಾಮುಂಡೇಶ್ವರಿ ಮತ್ತು ಸಾಲಾರ್ ಜಂಗ್) ಕಬ್ಬಿಗೆ ಬೆಂಬಲ ಬೆಲೆ, ಸಕ್ಕರೆ ಮೇಲಿನ ಲೆವಿ ರದ್ಧತಿ, ರಾಜ್ಯ ಮಟ್ಟದ ಕೃಷಿ ಬೆಲೆ ಸಮಿತಿ ರಚನೆ ಇತ್ಯಾದಿ. ಧರಣಿಯ ಮುಖ್ಯ ಅಂಶ ಬಾಕಿ ಪಾವತಿಯಾದ್ದರಿಂದ, ಕ.ರಾ.ರೈ.ಸಂ. ರಾಜ್ಯದಲ್ಲಿನ ಎಲ್ಲಾ ಸಕ್ಕರೆ ಕಾರ್ಖಾನೆಗಳ ಬಾಕಿ ಪಾವತಿಗೆ ತಕ್ಷಣ ३೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿತು. ರಾಜ್ಯ ಸರ್ಕಾರ ಇದನ್ನು ವಿರೋಧಿಸಿತು ಮತ್ತು ಬಾಕಿ ಹಣ ಕೇವಲ ೫.೬೭ ಕೋಟಿ ಆದರೆ ३೦ ಕೋಟಿ ರೂಪಾಯಿ ಅಲ್ಲವೆಂದು ಘೋಷಿಸಿತು. ಕ.ರಾ.ರೈ.ಸಂ. ಪ್ರತಿ ಟನ್ನಿಗೆ ४೨೨ ರೂಪಾಯಿ ನ್ಯಾಯಯುತ ಬೆಲೆ ಎಂದು ಭಾವಿಸಿತು. ಆದರೆ ನಂತರ ಸರ್ಕಾರ ಪ್ರತಿ ಟನ್ನಿಗೆ ೧೮೦ ರೂಪಾಯಿ ನಿಗಧಿ ಮಾಡಿತು ಶೇಕಡಾ ೮.೫ ಮರುಪಾವತಿಗಾಗಿ. ಕ.ರಾ.ರೈ.ಸಂ. ಇದನ್ನು ನಿರಾಕರಿಸಿತು. ಅಂತಿಮವಾಗಿ ವಿಧಾನ ಸೌಧದ ಒಳಗಿನ ಪ್ರಖ್ಯಾತ ಧರಣಿ ರೈತರಿಗೆ ಯಾವುದೇ ಅನುಕೂಲತೆಗಳಿಲ್ಲದೇ ಕೊನೆಗೊಂಡಿತು.

ಅದೇ ವೇಳೆಗೆ, ಕ.ರಾ.ರೈ.ಸಂ. ಬೆಲೆ ಇಳಿತವನ್ನಾಗಲೀ ಇಲ್ಲವೆ ಸಾಲಗಳಿಗೆ ಬಾಕಿ ಪಾವತಿಯನ್ನು ಹೊಂದಿಸುವುದನ್ನಾಗಲೀ ಬಯಸಲಿಲ್ಲ. ಆದ್ದರಿಂದ ಬಾಕಿ ಪಾವತಿಯ ಒಂದು ಭಾಗವನ್ನು ಸಾಲ ಮರುಪಾವತಿಗೆ ಹೊಂದಾಣಿಕೆ ಮಾಡಿಕೊಳ್ಳುವ ಬದಲಾಗಿ ಸಕ್ಕರೆಯ ರೂಪದಲ್ಲಿ ಕೊಡುವಂತೆ ಸಲಹೆ ಮಾಡಿತು. ಆದರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಕಾರ್ಖಾನೆ ಮಾಲೀಕರು ನೇರವಾಗಿ ಈ ಸಲಹೆಯನ್ನು ನಿರಾಕರಿಸಿದರು. ೧೯೮೬ರಲ್ಲಿ ಕೇಂದ್ರ ಸರ್ಕಾರ ಭಾರತೀಯ ಸರಾಸರಿಗೆ ಹೋಲಿಸಿದಾಗ ಕರ್ನಾಟಕದ ಲೆವಿ ಸಕ್ಕರೆಗೆ ಕಡಿಮೆ ಬೆಲೆಯನ್ನು ನಿಗದಿಪಡಿಸಿತು. ಕ.ರಾ.ರೈ.ಸಂ. ಕರ್ನಾಟಕದಲ್ಲಿ ಪ್ರತಿ ವರ್ಷ ೫ ಲಕ್ಷ ಟನ್ನು ಸಕ್ಕರೆಯನ್ನು ಉತ್ಪಾದಿಸಲಾಗುತ್ತದೆ ಮತ್ತು ೫೦ ಲಕ್ಷ ರೈತರು ಕಬ್ಬಿನ ಉತ್ಪಾದನೆಯಲ್ಲಿ ತೊಡಗಿದ್ದಾರೆ ಹಾಗೂ ಕೇಂದ್ರ ಸರ್ಕಾರಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಸಮಾನತೆ ಬೆಳೆಗಾರರ ನಡುವಣ ಅಸಮಾನತೆ ನಿವಾರಿಸಲು ಅವಶ್ಯಕವೆಂದು ಒತ್ತಾಯಿಸಿದರು. ಕರ್ನಾಟಕದ ಮುಖ್ಯಮಂತ್ರಿಗಳು ರಾಷ್ಟ್ರೀಯ ಅಭಿವೃದ್ಧಿ ನಿಗಮದ ಸಭೆಯಲ್ಲಿ ಈ ಅಸಮಾನತೆ ವಿಷಯವನ್ನು ಪ್ರಸ್ತಾಪಿಸುವುದಾಗಿ ಭರವಸೆಯಿತ್ತರು. ಅವರ ಭರವಸೆಯಂತೆ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದರು. ಕೇಂದ್ರ ಸರ್ಕಾರ ಇದಕ್ಕೆ ಪ್ರತಿಯಾಗಿ ರಾಜ್ಯಗಳ ನಡುವಣ ಬೆಲೆ ಅಸಮಾನತೆಯನ್ನು ಕಡಿಮೆ ಮಾಡುವುದಾಗಿ ಭರವಸೆ ನೀಡಿತು.

೧೯೮೮ರಲ್ಲಿ ಸರ್ಕಾರ ಪ್ರತಿ ಟನ್ನು ಕಬ್ಬಿಗೆ ೩೦೦ ರೂಪಾಯಿಗಳ ಬೆಂಬಲ ಬೆಲೆಯನ್ನು ಮಂಡ್ಯ, ಪಾಂಡವಪುರ ಮತ್ತು ಕಾಳಮುದ್ದನದೊಡ್ಡಿ ಸಕ್ಕರೆ ಕಾರ್ಖಾನೆಗಳಿಗೆ ಘೋಷಿಸಿತು. ಆದರೆ ಭದ್ರಾವತಿಯ ಎಂ.ಪಿ.ಎಂ ಸಕ್ಕರೆ ಕಾರ್ಖಾನೆ, ಕೇವಲ ೨೮೫ ರೂಪಾಯಿ ಪ್ರತಿ ಟನ್ನಿಗೆ ಘೋಷಿಸಿತು. ಕ.ರಾ.ರೈ.ಸಂ. ಈ ಬೆಲೆ ಅಸಮಾನತೆಯನ್ನು ವಿರೋಧಿಸಿತು ಮತ್ತು ಎಂ.ಪಿ.ಎಂ ಕಾರ್ಖಾನೆ ಎದುರು ಬೃಹತ್ ರ್‍ಯಾಲಿಯನ್ನು ಸಂಘಟಿಸಿತು. ಕಬ್ಬು ಬೆಳೆಗಾರರು ಸಾವಿರಾರು ಸಂಖ್ಯೆಯಲ್ಲಿ ತಮ್ಮ ಟ್ರಾಕ್ಟರು ಮತ್ತು ಪವರ್ ಟಿಲ್ಲರ್‌ಗಳೊಂದಿಗೆ ಭಾಗವಹಿಸಿದರು. ಅಂತಿಮವಾಗಿ ೩೦೦ ರೂಪಾಯಿ ಪ್ರತಿ ಟನ್ನಿಗೆ ಘೋಷಿಸುವವರೆಗೂ ಕಬ್ಬನ್ನು ಕಟಾವು ಮಾಡುವುದಿಲ್ಲವೆಂದು ರ್‍ಯಾಲಿ ನಿರ್ಧರಿಸಿತು.

ಕರ್ನಾಟಕ ಸರ್ಕಾರ ಕಬ್ಬು ಬೆಳೆಗಾರರಿಗೆ ಈ ಕೆಲವು ರಿಯಾಯ್ತಿಗಳನ್ನು ಘೋಷಿಸಿತು ಕಬ್ಬು ಖರೀದಿ ತೆರಿಗೆಯನ್ನು ರದ್ದುಗೊಳಿಸಲಾಯಿತು ಮತ್ತು ಪ್ರತಿ ಟನ್ನು ಕಬ್ಬಿಗೆ ಶೇಕಡಾ ೧೨ ಸಹಾಯಧನ ನೀಡಲಾಯಿತು. ೧೯೯೦ರ ಜೂನ್ ೩೦ರಲ್ಲಿ ನಡೆದ ಕಬ್ಬು ಬೆಳೆಗಾರರ ರಾಜ್ಯ ಮಟ್ಟದ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ೪೬೫ ರೂಪಾಯಿಗಳನ್ನು ಒತ್ತಾಯಿಸಲಾಯಿತು. ೧೯೯೦ರ ಜುಲೈ ೧೧ರಂದು ಮತ್ತೆ ಮೇಲ್ಮಟ್ಟದ ಸಭೆಯನ್ನು ನಡೆಸಲಾಯಿತು. ನಂಜುಂಡಸ್ವಾಮಿ ಮತ್ತು ಬಾಬಾಗೌಡ

ಪಾಟೀಲರು ಸಭೆಯಲ್ಲಿ ಹಾಜರಿದ್ದರು. ಆದರೆ ಸರ್ಕಾರ ಅವರ ಬೇಡಿಕೆಗಳನ್ನು ಪರಿಗಣಿಸದೆಯೇ ಒಮ್ಮತದಿಂದ ಪ್ರತಿ ಟನ್ನಿಗೆ ೩೬೦ ರೂಪಾಯಿಗಳನ್ನು ಘೋಷಿಸಿತು. ಸರ್ಕಾರದ ಅಂತಹ ನಿರ್ಧಾರಕ್ಕೆ ವಿರುದ್ಧವಾಗಿ ೧೩-೦೭-೯೦ರಲ್ಲಿ ಕ.ರಾ.ರೈ.ಸಂ.ದ ಸಭೆ ನಡೆಯಿತು. ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯನ್ನು ಬೀಗ ಹಾಕಲು ನಿರ್ಧರಿಸಲಾಯಿತು. (ಏಕೆಂದರೆ ಇಡೀ ರಾಜ್ಯದಲ್ಲಿ ಅರೆಯುವಿಕೆ ಆರಂಭಿಸಿದ ಮೊದಲ ಕಾರ್ಖಾನೆ ಅದಾಗಿತ್ತು) ಮತ್ತು ವೈಜ್ಞಾನಿಕ ಬೆಲೆಯನ್ನು ಘೋಷಿಸುವವರೆಗೂ ಕಾರ್ಖಾನೆಗಳಿಗೆ ಕಬ್ಬನ್ನು ಪೂರೈಸದಿರುವಂತೆ ಎಲ್ಲಾ ಕಬ್ಬು ಬೆಳೆಗಾರರಿಗೆ ಕೇಳಿಕೊಂಡಿತು. ಆದರೆ ಸರ್ಕಾರ ತನ್ನ ಮೊದಲ ಪ್ರತಿ ಟನ್ನಿಗೆ ೩೬೦ ರೂಪಾಯಿಗಳಿಗೇ ಸ್ಥಿರವಾಗಿತ್ತು. ಮಾರ್ಚ್ ೧೯೯೧ರಲಿ ಕ.ರಾ.ರೈ.ಸಂ. ರಸ್ತೆ ಮತ್ತು ರೈಲು ತಡೆ ಹೋರಾಟವನ್ನು ಕಬ್ಬು ಮತ್ತು ಇತರ ಕೃಷಿ ಸರಕುಗಳಿಗೆ ವೈಜ್ಞಾನಿಕ ಬೆಲೆಯನ್ನು ಒತ್ತಾಯಿಸಿ ಕರೆಕೊಟ್ಟಿತು.

ಕರ್ನಾಟಕದ ಮುಖ್ಯ ಮಂತ್ರಿಗಳು ಕಬ್ಬು ಬೆಳೆಗಾರರ ಪ್ರತಿನಿಧಿಗಳನ್ನು ೧೯೯೨-೯೩ನೇ ವರ್ಷದಲ್ಲಿ ಕಬ್ಬು ಬೆಲೆ ನಿರ್ಧಾರದ ಬಗ್ಗೆ ಚರ್ಚಿಸಲು ಕರೆಯಿಸಿದರು. ಮುಖ್ಯ ಮಂತ್ರಿಗಳು ಮತ್ತು ಕ.ರಾ.ರೈ.ಸಂ.- ಪ್ರತಿನಿಧಿಗಳ ನಡುವೆ ಅನೇಕ ಸಭೆಗಳು ೯-೯-೯೨, ೧೯-೧೦-೯೨, ೨೪-೧೦-೯೨ರಲ್ಲಿ ನಡೆದವು. ಅದೇ ವೇಳೆಗೆ ಕಬ್ಬು ಬೆಳೆಗಾರರ ಅಂತಿಮ ಸಭೆ ೨೯-೧೦-೯೨ರಲ್ಲಿ ಶ್ರೀ ಎನ್. ಡಿ. ಸುಂದರೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅದು ತುಂಗಭದ್ರ ಸಕ್ಕರೆ ಕಾರ್ಖಾನೆ ೧೯೯೨-೯೩ಕ್ಕೆ ಪ್ರತಿ ಟನ್ನು ಕಬ್ಬಿಗೆ ೪೪೬ ರೂಪಾಯಿಗಳನ್ನು ನಿಗಧಿಪಡಿಸಿದುದನ್ನು ಒಪ್ಪಿಕೊಂಡಿತು. ಆದರೆ ಅದು ತಾತ್ಕಾಲಿಕ, ರಾಜ್ಯ ನಿಗದಿಸಿದ ಬೆಲೆ ಅಂತಿಮ ಎಂಬುದನ್ನು ಅವರು ಸ್ಪಷ್ಟಪಡಿಸಿದರು.

ಕರ್ನಾಟಕ ಸರ್ಕಾರ ೫-೩-೯೩ರಲ್ಲಿ ಪ್ರತಿ ಟನ್ನಿಗೆ ೪೨೫ ರೂಪಾಯಿಗಳ ಬೆಂಬಲ ಬೆಲೆಯನ್ನು ಶೇಕಡಾ ೮.೫ ಮರುಪಾವತಿಯಂತೆ ೧೯೯೨-೯೩ಕ್ಕೆ ಕಬ್ಬಿಗೆ ಘೋಷಿಸಿತು. ಅದು ತುಂಗಭದ್ರ ಸಕ್ಕರೆ ಕಾರ್ಖಾನೆ ನಿಗದಿಪಡಿಸಿದ ೪೨೫ ರೂಪಾಯಿಗಿಂತ ೨೧ ರೂಪಾಯಿಗಳಷ್ಟು ಕಡಿಮೆ ಇತ್ತು. ಸರ್ಕಾರದ ಬೆಂಬಲ ಬೆಲೆ ಮತ್ತು ಕಾರ್ಖಾನೆಯ ಬೆಲೆಯ ನಡುವಿನ ವ್ಯತ್ಯಾಸ ಸಾಮಾನ್ಯ ಸಂಗತಿಯಾಗಿದೆ. ಆದರೆ ಕಾರ್ಖಾನೆಯ ನಿಗದಿತ ಬೆಲೆ ಯಾವಾಗಲೂ ಸರ್ಕಾರದ ಬೆಂಬಲ ಬೆಲೆಗಿಂತ ಅಧಿಕವಾಗಿರಬೇಕು. ಇಲ್ಲದಿದ್ದರೆ ಹೋರಾಟಗಳು ನಡೆಯುತ್ತವೆ. ತಕ್ಷಣ ದೇವೀ ಸಕ್ಕರೆ ಕಾರ್ಖಾನೆ ನಿಯಮಿತ ಆಡಳಿತ ನಿರ್ದೇಶಕರು ಬಾಕಿ ಕೇವಲ ೫ ಲಕ್ಷ ರೂಪಾಯಿಗಳಾಗಿದ್ದು, ೨೫-೩೧ರ ಆಗಸ್ಟ್ ೧೯೯೫ರಲ್ಲಿ ಯಾವುದೇ ಮುಂದೂಡಿಕೆ ಇಲ್ಲದೆ ಪಾವತಿ ಮಾಡಲಾಗುತ್ತದೆಂದು ಭರವಸೆ ನೀಡಿದರು. ಅವರು ಕಂಪೆನಿಯ ಸ್ವಂತ ಸಂಪನ್ಮೂಲದಿಂದ ಬಾಕಿ ಪಾವತಿ ಮಾಡಲಾಗುವುದೆಂದು ಭರವಸೆ ನೀಡಿದರು.

ಈ ಭರವಸೆ ನಂತರ ಕಾರ್ಖಾನೆಗೆ ಕಬ್ಬನ್ನು ಅರೆಯಲು ಅವಕಾಸ ನೀಡಲಾಯಿತು. ಶಿವಮೊಗ್ಗಾ ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರು ದೇವಿ ಸಕ್ಕರೆ ಕಾರ್ಖಾನೆ ನಿಯಮಿತ ಇದರ ನಿರ್ದೇಶಕರಿಗೆ ೧೫-೩-೯೫, ೧೯-೫-೯೫, ೨೦-೬-೯೫, ೨೪-೧೦-೯೫, ೨೭-೧೧-೯೫ರಲ್ಲಿ ಹಲವಾರು ಪತ್ರಗಳನ್ನು ಬರೆದು ಬಾಕಿ ಪಾವತಿಗಾಗಿ ಒತ್ತಾಯಿಸಿದರು.

ಮತ್ತೆ ೧೯೯೫ರ ಸೆಪ್ಟೆಂಬರ್ ೨೮ರಂದು ಒಂದು ತುರ್ತು ಸಭೆ ಕರೆಯಿತು ಮತ್ತು ೧೯೯೩-೯೪ಕ್ಕೆ ಹೆಚ್ಚುವರಿ ೪೦ ರೂಪಾಯಿಗಳನ್ನು ಬೇಡಿಕೆ ಸಲ್ಲಿಸಲು ನಿರ್ಧರಿಸಿತು ಮತ್ತು ೧೯೯೪-೯೫ರಲ್ಲಿ ಪ್ರತಿ ಟನ್ನಿಗೆ ೭೦೦ ರೂಪಾಯಿಯಂತೆ ಕಬ್ಬನ್ನು ಪೂರೈಸಲು ನಿರ್ಧರಿಸಿತು. ತುಂಗಭದ್ರ ಸಕ್ಕರೆ ಕಾರ್ಖಾನೆ ನಿಯಮಿತ, ಹೆಚ್ಚುವರಿ ೪೦ ರೂಪಾಯಿಗಳ ಬಾಕಿ ಪಾವತಿಯನ್ನು ನಿರಾಕರಿಸಿತು, ಆದರೆ ತನ್ನ ಬೆಲೆಯನ್ನು ೧೯೯೪ರ ಸೆಪ್ಟೆಂಬರ್ ೨೫ರಂದು ಘೋಷಿಸಿತು. ಅಂತಿಮವಾಗಿ ೧೯೯೩-೯೪ರ ಅವಧಿಗೆ ೫೭೦ ರೂಪಾಯಿ ಬೆಲೆಯನ್ನು ಕಾರ್ಖಾನೆ ಒಪ್ಪಿತು ಮತ್ತು ಅದು ೬೭೨-೦೨ ರೂಪಾಯಿಗಳನ್ನು ಶೇಕಡಾ ೧೦.೧೧ ಮರುಪಾವತಿಯೊಂದಿಗೆ ೧೯೯೩-೯೪ರ ಅವಧಿಗೆ ಘೋಷಿಸಿತು.

೧೯೯೫-೯೬ರ ಅವಧಿಗೆ, ದೇವಿ ಸಕ್ಕರೆ ಕಾರ್ಖಾನೆ ಕೇವಲ ೯೮,೦೦೦ ಟನ್ನುಗಳಷ್ಟು ಕಬ್ಬನ್ನು ತನ್ನ ಕಾರ್ಖಾನೆ ವ್ಯಾಪ್ತಿಯಲ್ಲಿ ಬೆಳೆದ ನಾಲ್ಕು ಲಕ್ಷ ಟನ್ನುಗಳಲ್ಲಿ ಅರೆಯಿಸಿತು. ನಂತರ ಶಿ.ಜಿ.ಕ.ಬೆ.ಸಂ.ದ ಪ್ರತಿನಿಧಿಗಳು ಉಳಿದ ಪ್ರಮಾಣಕ್ಕೆ ಹತ್ತಿರದ ಸಕ್ಕರೆ ಕಾರ್ಖಾನೆಗಳಿಗೆ ಮತ್ತು ಖಂಡಸಾರಿಗಳಿಗೆ ಹೆಚ್ಚು ಸಾರಿಗೆ ವೆಚ್ಚ ನೀಡಿ ವರ್ಗಾಯಿಸುವ ಮೂಲಕ ಬದಲಿ ವ್ಯವಸ್ಥೆಯನ್ನು ಮಾಡಿದರು. ದೇವಿ ಸಕ್ಕರೆ ಕಾರ್ಖಾನೆ ಆಡಳಿತ ವರ್ಗದಿಂದ ಮುಚ್ಚಲ್ಪಟ್ಟಿತು ಮತ್ತು ಅಧಿಕ ನಷ್ಟವನ್ನು ಕಾರಣವಾಗಿ ನೀಡಲಾಯಿತು. ಕ.ರಾ.ರೈ.ಸಂ. ಮತ್ತು ಶಿವಮೊಗ್ಗಾ ಜಿಲ್ಲಾ ಕಬ್ಬು ಬೆಳೆಗಾರರ ಸಂಘಗಳು ಧರಣಿ ನಡೆಸಿ, ಸತ್ಯಾಗ್ರಹ ಮತ್ತು ಸರದಿ ಉಪವಾಸ ಸತ್ಯಾಗ್ರಹ ಇತ್ಯಾದಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಶಿವಮೊಗ್ಗದಲ್ಲಿ ನಡೆಸುವ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿವೆ. ಅವರು ಸರ್ಕಾರವನ್ನು ಕಾರ್ಖಾನೆಯನ್ನು ವಹಿಸಿಕೊಳ್ಳುವಂತೆ ಕೇಳಿಕೊಳ್ಳುತ್ತಿವೆ ಅಥವಾ ಇತರ ಖಾಸಗಿ ಆಡಳಿತಗಳಿಗೆ ಕಾರ್ಖಾನೆ ನಡೆಸುವಂತೆ ಕೇಳಿಕೊಳ್ಳುತ್ತಿವೆ ಇದರ ಬಗ್ಗೆ ನಿರ್ಧಾರವನ್ನು ಇನ್ನೂ ಕೈಗೊಳ್ಳಬೇಕಾಗಿದೆ.

೧೯೯೫ರ ವರ್ಷಕ್ಕೆ, ಕ.ರಾ.ರೈ.ಸಂ. ಪ್ರತಿ ಟನ್ನು ಕಬ್ಬಿಗೆ ೯೩೩.೪೦ ರೂಪಾಯಿಗಳನ್ನು ಕೇಳಿಕೊಂಡಿತು. ಮುಖ್ಯಮಂತ್ರಿಗಳು ಕಬ್ಬು ಬೆಳೆಗಾರರ

ಪ್ರತಿನಿಧಿಗಳನ್ನು ೧-೬-೯೫ರಲ್ಲಿ ಕಬ್ಬಿನ ಬೆಲೆ ಬಗ್ಗೆ ಚರ್ಚಿಸಲು ಕರೆಸಿದರು. ಒಂದು ತಿಂಗಳ ನಂತರ ಶಿವಮೊಗ್ಗಾ ಜಿಲ್ಲೆಯಲ್ಲಿ ದ್ವಿವಿಧ ದರಗಳನ್ನು ಸರ್ಕಾರ ಘೋಷಿಸಿತು. ಇದು ಸರಾಯಿ ಭಟ್ಟಿ ಇಳಿಸುವ ಕಾರ್ಖಾನೆಯನ್ನು ಆಧರಿಸಿತ್ತು. ಒಂದು ವೇಳೆ ಕಾರ್ಖಾನೆ ಭಟ್ಟಿ ಇಳುಸುವಿಕೆ ಕಾರ್ಖಾನೆ ಹೊಂದಿದ್ದರೆ ಬೆಲೆ ಪ್ರತಿ ಟನ್ನಿಗೆ ೬೪೦ ರೂಪಾಯಿ ಶೇಕಡಾ ೮.೫ ಮರುಪಾವತಿ ಮತ್ತು ಭಟ್ಟಿ ಇಳಿಸುವ ಕಾರ್ಖಾನೆ ಹೊಂದಿರದಿದ್ದರೆ ಬೆಲೆ ೫೮೦ ರೂಪಾಯಿ ಶೇಕಡಾ ೮.೫ ಮರುಪಾವತಿ.

ಕ.ರಾ.ರೈ.ಸಂ. ಒಂದೇ ಜಿಲ್ಲೆಯಲ್ಲಿ ಕಬ್ಬಿನ ದ್ವಿವಿಧ ಬೆಲೆ ನೀತಿಯನ್ನು ಕಟುವಾಗಿ ಟೀಕಿಸಿತು ಮತ್ತು ಬೆಳೆಗಾರರಿಗೆ ಭಟ್ಟಿ ಇಳಿಸುವ ಕಾರ್ಖಾನೆ ಸಂಬಂಧಿಸಿಲ್ಲ ಎಂದು ಹೇಳಿತು. ಆದ್ದರಿಂದ ಅವರು ಒಂದೇ ಜಿಲ್ಲೆಯಲ್ಲಿ ಏಕಮುಖ ಬೆಲೆ ನೀತಿಯನ್ನು ಕಬ್ಬಿಗೆ ನೀಡಬೇಕೆಂದು ಒತ್ತಾಯಿಸಿದರು. ೧೯೮೩ರಿಂದ ೮೯ರವರೆಗೆ ೬ ವರ್ಷಗಳ ಕಾಲ ಜನತಾದಳ ಸರ್ಕಾರ ಬೆಲೆಯಲ್ಲಿ. ೧೮, ೩೨, ೨೨, ೧೦, ೬, ೭೦ ರೂಪಾಯಿಗಳಿಗೆ ಪ್ರತಿ ಟನ್ನಿಗೆ ಪ್ರತಿ ವರ್ಷ ಸರಾಸರಿ ೨೭ ರೂಪಾಯಿಗಳಂತೆ ಹೆಚ್ಚಿಸಿರುವುದನ್ನು ಒತ್ತಿ ಹೇಳಿದರು. ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲೂ ಜನತಾ ದಳಕ್ಕಿಂತ ಹೆಚ್ಚಿನ ಬೆಲೆಯನ್ನು ನಿರ್ಧರಿಸಲಾಗಿತ್ತು. ೧೯೮೯ರಿಂದ ೧೯೯೪ರವರೆಗೆ ೬ ವರ್ಷಗಳ ಕಾಲ ಬೆಲೆಯನ್ನು ೬೨, ೨೪, ೨೪, ೩೫, ೧೨೦ ಮತ್ತು ೧೩೫ ರೂಪಾಯಿಗಳಿಗೆ ಸರಾಸರಿ ಪ್ರತಿ ಟನ್ನಿಗೆ, ಪ್ರತಿ ವರ್ಷ ೬೭ ರೂಪಾಯಿಗಳಂತೆ ಹೆಚ್ಚಿಸಲಾಗಿತ್ತು. ೧೯೯೫ರಲ್ಲಿ ಸರ್ಕಾರ ಬೆಂಬಲ ಬೆಲೆಯನ್ನು ಘೋಷಿಸಿತು ಏಕೆಂದರೆ ಹಿಂದಿನ ವರ್ಷದ ಬೆಲೆಗಿಂತ ಬೆಲೆ ೧೫ ರೂಪಾಯಿಗಳಷ್ಟು ಕಡಿಮೆ ಇತ್ತು. ಆದ್ದರಿಂದ ಕ.ರಾ.ರೈ.ಸಂ.ದ ಶಿವಮೊಗ್ಗಾ ಶಾಖೆ ಮಂಡ್ಯ ಮತ್ತು ಮೈಸೂರು ಘಟಕಗಳಿಗೂ ಈ ತಾರತಮ್ಯದ ವಿರುದ್ಧ ಹೋರಾಟ ನಡೆಸಲು ಕೇಳಿಕೊಂಡಿತು. ೨೦೦೮ನೇ ಸಾಲಿಗೆ, ಕೇಂದ್ರ ಸರ್ಕಾರ ಪ್ರತಿ ಟನ್ ಕಬ್ಬಿಗೆ ೮೧೧ ರೂಪಾಯಿ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದ್ದು, ಅದಕ್ಕೆ ರೈತರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಕನಿಷ್ಠ ೧೧೦೦ ರೂಪಾಯಿ ನೀಡಬೇಕೆಂದು ಆಗ್ರಹಿಸಿದ್ದಾರೆ. ರಾಜ್ಯಪಾಲರು ಫೆ ೧೧, ೨೦೦೮ರಂದು, ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಭರವಸೆ ನೀಡಿದ್ದು, ಆ ಹಿನ್ನೆಲೆಯಲ್ಲಿ ಅಲ್ಲಿಯವರೆಗೆ ಪ್ರತಿಭಟನೆ ಮಾಡದಿರಲು ನಿರ್ಧರಿಸಲಾಗಿದೆ.

ಕ.ರಾ.ರೈ.ಸಂ. ಸ್ಥಾಪನೆಯಾದಾಗಿನಿಂದ ನಿರ್ದಿಷ್ಟವಾಗಿ ಕಬ್ಬಿಗೆ ಮತ್ತು ಸಾಮನ್ಯವಾಗಿ ಕೃಷಿ ಸರಕುಗಳಿಗೆ ವೈಜ್ಞಾನಿಕ ಬೆಲೆಯನ್ನು ಒತ್ತಾಯಿಸುತ್ತಲೇ ಬಂದಿದೆ. ಆದ್ದರಿಂದ ನಂಜುಂಡಸ್ವಾಮಿಯವರು ಕಬ್ಬಿನ ಬೆಲೆಯನ್ನು ವೈಜ್ಞಾನಿಕವಾಗಿ ಕಬ್ಬು ನಿರ್ದೇಶನಾಲಯದ ವಿಧಾನದಂತೆ ಕಂಡು ಹಿಡಿದಿದ್ದಾರೆ. ಇದನ್ನು ೧.೧೦ ಮತ್ತು ೧.೧೧ ಪಟ್ಟಿಯಲ್ಲಿ ಕ್ರಮವಾಗಿ ತೋರಿಸಲಾಗಿದೆ.

ಪಟ್ಟಿ ಸಂ. ೧.೧೦
ಆಧಾರ ೧೯೯೪–೯೫
ಕೆ.ಆರ್.ಆರ್.ಎಸ್.ನಿಂದ ಒಂದು ಎಕರೆ ಕಬ್ಬಿಗೆ ವೈಜ್ಞಾನಿಕ ಬೆಲೆ ಲೆಕ್ಕಾಚಾರ

ಕ್ರ. ಸಂ.	ಆದಾನಗಳು	ಗುಣಕಾರ	ಒಟ್ಟು
೧	ಬದ ಸರಿಪಡಿಸುವುದು ೮ ಕಾರ್ಮಿಕರು	೮ x ೨೫	೨೦೦.೦೦
೨	ಆಹಾರ	೮ x ೧೫	೧೨೦.೦೦
೩	ಉಳುಮೆ ವೆಚ್ಚ	೨೫ x ೮೦	೨೦೦೦.೦೦
೪	ಗುಂಡಿ ತೋಡುವುದು	೮ x ೨೦	೧೬೦.೦೦
೫	ಸಾಲು ರಚಿಸಲು	೮ x ೨೦	೧೬೦.೦೦
೬	ಆಹಾರ	೮ x ೧೫	೧೨೦.೦೦
೭	ರಸಾಯನಿಕ ಗೊಬ್ಬರ	೧೫ x ೧೦೦	೧೫೦೦.೦೦
೮	ಗೊಬ್ಬರ ಸಾಗಣೆ ಮತ್ತು ಹರಡುವಿಕೆ	–	೫೦೦.೦೦
೯	ಕಬ್ಬು ಬೀಜ	೪ x ೭೦೦	೨೮೦೦.೦೦
೧೦	ಬೀಜ ಸಾಗಣೆ, ಕಟಾವು, ಹರಡುವಿಕೆ	–	೫೦೦.೦೦
೧೧	ಬೀಜ ನೆಡುವಿಕೆ, ನೀರು ಪೂರೈಕೆ	೧೦ x ೨೫	೨೫೦.೦೦

೧೨	ಆಹಾರ	೧೦ x ೧೫	೧೫೦.೦೦
೧೩	ಬಿತ್ತನೆ ನಂತರ ನೀರು ಪೂರೈಕೆ	೪ x ೨೫	೧೦೦.೦೦
೧೪	ಆಹಾರ	೪ x ೧೫	೬೦.೦೦
೧೫	ರಸಾಯನಿಕ ಗೊಬ್ಬರ ಮತ್ತು ಸಾಗಣೆ	೧೬೫:೭೦:೭೫	೫೫೬೦.೦೦
೧೬	ಒಳ ಸಾಗುವಳಿ (ಸಾಲುಗಳ ನಡುವೆ)	೧೦ x ೮೦	೮೦೦.೦೦
೧೭	ಕಳೆ ಕೀಳುವಿಕೆ	೫೦ x ೨೫	೧೨೫೦.೦೦
೧೮	ಸಾಗುವಳಿ ಕೆಲಸಕ್ಕೆ ಒಳ ಹೋಗಲು ಗಿಡದ ಮೇಲ್ಭಾಗವನ್ನು ಕಟ್ಟುವುದು (ಮುರಿ ಮಾಡಲು)	೧೦ x ೧೫	೩೭೫.೦೦
೧೯	ಆಹಾರ	೧೫ x ೧೫	೨೨೫.೦೦
೨೦	೧ ವರ್ಷ ನೀರು ಹಾಯಿಸಲು ಕೂಲಿ–ಗಂಡು ಆಳು		೪೨೦೦.೦೦
೨೧	ಕೀಟನಾಶಕ ಮತ್ತು ಬೆಳೆ ರಕ್ಷಣೆ		೬೫೦.೦೦
೨೨	ಕೊಯ್ಲು ಕೂಲಿ ವೆಚ್ಚ –೪೦ ಟನ್ನಿಗೆ	೪೦ x ೧೦೦	೪೦೦೦.೦೦

೨೩	ಸಾರಿಗೆ ವೆಚ್ಚ	೪೦ x ೫೦	೨೦೦೦.೦೦
೨೪	ಆದಾಯ		೪.೦೦
೨೫	ನೀರು ದರ		೪೮೦.೦೦
			೨೮೧೬೪.೦೦
೨೬	ಮೇಲಿನ ವೆಚ್ಚಕ್ಕೆ ೧೫% ಬಡ್ಡಿ		೪೨೨೩.೦೦
೨೭	೬೦,೦೦೦ಕ್ಕೆ ೧೦% ಬಡ್ಡಿ (ಬಂಡವಾಳ ಆಸ್ತಿ–೧ ಎಕರೆ ಭೂಮಿ)		೬೦೦೦.೦೦
೨೮	ಪ್ರಕೃತಿ ಮತ್ತು ಕೀಟಗಳಿಂದ ನಷ್ಟ		೧೫೦೦.೦೦
		ಒಟ್ಟು	೩೯೮೮೭೦೦
	೧ ಎಕರೆಯಲ್ಲಿ ೪೦ ಟನ್ನು ಕಬ್ಬು ಬೆಳೆಯಲು ವೆಚ್ಚ		೩೯೮೮೭೮೦
	ಆದ್ದರಿಂದ ೧ ಟನ್ನು ಕಬ್ಬು ಬೆಳೆಯಲು ವೆಚ್ಚ ೩೯೮೮೭/೪೦		೯೯೭೧೮
	೧೫% ಲಾಭ		೧೩೯.೯೭
	೧ ಟನ್ನು ಕಬ್ಬಿಗೆ ಬೆಂಬಲ ಬೆಲೆ		೧೧೩೭೧೫

ಮೂಲ : ನಂಜುಂಡಸ್ವಾಮಿಯವರು ಕ.ರಾ.ರೈ.ಸಂ.ದ ಹೇಳಿಕೆಯಲ್ಲಿ ನೀಡಿದ ವಿವರ, ಶಿವಮೊಗ್ಗ, ೧೯೯೪

ಕಡಿತ ಖರೀದಿ ತೆರಿಗೆ ಮತ್ತು ಮಾರಾಟ ತೆರಿಗೆ		-೧೧೨.೦೦
		೧೦೦೮.೮೦
೧೦% ಎಕ್ಸ್‌ಫ್ಯಾಕ್ಟರಿ ಎಕ್ಸ್ ಫೀಲ್ಡ್ (-೬೦)		-೬೦.೦೦
		೯೪೮.೮೦

ಮೂಲ : ನಂಜುಂಡಸ್ವಾಮಿಯವರು ಕ.ರಾ.ರೈ.ಸಂ.ದ ಹೇಳಿಕೆಯಲ್ಲಿ ನೀಡಿದ ವಿವರ, ಶಿವಮೊಗ್ಗ, ೧೯೯೪

ನಂಜುಂಡಸ್ವಾಮಿಯವರು ಕಬ್ಬು ಮತ್ತು ಸಕ್ಕರೆ ಬೆಲೆ ಕಂಡು ಹಿಡಿಯಲು ಕೈಗಾರಿಕೆಗಳಲ್ಲಿ ಬಳಸುವ ವೈಜ್ಞಾನಿಕ ಬೆಲೆ ನಿರ್ಧಾರ ವಿಧಾನವನ್ನು ಬಳಸಿದರು. ಇದರೊಂದಿಗೆ ಸಕ್ಕರೆ ಉತ್ಪಾದನೆಯಿಂದ ಶೇಕಡಾ ೭೫ರಷ್ಟನ್ನು ಬೆಳೆಗಾರರಿಗೆ ನೀಡಬೇಕೆಂದು ಒತ್ತಾಯಿಸಿದರು.

ಮೂರನೇ ಸಮಸ್ಯೆಯೆಂದರೆ ಉಪಸರಕುಗಳ ಆದಾಯದ ಬಗ್ಗೆ, ಸಕ್ಕರೆಯ ಉಪಸರಕುಗಳಾದ ಬೆಗ್ಗಾಸ್ಸೆ (ಕಬ್ಬಿನ ಸಿಪ್ಪೆ-ಕಾಗದ ತಯಾರಿಕೆ ಮತ್ತು ಉರುವಲಾಗಿ ಬಳಕೆ) ಮತ್ತು ಕಾಕಂಬಿ (ಮೊಲಾಸಿಸ್) ಕಾರ್ಖಾನೆಗಳಿಗೆ ಹೋಗುತ್ತದೆ. ಆದ್ದರಿಂದ ಕ.ರಾ.ರೈ.ಸಂ. ಸರ್ಕಾರ ಈ ಆದಾಯವನ್ನು ಕಾರ್ಖಾನೆ ಮತ್ತು ಬೆಳೆಗಾರರ ನಡುವೆ ಹಂಚಬೇಕೆಂದು ಒತ್ತಾಯಿಸಿತು. ಕಬ್ಬು ಬೆಳೆಗಾರರು ಸಕ್ಕರೆ ಕಾರ್ಖಾನೆಗಳನ್ನು ದೋಷಿತ ಆಡಳಿತಕ್ಕಾಗಿ ಟೀಕಿಸಿದವು. ಸಕ್ಕರೆ ಕಾರ್ಖಾನೆಗಳು ಬಾಕಿ ಇಟ್ಟುಕೊಳ್ಳಬಾರದಿತ್ತು. ಇದಕ್ಕೆ ಬದಲಾಗಿ ಕಬ್ಬಿಗೆ ಇರುವ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಕೊಡಬಹುದಿತ್ತು ಏಕೆಂದರೆ ಉಪಸರಕುಗಳಿಂದ ಕೈಗಾರಿಕೆಗಳಿಗೆ ಅದರಲ್ಲೂ ಭಟ್ಟಿ ಇಳಿಸುವ ಕಾರ್ಖಾನೆಯಿಂದ ಲಾಭ ಬರುತ್ತದೆ ಎಂದು ಆರೋಪಿಸಿದರು. ಅಂತಿಮವಾಗಿ ಬೆಲ್ಲದ ಉತ್ಪಾದನೆ ಸಮಸ್ಯೆ ಒಟ್ಟು ಶೇಕಡಾ ೫೫ರಷ್ಟು ಕಬ್ಬನ್ನು ಬೆಲ್ಲದ ಉತ್ಪಾದನೆಗೆ ಬಳಸಲಾಗಿತ್ತು. ಆದ್ದರಿಂದ ಬೆಲ್ಲದ ಉತ್ಪಾದನೆಯಲ್ಲೂ ಸುಧಾರಣೆಗಳು ಅವಶ್ಯಕ ಎಂದ ಕ.ರಾ.ರೈ.ಸಂ. ಅಂತಹ ಸುಧಾರಣೆಯನ್ನು ಉತ್ತಮ ತಂತ್ರಜ್ಞಾನ ಮತ್ತು ಹೊಸ ಯಂತ್ರಗಳು ಇತ್ಯಾದಿಗಳ ರೂಪದಲ್ಲಿ ಬೆಲ್ಲದ ಉತ್ಪಾದನೆಯಲ್ಲಿ ತರುವಂತೆ ಒತ್ತಾಯಿಸಿತು.

ಶ್ರೀ. ಜೆ. ಹೆಚ್. ಪಟೇಲರು, ಅಂದಿನ ಸಣ್ಣಕೈಗಾರಿಕೆ ಸಚಿವರು ೧೯೮೫ರ

ಜೂನ್‌ನಲ್ಲಿ ಬೆಲ್ಲದ ಅಂತರರಾಜ್ಯ ಚಲನೆಯ ಮೇಲೆ ನಿಯಂತ್ರಣಗಳನ್ನು ವಿಧಿಸಿದರು. ಅವರು ಬೆಲ್ಲದ ಉತ್ಪಾದನೆ ಮತ್ತು ಅದರ ಅಂತರರಾಜ್ಯ ಚಲನೆ ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನ ಪೂರೈಕೆಯ ಕೊರತೆ ಉಂಟಾಗಲು ಕಾರಣ ಎಂದು ಹೇಳಿದರು. ಅದು ಸಕ್ಕರೆ ಉತ್ಪಾದನೆಯಲ್ಲೂ ಇಳಿತವನ್ನುಂಟುಮಾಡಿತು. ಕ.ರಾ.ರೈ.ಸಂ. ಇದು ದುರದೃಷ್ಟಕರ ಕಾಯ್ದೆ ಎಂದು ಹೇಳಿತು ಮತ್ತು ಪಟೇಲರ ಕಾಯ್ದೆಯನ್ನು ಟೀಕಿಸಿತು. ಅವರು ಬೆಳೆಗಾರರ ಸಮಸ್ಯೆಯನ್ನು ನಿವಾರಿಸಲಿಲ್ಲ ಅಥವಾ ಸಕ್ಕರೆ ಕಾರ್ಖಾನೆಗಳ ಪ್ರಸ್ತುತ ಸಮಸ್ಯೆಗಳನ್ನು ಪರಿಹರಿಸಲಿಲ್ಲ, ಬದಲಾಗಿ ಅವರು ಬೆಲ್ಲದ ಉತ್ಪಾದನೆಯನ್ನು ಅಲ್ಲಗಳೆಯುತ್ತಿದ್ದಾರೆ ಎಂದು ಭಾವಿಸಿದರು. ನಂತರ ಕ.ರಾ.ರೈ.ಸಂ. ಬೆಲ್ಲದ ಉತ್ಪಾದನೆ ಮತ್ತು ಅದರ ಚಲನೆಯ ಮೇಲೆ ಅಂತಹ ಯಾವುದೇ ನಿಯಂತ್ರಣಗಳನ್ನು ವಿಧಿಸದಿರುವಂತೆ ಕೇಳಿಕೊಂಡಿತು. ಕ.ರಾ.ರೈ.ಸಂ. ಒತ್ತಡದಿಂದಾಗಿ, ಅವರು ಬೆಲ್ಲದ ಉತ್ಪಾದನೆ ಮತ್ತು ಅದರ ಚಲನೆಯ ಮೇಲೆ ನಿಯಂತ್ರಣ ವಿಧಿಸುವ ಯೋಚನೆಯನ್ನು ಬಿಟ್ಟುಕೊಟ್ಟರು.

ಕ.ರಾ.ರೈ.ಸಂ.ದ ಬೆಂಬಲ ಬೆಲೆಗಾಗಿ ನಡೆದ ಹೋರಾಟ ಅಥವಾ ಚಳುವಳಿಗಳು ಕಬ್ಬಿನ ವಿಷಯದ ಸುತ್ತ ಸುತ್ತುತ್ತಿದ್ದರಿಂದ ಕರ್ನಾಟಕ ಸರ್ಕಾರ ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳ ರೋಗಗ್ರಸ್ತತೆಗೆ ಕಾರಣಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯನ್ನು ನೇಮಿಸಿತು. ಸಮಿತಿಯಲ್ಲಿ ಶ್ರೀ ಎಂ. ವಿ ಶಂಕರಿಕೊಪ್ಪ, ಛೇರ್ಮನ್ ಆಗಿದ್ದರು ಮತ್ತು ಶ್ರೀ ಸಿ. ಸರಸಿಂಹಪ್ಪ ಏಕಮೇವ ಸದಸ್ಯರಾಗಿದ್ದರು. ಸಮಿತಿ ರಾಜ್ಯದಲ್ಲಿ ಸಕ್ಕರೆ ಕೈಗಾರಿಕೆಯ ಬಗ್ಗೆ ಒಂದು ವರದಿಯನ್ನು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ಸಲ್ಲಿಸಿತು.

ಸಮಿತಿ ಕಾರ್ಖಾನೆಗಳ ರೋಗಗ್ರಸ್ತತೆಗೆ ಕಬ್ಬಿನ ಅಧಿಕ ಬೆಲೆ ಕಾರಣವೆಂಬುದನ್ನು ಅಲ್ಲಗಳೆಯಿತು. ಶ್ರೀ ನರಸಿಂಹಪ್ಪ, ಬೆಳಗಾಂ ಜಿಲ್ಲೆಯ ಸಂಕೇಶ್ವರದಲ್ಲಿನ ಸಕ್ಕರೆ ಕಾರ್ಖಾನೆ ೩೬೫ ರೂಪಾಯಿ ಪ್ರತಿ ಟನ್ನು ಕಬ್ಬಿಗೆ ನೀಡಿದರೂ ಲಾಭಗಳಿಸಲು ಸಾಧ್ಯವಿದೆಯೆಂದು ಸಾಧಿಸಿರುವುದರಿಂದ, ಈ ಅಭಿಪ್ರಾಯವನ್ನು ಸುಳ್ಳಾಗಿಸಿದೆ ಎಂದು ಹೇಳಿದರು. ೧೯೮೭ರಲ್ಲಿ ಪ್ರತಿ ಟನ್ನು ಕಬ್ಬಿಗೆ ಕಾರ್ಖಾನೆಗಳು ನೀಡಿದ ಬೆಲೆ ಸರಾಸರಿ ೨೭೫ ರೂಪಾಯಿಗಳಾಗಿತ್ತು. ಒಟ್ಟು ೨೫ ಸಕ್ಕರೆ ಕಾರ್ಖಾನೆಗಳಲ್ಲಿ ಕೇವಲ ೨ ಕರ್ಖಾನೆಗಳು ರಾಜ್ಯದಲ್ಲಿನ ಖಾಸಗಿ ವಲಯದ ಸಕ್ಕರೆ ಮತ್ತು ಸಹಕಾರಿ ವಲಯದ ಕಾರ್ಖಾನೆಗಳು ಸಂಕೇಶ್ವರದಲ್ಲಿ ನಿರಂತರ ಲಾಭಗಳಿಸಿದ್ದವು. ಸಕ್ಕರೆ ಕಾರ್ಖಾನೆಗಳ ಸಂಗ್ರಹಿತ ನಷ್ಟ ೭೦ ಕೋಟಿ ರೂಪಾಯಿಗಳಾಗಿತ್ತು. ಕರ್ನಾಟಕದಲ್ಲಿ ಸಕ್ಕರೆ ಕೈಗಾರಿಕೆಯನ್ನು ಯಶಸ್ವಿಗೊಳಿಸಿದರೆ ಕಂಡು ಬರುವ ಅನುಕೂಲತೆಗಳನ್ನು ಸಮಿತಿ ಹೇಳಿತು. ಪೂರಕ ಹವಾಮಾನ ಹೊರತುಪಡಿಸಿ ಕರ್ನಾಟಕ ಕಬ್ಬು ಬೆಳೆದ

ಪ್ರದೇಶದಲ್ಲಿ ಪ್ರತಿ ಹೆಕ್ಟೇರಿಗೆ ೭೮.೪ ಟನ್ನುಗಳು ಮತ್ತು ಸಕ್ಕರೆ ಮರುಪಾವತಿ ಶೇಕಡಾ ೧೦.೪೬ ರಷ್ಟಿದ್ದು ೩ನೇ ಸ್ಥಾನ ಹೊಂದಿದೆ. ಅತೀ ಹೆಚ್ಚು ಸಕ್ಕರೆ ಮರು ಪಾವತಿ ಮಹಾರಾಷ್ಟ್ರದಲ್ಲಿ ಶೇಕಡಾ ೧೧.೨ ಇದೆ, ನಂತರ ಶೇಕಡಾ ೧೦.೯೬ ಗುಜರಾತ್. ಆದರೆ ಅತೀ ಹೆಚ್ಚು ಕಬ್ಬು ಬೆಳೆ ತಮಿಳುನಾಡಿನಲ್ಲಿದೆ (ಪ್ರತಿ ಹೆಕ್ಟೇರಿಗೆ ೧೦೮ ಟನ್ನುಗಳು).

ಶ್ರೀ ನರಸಿಂಹಪ್ಪ ಕೆಲವು ವಿಮರ್ಶಾತ್ಮಕ ಹೇಳಿಕೆ ನೀಡುತ್ತಾ ಉತ್ತರ ಪ್ರದೇಶ ಮತ್ತು ಬಿಹಾರ ಬಿಟ್ಟರೆ ಕರ್ನಾಟಕ ಒಂದೇ ಸಕ್ಕರೆ ಕೈಗಾರಿಕೆಯ ವಿಸ್ತರಣೆಗೆ ಕೊಡುಗೆ ನೀಡುವುದೆಂದು ಹೇಳಿದರು. ಅವರ ಪ್ರಕಾರ, ಮಹಾರಾಷ್ಟ್ರ ಈಗಾಗಲೇ ಪೂರ್ಣ ಮಟ್ಟವನ್ನು ತಲುಪಿದೆ. ಶ್ರೀ ನರಸಿಂಹಪ್ಪ, ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಸಮಸ್ಯೆಗೆ ಅವುಗಳ ಸಾಮರ್ಥ್ಯದ ಕಡಿಮೆ ಬಳಕೆಯೇ ಕಾರಣ ಎಂದಿದ್ದಾರೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ, ಕಾರ್ಖಾನೆಗಳು ಶೇಕಡಾ ೬೯.೯ರಷ್ಟು ಕಾರ್ಯವೆಸಗಿದವು, ಪಂಜಾಬಿನಲ್ಲಿ ಶೇಕಡಾ ೧೩೦ ಸಾಮರ್ಥ್ಯ ಬಳಸಿದವು. ರಾಜ್ಯದಲ್ಲಿನ ಅತೀ ಪ್ರಾಚೀನ ಸಕ್ಕರೆ ಕ್ಯಾರ್ಖಾನೆ ಮೈಸೂರು ಸಕ್ಕರೆ ಕಂಪೆನಿ ಹೆಚ್ಚುವರಿ ಸಿಬ್ಬಂದಿಯ ಸಮಸ್ಯೆ ಎದುರಿಸಿತು. ಮಂಡ್ಯ ಜಿಲ್ಲೆಯ ಖಾಸಗಿ ವಲಯದ ಚಾಮುಂಡೇಶ್ವರಿ ಕಾರ್ಖಾನೆಯ ಕಾರ್ಯವನ್ನು ಅವರು ಶ್ಲಾಘಿಸಿದರು.

ವರದಿಯಲ್ಲಿ, ಸಮಿತಿ ಸಕ್ಕರೆ ಕಾರ್ಖಾನೆಗಳು ನುರಿತ ತಾಂತ್ರಿಕ ಮತ್ತು ಅಭಿವೃದ್ಧಿ ಸಿಬ್ಬಂದಿ ಕೊರತೆ ಹಾಗೂ ರಾಜ್ಯ ಸಲಹೆ ಮಾಡಿದ ಕಬ್ಬು ಬೆಲೆ ನೀಡುವಲಿ ಜಿಲ್ಲೆಯಲ್ಲಿ ಏಕರೂಪತೆ ಇಲ್ಲವೆಂದು ಹೇಳಿತು. ಇನ್ನೊಂದು ಕಾರಣವೆಂದರೆ ಕಾರ್ಖಾನೆ ಪೂರೈಸಿದ ಲೆವಿ ಸಕ್ಕರೆಗೆ ಕೇಂದ್ರ ನಿಗದಿ ಮಾಡಿದ ಕಡಿಮೆ ಪ್ರಮಾಣದ ಲೆವಿ ಬೆಲೆ. ಸಮಿತಿ ಸಕ್ಕರೆ ಕಾರ್ಖಾನೆಗಳು ರೈತ ಬೆಳೆದ ಕಬ್ಬಿನ ಕೊಯ್ಲು ಮತ್ತು ಸಾಗಾಣಿಕೆಯನ್ನು ಮಾಡಬೇಕೆಂದು ಶಿಫಾರಸು ಮಾಡಿತು. ಇದನ್ನು ಮಹಾರಾಷ್ಟ್ರದಲ್ಲಿ ಮಾಡಲಾಯಿತು. ಸಾಗಾಣಿಕೆಯಲ್ಲಿನ ವಿಳಂಬದಿಂದಾಗಿ ಕಬ್ಬಿನ ಸಕ್ಕರೆ ಸತ್ವ ನಷ್ಟವಾಯಿತು (ಶೇಕಡಾ ೩.೧ರವರೆಗೆ). ವರದಿ, ಸಕ್ಕರೆ ನಿರ್ದೇಶನಾಲಯವನ್ನು ಬಲ ಪಡಿಸಬೇಕು ಮತ್ತು ಸಕ್ಕರೆ ನಿರ್ದೇಶಕರನ್ನು, ಕಬ್ಬಿನ ಅಧಿಕಾರಿ ಎಂಬುದಾಗಿ ಬದಲಾಯಿಸಿಬೇಕೆಂದು ಸಲಹೆ ಮಾಡಿತು. ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಸರ್ಕಾರ ಕಾರ್ಯಾಚರಣೆಯ ಲೆಕ್ಕ ಶೋಧನೆ ಅಳವಡಿಸಬೇಕು ಮತ್ತು ಸಕ್ಕರೆ ಕಾರ್ಖಾನೆಗಳ ಆಡಳಿತವನ್ನು ವೃತ್ತಿ ಪರವಾಗಿಸುವ ಸುಧಾರಣೆಗೆ ಸಲಹೆ ಮಾಡಿತು.

ಸಮಿತಿ ಸರ್ಕಾರ ನೇಮಿಸಿದ ಅಧಿಕಾರ ಪದವಿಯ ನಿರ್ದೇಶಕರು ಕಾರ್ಖಾನೆಯ ಚಟುವಟಿಕೆಗಳಲ್ಲಿ ಕಡಿಮೆ ಆಸಕ್ತಿ ತೋರುತ್ತಾರೆ. ಅಧಿಕಾರೇತರ

ವರ್ಗ ತಪ್ಪಿಸಗುವ ಆಡಳಿತದೊಂದಿಗೆ ಸೇರುವ ಸಾಧ್ಯತೆಯಿದೆ ಎಂದು ಹೇಳಿತು. "ಈ ರೀತಿಯ ರಾಜ್ಯ ಸರ್ಕಾರದ ನಿರ್ಣಯ ಕಾರ್ಖಾನೆಗಳ ರೋಗಗ್ರಸ್ತತೆ, ನಷ್ಟ ಮತ್ತು ಅದಕ್ಷತೆಗೆ ಕಾರಣವಾಗಿರುವ ಮತ್ತೊಂದು ಅಂಶವಾಗಿದೆ." ಸಮಿತಿ ಕಬ್ಬು ಸಂಶೋಧನಾ ಸಂಸ್ಥೆಯೊಂದನ್ನು ತಾಂತ್ರಿಕ ಸುಧಾರಣೆಗಾಗಿ ಸ್ಥಾಪಿಸಬೇಕೆಂದು ಸಲಹೆ ಮಾಡಿತು. ಕಾರ್ಖಾನೆಗಳು ಹಳೇ ಯಂತ್ರಗಳ ಸಮಸ್ಯೆಯನ್ನು ಎದುರಿಸಿದವು, ಎಂದಿದೆ.

ಸಮಿತಿ, ರಾಜ್ಯ ಮತ್ತು ಕೇಂದ್ರ ತಕ್ಷಣ ರೋಗಗ್ರಸ್ತ ಘಟಕಗಳನ್ನು ಪುನರ್‌ವಸಿತ ಗೊಳಿಸಲು ಸಾಲವನ್ನು ಪುನರ್ ಪರಿಶೀಲಿಸುವುದು, ಅವಧಿ ಮೀರಿದ ಸಾಲಕ್ಕೆ ಹಣದ ನೆರವು ನೀಡುವುದು ಮತ್ತು ಶೇರು ಬಂಡವಾಳಕ್ಕೆ ಕೊಡುಗೆ ನೀಡುವುದು ಮುಂತಾದ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿತು. ಘಟಕಗಳ ವಿಸ್ತರಣೆಗೆ (ಚದುರಿಕೆಗೆ) ಪ್ರತಿ ದಿನ ಹೊಸ ಘಟಕಕ್ಕೆ ೨೫,೦೦೦ ಟನ್ನು ಕಬ್ಬು ಮಿತಿಯನ್ನು ಸಡಿಲಗೊಳಿಸಲು ರಾಜ್ಯವು ಕೇಂದ್ರವನ್ನು ಒತ್ತಾಯಿಸಬೇಕೆಂದು ಹೇಳಿತು ಹಾಗೂ ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಪೂರೈಸಲು ಇಂತಹ ಕ್ರಾಂತಿಕಾರಿ ಕ್ರಮಗಳನ್ನು, ವಿನಾಶದಂಚಿನ ಕಾರ್ಖಾನೆಗಳನ್ನು ಪುನರ್ ಸಂಘಟಿಸಲು ಕ್ರಮ ಕೈಗೊಳ್ಳಬೇಕೆಂದು ಹೇಳಿತು.

ಭತ್ತದ ಬೆಲೆ ಮತ್ತು ತತ್ಸಂಬಂಧೀ ಸಮಸ್ಯೆಗಳಿಗಾಗಿ ಹೋರಾಟಗಳು :

ಈಗಾಗಲೇ ಹೇಳಿರುವಂತೆ, ೧೯೮೦ರಲ್ಲಿ ಕ.ರಾ.ರೈ.ಸಂ. ಸ್ಥಾಪನೆಗೆ ತಕ್ಷಣದ ಕಾರಣ ಅಥವಾ ಅಂಶವೆಂದರೆ ಭತ್ತದ ಕಡಿಮೆ ಬೆಲೆಯಾಗಿದೆ. ಕ.ರಾ.ರೈ.ಸಂ.ದ ರಚನೆಯ ಅವಧಿಯಲ್ಲಿ, ಭತ್ತದ ಬೆಳೆಗಾರರು ಕಬ್ಬು ಬೆಳೆಗಾರರಿಗಿಂತ ಅಧಿಕ ಸಂಖ್ಯೆಯಲ್ಲಿದ್ದರು. ಕ.ರಾ.ರೈ.ಸಂ.ದ ಪ್ರಮುಖವಾದ ಸದಸ್ಯರೆಲ್ಲರೂ ಕಬ್ಬು ಬೆಳೆಗಾರರಾದರೂ, ಅದು ಭತ್ತದ ಬೆಳೆಗಾರರ ಸಮಸ್ಯೆಗಳಿಗೆ ಪ್ರಾಮುಖ್ಯತೆ ನೀಡಿತು. ಕ್ರಮೇಣವಾಗಿ ಅದನ್ನು ಇತರ ಕೃಷಿ ಸರಕುಗಳಂತೆ ಕ.ರಾ.ರೈ.ಸಂ. ಹೋರಾಟಗಳಲ್ಲಿ ಆದ್ಯತೆಯ ವಿಷಯವಾಗಿ ಮಾಡಲಾಯಿತು.

ಎಂ. ವಿ. ನಾಡಕರ್ಣಿ, ಹೇಳುವಂತೆ ಭತ್ತದ ಬೆಳೆಗಾರರು ಸಾಮಾನ್ಯವಾಗಿ ಸಣ್ಣ ಮತ್ತು ಮಧ್ಯಮ ರೈತರಾಗಿದ್ದರು. ಅವರ ಅತೃಪ್ತಿ ಲೆವಿ ಪದ್ಧತಿ ಮತ್ತು ಅಂತರ ಜಿಲ್ಲಾ ಭತ್ತದ ಚಲನೆಯ ಮೇಲಿನ ನಿರ್ಬಂಧನೆಯ ಬಗ್ಗೆ ಇತ್ತು. ಏಕೆಂದರೆ ಅದು ಬಹುತೇಕ ಜಿಲ್ಲೆಗಳಲ್ಲಿ ಭತ್ತದ ಬೆಲೆಯ ಇಳಿತಕ್ಕೆ ಕಾರಣವಾಗಿತ್ತು. ಕರ್ನಾಟಕ ಸರ್ಕಾರ ೧೯೮೧ರಲ್ಲಿ ಈ ನೀತಿಯನ್ನು ಬಿಟ್ಟು ಕೊಟ್ಟಿತು. ಲೆವಿ ಪದ್ಧತಿಯ ವಿರುದ್ಧ

ರೈತರು ಅತೃಪ್ತಿ ವ್ಯಕ್ತಪಡಿಸಲು ಮುಖ್ಯ ಕಾರಣವೆಂದರೆ ಲೆವಿ ಬೆಲೆ ಮಾರುಕಟ್ಟೆ ಬೆಲೆಗಿಂತ ಕಡಿಮೆ ಇತ್ತು. ಮತ್ತೆ ಬೆಲೆ ನಷ್ಟ ಉಂಟಾದಾಗ ಕಲಹಗಳು ಉಂಟಾದವು. ಭತ್ತದ ಬೆಳೆಗಾರರು ಕಟುವಾಗಿ ಸರ್ಕಾರವನ್ನು ವಿರೋಧಿಸಿದರು. ಈ ಕಹಿಯನ್ನು ಹೋಗಲಾಡಿಸಲು ಸರ್ಕಾರ ಗಿರಣಿದಾರರ ಮೇಲೆ ಮತ್ತು ವ್ಯಾಪಾರಸ್ಥರ ಮೇಲೆ ಲೆವಿ ಪದ್ಧತಿಯನ್ನು ಅಳವಡಿಸಿತು. ಇದು ಹಿಂದಿನ ಪದ್ಧತಿಗಿಂತ ಆಡಳಿತಗಾರರಿಗೆ ಹೆಚ್ಚು ಅನುಕೂಲಕರವಾಗಿತ್ತು. ಆದರೆ ಇದು ಭತ್ತದ ಬೆಳೆಗಾರರಿಗೆ ಅನುಕೂಲಕರವಾಗಿರಲಿಲ್ಲ. ಎಲ್ಲಾ ಗಿರಣಿದಾರರು ವ್ಯಾಪಾರಸ್ಥರಾಗಿದ್ದರು, ಮುಂಗಡ ಖರೀದಿಯಿಂದ ಭತ್ತದ ಬೆಳೆಗಾರರ ಮೇಲೆ ದೃಢವಾದ ಹತೋಟಿ ಹೊಂದಿದ್ದರು. ಲೆವಿ ಗಿರಣಿದಾರರ ಮೇಲಿದ್ದರೂ, ಅವರ ಶೇಕಡಾ ೫೦ರಷ್ಟು ಗಿರಣಿಗೆ ಕೊಟ್ಟ ಭತ್ತವನ್ನು ಲೆವಿ ಬೆಲೆಯಲ್ಲಿ ಸರ್ಕಾರಕ್ಕೆ ಕೊಡಬೇಕಾಗಿತ್ತು. ಇದು ಬೆಳೆಗಾರರಿಗೆ ವರ್ಗಾಯಿಸಲ್ಪಟ್ಟಿತು. ಅನಿವಾರ್ಯವಾಗಿ ಈ ಪ್ರಮಾಣವನ್ನು ಶೇಕಡಾ ೫೦ಕ್ಕಿಂತ ಹೆಚ್ಚು ಮಾಡಲಾಯಿತು. ಲೆವಿ ಇಲ್ಲದೆ ಒಬ್ಬ ರೈತ ಪ್ರತಿ ತಿಂಗಳು ೫ ಕ್ವಿಂಟಲ್ ಭತ್ತವನ್ನು ಗಿರಣಿಗೆ ಹಾಕಬಹುದಾಗಿತ್ತು, ಆದರೆ ಅದನ್ನು ಗ್ರಾಮ ಲೆಕ್ಕಿಗ ದೃಢೀಕರಿಸಬೇಕು. ಇದು ಭ್ರಷ್ಟಾಚಾರಕ್ಕೆ ಬೆಂಬಲ ನೀಡಿತು. ಹಾಗೆಯೇ ಭತ್ತದ ಮಾರುಕಟ್ಟೆ ಗಿರಣಿದಾರರ ಪ್ರಾಬಲ್ಯ ಹೊಂದಿದ್ದರಿಂದ, ಸಣ್ಣ ಬೆಳೆಗಾರರು ಕೇವಲ ಲೆವಿ ಬೆಲೆ ಮಾತ್ರ ಪಡೆಯುತ್ತಾರೆ ಆದರೆ ಮಾರುಕಟ್ಟೆ ಬೆಲೆ ಪಡೆಯುವುದಿಲ್ಲ ಏಕೆಂದರೆ ಅವರು ಗಿರಣಿದಾರರಿಂದ ಅನುಭೋಗಿ ಸಾಲವನ್ನು ಪಡೆದಿರುತ್ತಾರೆ. ಇಲ್ಲವೇ ಮುಂಗಡ ಖರೀದಿಗೆ ಹೋಣೆಯಾಗಿರುತ್ತಾರೆ.

ಕ.ರಾ.ರೈ.ಸಂ.ದ ಪ್ರಕಾರ, ಹೊಸ ಲೆವಿ ಪದ್ಧತಿ ದ್ವಿ ಮಾರುಕಟ್ಟೆ ಪದ್ಧತಿಯನ್ನು ರಚಿಸಿತ್ತು. ಇದರಲ್ಲಿ ಉತ್ಪಾದಕರು ಮತ್ತು ಅನುಭೋಗಿಗಳು ಪಡೆಯುವ ಕೊನೆಯಲ್ಲಿ ಇರುತ್ತಾರೆ. ೧೯೮೦ರಲ್ಲಿ ಕ.ರಾ.ರೈ.ಸಂ. ಲೆವಿ ಹಿಂತೆಗೆದುಕೊಳ್ಳುವಂತೆ ಸರ್ಕಾರವನ್ನು ಕೇಳಿಕೊಂಡಿತು ಮತ್ತು ಇದರ ಮೂಲಕ ಮುಕ್ತ ಮಾರುಕಟ್ಟೆಯಲ್ಲಿ ಎರಡು ವಾರಗಳವರೆಗೆ ಕೃಷಿ ಸರಕುಗಳನ್ನು ಹಿಂತೆಗೆದು ಕೊಳ್ಳುವಂತೆ ಕೇಳಿಕೊಂಡಿತು. ಅವರು ಅದನ್ನು ಮಾಡಿದರೂ ವ್ಯರ್ಥವಾಯಿತು. ಏಕೆಂದರೆ ರೈತರಿಗೆ ಯಾವುದೇ ಸ್ಪಷ್ಟ ಫಲಿತಾಂಶ ದೊರೆಯಲಿಲ್ಲ.

೧೯೮೨ರಲ್ಲಿ ಮಂಡ್ಯದಲ್ಲಿ ನಡೆದ "ಎಚ್ಚರಗೊಳ್ಳಿ ಸಮ್ಮೇಳನದಲ್ಲಿ" ಸರ್ಕಾರದ ಲೆವಿ ಆದೇಶದ ವಿರುದ್ಧ ಹೋರಾಟ ಪ್ರಾರಂಭವಾಯಿತು. ಹೋರಾಟದ ಭಾಗವಾಗಿ ಅವರು ಸರ್ಕಾರದ ಲೆವಿ ಆದೇಶವನ್ನು ಸುಟ್ಟು ಹಾಕಿದರು. ಅನೇಕ ರೈತರ ಭಾಗವಹಿಸುವಿಕೆ ಇದ್ದರೂ, ಹೋರಾಟ ವಿಫಲವಾಯಿತು. ಏಕೆಂದರೆ ಲೆವಿ ವಿಷಯ ಇತರ ಕಬ್ಬು ಮತ್ತು ಕಾರ್ಖಾನೆ ಸಂಬಂಧೀ ವಿಷಯಗಳಿಂದ ಬಲಹೀನವಾಯಿತು.

೧೯೮೧ ರಲ್ಲಿ, ರುದ್ರಪ್ಪನವರು, ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳಿಗೆ, ಬರೆದ ತಮ್ಮ ಪತ್ರದಲ್ಲಿ ಹೊರಗಿನಿಂದ ಭತ್ತ ಖರೀದಿಸದಂತೆ ಕೇಳಿಕೊಂಡರು. ಇದು ಕರ್ನಾಟಕದಲ್ಲಿ ಭತ್ತದ ಉತ್ಪಾದನೆಯ ಮೇಲೆ ದುಷ್ಪರಿಣಾಮ ಬೀರುತ್ತದೆಂದು ಎಚ್ಚರಿಸಿದರು. ಮಂತ್ರಿಗಳು ತಮ್ಮ ಪ್ರತ್ಯುತ್ತರದಲ್ಲಿ ಉತ್ತರ ಕರ್ನಾಟಕದಲ್ಲಿ ಬರಗಾಲ ಇದ್ದುದರಿಂದ ಅದನ್ನು ಖರೀದಿಸಲಾಯಿತೆಂದು ಹೇಳಿದರು. ವಾಸ್ತವಿಕವಾಗಿ ನಾವು ಜೋಳ, ರಾಗಿ ಚಲನೆ ಹೊಂದಿರಲಿಲ್ಲ. ಅದರೊಂದಿಗೆ ಕೆಲವು ಟನ್ನುಗಳಷ್ಟು ಅಕ್ಕಿಯನ್ನು ಸ್ಥಳೀಯ ಮಾರುಕಟ್ಟೆ ಬೆಲೆ ಸ್ಥಿರಗೊಳಿಸಲು ಖರೀದಿಸಲಾಯಿತು.

ರುದ್ರಪ್ಪ ಒಂದು ಲೋಕೋಕ್ತಿಯಾದ "ಭತ್ತ ಬೆಳೆದವ ಸತ್ತ" ಎಂಬುದನ್ನು ಬಳಕೆ ಮಾಡಿದರು. ಏಕೆಂದರೆ ಸರ್ಕಾರ ಹೊಸ ಬೆಲೆಯನ್ನು ಭತ್ತಕ್ಕೆ ಜಾರಿಗೆ ತಂದಿತು. ಅದು ಪ್ರತಿ ಕ್ವಿಂಟಲಿಗೆ ೧೫೭ ರೂಪಾಯಿ ಬದಲಾಗಿ ೧೬೫ ರೂ ಮತ್ತು ಆಹಾರ ಇಲಾಖೆಯ ಮೂಲಕವೇ ಅದನ್ನು ಖರೀದಿಸಬೇಕೆಂದು ಆದೇಶ ನೀಡಿತು. ಅದನ್ನು ಒಳ್ಳೆಯ ಕ್ರಮ ಎಂದು ಪ್ರಶಂಸಿಸಲಾಯಿತು. ಆದರೆ ಕ್ರಮೇಣ ಅದನ್ನು ತಿರಸ್ಕರಿಸಲಾಯಿತು. ಏಕೆಂದರೆ ಅದನ್ನು ಬೇಸಿಗೆ ಬೆಳೆ ಬದಲು ಖಾರೀಫ್ ಬೆಳೆಯಿಂದ ಹಳೇ ಭತ್ತ ಖರೀದಿಸಲು ಬಳಸಲಾಯಿತು. ವಾಸ್ತವಿಕವಾಗಿ ಖಾರೀಫ್ ಬೆಳೆ ಕೊಯ್ಲು ೬ ತಿಂಗಳು ಮೊದಲೇ ಮುಗಿಯಿತು ಮತ್ತು ಬೇಸಿಗೆ ಬೆಳೆ ಒಂದು ತಿಂಗಳು ಮುಂಚಿತವಾಗಿ ಕೊಯ್ಲು ಮುಗಿಸಿತು. ಒಂದು ತಿಂಗಳು ತಡವಾದ ಮಳೆಯಿಂದಾಗಿ, ಅದು ಪೂರ್ಣ ಒಣಗಿತು. ಅವರು ಸರ್ಕಾರವನ್ನು ತನ್ನ ಆದೇಶ ಪುನರ್ ಪರಿಶೀಲಿಸಲು ಕೇಳಿಕೊಂಡರು, ಇಲ್ಲವಾದರೆ ಸರ್ಕಾರಕ್ಕೆ ಒಂದು ಬದಲಿ ಮಾರ್ಗ ನೀಡಿದ್ದರು ಅದೇನೆಂದರೆ ಅಂತರರಾಜ್ಯ ಚಲನೆಯ ಮೇಲೆ ನಿಯಂತ್ರಣ ರದ್ದು ಗೊಳಿಸುವುದು.

ಸಂಗ್ರಹ ಲೆವಿಯ ಕಾರಣದಿಂದ ತೀರ್ಥಹಳ್ಳಿ ಮತ್ತು ಆಗುಂಬೆಗಳ ನಡುವೆ ಭತ್ತದ ಬೆಲೆಗಳಲ್ಲಿ ವ್ಯತ್ಯಾಸ ಕಂಡು ಬಂದಿತ್ತು. ಕ.ರಾ.ರೈ.ಸಂ. ಲೆವಿ ಗೇಟುಗಳನ್ನು ನಾಶಪಡಿಸಿ ಅಥವಾ ಅವುಗಳನ್ನು ವಶಪಡಿಸಿಕೊಳ್ಳುವ ಮೂಲಕ ಅದನ್ನು ವಿರೋಧಿಸಿತು. ಸಕಲೇಶಪುರದ ರೈತರು ೧೯೮೮ರಲ್ಲಿ ಕೃಷಿ ಮತ್ತು ಕೈಗಾರಿಕಾ ಸರಕು ಲೇವಿ ಗೇಟುಗಳನ್ನು ಬೆಲೆ ವ್ಯತ್ಯಾಸ ವಿರೋಧಿಸಿ ವಶಪಡಿಸಿಕೊಂಡರು.

ಕ.ರಾ.ರೈ.ಸಂ.ದ ಹೋರಾಟಗಳ ಫಲವಾಗಿ ರಾಜ್ಯದೊಳಗೆ ಭತ್ತದ ಚಲನೆಯ ಮೇಲಿನ ನಿಯಂತ್ರಣಗಳನ್ನು ಸಡಿಲಗೊಳಿಸಲಾಯಿತು. ೧೯೮೩ರಲ್ಲಿ ಕರ್ನಾಟಕ ಸರ್ಕಾರ ಹೊಸ ವ್ಯವಸ್ಥೆಯನ್ನು ಘೋಷಿಸಿತು. ರಾಜ್ಯವನ್ನು ಏಳು ಭತ್ತದ ವಲಯಗಳಾಗಿ ವಿಂಗಡಿಸಲಾಯಿತು ಮತ್ತು ರಾಜ್ಯದೊಳಗೆ ವಲಯಗಳ ನಡುವೆ ಭತ್ತದ ಚಲನೆಯಲ್ಲಿ

ರಿಂಯಾಯ್ತಿ ನೀಡಲಾಯಿತು. ಆದರೆ ರಾಜ್ಯದಿಂದ ಹೊರಕ್ಕೆ ನಿಯಂತ್ರಣಗಳನ್ನು ಮುಂದುವರೆಸಲಾಯಿತು. ಕರ್ನಾಟಕದ ಮಟ್ಟದಲ್ಲಿ ಯಾವುದೇ ಪ್ರಮುಖ ಹೋರಾಟ ಭತ್ತ ಬೆಳೆಗಾರರ ಸಮಸ್ಯೆಗಳಿಗಾಗಿ ನಡೆಯಲಿಲ್ಲ ಮತ್ತು ಕ.ರಾ.ರೈ.ಸಂ. ಸಂಬಂಧ ಪಟ್ಟ ಅಧಿಕಾರಿಗಳಿಗೆ ಭತ್ತ ಸಂಬಂಧೀ ಸಮಸ್ಯೆಗಳ ಪರಿಹಾರಕ್ಕೆ ಹೋರಾಟಕ್ಕೆ ಬದಲಾಗಿ ಪತ್ರಗಳನ್ನು ಬರೆಯಿತು. ೧೯೮೩ರ ನಂತರ, ಭತ್ತದ ವಿಷಯವನ್ನು ಇತರ ಕೃಷಿ ಸರಕುಗಳ ವೈಜ್ಞಾನಿಕ ಬೆಲೆ ವಿಷಯದಲ್ಲಿ ಹೋರಾಟಗಾರರು ಸಂಯೋಜಿಸಿದರು.

ಇತರ ಬೆಳೆಗಳ ನ್ಯಾಯಯುತ ಬೆಲೆಗಾಗಿ ಹೋರಾಟಗಳು

ಕ.ರಾ.ರೈ.ಸಂ.ದ ಹೋರಾಟಗಳಲ್ಲಿ ಇತರ ಬೆಳೆಗಳು (ಕಬ್ಬು ಮತ್ತು ಭತ್ತ ಹೊರತು ಪಡಿಸಿ) ಹೋಲಿಕೆ ಮಾಡಿದರೆ ಕಡಿಮೆ ಗಮನ ಪಡೆದವು. ೧೯೮೦ರಲ್ಲಿ ಶಿವಮೊಗ್ಗಾದ ಬೃಹತ್ ರ‍್ಯಾಲಿಯಲ್ಲಿ, ಕ.ರಾ.ರೈ.ಸಂ. ಸರ್ಕಾರಕ್ಕೆ ತನ್ನ ಮನವಿಯನ್ನು ಸಲ್ಲಿಸಿತು. ೧೯ ಬೇಡಿಕೆಗಳಲ್ಲಿ ಎರಡು ಬೇಡಿಕೆಗಳು ಕೃಷಿ ಸರಕುಗಳಿಗೆ ಸಂಬಂಧಿಸಿದ್ದವು ಮತ್ತು ರಾಜ್ಯಮಟ್ಟದ ಕೃಷಿ ಬೆಲೆ ಆಯೋಗದ ರಚನೆಗಾಗಿ ಒತ್ತಾಯಿಸಿದವು.

ಕ.ರಾ.ರೈ.ಸಂ.ದ ಕೃಷಿ ಸರಕುಗಳಿಗೆ ಅಧಿಕ ಬೆಲೆಗೆ ಸಂಬಂಧಿಸಿದ ಬೇಡಿಕೆಗಳಿಗೆ, ಪ್ರತಿಯಾಗಿ, ೧೯೮೦-೮೧ರಲ್ಲಿ ಸರ್ಕಾರ ಶ್ವೇತ ಪತ್ರವನ್ನು ಹೊರಡಿಸಿ, ಇನ್ನೂ ಹೆಚ್ಚಳವನ್ನು ಮಾಡುವ ಭರವಸೆ ನೀಡಿತು. ಇತರ ಕೃಷಿ ಸರಕುಗಳಿಗಿಂತ ಕಬ್ಬಿನ ಬೆಲೆ ಅಧಿಕವಾಗಿದ್ದುದು ಪ್ರಮುಖವಾಗಿದೆ. ಇದರಿಂದ ಕಬ್ಬಿನ ಬೆಲೆ ನಿಗದೀಕರಣಕ್ಕೆ ಕ.ರಾ.ರೈ.ಸಂ.ದ ಪ್ರಭಾವವನ್ನು ಸರ್ಕಾರ ಗಮನಿಸಿದೆಯೆಂಬುದು ಸ್ಪಷ್ಟವಾಗುತ್ತದೆ. ಪಟ್ಟಿ ೧.೧೨ರಲ್ಲಿ ವ್ಯತ್ಯಾಸಗಳನ್ನು ತೋರಿಸಲಾಗಿದೆ.

ಪಟ್ಟಿ ಸಂಖ್ಯೆ ೧.೧೨
ಸಂಗ್ರಹಣೆ/ಕನಿಷ್ಟ ಬೆಂಬಲ ಬೆಲೆ (ರೂಪಾಯಿ ಪ್ರತಿ ೧೦೦ ಕೆಜಿಗೆ)

ಕ್ರ. ಸ.	ಸರಕು		೧೯೭೭--೭೮	೧೯೭೮--೭೯	೧೯೭೯--೮೦	೧೯೮೦--೮೧	೧೯೮೧--೮೨	೧೯೮೨--೮೩	೧೯೮೩--೮೪
೧	ಭತ್ತ (ಸಾಮಾನ್ಯ)	ಅ	೭೭	೮೫	೯೫	೧೦೦	೧೧೫	೧೨೨	೧೩೨
		ಆ	–	–	–	೧೦೫*	೧೧೫	೧೨೨	೧೩೨
		ಇ	–	–	೧೦೦.೨೫ ಯಿಂದ ೧೦೧	೧೧೫**	೧೨೫ಟಿ	೧೨೨	೧೩೨
೨	ಜೋಳ, ರಾಗಿ, ಮುಸುಕಿನ ಜೋಳ, ನವಣೆ	ಆ	೭೪	೮೫	೯೫	೧೦೫	೧೧೬	೧೧೮	೧೨೪
		ಇ	೭೪	೮೫	–	೧೦೫ (೧೧೫ ರಾಗಿ)	೧೨೫	೧೧೮	೧೨೪

೩	ಕಬ್ಬು (ಶೇ ೮.೫ ಚೇತರಿಕೆ)	ಅ	೮.೫	೧೦.೦	೧೨.೫	೧೩.೦	೧೫.೫	೧೫.೫	೧೬.೦
		ಆ	೮.೫	–	–	೧೩.೦	೧೩.೦	೧೩.೦	೧೩.೦
		ಇ	೮.೫	–	–	೧೬.೫	೨೧.೦	೧೮.೦	೧೮.೦
೪	ಕಡಲೆಕಾಯಿ ಸಾಮಾನ್ಯ ಗುಣಮಟ್ಟ	ಆ ಮತ್ತು ಇ	೧೬೦	೧೭೫	೧೯೦	೨೦೬	೨೭೦	೨೯೫	೩೧೫
೫	ಹತ್ತಿ ಜೆ. ೩೪, ೩೨೦ ಎಫ್	ಅ	೨೫೫	೨೫೫	೨೬೫	೩೦೦	ಟ ಟ	೩೮೦	೩೮೫
		ಆ ಮತ್ತು ಇ	–	–	೨೭೫	೩೦೪	–	೩೮೦	೩೮೫

ಅ) ಕೃಷಿ ಬೆಲೆ ಆಯೋಗದ ಶಿಫಾರಸು

ಆ) ಕೇಂದ್ರ ಸರ್ಕಾರದಿಂದ ನಿಗದಿಯಾಗಿದ್ದು

ಇ) ಕರ್ನಾಟಕ ಸರ್ಕಾರದಿಂದ ನಿಗದಿಯಾಗಿದ್ದು

* ೬ ರೂಪಾಯಿಗಳ ಸಾರಿಗೆ ವೆಚ್ಚವನ್ನು ಒಳಗೊಂಡಿದೆ

** ಸಂಗ್ರಹದ ಸ್ಥಳದಲ್ಲಿ ೬ ರೂಪಾಯಿ ಸಾರಿಗೆ ವೆಚ್ಚವನ್ನು ಒಳಗೊಂಡಿದೆ (ಆ ಸಂಗ್ರಹದ ಸ್ಥಳದಲ್ಲಿ ೫.೨೫ರೂಪಾಯಿ ಪೂರೈಕೆಗಾಗಿ)

ಟಿ. ೧೦ ರೂ ಬೋನಸ್ ಒಳಗೊಂಡಿದೆ ನಂತರದ ವರ್ಷಗಳಲ್ಲಿ ಇದನ್ನು ನಿಲ್ಲಿಸಲಾಯಿತು.

ಟಿಟಿ. ಮಾರುಕಟ್ಟೆ ಬೆಲೆ ಸಾಮಾನ್ಯ ಬೆಂಬಲ ಬೆಲೆಗಿಂತ ಅಧಿಕವಾಗಿದ್ದರಿಂದ ಘೋಷಿಸಲಿಲ್ಲ.

ಮೂಲ : ರೈತರಿಗೆ ರಿಯಾಯ್ತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಶ್ವೇತ ಪತ್ರ (೧೯೮೦), ಭಾರತೀಯ ಕೇಂದ್ರ ಬ್ಯಾಂಕಿನ ಕರೆನ್ಸಿ ಮತ್ತು ಹಣಕಾಸು ವರದಿ ಮತ್ತು ಸಂಬಂಧಿಸಿದ ಸರ್ಕಾರಿ ಇಲಾಖೆಗಳು.

ಟಿಪ್ಪಣಿ : ಮೇಲೆ ಹೇಳಲಾದ ಕಬ್ಬು ಬೆಲೆ ರೈತರಿಗೆ ವರ್ಗಾಯಿಸಲ್ಪಟ್ಟ ಕಬ್ಬಿಗೆ ಸಂಗ್ರಹ ಬೆಲೆ ಇಳಿತವನ್ನು ಒಳಗೊಂಡಿಲ್ಲ. ಅದು ಪ್ರತಿ ಟನ್ನಿಗೆ ೭೨೦ ರೂ ೧೯೮೦-೮೧ರಿಂದ ೧೯೮೧-೮೨, ೧೯೮೩-೮೪ರಲ್ಲಿ ೧೨ ರೂಪಾಯಿ ಎಂ. ವಿ. ನಾಡಕರ್ಣಿಯವರ, ಭಾರತದಲ್ಲಿ ರೈತರ ಚಳುವಳಿ ಪುಟ ೧೦೬ರಲ್ಲಿ ಉಲ್ಲೇಖಿಸಿರುವಂತೆ.

ಎಂ. ವಿ. ನಾಡಕರ್ಣಿ ಉಲ್ಲೇಖಿಸಿರುವಂತೆ ಕೆಲವು ವಾರ್ತಾ ಪತ್ರಿಕೆಗಳು ಬೆಲೆ ಹೆಚ್ಚಳವನ್ನು ರೈತರಿಗೆ ದೊರೆತ ಪ್ರತಿಫಲ ಎಂದು ಕರೆದರು. ಆದರೆ ಸರ್ಕಾರ ಅದೇ ವೇಳೆಗೆ ಗೊಬ್ಬರಗಳ ಬೆಲೆ ಹೆಚ್ಚಿಸಿತು ಮತ್ತು ಕೃಷಿ ಬೆಲೆ ಹೆಚ್ಚಿಸುವ ಒತ್ತಡವಿತ್ತು. ಯೋಜನಾ ಕಾರ್ಯದರ್ಶಿಯಾಗಿದ್ದ ಡಾ ॥ ಡಿ. ಎಂ. ನಂಜುಂಡಪ್ಪ ಪತ್ರಿಕೆಗೆ ಹೇಳಿಕೆ ನೀಡಿರುವಂತೆ, ಕರ್ನಾಟಕದಲ್ಲಿ, ಉತ್ಪಾದನಾ ವಲಯದಲ್ಲಿ ಕಂಡು ಬಂದ ಹಣದುಬ್ಬರ ಸನ್ನಿವೇಶ ಎಂದು ಹೇಳಿದರು. ಒಂದು ವೇಳೆ ಸರ್ಕಾರ ಬೆಲೆ ಹೆಚ್ಚಿಸದೇ ಇದ್ದರೆ ಅದು ರೈತರಿಗಾಗಲೀ, ಅನುಭೋಗಿಗಳಿಗಾಗಲೀ ಉಪಯುಕ್ತವಾಗಿರುತ್ತಿರಲಿಲ್ಲ ಆದರೆ ಕೇವಲ ದಲ್ಲಾಳಿಗಳಿಗೆ ಮಾತ್ರ ಉಪಯುಕ್ತವಾಗುತ್ತಿತ್ತು. ಆದ್ದರಿಂದ, ಸಮಾನ ಬೆಲೆಗಳನ್ನು ಘೋಷಿಸುವುದು ಸರ್ಕಾರಕ್ಕೆ ಅನಿವಾರ್ಯವಾಗಿತ್ತು. ಹತ್ತಿ ಅಥವಾ ಇತರ ಕೃಷಿ ಸರಕುಗಳ ಖರೀದಿಯಲ್ಲಿ ಏಕಸ್ವಾಮ್ಯ ಸಾಧಿಸಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವಲ್ಲಿ ಸಮರ್ಥವಾಗಲಿಲ್ಲ.

೧೯೮೩ರಲ್ಲಿ, ಕ.ರಾ.ರೈ.ಸಂ. ಒಂದು ತಂತಿ ಸಂದೇಶ ನೀಡಿ ಮಾತುಕತೆಗೆ ಮುನ್ನ ೭ ಬೇಡಿಕೆಗಳನ್ನು ಒಪ್ಪಬೇಕೆಂದು, ಇಲ್ಲದಿದ್ದರೆ ಜನವರಿ ೨೬ರಿಂದ ರಾಜ್ಯದಾದ್ಯಂತ ಹೋರಾಟ ನಡೆಸುವುದಾಗಿ ಸರ್ಕಾರವನ್ನು ಎಚ್ಚರಿಸಿತು. ೭ ಬೇಡಿಕೆಗಳಲ್ಲಿ ೨ ಬೇಡಿಕೆಗಳು ಬೆಂಬಲ ಬೆಲೆಗೆ ಸಂಬಂಧಿಸಿದ್ದವು. ಒಂದು ಕೃಷಿ ಸರಕುಗಳ ಮುಕ್ತ ಚಲನೆ (ಈಗಾಗಲೇ ಚರ್ಚಿಸಿದೆ) ಮತ್ತು ಇನ್ನೊಂದು ರಾಜ್ಯಮಟ್ಟ ಕೃಷಿ ಬೆಲೆ ಆಯೋಗದ ರಚನೆಯಾಗಿತ್ತು. ಕ.ರಾ.ರೈ.ಸಂ. ಮಾತುಕತೆ ಪ್ರಾರಂಭವಾಗುವ ಮುನ್ನ ತಮ್ಮ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಿತು. ಆದರೆ ಈ ಬೇಡಿಕೆಯನ್ನು

ನಿರಾಕರಿಸಿತು. ಜನವರಿ ೨೬ರಂದು ರಸ್ತೆ ಮತ್ತು ರೈಲು ತಡೆ ಚಳುವಳಿ ಪ್ರಾರಂಭವಾಯಿತು ಮತ್ತು ಅದನ್ನು ರೈತ ಸಂಘಗಳಿಂದ ಸಾಕಷ್ಟು ಬೆಂಬಲ ಇಲ್ಲದ್ದರಿಂದ ಫೆಬ್ರವರಿ ೨ರಂದು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಹೋರಾಟದಲ್ಲಿ ೨೨,೦೦೦ ರೈತರನ್ನು ಬಂಧಿಸಲಾಯಿತು ಮತ್ತು ಕ.ರಾ.ರೈ.ಸಂ.ದ ಸುಂದರೇಶ್, ನಂಜುಂಡಸ್ವಾಮಿ ಮತ್ತು ದತ್ತ ಅವರನ್ನು ಬಂಧಿಸಲಾಯಿತು.

ಸರ್ಕಾರದ ನಿಲುವು ಬಹಳ ಕಠಿಣವಾಗಿತ್ತು. ಆದರೆ ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕಲು ರೈತ ಮುಖಂಡರೊಡನೆ ಮಾತುಕತೆ ನಡೆಸಲು ಸರ್ಕಾರ ಬಹಳಷ್ಟು ಕಾತರವಾಗಿತ್ತು. ನಂತರ, ಸರ್ಕಾರ ರಾಜ್ಯದ ಒಳಗೆ ನಿಯಂತ್ರಣಗಳನ್ನು ಸಡಿಸಲಗೊಳಿಸಿತು. ಆದರೆ ಅಂತರರಾಜ್ಯ ನಿರ್ಬಂಧನೆಗೆ ಸಂಬಂಧಿಸಿದಂತೆ ಮೊದಲಿನದನ್ನೇ ಮುಂದುವರೆಸಲಾಯಿತು. ರಾಜ್ಯಮಟ್ಟದ ಕೃಷಿ ಬೆಲೆ ಆಯೋಗ ರಚನೆಗೆ ಬಂದರೆ, ಸರ್ಕಾರ ಅದು ನಿರುಪಯುಕ್ತ ಎಂದು ಭಾವಿಸಿತು, ಏಕೆಂದರೆ ಬೆಂಬಲ ಮತ್ತು ಸರ್ಕಾರಿ ಬೆಲೆಗಳನ್ನು ಕೇಂದ್ರ ಸರ್ಕಾರ ನಿರ್ಧರಿಸುತ್ತಿತ್ತು. ರಾಜ್ಯ ಕೃಷಿ ಬೆಲೆ ಆಯೋಗದ ರಚನೆಯ ನಿರಾಕರಣೆ ಹೊರತುಪಡಿಸಿ, ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ಕೃಷಿ ಬೆಲೆ ಸಲಹಾ ಮಂಡಳಿಯನ್ನು ನೆಮಿಸಿತು. ೧೯೮೪-೮೫ರ ಬಜೆಟ್ ಪ್ರಸ್ತಾಪದಂತೆ ರಾಜ್ಯ ಸರ್ಕಾರ ಎಚ್. ಎಸ್. ರುದ್ರಪ್ಪನವರನ್ನು ಒಬ್ಬ ಸದಸ್ಯರನ್ನಾಗಿ ಸೇರಿಸಿಕೊಂಡಿತು. ಆದ್ದರಿಂದ ಕೃಷಿ ಮಂತ್ರಿಗಳು ಸದಸ್ಯತ್ವ ಒಪ್ಪಿಕೊಳ್ಳುವಂತೆ ಮತ್ತು ಸಹಕರಿಸುವಂತೆ ಅವರನ್ನು ಕೇಳಿಕೊಂಡರು. ಮಂಡಳಿಯಲ್ಲಿ ಒಬ್ಬ ಅಧ್ಯಕ್ಷರು ೫ ಜನ ಸದಸ್ಯರು ಮತ್ತು ಒಬ್ಬ ಸದಸ್ಯ ಕಾರ್ಯದರ್ಶಿ ಇದ್ದರು. ಅವರೆಂದರೆ : ಅಧ್ಯಕ್ಷರಾಗಿ, ಕೃಷಿ ಮಂತ್ರಿಗಳಾಗಿದ್ದ ಎಚ್. ಎಸ್. ರುದ್ರಪ್ಪ, ಕ.ರಾ.ರೈ.ಸಂ.ದ ಅಧ್ಯಕ್ಷರು, ಸದಸ್ಯರುಗಳಾಗಿ ನರಸಿಂಹಪ್ಪ, ಭಾರತೀಯ ರೈತರ ಫೆಡರೇಷನ್ನಿನ ಕಾರ್ಯದರ್ಶಿಗಳು, ಶಂಕರಿಕೊಪ್ಪ, ಕಾರ್ಯಕಾರಿ ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಕಾರ್ಮಿಕರ ಸಂಘ, ಹುಬ್ಬಳ್ಳಿ. ಡಾ ॥ ಎನ್. ಪಿ. ಪಾಟೀಲ್, ಬೆಂಗಳೂರು, ಸದಸ್ಯ ಕಾರ್ಯದರ್ಶಿಯಾಗಿ ಡಾ ॥ ಆರ್. ರಾಮಣ್ಣ, ಕೃಷಿ ಅರ್ಥಶಾಸ್ತ್ರದ ಪ್ರವಾಚಕರು, ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ ಬೆಂಗಳೂರು ಮತ್ತು ಕೃಷಿ ನಿರ್ದೇಶಕರು, ಬೆಂಗಳೂರು. ೧೯೮೫ರಲ್ಲಿ ರಾಜ್ಯ ಸರ್ಕಾರ ಕೃಷಿ ಬೆಲೆ ಸಲಹಾ ಮಂಡಳಿಯನ್ನು ಕೃಷಿಜ ಸಚಿವರಾಗಿದ್ದ ಎಂ. ಪಿ. ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ಇತರ ಹನ್ನೊಂದು ಜನ ಸದಸ್ಯರೊಂದಿಗೆ ನೇಮಿಸಿತು.

ಬೆಲೆ ನೀತಿಯ ಬಗ್ಗೆ ಸರ್ಕಾರ ಮತ್ತು ರೈತರ ನಡುವೆ ಬಹಳಷ್ಟು ಅತೃಪ್ತಿ ಇತ್ತು. ಏಕೆಂದರೆ ಸರ್ಕಾರ ಕೃಷಿ ಸರಕುಗಳಿಗೆ ಸಮಾನ ಬೆಲೆ ನೀಡುವಲ್ಲಿ ವಿಫಲವಾಗಿತ್ತು. ಸರ್ಕಾರದ ಬೆಂಬಲ ಬೆಲೆ ಬದಲಾಗದೆ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಮಟ್ಟದಲ್ಲಿತ್ತು

ಮತ್ತು ಬೆಲೆಗಳು ಮಾರುಕಟ್ಟೆ ಬೆಲೆಗಿಂತ ಉದ್ದೇಶ ಪೂರ್ವಕವಾಗಿ ಕಡಿಮೆ ಮಟ್ಟದ್ದಾಗಿದ್ದವು. ಚಲನೆ ನಿರ್ಬಂಧ ಮತ್ತು ಲೆವಿ ನೀತಿಗಳು ಶೋಚನೀಯವಾಗಿದ್ದವು ಮತ್ತು ರೈತರಿಗೆ ಕಿರುಕುಳ ಉಂಟುಮಾಡಿದವು. ಈ ಅಭಿಪ್ರಾಯುವನ್ನು ಕ.ರಾ.ರೈ.ಸಂ.ಹೋರಾಟಗಳ ಅಡಿಯಲ್ಲಿ ಪರೀಕ್ಷಿಸುವುದು ಅವಶ್ಯಕವಾಗಿದೆ. ಈ ಅನ್ಯಾಯವನ್ನು ವಿರೋಧಿಸಿ ೧೯೮೬ರಲ್ಲಿ, ಸೊರಬ ತಾಲ್ಲೂಕಿನ ರೈತರು (ಶಿವಮೊಗ್ಗಾ ಜಿಲ್ಲೆ) ಒಂದು ಬೃಹತ್ ರ್‍ಯಾಲಿಯನ್ನು ನಡೆಸಿದರು. ಅವರು ತಮ್ಮ ಬೆಳೆಗಳಿಗೆ ವೈಜ್ಞಾನಿಕ ಬೆಲೆಯನ್ನು ಅಂದರೆ ಪ್ರತಿ ಕ್ವಿಂಟಲ್ ಭತ್ತಕ್ಕೆ ೩೫೦ ರೂಪಾಯಿ ಬೇಡಿಕೆ ಸಲ್ಲಿಸಿದರು. ಆದರೆ ಬೆಂಬಲದ ಕೊರತೆಯಿಂದಾಗಿ ಈ ಹೋರಾಟ ವಿಫಲವಾಯಿತು. ಅದೇ ವೇಳೆಯಲ್ಲಿ ಕ.ರಾ.ರೈ.ಸಂ. ಸರ್ಕಾರದ ಹತ್ತಿ ಖರೀದಿ ನೀತಿಗೆ ವಿರುದ್ಧವಾಗಿ ಲಕ್ಷಗಟ್ಟಲೆ ಮಹಾರಾಷ್ಟ್ರದ ರೈತರು ಸಂಘಟಿಸಿದ ಮಹಾರಾಷ್ಟ್ರ ರೈತರ ಚಳುವಳಿಗೆ ತನ್ನ ಬೆಂಬಲ ನೀಡಿತು. ಅವರು ಅದು ರಯಾನ್ ಕಾರ್ಖಾನೆ ಅಥವಾ ಕೈಗಾರಿಕೋದ್ಯಮಿಗಳಾ ಪರವಾಗಿದೆ ಎಂದು ಭಾವಿಸಿದರು. ಕ.ರಾ.ರೈ.ಸಂ. ಹತ್ತಿ ಖರೀದಿ ನೀತಿಯನ್ನು ತಕ್ಷಣ ಹಿಂತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರವನ್ನು ಎಚ್ಚರಿಸಿತು. ಇಲ್ಲವಾದರೆ ಕ.ರಾ.ರೈ.ಸಂ. ಕೂಡ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ಕೊಡುವುದಾಗಿ ಹೇಳಿತು. ಈ ರೀತಿ ಕ.ರಾ.ರೈ.ಸಂ. ಭಾರತದ ಯಾವುದೇ ಭಾಗದಲ್ಲಿ ನಡೆದ ವೈಜ್ಞಾನಿಕ ಬೆಲೆ ವಿಷಯಕ್ಕೆ ತನ್ನ ಬೆಂಬಲ ನೀಡಿತು. ಅದೇ ಸಂದರ್ಭದಲ್ಲಿ ರಾಜ್ಯ ಕೃಷಿ ಆಯೋಗದ ಅಧ್ಯಕ್ಷರಾದ ಶಂಕರಿ ಕೊಪ್ಪ ರಾಜ್ಯ ಕೃಷಿ ಆಯೋಗ ರೈತರಿಗೆ ನ್ಯಾಯ ದೊರಕಿಸಿ ಕೊಡುತ್ತಿಲ್ಲ ಎಂಬ ಹೇಳಿಕೆಯನ್ನು ನೀಡಿದರು. ಇದನ್ನು ಆಧರಿಸಿ, ಎನ್. ಡಿ. ಸುಂದರೇಶ್ ಕಾರ್ಮಿಕರ ಸಮಸ್ಯೆ ಅಧ್ಯಯನಕ್ಕೆ ರಚಿಸಿದ ಸಮಿತಿಯ ಒಬ್ಬ ಸದಸ್ಯರಾಗಿದ್ದವರು, ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ೧೯೮೭ರಲ್ಲಿ, ಕ.ರಾ.ರೈ.ಸಂ. ನಿರಂತರ ಜೈಲು ತುಂಬುವ ಸತ್ಯಾಗ್ರಹಕ್ಕೆ ಕರೆಕೊಟ್ಟಿತು.

೧೯೮೭ರಲ್ಲಿ ಕ.ರಾ.ರೈ.ಸಂ. ನಿರಂತರ ಜೈಲು ತುಂಬುವ ಸತ್ಯಾಗ್ರಹಕ್ಕೆ ಕರೆ ಕೊಟ್ಟಿತು. ಇದು ರೈತರ ವಿರುದ್ಧ ಸರ್ಕಾರದ ನಿರ್ದಯ ಕ್ರಮವಾಗಿತ್ತು, ಪ್ರಮುಖವಾಗಿ ರೈತ ವಿರೋಧೀ ಬೆಲೆ ನೀತಿಯ ವಿರುದ್ಧ ಸಂಘಟಿಸಲ್ಪಟ್ಟಿತ್ತು. ಕ.ರಾ.ರೈ.ಸಂ. ರೈತರು ಸಾಲಗಾರರಾಗಿದ್ದಾರೆ, ಏಕೆಂದರೆ ಸರ್ಕಾರದ ರೈತ ವಿರೋಧಿ ಬೆಲೆ ನೀತಿ ಇದಕ್ಕೆ ಕಾರಣವೆಂದು ಅಭಿಪ್ರಾಯಪಟ್ಟಿತ್ತು. ಆದ್ದರಿಂದ ರೈತರ ಎಲ್ಲಾ ಸಾಲಗಳನ್ನು ರದ್ದು ಪಡಿಸಲು ಒತ್ತಾಯಿಸಿತು ಮತ್ತು ವೈಜ್ಞಾನಿಕ ಬೆಲೆ ಮತ್ತು ಕೃಷಿ ನೀತಿ ಮಂಡಳಿಯನ್ನು ಕೃಷಿ ಸರಕುಗಳಿಗೆ ವೈಜ್ಞಾನಿಕ ಬೆಲೆ ಕಂಡು ಹಿಡಿಯಲು ರಚಿಸಬೇಕೆಂದು ಒತ್ತಾಯಿಸಿತು.

ಕ.ರಾ.ರೈ.ಸಂ.ದ ರಾಜಕೀಯ ಪಕ್ಷದ ಸಂಘಟನೆಯಾದ 'ಕನ್ನಡ ದೇಶ' ತನ್ನ ಪ್ರಣಾಳಿಕೆಯಲ್ಲಿ ಮುಖ್ಯವಾಗಿ ಕೃಷಿ ಮತ್ತು ಕೈಗಾರಿಕೆಯ ನಡುವಣಾ ಬೆಲೆ

ನೀತಿಯನ್ನು ವಿಶ್ಲೇಷಿಸಿತು. ಅದು ರೈತರಿಗಷ್ಟೇ ಅಲ್ಲದೆ ಅನುಭೋಗಿಗಳ ಮೇಲೂ ಪರಿಣಾಮ ಬೀರಿತ್ತು. ಆದ್ದರಿಂದ, ಅದು ಮೊದಲನೆಯದಾಗಿ, ಅದು ಅನುಭೋಗಿ ಹಾಗೂ ರೈತರಿಗೆ ಪೂರಕವಾದ ಬೆಲೆ ನೀತಿಯ ಕಾನೂನನ್ನು ತರುವುದಾಗಿ ಭರವಸೆ ನೀಡಿತು. ಎರಡನೆಯದಾಗಿ, ಪಕ್ಷವು ಒಂದು ಬೆಲೆ ಮತ್ತು ವೆಚ್ಚದ ಆಯೋಗವನ್ನು ರಚಿಸಲು ಉದ್ದೇಶಿಸಿತು. ಅದು ಪ್ರತಿಯೊಂದು ಕೃಷಿ ಸರಕಿನ ಉತ್ಪಾದನಾ ವೆಚ್ಚವನ್ನು ಅಧ್ಯಯನ ಮಾಡಬೇಕಾಗಿತ್ತು. ಮೂರನೆಯದಾಗಿ, ಗ್ರಾಹಕರ ಹಿತಾಸಕ್ತಿ ಕಾಪಾಡಲು ಪಕ್ಷ ಸಗಟು ಬೆಲೆ ಸೂಚ್ಯಂಕ ಅಳವಡಿಸಲು ಹಾಗೂ ಚಿಲ್ಲರೆ ಬೆಲೆ ಸೂಚ್ಯಂಕ ಅಳವಡಿಸಲು ಉದ್ದೇಶಿಸಿತು. ನಾಲ್ಕನೆಯದಾಗಿ, ಕೃಷಿ ಸರಕುಗಳಿಗಾಗಿ ಪಕ್ಷ ವೈಜ್ಞಾನಿಕ ಬೆಲೆ ನೀತಿಯನ್ನು ಅಳವಡಿಸುತ್ತದೆ ಮತ್ತು ಲೆವಿ ಆಹಾರ ವಸ್ತುಗಳ ಸಂಗ್ರಹವನ್ನು ರದ್ದುಗೊಳಿಸುತ್ತದೆ. ಐದನೆಯದಾಗಿ, ಸರ್ಕಾರ ನಿಗದಿಪಡಿಸಿದ ವೈಜ್ಞಾನಿಕ ಬೆಲೆಗಿಂತ ಕೃಷಿ ಮಾರುಕಟ್ಟೆಗಳಲ್ಲಿ ಕಡಿಮೆ ಬೆಲೆಯಲ್ಲಿ ಕೃಷಿ ಸರಕುಗಳ ಹರಾಜು ಪದ್ಧತಿಯನ್ನು ರದ್ದುಗೊಳಿಸುವಲ್ಲಿ ದೃಢವಾಗಿದೆ. ಕೊನೆಯದಾಗಿ, ಪಕ್ಷ ಗ್ರಾಹಕರ ಗೆಜೆಟನ್ನು ವಾರ್ಷಿಕವಾಗಿ ಎಲ್ಲಾ ಸರಕುಗಳ ಬೆಲೆಗಳು, ಎಲ್ಲಾ ತೆರಿಗಳನ್ನು ಒಳಗೊಂಡಂತೆ ಪ್ರಕಟಿಸಲು ಭರವಸೆ ನೀಡಿತು.

ಅದೇ ವೇಳೆಗೆ ಬೆಂಗಳೂರಿನ ಸಾಮಾಜಿಕ ಆರ್ಥಿಕ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ, ಡಾ. ಎನ್. ಪಿ. ಪಾಟೀಲ್, ರವರು ರೈತ ಸಂಘದ ಚುನಾವಣಾ ಪ್ರಣಾಳಿಕೆಯನ್ನು, ಇತರ ವಿಷಯುಗಳಿಗಿಂತ ಪ್ರಮುಖವಾಗಿ ಕೃಷಿಯುನ್ನು ಕೈಗಾರಿಕೆಯೆಂದು ಘೋಷಿಸಿದ್ದುದಕ್ಕಾಗಿ ಪ್ರಶಂಶೆ ಮಾಡಿದರು. ಅವರು ಒಂದು ವೇಳೆ ಈ ಅಂಶವನ್ನು ಗಂಭೀರವಾಗಿ ತೆಗೆದುಕೊಂಡರೆ, ರೈತ ಸಂಘ ಅಮೇರಿಕಾ ಮತ್ತು ಯುರೋಪಿನ ರಾಷ್ಟ್ರಗಳಲ್ಲಿ ಇರುವಂತೆ ಸಂಯುಕ್ತ ಸಹಕಾರಿ ಕೃಷಿಯನ್ನು ವ್ಯವಸ್ಥೆಗೊಳಿಸಲು ಸಾಧ್ಯವಾಗುತ್ತದೆಂದು ಭಾವಿಸಿದ್ದರು. ಅವರು ಕ.ರಾ.ರೈ.ಸಂ.ಕ್ಕೆ ತಮ್ಮ ಬೆಂಬಲವನ್ನು ನೀಡಿದರು. ಒಂದು ವೇಳೆ ಅದು ಅಂತಹ ಸಂಘಗಳನ್ನು ಸ್ಥಾಪಿಸುವ ಆಸಕ್ತಿ ಹೊಂದಿದ್ದರೆ, ಅಂತಹ ಸಂಘಗಳ ಸ್ಥಾಪನೆಗೆ ಕಾರ್ಯ ಸೂಚಿಯನ್ನು ಒದಗಿಸುವುದಾಗಿ ಅವರು ಆಶ್ವಾಸನೆ ನೀಡಿದರು. ಆದರೆ ರೈತ ಸಂಘ ೧೯೮೯ರಲ್ಲಿ ಕೇವಲ ಎರಡು ಸೀಟುಗಳನ್ನು ಮಾತ್ರ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಯಿತು. ಆದ್ದರಿಂದ ಪ್ರಣಾಳಿಕೆ ಇಂದಿಗೂ ಕಾಗದದ ಮೇಲೆ ಉಳಿದಿದೆ.

ಕ.ರಾ.ರೈ.ಸಂ. ೧೯೮೯ರಲ್ಲಿ ರಸ್ತೆ ಮತ್ತು ರೈಲು ತಡೆ ಹೋರಾಟಕ್ಕೆ ಕರೆ ನೀಡಿತು. ಹೋರಾಟ ವಿಶೇಷವಾದ ಘೋಷಣೆಗಳನ್ನು ಹೊಂದಿತ್ತು. ಅವುಗಳೆಂದರೆ

೧) ರೈತರ ಶತ್ರುವಾದ ಜನತಾದಳ ಸರ್ಕಾರವನ್ನು ರದ್ದು ಪಡಿಸಬೇಕು.

೨) ಸರ್ಕಾರದ ನಿಯಮದಂತೆ ಚುನಾವಣೆ ನಡೆಸಬೇಕು.

೩) ರೈತರ ಸರ್ಕಾರವನ್ನು ಸ್ಥಾಪಿಸಬೇಕು.

ಎಚ್. ಎಸ್. ರುದ್ರಪ್ಪ ಮತ್ತು ಬಾಬಾಗೌಡ ಪಾಟೀಲರು ೧೯೮೯ರ ವಿಧಾನಸಭೆ ಚುನಾವಣೆಯಲ್ಲಿ ಈ ಘೋಷಣೆಗಳನ್ನು ಬಳಸಿಕೊಂಡು ಪ್ರಚಾರ ನಡೆಸಿದರು ಮತ್ತು ಭಾಗವಹಿಸಿದರು. ಅವರು ರೈತರ ಸಮಸ್ಯೆ ಬಗೆಹರಿಸುವಲ್ಲಿ ಯಾವುದೇ ಪಕ್ಷ ಆಸಕ್ತಿ ವಹಿಸಿಲ್ಲ. ಆದ್ದರಿಂದ ರೈತರ ಸಮಸ್ಯೆಗಳನ್ನು ಕೇವಲ ರೈತ ಸಂಘದ ಆಡಳಿತ ಸ್ಥಾಪಿಸಿ ಮಾತ್ರ ಪರಿಹರಿಸಬಹುದು ಎಂದರು.

೧೯೮೯ರಲ್ಲಿ ರುದ್ರಪ್ಪನವರು ವಾಣಿಜ್ಯ ಮಂತ್ರಿಗಳಾಗಿದ್ದ ಅರುಣ್ ನೆಹರು ಹಾಗೂ ಉಪಪ್ರಧಾನ ಮಂತ್ರಿಗಳಾಗಿದ್ದ ದೇವಿಲಾಲ್ ರವರಿಗೆ ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರದಲ್ಲಿ ಕಂಡು ಬಂದ ಹತ್ತಿಯ ಕೊರತೆಯ ಬಗ್ಗೆ ವಿವರಿಸಿ ಪತ್ರ ಬರೆದರು. ಕೇಂದ್ರ ಸರ್ಕಾರ ಅದನ್ನು ಇತರ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳಲು ಎಲ್ಲಾ ವ್ಯವಸ್ಥೆಯನ್ನು ಮಾಡಿತು. ಕೊರತೆಯನ್ನು ನಿವಾರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಡಿ.ಸಿ.ಹೆಚ್. ಎಂಬ ಹೊಸತಳಿ ಹತ್ತಿ ಬೀಜವನ್ನು ಜಾರಿಗೆ ತಂದರು ಮತ್ತು ರೈತರಿಗೆ ಅದನ್ನು ಹೆಚ್ಚು ಬೆಳೆಯುವಂತೆ ಪ್ರೋತ್ಸಾಹ ನೀಡಿದರು. ಆದರೆ ಅತಿಯಾದ ಉತ್ಪಾದನೆಯಿಂದಾಗಿ ಬೆಲೆ ಕುಸಿಯಿತು. ಪ್ರತಿ ಕ್ವಿಂಟಲಿಗೆ ಕೇವಲ ೬೦೦ ರೂ.ಗಳಿಂದ ೭೦೦ ರೂ.ಗಳವರೆಗೆ ದೊರೆಯುವಂತಾಯಿತು. ಆದರೆ ಉತ್ಪಾದನಾ ವೆಚ್ಚ ಪ್ರತಿ ಎಕರೆಗೆ ೪೦೦೦ ರೂಗಳಿಂದ ೫೦೦೦ ರೂಗಳವರೆಗೆ ಇತ್ತು. ಆದ್ದರಿಂದ ಎಚ್. ಎಸ್. ರುದ್ರಪ್ಪನವರು ರಫ್ತು ಅನುಮತಿ ಕೊಡುವ ಮೂಲಕ ಹತ್ತಿ ಬೆಳೆಗಾರರ ರಕ್ಷಣೆ ಮಾಡಬೇಕೆಂದು ಅವರನ್ನು ಕೇಳಿಕೊಂಡರು.

ಕ.ರಾ.ರೈ.ಸಂ. ೧೯೮೯ರಲ್ಲಿ ರಾಜ್ಯಮಟ್ಟದ ಹತ್ತಿ ಬೆಳೆಗಾರರ ಸಭೆಯನ್ನು ಕರೆಯಿತು. ಅವರು ಹತ್ತಿ ಬೆಲೆ ಘೋಷಣೆಯಲ್ಲಿ ಕೇಂದ್ರ ಸರ್ಕಾರದ ನಿರ್ಲಕ್ಷ್ಯವನ್ನು ಟೀಕಿಸಿದರು ಮತ್ತು ರಫ್ತು ಅನುಮತಿ ನೀಡುವ ಮೂಲಕ ಹಾಗೂ ಹತ್ತಿಗೆ ಬೆಂಬಲ ಬೆಲೆ ಘೋಷಿಸಿ ತಕ್ಷಣ ಪರಿಹಾರ ಕೊಡಬೇಕೆಂದು ಒತ್ತಾಯಿಸಿದರು. ೧೯೯೦ರ ನಂತರ, ಬೆಲೆ ಹೋರಾಟಗಳು ಇತರ ವಿಷಯಗಳನ್ನು ಅಂದರೆ ಕೃಷಿ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧ ಪ್ರಚಾರವನ್ನು ಒಳಗೊಂಡಿದ್ದವು.

ಕ.ರಾ.ರೈ.ಸಂ.ದ ಪ್ರಕಾರ ಗ್ರಾಮೀಣ ಸಮಸ್ಯೆಗಳಿಗೆ ಬೆಂಬಲ ಬೆಲೆ ಅಂಶವೊಂದೇ ಉತ್ತರವಲ್ಲ, ಅದು ಹಲವು ಪರಿಹಾರಗಳಲ್ಲಿ ಒಂದಾಗಿದೆ. ಅದು ವಿವಿಧ ಮಟ್ಟಗಳಲ್ಲಿ ನಿರಂತರ ಹೋರಾಟಗಳನ್ನು ನಡೆಸುವುದರಲ್ಲಿ ವಿಶ್ವಾಸ ಹೊಂದಿತ್ತು. ಉದಾಹರಣೆಗೆ ಭ್ರಷ್ಟಾಚಾರ, ಮದ್ಯಪಾನ ನಿಷೇಧದಂತಹ ವಿಚಾರಗಳ ವಿರುದ್ಧದ

ಹೋರಾಟಗಳನ್ನು ಪ್ರಸ್ತಾಪಿಸಿತು. ಆದ್ದರಿಂದ ಬೆಂಬಲ ಬೆಲೆ ವಿಷಯ ಕರ್ನಾಟಕದಲ್ಲಿ ವಿವಿಧ ರೀತಿಯ ಚಳುವಳಿಗಳಿಂದ ಬೇರ್ಪಟ್ಟಂತೆ ತೋರುತ್ತಿತ್ತು. ರೈತರ ಆತ್ಮಹತ್ಯೆ ವಿಷಯದ ಬಗ್ಗೆ ಕ.ರಾ.ರೈ.ಸಂ. ತಳೆದ ನಿರಾಸಕ್ತಿಯನ್ನು ಎತ್ತಿ ಹಿಡಿಯಲು ಇಲ್ಲಿ ಒಂದು ಉದಾಹರಣೆ ನೀಡಬಹುದು. ಸುಮಾರು ೧೮ ಜನ ರೈತರು ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಮಾರ್ಚ್ ಏಪ್ರಿಲ್ ೧೯೯೮ರ ಅವಧಿಯಲ್ಲಿ ಬೆಳೆ ನಷ್ಟಕ್ಕಾಗಿ ಆತ್ಮಹತ್ಯೆ ಮಾಡಿಕೊಂಡರು. ಈ ವಿಷಯದಲ್ಲಿ ರೈತ ಸಂಘ ಮೂಖ ಪ್ರೇಕ್ಷಕನಾಗಿತ್ತು. ೨೦೦೪ರಿಂದ ೨೦೦೭ರ ಅವಧಿಯಲ್ಲಿ ೧೦೬೪ ಆತ್ಮಹತ್ಯೆ ಪ್ರಕರಣಗಳು ನಡೆದಿವೆ. ಆದರೆ ಆ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಕ್ರೀಯಾತ್ಮಕ ಯೋಜನೆಯನ್ನು ಸಿದ್ಧಪಡಿಸುವಲ್ಲಿ ವಿಫಲವಾಗಿದೆ.

ಕ.ರಾ.ರೈ.ಸಂ.ದ ಕಾರ್ಯಸೂಚಿಯ ಬದಲಾವಣೆ

ಕರ್ನಾಟಕ ರಾಜ್ಯದಲ್ಲಿ ದೇವರಾಜ ಅರಸು ಅವರ ಆಡಳಿತ ೧೯೭೦ರ ಅವಧಿಯಲ್ಲಿ, ಲಿಂಗಾಯಿತ ಮತ್ತು ಒಕ್ಕಲಿಗರ ಪ್ರಬಲ ಸ್ಥಾನವನ್ನು ತೊಂದರೆಗೆ ಎಡೆ ಮಾಡಿತ್ತು. ಆದರೆ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪಂಗಡಗಳು ರಾಜ್ಯದ ರಾಜಕೀಯದಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಹೊರಬಂದವು. ವಾಸ್ತವವಾಗಿ ಕರ್ನಾಟಕದಲ್ಲಿ ಭೂಮಿ ಹೊಂದಿದ್ದ ಪ್ರಬಲ ವರ್ಗಗಳಿಂದ ವ್ಯವಸ್ಥಿತಗೊಳಿಸಿದ ರೈತ ಚಳುವಳಿ ಅವರ ಪ್ರಬಲ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಇದ್ದಂತಹ ಸಾಧನಗಳಲ್ಲಿ ಒಂದಾಗಿತ್ತು. ಅದನ್ನು ೧೯೫೬ರಲ್ಲಿ ರಾಜ್ಯ ರಚನೆಯಾದಾಗಿನಿಂದ ೧೯೭೧ರವರೆಗೂ ಅವರು ಅನುಭವಿಸಿದ್ದರು. ೧೪-೦೮-೧೯೭೧ ರಲ್ಲಿ, ಅದು ಜಿಲ್ಲಾ ಮಟ್ಟದ ಕಬ್ಬು ಬೆಳೆಗಾರರ ಸಂಘದ ರೂಪದಲ್ಲಿ, "ಶಿವಮೊಗ್ಗಾ ಜಿಲ್ಲಾ ಕಬ್ಬು ಬೆಳೆಗಾರರ ಸಂಘ" ಎಂಬ ಹೆಸರಿನಿಂದ ಅಸ್ತಿತ್ವಕ್ಕೆ ಬಂದಿತು. ಪ್ರಾರಂಭದ ವರ್ಷಗಳಲ್ಲಿ, ೧೯೭೪ರವರೆಗೆ ಅದರ ಬೇಡಿಕೆಗಳು ಕಬ್ಬು ಬೆಳೆಗಾರರ ಹಿತಾಸಕ್ತಿ ಕಾಪಾಡುವುದಕ್ಕೆ ಮಾತ್ರ ಸೀಮಿತವಾಗಿತ್ತು. ೧೯೭೪ರಲ್ಲಿ, ದಿವಂಗತ ಎಚ್. ಎಸ್. ರುದ್ರಪ್ಪನವರು (ಕಾನೂನು ಪದವೀಧರ, ಸ್ವಾತಂತ್ರ್ಯ ಹೋರಾಟಗಾರ, ವಿಧಾನ ಸಭೆಯಲ್ಲಿ ೨ ಅವಧಿಗೆ ಸದಸ್ಯರು, ಕೃಷಿ ಮಂತ್ರಿಗಳಾಗಿ ಸೇವೆ ಮತ್ತು ವಿಧಾನಸಭೆಯ ಸಭಾಪತಿಗಳಾಗಿದ್ದರು) ಅಧ್ಯಕ್ಷರಾದರು ಮತ್ತು ದಿವಂಗತ ಎನ್. ಡಿ. ಸುಂದರೇಶ್ ಕಾರ್ಯದರ್ಶಿಯಾದರು. ಇವರುಗಳು ಕ್ರಮಬದ್ಧವಾಗಿ ಅದರ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿದರು.

ಮುಖ್ಯಮಂತ್ರಿಗಳಾದ ಆರ್. ಗುಂಡೂರಾವ್‌ರವರ ರೈತ ವಿರೋಧಿ ಆಡಳಿತ, ನರಗುಂದ ಮತ್ತು ನವಲಗುಂದ ಆಶ್ರುವಾಯು ಮತ್ತು ರೈತರ ಮರಣ, ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಹೋರಾಟಗಳು ೧೯೮೦ರಲ್ಲಿ "ಕ.ರಾ.ರೈ.ಸಂ."

ಎಂಬ ರಾಜ್ಯ ಮಟ್ಟದ ರೈತರ ಸಂಘವನ್ನು ಸ್ಥಾಪಿಸಲು ಒಟ್ಟಾರೆಯಾಗಿ ಒಂದು ವೇದಿಕೆಯನ್ನು ನಿರ್ಮಿಸಿದವು. ಅದರ ನಂತರ, ಕ.ರಾ.ರೈ.ಸಂ.ದ ಮತ್ತು ಅದರ ತ್ರಿಮೂರ್ತಿಗಳಾದ ಹಿರಿಯರಾದ ರುದ್ರಪ್ಪ ಮತ್ತು ಯುವಕರಾದ ಸುಂದರೇಶ್ ಮತ್ತು ನಂಜುಂಡಸ್ವಾಮಿಯವರ ಕಥೆಯೇ ಆಗಿತ್ತು.

ನಂಜುಂಡಸ್ವಾಮಿಯವರು ಕಾನೂನಿನ ಪ್ರಾಧ್ಯಾಪಕರಾಗಿದ್ದರು, ಅವರು ರುದ್ರಪ್ಪ ಮತ್ತು ಅವರ ಸಂಘಕ್ಕೆ ಬಲಶಾಲಿ, ಬುದ್ಧಿವಂತ ಆಸ್ತಿಯಾಗಿದ್ದರು, ಕನ್ನಡ ಮತ್ತು ಇಂಗ್ಲೀಷಿನಲ್ಲಿ ಒಳ್ಳೆಯ ಸಾರ್ವಜನಿಕ ಭಾಷಣಕಾರರಾಗಿದ್ದರು, ಸಂಘದ ವಾಗ್ಮೀದಾರರಾಗಿ ಬೆಳೆದರಲ್ಲದೇ, ತನ್ನದೇ ರೀತಿಯಲ್ಲಿ ಒಬ್ಬ ನಾಯಕರಾಗಿದ್ದರು. ಅವರು ಅದರ ಧ್ಯೇಯೋದ್ದೇಶ ಮತ್ತು ಕಾರ್ಯಸೂಚಿಯ ಮೇಲೆ ಪ್ರಭಾವ ಬೀರಿದ್ದರು. ಅವರ ತಾತ್ವಿಕ ಹಿನ್ನೆಲೆ ಲೋಹಿಯಾ ಸಮಾಜವಾದವಾಗಿದ್ದು, ಪೆರಿಯಾರ್ ಅವರ ಜಾತಿ ರಹಿತ, ಕ್ರಾಂತಿಕಾರಿ ತತ್ವದ ಪ್ರಭಾವಕ್ಕೆ ಒಳಗಾಗಿತ್ತು.

೧೯೮೨ರಲ್ಲಿ, ಕ.ರಾ.ರೈ.ಸಂ. ಒಂದು ಪ್ರಭಾವೀ ಗುಂಪಾಗಿ, ಸರ್ಕಾರವನ್ನು ೧೯ ಬೇಡಿಕೆಗಳ ಜಾರಿಗೆ ಗೊಳಿಸುವಂತೆ ಒತ್ತಾಯಿಸಿತು. ೧೯೮೨ರಲ್ಲಿ ಕ.ರಾ.ರೈ.ಸಂ. ಕಬ್ಬಿನ ಬೆಲೆ ವಿಷಯ ತೆಗೆದು ಕೊಂಡಿತು, ಆದ್ದರಿಂದ ನಂಜುಂಡಸ್ವಾಮಿಯವರ ಬೆಂಬಲಿಗರು ಯುವಜನ ಸಮಾಜವಾದಿ ಪಕ್ಷದ ಅಡಿಯಲ್ಲಿ ಕ.ರಾ.ರೈ.ಸಂ. ವ್ಯಾಪ್ತಿಗೆ ಬಂದರು. ೧೯೮೩ರಲ್ಲಿ, ಕ.ರಾ.ರೈ.ಸಂ. ರಾಜ್ಯದ ರಾಜಕೀಯದಲ್ಲಿ ಒಂದು ಪ್ರಬಲ ಶಕ್ತಿಯಾಗಿತು. ಇದು ಶಕ್ತಿಸಮತೋಲನ ನೀತಿ ಆಧಾರದ ಮೇಲೆ ಕಾಂಗ್ರೆಸ್‌ನ್ನು ಸ್ಥಳಾಂತರಿಸಿ ಜನತಾ ಪಕ್ಷದ ರಚನೆಗೂ ಕಾರಣವಾಯಿತು.

ರಾಮಕೃಷ್ಣ ಹೆಗಡೆ ಸರ್ಕಾರ, ಕ.ರಾ.ರೈ.ಸಂ.ದ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದರೂ, ರೈತರ ಸಮಸ್ಯೆಗಳನ್ನು ಅಲಕ್ಷಿಸಿತು. ಅದು ಸಹಕಾರ ಕಾಯ್ದೆ ಜಾರಿಗೆಗೊಳಿಸಿ ಸಾಲ ಮರುಪಾವತಿ ಮಾಡದಿದ್ದಕ್ಕೆ ರೈತರ ಆಸ್ತಿ ಮತ್ತು ಭೂಮಿಯನ್ನು ಜಪ್ತಿ ಮಾಡಿತು. ಹಾಗೆಯೇ ಸರ್ಕಾರ ರೈತರ ಹೋರಾಟದ ಚಟುವಟಿಕೆಗಳನ್ನು ಟೀಕಿಸುತ್ತಾ ಸಾರ್ವಜನಿಕರ ಮನದಲ್ಲಿ ರೈತ ವಿರೋಧಿ ಅಭಿಪ್ರಾಯವನ್ನು ಸೃಷ್ಟಿಸಿತು. ದುರದೃಷ್ಟವಶಾತ್, ಕ.ರಾ.ರೈ.ಸಂ.ದ ನಾಯಕರುಗಳು (ರುದ್ರಪ್ಪ, ಸುಂದರೇಶ್ ಮತ್ತು ನಂಜುಂಡಸ್ವಾಮಿ) ಹೆಗಡೆಯವರ ಚುನಾವಣ ತಂತ್ರಗಳನ್ನು ತಿಳಿಯಲಾಗಲಿಲ್ಲ. ಅದೇ ವೇಳೆಗೆ, ನಂಜುಂಡ ಸ್ವಾಮಿ ಹೇಳುವಂತೆ, ಕರ್ನಾಟಕದಲ್ಲಿ ಪತ್ರಕರ್ತರು ರಾಮಕೃಷ್ಣ ಹೆಗಡೆಯವರ ಸರ್ಕಾರಕ್ಕೆ ಪರವಾಗಿದ್ದರು ಮತ್ತು ಇತರ ರಾಜಕೀಯ ಪಕ್ಷಗಳಿಗೆ ವಿರುದ್ಧವಾಗಿದ್ದರು, ಪ್ರಮುಖವಾಗಿ ರೈತರಿಗೆ ವಿರುದ್ಧವಾಗಿದ್ದರು, ಆದ್ದರಿಂದ ಅವರು ಪತ್ರಕರ್ತರನ್ನು "ಜಿಂಗೊಯಿಸ್ಟಿಕ್ ಪತ್ರಕರ್ತ"ರೆಂದು ಕರೆದರು.

ಈ ದೋಷ ಹೋಗಲಾಡಿಸಲು, ನಂಜುಂಡಸ್ವಾಮಿಯವರು ಕ.ರಾ.ರೈ.ಸಂ. ಇತರಿಗಾಗಿ ಮಾತಾಡುವ, "ನಮ್ಮ ನಾಡು" ಪ್ರಾರಂಭಿಸಿದರು. ಆದರೆ ಅದನ್ನು ಕ.ರಾ.ರೈ.ಸಂ. ಬದಲಾಗಿ ತಮ್ಮದೇ ಧ್ವನಿಯಾಗಿ ಪರಿವರ್ತಿಸಿದರು. ಪತ್ರಿಕಾ ವ್ಯವಹಾರಗಳಲ್ಲಿ ಕ.ರಾ.ರೈ.ಸಂ. ಯಾವುದೇ ನಾಯಕರು ಭಾಗವಹಿಸಲಿಲ್ಲ. ವಾಸ್ತವವಾಗಿ, ಹಾಸನದಿಂದ ವೆಂಕಟೇಶ ಮೂರ್ತಿಯವರು ಕ.ರಾ.ರೈ.ಸಂ.ದ ಕ್ರಾಂತಿಕಾರಿ ಹಾಗೂ ಪತ್ರಿಕಾ ವರದಿಗಾರರು, ನಂತರದಲ್ಲಿ ಪತ್ರಿಕೆಯ ಉಪ ಸಂಪಾದಕರಾಗಿ ಆಯ್ಕೆಯಾದವರು. ಅವರೂ ನಂಜುಂಡ ಸ್ವಾಮಿಯವರಿಂದ ಹೊರದೂಡಲ್ಪಟ್ಟರು. ನಂಜುಂಡ ಸ್ವಾಮಿಯವರ ಈ ಕೃತ್ಯವನ್ನು ಕ.ರಾ.ರೈ.ಸಂ.ದ ಒಂದು ಭಾಗ ಉದ್ದೇಶ ಪೂರ್ವಕವೆಂದು ಆರೋಪಿಸಿತು. ಏಕೆಂದರೆ ಭವಿಷ್ಯದಲ್ಲಿ ವೆಂಕಟೇಶ ಮೂರ್ತಿಯವರಿಂದ ಅವರ ಸ್ಥಾನಕ್ಕೆ ಪೆಟ್ಟು ಎಂಬುದಾಗಿ ಭಾವಿಸಿ ಈ ಕೃತ್ಯ ಎಸಗಿದ್ದಾರೆ ಎಂದು ಟೀಕಿಸಿದರು.

೧೯೮೬-೮೭ರಲ್ಲಿ ಕ.ರಾ.ರೈ.ಸಂ.ದಲ್ಲಿ 'ಮೂರನೇ ಪಂಥ' ರಚನೆಯ ರಾಜಕೀಯ ಪಕ್ಷದ ಪರಿಭಾವನೆ ಬೆಳೆಯಿತು. ಇದರ ಹಿಂದಿನ ಬುದ್ಧಿವಂತಿಕೆ ನಂಜುಂಡಸ್ವಾಮಿಯವರದೇ ಆಗಿತ್ತು. ಆದರೆ ಕ.ರಾ.ರೈ.ಸಂ.ದಲ್ಲೇ ಇದನ್ನು ವಿರೋಧಿಸಿದ ಮತ್ತೊಂದು ಗುಂಪು ಇತ್ತು ಇದರಲ್ಲಿ ನಾಯಕರುಗಳಾದ ಮಂಜುನಾಥ ದತ್ತಾ, ವೆಂಕಟೇಶ ಮೂರ್ತಿ, ರಾಮಚಂದ್ರ, ದೇವರಾಜು, ಶಿವರಾಮು ಮತ್ತು ೧೨ ಜನ ಇತರರು ಹಾಸನ, ಚಿಕ್ಕಮಗಳೂರು ಮತ್ತು ತುಮಕೂರಿನ ಕ.ರಾ.ರೈ.ಸಂ.ದ ಘಟಕದ ಸದಸ್ಯರಿದ್ದು, ಅವರು ಒಂದು ತೀರ್ಮಾನ ಕೈಗೊಂಡು ಅದನ್ನು ನಂಜುಂಡಸ್ವಾಮಿಯವರಿಗೆ ಕಳಿಸಿಕೊಟ್ಟರು. ಅದು ಹೀಗಿದೆ, ಯಾವುದೇ ಸಂಘಟನೆ ಒಂದು ನಿರ್ದಿಷ್ಟ ವರ್ಗ ಅಥವಾ ಪಂಗಡ ಅಥವಾ ಗುಂಪಿಗೆ ಅನುಕೂಲಕರವಾಗಿದ್ದರೆ ಅದು ಸಾರ್ವಜನಿಕರ ಬೆಂಬಲ ಪಡೆಯುವುದಿಲ್ಲ. ಆದರೆ ನಂಜುಂಡಸ್ವಾಮಿ ಈ ಅಭಿಪ್ರಾಯವನ್ನು ಒಪ್ಪಲಿಲ್ಲ ಮತ್ತು ಅವರು ಕ.ರಾ.ರೈ.ಸಂ.ದ ಈ ಮೂರು ಜಿಲ್ಲಾ ಘಟಕಗಳ ಎಲ್ಲಾ ಪದಾಧಿಕಾರಿಗಳನ್ನು ಹೊರದೂಡಿದರು.

ಈ ರಾಜಕೀಯ ಸನ್ನಿವೇಶದಲ್ಲಿ ಗಂಭೀರವಾದ ಟೀಕೆಗಳು ಚಳುವಳಿಯ ಒಳಗೇ ಕಾರ್ಯಸೂಚಿಯ ಬಗ್ಗೆ ಬೆಳೆದವು. ಕಾರ್ಯಸೂಚಿಯನ್ನು ಅಳವಡಿಸಿಕೊಳ್ಳುವಾಗ ಚಳುವಳಿಯನ್ನು ಅಥವಾ ಕ.ರಾ.ರೈ.ಸಂ.ವನ್ನು ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿಸುವ ಬಗ್ಗೆ ಇದ್ದ ಚರ್ಚೆಯ ದಾರಿಯನ್ನು ವಿಂಗಡಿಸುವಲ್ಲಿ ಪೂರ್ಣವಾಗಿ ಅಸಮರ್ಥವಾಗಿದ್ದವು. ಹೀಗೆ ಈ ಸ್ಥಿತಿ ಚಳುವಳಿಯ ಒಳಗೆ ಒಟ್ಟಾರೆಯಾಗಿ ಅಸ್ಪಷ್ಟತೆಯನ್ನು ಉಂಟುಮಾಡಿತು. ಅಂತಿಮವಾಗಿ,

ನಂಜುಂಡಸ್ವಾಮಿಯವರ ರಾಜಕೀಯ ಆಕಾಂಕ್ಷಿಗಳು ಕ.ರಾ.ರೈ.ಸಂ. ವಿಂಗಡನೆಗೆ ಪೋಷಣೆ ನೀಡಿದವು. ಒಂದು ಗುಂಪು ಕ್ರಾಂತಿಕಾರಿಗಳು ಕನ್ನಡ ದೇಶ ಎಂಬ ರಾಜಕೀಯ ಪಕ್ಷವನ್ನು ರೈತರ ಸಮ್ಮತಿಯಿಲ್ಲದೆ ರಚಿಸಲಾಗಿದೆ ಎಂದು ಆರೋಪಿಸಿದರು ಮತ್ತು ಕ.ರಾ.ರೈ.ಸಂ. ಉದ್ದೇಶಗಳ ವಿರುದ್ಧ ಇಡೀ ಚಳುವಳಿಯನ್ನು ರಾಜಕೀಯಗೊಳಿಸಿದ್ದಕ್ಕಾಗಿ ಅವರನ್ನೇ ಹೊಣೆಯಾಗಿಸಿದರು.

ನಂತರ ನಂಜುಂಡಸ್ವಾಮಿಯವರು ಇಂದಿನ ಸರ್ಕಾರದವರೆಗೆ ಎಲ್ಲಾ ಸರ್ಕಾರಗಳು ರೈತರ ಸಮಸ್ಯೆಗಳನ್ನು ಪರಿಗಣಿಸಿಲ್ಲವೆಂದು ಒಪ್ಪಿಸಿದರು. ಆದ್ದರಿಂದ, ನಾವೇ, ಆಡಳಿತದ ಶಕ್ತಿಯನ್ನು ತೆಗೆದು ಕೊಂಡು (ಸರ್ಕಾರ ರಚಿಸಿ) ಮತ್ತು ರೈತರ ಪರವಾದ ಕಾನೂನುಗಳನ್ನು ಜಾರಿಗೆ ತರುವ ಮೂಲಕ ನಾವು ರೈತರ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು, ಅವರು ದಲಿತ ಚಳುವಳಿಯನ್ನು ಸಾಮಾಜಿಕ ಸಮಾನತೆಗಾಗಿ ಮತ್ತು ಕನ್ನಡ ಭಾಷಾ ಚಳುವಳಿಯನ್ನು ರಾಜ್ಯದ ಏಕತೆಗಾಗಿ, ರೈತ ಚಳುವಳಿಯೊಂದಿಗೆ ಸೇರಿಸಿದರು.

೧೯೮೭ರ ಡಿಸೆಂಬರ್ ೨೧ರಂದು, 'ಕನ್ನಡ ದೇಶ', ಎಂಬ ರೈತರ ಒಂದು ಪ್ರಾದೇಶಿಕ ರಾಜಕೀಯ ಪಕ್ಷವಾಗಿ ಕ.ರಾ.ರೈ.ಸಂ. ರೂಪುಗೊಂಡಿತು. ಕನ್ನಡ ದೇಶ ಪಕ್ಷ ದಲಿತ ಚಳುವಳಿ ಮತ್ತು ಭಾಷಾ ಚಳುವಳಿಯನ್ನು ತನ್ನ ಕ್ರೋಢೀಕರಣದ ಭಾಗಗಳಾಗಿ ತನ್ನ ಪ್ರಣಾಳಿಕೆಯನ್ನು ರೂಪಿಸಿತು. ಪ್ರಣಾಳಿಕೆ ಹೀಗಿದೆ : ಕರ್ನಾಟಕದ ಜನರು ೧೯೪೭ರಿಂದ ೧೯೮೩ರವರೆಗಿನ ಕಾಂಗ್ರೆಸ್ ಆಡಳಿತದಿಂದ ಬೇಸರಗೊಂಡು, ಒಂದು ಬದಲಾವಣೆಗಾಗಿ ಉಜ್ವಲ ಉದ್ದೇಶಗಳುಳ್ಳ ಜನತಾ ಪಕ್ಷಕ್ಕೆ, ಅದು ರೈತರ ಸಮಸ್ಯೆಗಳನ್ನು ಪರಿಹರಿಸುವುದೆಂದು ಮತ ಹಾಕಿದರು. ಆದರೆ ಅದು ಅಧಿಕಾರಕ್ಕೆ ಬಂದ ಮೇಲೆ ಆ ನಿರೀಕ್ಷೆ ನಿರಾಶಾದಾಯಕವಾಯಿತು. ತನ್ನ ಆರು ವರ್ಷಗಳ ಅವಧಿಯಲ್ಲಿ, ಅದು ಕೂಡ ಕಾಂಗ್ರೆಸ್ ಸರ್ಕಾರದ ದಾರಿಯನ್ನೇ ಅನುಸರಿಸಿದೆ. ಈ ಅವಧಿಯಲ್ಲಿ, ಒಂದು ಮೂರನೇ ಪಂಥದ ಅವಶ್ಯಕತೆ ಇದ್ದಾಗ, ಕ.ರಾ.ರೈ.ಸಂ. ಕನ್ನಡ ದೇಶ ಪಕ್ಷವನ್ನು ರಚಿಸಿದೆ ಎಂದರು.

ಕನ್ನಡ ದೇಶ ಪಕ್ಷದ ಪ್ರಣಾಳಿಕೆ ಸಮಾಜದ ಎಲ್ಲಾ ಸಮಸ್ಯೆಗಳಿಗೆ ಈ ರೀತಿಯ ಅಸಮಾನತೆಗಳನ್ನು ಹೋಗಲಾಡಿಸುವ ಮೂಲಕ ಅಂದರೆ ಪಾಶ್ಚಿಮಾತ್ಯ ಬಂಡವಾಳದಾರರಿಂದ ಭಾರತೀಯ ಬಂಡವಾಳದಾರರ ಶೋಷಣೆಯನ್ನು ನಿವಾರಿಸುವುದು ಮತ್ತು ಭಾರತೀಯ ಬಂಡವಾಳದಾರರಿಂದ ಸಾಮಾನ್ಯ ಜನರ ಶೋಷಣೆಯನ್ನು ನಿವಾರಿಸುವ ಮೂಲಕ ಪರಿಹಾರವನ್ನು ಕಂಡುಕೊಳ್ಳಲಿದೆ. ಹಾಗೂ ಪ್ರಸ್ತುತ ಸರ್ಕಾರದ ಎಲ್ಲಾ ವಲಯಗಳಲ್ಲಿ ಕೆಲವೇ ಜನರ ಪ್ರಭುತ್ವವನ್ನು ಕಾಯ್ದುಕೊಳ್ಳುವ

ನೀತಿಗಳನ್ನು, ಅಂದರೆ ಇಂಗ್ಲೀಷ್ ಮತ್ತು ಹಿಂದಿ ಸಾಮ್ರಾಜ್ಯಶಾಹಿ, ಬುದ್ಧಿವಂತಿಕೆಯ ಸಾಮ್ರಾಜ್ಯಶಾಹಿ, ಉತ್ಪಾದನಾ ಸಾಮ್ರಾಜ್ಯಶಾಹಿ, ಲೂಟಿಯ ಸಾಮ್ರಾಜ್ಯಶಾಹಿ ನೀತಿಗಳನ್ನು ಜಾರಿಗೆ ತಂದಿದೆ ಅದಕ್ಕೆ ಪರ್ಯಾಯವಾಗಿ ಕನ್ನಡ ದೇಶ ಪಕ್ಷದ ಪ್ರಣಾಳಿಕೆಯು ಪ್ರಾದೇಶಿಕ ಮತ್ತು ರಾಷ್ಟ್ರೀಯ ಭಾಷೆಗಳಿಗೆ ಸಮಾನ ಸ್ಥಾನ, ಬುದ್ಧಿವಂತರ ಸಮಾನತೆ, ಉತ್ಪಾದನಾ ಸಮಾನತೆ, ಆಸ್ತಿಯ ಸಮಾನತೆ, ಶ್ರಮದ ಮೌಲ್ಯದ ಸಮಾನತೆ ಇತ್ಯಾದಿಗಳಿಂದ ಸ್ಥಳಾಂತರವಾಗಬೇಕಾಗಿದೆ ಎಂದು ಪ್ರಸ್ತಾಪಿಸಿತು.

ಮೇಲಿನ ಉದ್ದೇಶಗಳನ್ನು ಪೂರೈಸಲು ಕನ್ನಡ ದೇಶ ಪಕ್ಷ ಕೆಲವು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದೆ. ಅವುಗಳೆಂದರೆ :

೧) ಭಾಷೆ ಮತ್ತು ಶಿಕ್ಷಣ,
೨) ಉತ್ಪಾದನಾ ನೀತಿ,
೩) ಬೆಲೆ ನೀತಿ,
೪) ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು,
೫) ರೈತರಿಗೆ ವಿಶೇಷ ಕಾರ್ಯಕ್ರಮಗಳು,
೬) ಬರಗಾಲ ನಿವಾರಣ ಕಾರ್ಯಕ್ರಮಗಳು,
೭) ಸಹಕಾರಿ ವಲಯದಲ್ಲಿ ಸುಧಾರಣೆ,
೮) ಕಾರ್ಮಿಕರ ಉದ್ಧಾರಕ್ಕೆ ಕಾರ್ಯಕ್ರಮಗಳು,
೯) ಮಹಿಳಾ ಸಶಕ್ತಿಕರಣದ ಕಾರ್ಯಕ್ರಮಗಳು,
೧೦) ಪರಿಶಿಷ್ಟ ಜಾತಿ/ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಮೇಲಿನ ಕಾರ್ಯಕ್ರಮಗಳು ಮತ್ತು ಮೀಸಲಾತಿಯ ಮುಂದುವರಿಕೆ,
೧೧) ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳು,
೧೨) ಚುನಾವಣೆಯಲ್ಲಿ ಸುಧಾರಣೆಗಳು,
೧೩) ಆದಾಯ ಸಂಗ್ರಹಣೆಯಲ್ಲಿ ಸರಿಯಾದ ವಿಧಾನಗಳ ಜಾರಿಗೆ,
೧೪) ರಾಜ್ಯ ಸರ್ಕಾರಕ್ಕೆ ಸ್ವಾಯತ್ತತೆ, ಕೇಂದ್ರ-ರಾಜ್ಯ ಸಂಬಂಧ, ದ್ವಿವಿಧ ಪೌರತ್ವ, ವಿಕೇಂದ್ರೀಕರಣದ ಮೇಲಿನ ಕಾರ್ಯಕ್ರಮಗಳು,
೧೫) ಅಧಿಕಾರದ ವಿಕೇಂದ್ರೀಕರಣ ಮತ್ತು ಸಶಕ್ತ ಗ್ರಾಮಗಳು, ಇತ್ಯಾದಿ ಕಾರ್ಯಕ್ರಮಗಳು

ಅದೇ ಅವಧಿಯಲ್ಲಿ, ಕನ್ನಡ ದೇಶ ಪಕ್ಷದ ಹೆಸರು ಬದಲಾಯಿತು ಮತ್ತು ಹಳೇ ಹೆಸರಾದ ಕ.ರಾ.ರೈ.ಸಂ. ಎಂಬುದನ್ನೇ ಉಳಿಸಿಕೊಳ್ಳಲಾಯಿತು. ಏಕೆಂದರೆ, ಹೈದ್ರಾಬಾದ್ ಕರ್ನಾಟಕದ ತೆಲುಗು ಮಾತನಾಡುವ ರೈತರನ್ನು ಮತ್ತು ಮರಾಠಿ ಮಾತನಾಡುವ ಮಹಾರಾಷ್ಟ್ರ-ಕರ್ನಾಟಕ ಪ್ರದೇಶದ ರೈತರನ್ನು ರಾಜಕೀಯ

ಉದ್ದೇಶಕ್ಕಾಗಿ ಸಂಗ್ರಹಣ ಕಾರ್ಯಕ್ಕಾಗಿ ಆಕರ್ಷಿಸಲು ಮತ್ತು ಸೇರಿಸಿಕೊಳ್ಳಲು. ಪಕ್ಷ ಹಾಗೂ ಮತದಾರ ರಾಜಕೀಯದ ಆಧಾರದ ಮೇಲೆ ರೈತರ ಒಗ್ಗೂಡಿಸುವಿಕೆಯನ್ನು ರೈತ ಸಂಘ ಪ್ರಯತ್ನಿಸಿತು. ಮೊದಲ ಪ್ರಯತ್ನವನ್ನು ೧೯೮೩ರಲ್ಲಿ, ೧೯೮೪ರ ಲೋಕಸಭಾ ಚುನಾವಣೆಗಳಲ್ಲಿ ಎರಡನೇ ಪ್ರಯತ್ನವಾಗಿ ಮತ್ತು ಅಂತಿಮವಾಗಿ ೧೯೮೭ರಲ್ಲಿ ಮಾಡಲಾಯಿತು. ತನ್ನ ಕ್ರೋಢೀಕರಣ ಕಾರ್ಯದಲ್ಲಿ ಅದು ಅನೇಕ (ಗ್ರಾಮ ಮತ್ತು ನಗರ) ವರ್ಗಗಳನ್ನು ಸೇರ್ಪಡೆಗೊಳಿಸಿಕೊಂಡಿರಲಿಲ್ಲ. ನಗರ ವರ್ಗಗಳಲ್ಲಿ ಕೈಗಾರಿಕಾ ಕಾರ್ಮಿಕರ ವರ್ಗವನ್ನು ತನ್ನ ಕ್ರೋಢೀಕರಣದಿಂದ ಪೂರ್ಣವಾಗಿ ಬಿಟ್ಟು ಹಾಕಿತು. ಮತ್ತೆ, ಬಂಡವಾಳಶಾಹಿ ವ್ಯವಸ್ಥೆಯ ರೈತರ ಮತ್ತು ಕೈಗಾರಿಕಾ ಕಾರ್ಮಿಕರ ವರ್ಗವನ್ನು ಕ.ರಾ.ರೈ.ಸಂ. ತನ್ನ ಕ್ರೋಢೀಕರಣದಿಂದ ದೂರ ಇರಿಸಿತು. ಏಕೆಂದರೆ ಬಂಡವಾಳಶಾಹಿ ರೈತರು "ಉತ್ಪಾದಕರ ಜೀತದಾಳು" ಆಗುವುದೆಂದು ನಂಬಿತ್ತು.

ನಂತರದ ಕೈಗಾರಿಕಾ ಕಾರ್ಮಿಕ ವರ್ಗ ಇನ್ನೊಂದೆಡೆ ಕ.ರಾ.ರೈ.ಸಂ. "ಬಳಕೆದಾರರ ಜೀತದಾಳು" ಆಗುತ್ತದೆ ಎಂದು ನಂಬಿತ್ತು. ಆದ್ದರಿಂದ ಕ.ರಾ.ರೈ.ಸಂ. ಇವೆರಡೂ ವರ್ಗಗಳು ಕೆಳಸ್ತರದ ಹಿನ್ನೆಲೆಗೆ ಸೇರಿವೆ ಎಂದು ಕಂಡು ಕೊಂಡಿದೆ. ಕ.ರಾ.ರೈ.ಸಂ. ರೈತರಿಗೂ ಕೈಗಾರಿಕಾ ಕಾರ್ಮಿಕ ವರ್ಗಕ್ಕೆ ಸಮನಾಗಿ ವೈಜ್ಞಾನಿಕ ಕೂಲಿಯನ್ನು ಒತ್ತಾಯಿಸಿತು. ಹೀಗೆ ಕ.ರಾ.ರೈ.ಸಂ.ಕ್ಕೆ ಈ ವರ್ಗವನ್ನು ತನ್ನ ಚಳುವಳಿ ವಿಶಾಲಗೊಳಿಸುವಲ್ಲಿ ಕ್ರೋಢೀಕರಿಸಲು ಸಾಧ್ಯವಾಗಲಿಲ್ಲ. ಕೃಷಿ ಕಾರ್ಮಿಕರ ಕ್ರೋಢೀಕರಣಕ್ಕೆ ಸಂಬಂಧಿಸಿದಂತೆ ಕ.ರಾ.ರೈ.ಸಂ. ಮೇಲಿನ ಸ್ತರದ ಲಾಭಾಂಶ ಕೆಳಸ್ತರಕ್ಕೆ ಹಂಚಿಕೆಯಾಗುವ ಸಿದ್ಧಾಂತ (ಟ್ರಿಕಲ್ ಡೌನ್ ಥಿಯರಿ)ದಲ್ಲಿ ನಂಬಿಕೆಯಿಟ್ಟಿತ್ತು, ಅಂದರೆ ಕೃಷಿ ಸರಕುಗಳ ನ್ಯಾಯಯುತ ಬೆಲೆಗಳ ಹೆಚ್ಚಳ ಜೊತೆ ಜೊತೆಯಲ್ಲಿ ಭೂರಹಿತ ಕೃಷಿ ಕಾರ್ಮಿಕರ ಕೂಲಿಯನ್ನು ಹೆಚ್ಚಿಸುತ್ತದೆ. ಅದರೊಂದಿಗೆ, ಕ.ರಾ.ರೈ.ಸಂ. ೧೯೮೧ರ ಮೊದಲ ರಾಜ್ಯ ಮಟ್ಟದ ಸಭೆಯಲ್ಲಿ ಈ ಮಾದರಿಯ ದೋಷಗಳನ್ನು ಒಪ್ಪಿಕೊಂಡಿತು. ಕ.ರಾ.ರೈ.ಸಂ.ದ ನಾಯಕರುಗಳೇ ಕೂಲಿಯನ್ನು ಅರ್ಧಕ್ಕೆ ಇಳಿಸುವಲ್ಲಿ ತೊಡಗಿದ ಅನೇಕ ಉದಾಹರಣೆಗಳಿದ್ದವು. ಆದ್ದರಿಂದ, ಮೇಲಿನ ಸ್ತರದ ಲಾಭಾಂಶ ಕೆಳಸ್ತರಕ್ಕೆ ಹಂಚಿಕೆಯಾಗುವ ಸಿದ್ಧಾಂತವನ್ನು ಬೆಂಬಲಿಸುವ ಆಧಾರಗಳನ್ನು ವಿಸ್ತರಿಸುವ ಬದಲು ಸಂಕುಚಿತಗೊಳಿಸಿತು.

ಕ.ರಾ.ರೈ.ಸಂ.ದ ನ್ಯಾಯಯುತ ಬೆಲೆಗಾಗಿ ಹೋರಾಟ ಕೇವಲ ಕಬ್ಬು ಮತ್ತು ಹತ್ತಿಗೆ ಸೀಮಿತವಾಗಿತ್ತು. ಆದ್ದರಿಂದ ಅದು ಇತರ ಬೆಳೆಗಳನ್ನು ಬೆಳೆಯುವ ರೈತರನ್ನು ಕಡೆಗಣಿಸಿತು. ಮತ್ತೆ ಅದು ತನ್ನ ಮೂಲಾಧಾರವನ್ನು ಸಂಕುಚಿತಗೊಳಿಸಿತು. ತನ್ನ ಕಾರ್ಯಾಚರಣೆಯ ಪ್ರದೇಶದಲ್ಲಿ ಭೂರಹಿತರು ಮತ್ತು ಕೃಷಿ ಕಾರ್ಮಿಕರನ್ನು

ಕ್ರೋಢೀಕರಿಸುವಲ್ಲಿ ಈ ದುರ್ಬಲತೆ ಕ.ರಾ.ರೈ.ಸಂ. ಒಟ್ಟಾರೆ ವಿಫಲತೆಯನ್ನು ಪ್ರತಿಬಿಂಬಿಸಿತು. ಏಕೆಂದರೆ ಕ.ರಾ.ರೈ.ಸಂ. ಒಂದು ರಾಜಕೀಯ ಪಕ್ಷವಾಗಿ ಹೊರ ಹೊಮ್ಮಲು ಈ ವರ್ಗಗಳ ಕ್ರೋಢೀಕರಣ ಅದರ ಚಳುವಳಿಯ ಅವಿಭಾಜ್ಯ ಅಂಗವಾಗಬೇಕಾಗಿತ್ತು. ಆದರೆ ಕ.ರಾ.ರೈ.ಸಂ.ದ ಈ ವರ್ಗಗಳ ಮೇಲಿನ ವಿರೋಧ ಅವುಗಳನ್ನು ತನ್ನ ಪರವಾಗಿ ಕ್ರೋಢೀಕರಿಸುವಲ್ಲಿ ವಿಫಲವಾಯಿತು.

ದಲಿತರು ಮತ್ತು ಕ.ರಾ.ರೈ.ಸಂ.

ಜೈರಸ್ ಬನ್ನಿಯವರು, ಕೇಲಕರ್ ಅವರನ್ನು ಉಲ್ಲೇಖಿಸಿರುವಂತೆ ಗ್ರಾಮೀಣ ಜನರು ಏಕರೂಪತೆ ಹೊಂದಿಲ್ಲ. ಭೂಮಿ ಹೊಂದಿದವರು ಮತ್ತು ಭೂಮಿ ಹೊಂದದವರು ಪರಿಸ್ಪರ ಹಗೆತನ ಹೊಂದಿದ್ದಾರೆ. ಅದೇ ವೇಳೆಗೆ ಈ ವರ್ಗಗಳ ಆಸಕ್ತಿಗಳೂ ಭಿನ್ನವಾಗಿವೆ. ಕೃಷಿ ಭೂಮಿ ಹೊಂದಿದವರು ಕೃಷಿ ಸರಕುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ ಮತ್ತು ಭೂಮಿ ಇಲ್ಲದವರು ನಿವ್ವಳ ಆಧಾರದ ಮೇಲೆ ಆಹಾರ ವಸ್ತುಗಳನ್ನು ಮಾರುಕಟ್ಟೆಯಿಂದ ಖರೀದಿಸುತ್ತಾರೆ. ರೈತರ ಚಳುವಳಿಯ ವಿಜಯ ಈ ಉದ್ಯಮಿಗಳ ಕೈಗಳನ್ನು ಕಾರ್ಮಿಕರ ವಿರುದ್ಧ ಬಲಪಡಿಸುವುದರ ಜೊತೆಗೆ ಒಂದು ನೇರ ಹೊಡೆತವಾಗಿದೆ.

ಕರ್ನಾಟಕದಲ್ಲಿ ರೈತರ ಚಳುವಳಿಗಳ ಬಗ್ಗೆ ಈ ಅಭಿಪ್ರಾಯವನ್ನು ದಲಿತ ಮುಖಂಡರೂ ಒಪ್ಪಿಕೊಂಡಿದ್ದರು. ಕರ್ನಾಟಕದ ಶಿವಪ್ರಸಾದ್‌ರಂತಹ ಕೆಲವು ದಲಿತರು, ಕೆಲವು ರೈತ ನಾಯಕರ ಸಮಾಜವಾದಿ ಹಿನ್ನೆಲೆಯ ಪ್ರಭಾವದಿಂದಾಗಿ, ಪ್ರಾರಂಭದಲ್ಲಿ ರೈತ ಚಳುವಳಿಯಲ್ಲಿ ಭಾಗವಹಿಸಿದ್ದರೂ, ಬೇಗನೆ ಭ್ರಮನಿರಸನಗೊಂಡು, ಕ.ರಾ.ರೈ.ಸಂ.ಕ್ಕೆ ರಾಜೀನಾಮೆ ನೀಡಿ ದಲಿತ ಚಳುವಳಿಯನ್ನು ಸೇರಿಕೊಂಡರು. ನಾಡಕರ್ಣಿಯವರು ಅವರ ರಾಜೀನಾಮೆಯ ಕಾರಣವನ್ನು ಕೇಳಿದಾಗ ಶಿವಪ್ರಸಾದರು ರೈತ ಸಂಘ ಗೌಡ ಮತ್ತು ಲಿಂಗಾಯಿತರ ಪ್ರಾಬಲ್ಯದಿಂದ ವರ್ಗ ಪರವಾಗಿದೆ ಎಂದು ಆರೋಪಿಸಿದರು. ಅವರು ಸಮಾಜದಿಂದ ಜಾತಿ ಪದ್ಧತಿಯನ್ನು ನಿವಾರಿಸುವ ಬದಲು, ರೈತ ಸಂಘ ಮಧ್ಯಮ ಜಾತಿಯ ಬಲವನ್ನು ಕ್ರೋಢೀಕರಿಸುತ್ತಿದೆ. ಇದಕ್ಕೆ ಕರ್ನಾಟಕದಲ್ಲಿ ಹೆಚ್ಚಾಗಿ ಗೌಡರು ಮತ್ತು ಲಿಂಗಾಯತರು ಅದರ ಸದಸ್ಯರಾಗಿದ್ದಾರೆ ಎಂಬ ತರ್ಕಬದ್ಧ ಹೇಳಿಕೆಯನ್ನು ನೀಡಿದ್ದರು.

ದಿವಂಗತ ಬಿ. ಕೃಷ್ಣಪ್ಪ ಹಿಂದಿನ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷರು, ಕರ್ನಾಟಕದ ರೈತ ಚಳುವಳಿಗಳಲ್ಲಿ ಪ್ರಬಲ ಜಾತಿಗಳ ರಾಜಕೀಯ ಪ್ರಭಾವ ಇದೆ ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಅವರು ರೈತರು ಮಧ್ಯಮ ಜಾತಿಯವರಾಗಿದ್ದು ತಮ್ಮ ಪ್ರಾಬಲ್ಯ ಸಾಧಿಸುತ್ತಾರೆ ಎಂದು ಹೇಳಿದರು. ಅವರು

ಆರ್ಥಿಕ ವಿಷಯದಲ್ಲಿ ಅನೇಕ ರಿಯಾಯಿತಿಗಳನ್ನು ಪಡೆಯುವುದೇ ಅಲ್ಲದೆ ೫೦ ಮತ್ತು ೬೦ರ ದಶಕಗಳಲ್ಲಿ ತಾವು ಹೊಂದಿದ್ದ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಕೃಷ್ಣಪ್ಪ ಅವರು ದಲಿತರು ಭಾರತ ಎದುರು ಇಂಡಿಯಾ ವಿಭಕ್ತಿ ರೂಪ ಮೂಲವನ್ನು ಒಪ್ಪುವುದಿಲ್ಲ ಎಂದು ಹೇಳಿದರು ಮತ್ತು ಅದು ಬಡವರನ್ನು ಮೋಸಮಾಡಲು ಬಳಸುವ ಒಂದು ತತ್ವವಾಗಿದೆ ಎಂದು ಸ್ಪಷ್ಟ ಪಡಿಸಿದರು. ಮತ್ತೊಬ್ಬ ಪ್ರಮುಖ ದಲಿತ ಮುಖಂಡರಾದ ಬಿ. ಬಸವಲಿಂಗಪ್ಪ, ೧೯೮೦ರಲ್ಲಿ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಉಪನಾಯಕರ ಸ್ಥಾನದಿಂದ ಅನುಭೋಗಿಗಳು ಮತ್ತು ಕೃಷಿ ಕಾರ್ಮಿಕರ ಆಸಕ್ತಿಗಳನ್ನು ಪರಿಗಣಿಸದೆ ಸರ್ಕಾರ ರೈತರ ಬೇಡಿಕೆಯನ್ನು ಪರಿಗಣಿಸಿ ಕೃಷಿ ಸರಕುಗಳ ಬೆಲೆಯನ್ನು ಹೆಚ್ಚಿಸುವ ಏಕಪಕ್ಷೀಯ ನಿರ್ಧಾರವನ್ನು ಕೈಗೊಳ್ಳಬಾರದೆಂದು ಎಚ್ಚರಿಕೆ ನೀಡಿದರು.

ಬಿ. ಕೃಷ್ಣಪ್ಪ, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷರು, ೧೯೮೫ರಲ್ಲಿ ಎಂ. ವಿ. ನಾಡಕರ್ಣಿಯವರಿಗೆ ಒಂದು ಸಂದರ್ಶನದಲ್ಲಿ ಪ್ರಬಲ ಜಾತಿಯ ಆಧಾರದ ಮೇಲೆ ರೈತರನ್ನು ಬಲಪಡಿಸುವುದು ಅದರಲ್ಲೂ ಗ್ರಾಮೀಣ ಮಟ್ಟದಲ್ಲಿ ಶೋಷಿತ ಅಲ್ಪಸಂಖ್ಯಾತರ ಆರ್ಥಿಕ ಹಿತಾಸಕ್ತಿ ಮತ್ತು ಸುರಕ್ಷತೆಗೆ ಧಕ್ಕೆ ಉಂಟುಮಾಡುತ್ತದೆ. ದಲಿತರು ಒಮ್ಮೆ ಬೆಲೆ ಸುಧಾರಿಸಿದರೆ, ಕೃಷಿ ಕೂಲಿಗಳು ಸುಧಾರಿಸುತ್ತವೆಂಬ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಕೃಷ್ಣಪ್ಪನವರು ಶಿವಮೊಗ್ಗಾ ಜಿಲ್ಲೆಯಲ್ಲೇ, ಭತ್ತ ಮತ್ತು ಕಬ್ಬಿನ ಬೆಲೆಗಳು ಹಿಂದಿನ ದಶಕದಲ್ಲಿ ೨ ಪಟ್ಟಿಗಿಂತ ಹೆಚ್ಚಿವೆ ಆದರೆ ಕೂಲಿಗಳು ವಾಸ್ತವವಾಗಿ ಅಷ್ಟೇ ಇದ್ದವು ಎಂದು ಅಭಿಪ್ರಾಯ ಪಡುತ್ತಾರೆ. ದಲಿತರು, ಕೃಷ್ಣಪ್ಪನವರ ಪ್ರಕಾರ, ಸಂಗ್ರಹ ಬೆಲೆ ಬೇಡಿಕೆ ಮತ್ತು ಸಾರ್ವಜನಿಕ ವಿತರಣ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುವ ಯಾವುದೇ ಅಂಶವನ್ನು ವಿರೋಧಿಸಿದ್ದರು. ಅವರು ಉದ್ಯೋಗ ಭರವಸೆ ಕಾರ್ಯಕ್ರಮಗಳ ಜೊತೆಯಲ್ಲಿ ಇದನ್ನು ಮುಂದುವರೆಸುವ ಅವಶ್ಯಕತೆ ಗ್ರಾಮೀಣ ಪ್ರದೇಶಗಳಲ್ಲಿದೆ. ಏಕೆಂದರೆ ಕಷ್ಟಕಾಲದಲ್ಲಿ ಪರಿಶಿಷ್ಟ ಜಾತಿಯವರು ರೈತರು ಮತ್ತು ವ್ಯಾಪಾರಸ್ಥರ ಮೇಲೆ ಅವಲಂಭಿಸುವುದನ್ನು ಕಡಿಮೆ ಮಾಡಬಹುದೆಂದು ಅಭಿಪ್ರಾಯ ಪಡುತ್ತಾರೆ. ಶರದ್ ಜೋಶಿಯವರು ನೀಡಿರುವ ಗ್ರಾಮೀಣ ತತ್ವ ಭಾರತ ಹಾಗೂ ಇಂಡಿಯಾ, ಗ್ರಾಮೀಣ ವಲಯ ಮತ್ತು ಬಡವರಿಗೆ ಅಧಿಕ ಅಗತ್ಯವಿದ್ದರೂ ಇದನ್ನು ಒಪ್ಪುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿನ ಶೋಷಣೆಯಿಂದ ತಪ್ಪಿಸಿಕೊಳ್ಳಲು ಗ್ರಾಮೀಣ ದಲಿತರಿಗೆ ಇರುವ ಒಂದೇ ಭರವಸೆ ನಗರ ಪ್ರದೇಶಗಳಿಗೆ ತಪ್ಪಿಸಿಕೊಂಡು ಹೋಗುವುದೇ ಆಗಿದೆ ಎಂದು ವ್ಯಂಗವಾಗಿ ಹೇಳಬಹುದು.

ಅಧಿಕಾರಶಾಹಿಯ ಸ್ವರೂಪ ಮತ್ತು ಪಾತ್ರದ ಬಗ್ಗೆಯೂ ದಲಿತರು ವಿಭಿನ್ನವಾದ ದೃಷ್ಟಿಕೋನವನ್ನು ಹೊಂದಿದ್ದಾರೆ. ಕೃಷ್ಣಪ್ಪನವರು ಅಧಿಕಾರಶಾಹಿ ಬಡವರ

ಹಿತದೃಷ್ಟಿಯಿಂದ ಬಡತನ ನಿರ್ಮೂಲನ ಕಾರ್ಯಕ್ರಮಗಳನ್ನು ಜಾರಿಗೆ ತರುವ ಹೊಣೆಗಾರಿಕೆ ಹೊಂದಿದೆ ಎಂದು ಹೇಳಿದರು ಮತ್ತು ಯಾವುದೇ ಚಳುವಳಿ ಅಂತಹ ಅಧಿಕಾರಶಾಹಿಯನ್ನು ಅನೀತಿಯುಕ್ತವಾಗಿಸಿದರೆ ಅಥವಾ ಅವರ ಲಭ್ಯತೆಯನ್ನು ಗ್ರಾಮೀಣ ಬಡಜನರಿಗೆ ನಿಯಂತ್ರಿಸಿದರೆ ಅದು ಜನ ವಿರೋಧಿಯಾಗುತ್ತದೆ. ಒಟ್ಟಾರೆಯಾಗಿ, ಅಧಿಕಾರಶಾಹಿಯೆಡೆಗೆ ಅವರು ತಮ್ಮ ಬೆಂಬಲ ವ್ಯಕ್ತಪಡಿಸಿದ್ದರು.

ಇದೇ ಅಭಿಪ್ರಾಯವನ್ನು ಮಂಡ್ಯ ಜಿಲ್ಲೆಯಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿದ್ದ ದಲಿತ ಕವಿ ಮುನಿವೆಂಕಟಪ್ಪನವರು, ಅಧಿಕಾರಿಶಾಹಿಯ ಬಗ್ಗೆ, ನಾಡಕರ್ಣಿಯವರೊಂದಿಗೆ ಒಂದು ಸಂದರ್ಶನದಲ್ಲಿ ವ್ಯಕ್ತಪಡಿಸಿದರು. ಹಳ್ಳಿಗಳಿಗೆ ರೈತ ಸಂಘದಲ್ಲಿ ಪ್ರಬಲರಾದ ಗ್ರಾಮದ ಬುದ್ಧಿವಂತರ ಅಪ್ಪಣೆಯಿಲ್ಲದೇ ಅಧಿಕಾರಿಗಳ ಪ್ರವೇಶವನ್ನು ತಡೆಯುವ ಹಸಿರು ಫಲಕಗಳು, ಸರ್ಕಾರದಿಂದ ಗ್ರಾಮೀಣ ಬಡವರು ಪಡೆಯುವ ಅಲ್ಪ ಸ್ವಲ್ಪ ನೆರವನ್ನು ತಡೆಯುತ್ತದೆ. ಅಲ್ಲದೇ ಪರಿಶಿಷ್ಟ ಜಾತಿ ಮತ್ತು ಪ್ರಬಲ ಜಾತಿಗಳ ನಡುವೆ ಕಲಹ ಉಂಟಾದ ಸಮಯದಲ್ಲಿ ಅಧಿಕಾರಿಗಳ ಲಭ್ಯತೆಯನ್ನು ನಿಯಂತ್ರಿಸುತ್ತದೆ.

ಹೀಗೆ, ಕೃಷ್ಣಪ್ಪನವರು ಕನ್ನಡ ದೇಶ, ೧೯೮೮ರಲ್ಲಿ ನಂಜುಂಡ ಸ್ವಾಮಿಯವರು ಹೊರಡಿಸಿದ ಪಕ್ಷಕ್ಕೆ ಸೇರಿಸಿಕೊಳ್ಳುವುದನ್ನು ದಲಿತರು ನಿರಾಕರಿಸಿದ್ದಾರೆ ಎಂದು ಹೇಳಿದರು ಮತ್ತು ಅದರ ವಿರುದ್ಧವಾಗಿ ಇತ್ತೀಚಿನ ವಿದ್ಯಾಮಾನಗಳು ಸೂಚಿಸುವಂತೆ ದಲಿತರು (ಕರ್ನಾಟಕದಲ್ಲಿ) ರೈತ ಸಂಘವು ರಾಜಕೀಯ ಗುಂಪುಗಳ ವೈಷಮ್ಯವನ್ನು ಗಳಿಸಿರುವುದರಿಂದ ದಲಿತರು ಸಂಘದಲ್ಲಿ ನಿರಾಸಕ್ತಿಯನ್ನು ಹೊಂದಿದ್ದಾರೆ ಎನ್ನಲಾಗಿದೆ.

ಭಾಷಾ ಚಳುವಳಿ ಮತ್ತು ಕ.ರಾ.ರೈ.ಸಂ.

ಭಾಷಾ ಚಳುವಳಿ ಮತ್ತೊಂದು ಪ್ರಮುಖ ಚಳುವಳಿಯಾಗಿತ್ತು. ಆದರೆ ಅದರ ಮೂಲಗಳು ಕೆಲವು ನಗರ ಪ್ರದೇಶಗಳಲ್ಲಿ, ಕೇವಲ ಮಧ್ಯಮ ವರ್ಗದ ಬುದ್ಧಿವಂತರಿಗೆ ಸೀಮಿತವಾಗಿತ್ತು. ಆದ್ದರಿಂದ, ರೈತ ಸಂಘ ತನ್ನ ವರದಿಯಲ್ಲಿ ಅದನ್ನು ಕ್ರೋಢೀಕರಿಸಲು ಪ್ರಯತ್ನಿಸಿತು, ಅದು ವಿಫಲವಾಯಿತು. ಆ ದಿಶೆಯಲ್ಲಿ ಭಾಷಾ ಚಳುವಳಿ ಕೂಡ ಜನರ ಚಳುವಳಿಯಾಗುವಲ್ಲಿ ವಿಫಲವಾಯಿತು ಏಕೆಂದರೆ ಅದು ಗ್ರಾಮೀಣ ಸಮಸ್ಯೆ ಹಾಗೂ ಭಾಷಾ ಸಮಸ್ಯೆಗೆ ಒಂದು ವೈಜ್ಞಾನಿಕ ವಿಧಾನದ ಕೊರತೆಯಿಂದ ಕೂಡಿತ್ತು. ಈ ವಿಷಯದಲ್ಲಿ ರೈತ ಸಂಘ ಭಾಷಾ ಚಳುವಳಿಯನ್ನು ಭಾಷಾ ಚಳುವಳಿಗೆ ಬದಲಾಗಿ "ಗೋಕಾಕ್ ಚಳುವಳಿ" ಎಂದು ಕರೆಯುವ ಮೂಲಕ ಆರೋಪಿಸಿತು.

ಕ.ರಾ.ರೈ.ಸಂ. ಯಾವುದೇ ಸಮಾಜದ ಪೂರ್ಣ ಅಭಿವೃದ್ಧಿ ಆ ಸಮಾಜದ ಪ್ರತಿಯೊಂದು ಚಟುವಟಿಕೆಯಲ್ಲಿ ಅದರ ನಾಗರೀಕರ ಭಾಗವಹಿಸುವಿಕೆಯನ್ನು ಅವಲಂಭಿಸಿರುತ್ತದೆ ಎಂದು ಭಾವಿಸುತ್ತದೆ. ಅದು ಕೇವಲ ಆ ಸಮಾಜದ ಅಧಿಕ ಜನರ ಭಾಷೆಯಿಂದ ಮಾತ್ರ ಸಾಧ್ಯ. ಕ.ರಾ.ರೈ.ಸಂ. ೬೦ ವರ್ಷಗಳ ಸ್ವತಂತ್ರ ಆಡಳಿತದಲ್ಲಿ ನಾವು ನಿಜವಾದ ಸ್ವತಂತ್ರ ಜೀವನ ನಡೆಸಲು ಸಾಧ್ಯವಾಗಿಲ್ಲ ಎಂದು ತನ್ನ ಅತೃಪ್ತಿಯನ್ನು ವ್ಯಕ್ತಪಡಿಸಿತು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ನಾವು ಇನ್ನೂ ಒಂದು ನಿರ್ದಿಷ್ಟ ರೀತಿಯ ಸಾಮಾನ್ಯ ಭಾಷಾ ಸೂತ್ರವನ್ನು ಅಭಿವೃದ್ಧಿ ಪಡಿಸಬೇಕಾಗಿದೆ.

ಕ.ರಾ.ರೈ.ಸಂ. ಭಾಷಾ ಅಲ್ಪಸಂಖ್ಯಾತರನ್ನು ಯಾವುದೇ ನಿರ್ದಿಷ್ಟ ಭಾಷೆಯನ್ನು ಒಪ್ಪಿಕೊಳ್ಳುವಂತೆ ರಾಜ್ಯ ಒತ್ತಾಯ ಮಾಡಬಾರದೆಂದು ಎಚ್ಚರಿಕೆ ನೀಡಿತು, ಅದೇ ವೇಳೆಗೆ ಅವರ ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯಲು ರಾಜ್ಯ ಮೂಲಭೂತ ಸೌಕರ್ಯಗಳನ್ನು ಪೂರೈಸಬೇಕು. ಕ.ರಾ.ರೈ.ಸಂ. ಅದೇ ರೀತಿ ಬಹುಸಂಖ್ಯಾತರ ಭಾಷೆಯನ್ನು ಎಲ್ಲರೂ ರಾಜ್ಯದ ಭಾಷೆಯೆಂದು ಒಪ್ಪಿಕೊಳ್ಳಬೇಕೆಂದು ಒತ್ತಾಯ ಪಡಿಸಿತು. ಈ ಎರಡು ನೀತಿಗಳ ಆಧಾರದ ಮೇಲೆ ಒಂದು ಸಾಮಾನ್ಯ ಭಾಷೆಯನ್ನು ರಚಿಸಲು ಸಾಧ್ಯತೆ ಇದೆ. ಆದರೆ ಪ್ರಸ್ತುತದಲ್ಲಿ ಸರ್ಕಾರದ ಆಡಳಿತದಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಆಂಗ್ಲ ಭಾಷೆಯನ್ನು ಸಂಪರ್ಕದ ಭಾಷೆಯಾಗಿ ಬಳಸಲ್ಪಟ್ಟಿದೆ. ಹಾಗಾಗಿ ಒಂದು ಭಾಷಾ ನೀತಿಯನ್ನು ರಚಿಸಲು ರಾಜ್ಯದಲ್ಲಿ ಸಮಸ್ಯೆಯಾಯಿತು.

ಕ.ರಾ.ರೈ.ಸಂ. ಆದ್ದರಿಂದ, ಸಂವಿಧಾನದ ನಿಯಮದಂತೆ, ಕನ್ನಡ ಭಾಷೆಯನ್ನು ರಾಜ್ಯ ಭಾಷೆಯಾಗಿ, ಉದ್ಯೋಗ ಭಾಷೆ ಮತ್ತು ಉತ್ಪಾದನಾ ಭಾಷೆಯಾಗಿ ಪರಿಗಣಿಸಬಹುದೆಂದು ಸಲಹೆ ಮಾಡಿತು. ಕೇವಲ ಈ ನೀತಿಯ ಮೂಲಕ ಭಾಷಾ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರು ರಾಜ್ಯದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಮನಾಗಿ ಭಾಗವಹಿಸಬಹುದು ಮತ್ತು ಏಕರೂಪತೆ, ಒಗ್ಗಟ್ಟು ಮತ್ತು ಭಾತೃತ್ವವನ್ನು ಅವರಲ್ಲಿ ಪ್ರೋತ್ಸಾಹಿಸಬಹುದು. ಅದಕ್ಕಿಂತ ಮೊದಲು, ಕ.ರಾ.ರೈ.ಸಂ. ಹೇಳುವಂತೆ, ಕನ್ನಡವನ್ನು ರಾಜ್ಯ ಭಾಷೆಯಾಗಿ ಪರಿಗಣಿಸಲು ಬೇಡಿಕೆ ಸಲ್ಲಿಸಿರುವ ಹೋರಾಟಗಾರರು ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳು ಈ ಎರಡು ಭಾಷೆಗಳ ಬಗ್ಗೆ ಒಂದು ದೃಢ ನಿಲುವು ತಳೆಯಲು ಮುಂದೆ ಬರಬೇಕು.

ಭಾಷಾ ಚಳುವಳಿ ನಗರ ಪ್ರದೇಶದ ಮಧ್ಯಮ ವರ್ಗದ ಬುದ್ಧಿವಂತರ ಚಳುವಳಿಯಾಗಿತ್ತು. ಆದ್ದರಿಂದ ಅದು ಒಂದು ಜನ ಸಮೂಹದ ಆಧಾರ

ಹೊಂದಿರಲಿಲ್ಲ. ಅದಕ್ಕೆ ಬದಲಾಗಿ ಕ.ರಾ.ರೈ.ಸಂ. ತಾನು ಸರ್ಕಾರದ ಇಂಗ್ಲೀಷ್ ಆದೇಶಗಳನ್ನು ಹಿಂತಿರುಗಿಸುವ ಮೂಲಕ ನಿಜವಾದ ರೀತಿಯಲ್ಲಿ ಭಾಷಾ ಚಳುವಳಿಯನ್ನು ಬೆಂಬಲಿಸುತ್ತಿದೆಯೆಂದು ಹೊಗಳಿಕೊಂಡಿತು. ರೈತ ಸಂಘ ತನ್ನ ಹಲವಾರು ನಿರ್ಣಯಗಳಲ್ಲಿ ಕನ್ನಡ ಭಾಷೆಯನ್ನು ಶೈಕ್ಷಣಿಕ, ಆಡಳಿತಾತ್ಮಕ, ನ್ಯಾಯಾಲಯ ಮತ್ತು ಶಾಸಕಾಂಗದ ಕಾರ್ಯವಿಧಾನಗಳಲ್ಲಿ ಜಾರಿಗೆ ತರಬೇಕೆಂಬ ಬೇಡಿಕೆಯ ಟಿಪ್ಪಣಿಯೊಂದಿಗೆ ಕೈಗೊಂಡಿದೆ ಎಂದು ತನ್ನ ಅಭಿಪ್ರಾಯವನ್ನು ಪ್ರತಿಪಾದಿಸಿದರು.

ಇನ್ನೊಂದೆಡೆ, ಎಲ್ಲಾ ಭಾಷಾ ಗುಂಪುಗಳು ನಿರಂತರವಾಗಿ ರೈತ ಸಂಘದ ಪ್ರಯತ್ನಗಳನ್ನು ಬೆಂಬಲಿಸಲಿಲ್ಲವೆಂಬ ಅಂಶ ಚಿಂತನಶೀಲರ ಒಂದು ಗುಂಪು ಚಳುವಳಿಯ ಪ್ರಬಲ ಜಾತಿಯ ಸ್ವರೂಪವನ್ನು ಖಂಡಿಸಲು ಆರಂಭಿಸಿದಾಗ ಸ್ಪಷ್ಟವಾಯಿತು. ಈ ಗುಂಪು ೧೯೮೭ರಲ್ಲಿ ರೈತ ಸಂಘ ಒಂದು ಪಕ್ಷ ರಚಿಸಿ ಕೊಂಡು ಮೂರನೇ ಶಕ್ತಿಯಾಗಿ ಬೆಳೆಯುವುದನ್ನು ತಡೆಯಲೆತ್ನಿಸಿತು. ಆದ್ದರಿಂದ ಈ ಗುಂಪು ಸಮುದಾಯದಲ್ಲಿ ವಿರುದ್ಧವಾಗಿತ್ತು. ಚಿಂತನಶೀಲರಲ್ಲಿ ಮತ್ತು ಸಮುದಾಯದಲ್ಲಿ ಕಡಿಮೆ ತಳವೂರಿದ ಮತ್ತೆ ಕೆಲವು ಗುಂಪುಗಳಿದ್ದವು ಅವು ರೈತ ಸಂಘದ ಪ್ರಯತ್ನಗಳನ್ನು ಪ್ರಾರಂಭದಿಂದ ಪಕ್ಷ ರಚನೆಯವರೆಗೂ ನಿರಂತರವಾಗಿ ಬೆಂಬಲಿಸಿದವು. ಭಾಷಾ ಚಳುವಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಸೇರಿಸಿಕೊಂಡಿತು.

ಅಂತಿಮವಾಗಿ, ಉದ್ದೇಶಗಳ ವಿಷಯಕ್ಕೆ ಸಂಬಂಧಿಸಿದಂತೆ (ರಾಜಕೀಯ, ಸಾಮಾಜಿಕ, ಆರ್ಥಿಕ) ಎರಡೂ ಚಳುವಳಿಗಳು (ರೈತ ಮತ್ತು ಭಾಷಾ) ಭಿನ್ನವಾಗಿದ್ದವು. ಆದ್ದರಿಂದ ರೈತ ಸಂಘದ ವಿಶಾಲ ಆಧಾರದ ಕ್ರೋಢೀಕರಣ ಸಫಲವಾಗಿಲಿಲ್ಲ.

೧೯೮೯ರಲ್ಲಿಯ ವಿಧಾನಸಭೆ ಚುನಾವಣೆಗಳಲ್ಲಿ, ರೈತ ಸಂಘ ಯಾವುದೇ ಪಕ್ಷ ಅಥವಾ ಗುಂಪಿನೊಂದಿಗೆ ಸಂಧಾನ ಮಾಡಿಕೊಳ್ಳದೆ ಮುಂದಿನ ವಿಧಾನಸಭೆಯಲ್ಲಿ ಪ್ರಬಲ ಪಕ್ಷವಾಗಿ ಹೊರಹೊಮ್ಮುವ ಆಸೆಯಿಂದ ಸ್ವತಂತ್ರವಾಗಿ ಸ್ಪರ್ಧಿಸಿತು. ರೈತ ಸಂಘದಿಂದ ೧೧೦ ಅಭ್ಯರ್ಥಿಗಳು ಭಾಗವಹಿಸಿದ್ದರು. ಅವರಲ್ಲಿ ೧೧೦ ರಲ್ಲಿ ೮೦ ರಷ್ಟಾದರೂ ಜನರು ಗೆಲ್ಲುವ ನಿರೀಕ್ಷೆಯನ್ನು ನಂಜುಂಡಸ್ವಾಮಿಯವರು ಹೊಂದಿದ್ದರು; ಆದರೆ ಈ ಭವಿಷ್ಯಕ್ಕೆ ಬದಲಾಗಿ ಕೇವಲ ಒಬ್ಬ ಅಭ್ಯರ್ಥಿ ಬಾಬಾಗೌಡ ಪಾಟೀಲರು ಬೆಳಗಾವಿ ಮತ್ತು ಧಾರವಾಡ ಗ್ರಾಮಾಂತರ ಎರಡು ಚುನಾವಣಾ ಕ್ಷೇತ್ರಗಳಿಂದ ಚುನಾಯಿತರಾಗಿದ್ದರು. ಬಾಬಾಗೌಡರು ಬೆಳಗಾವಿ ಕ್ಷೇತ್ರವನ್ನು ಉಳಿಸಿಕೊಂಡು ಧಾರವಾಡ ಕ್ಷೇತ್ರಕ್ಕೆ ರಾಜೀನಾಮೆಯಿತ್ತರು. ನಂತರದ ಉಪ ಚುನಾವಣೆಯಲ್ಲಿ ನಂಜುಂಡಸ್ವಾಮಿಯವರು ಧಾರವಾಡ ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸಿ, ಬಾಬಾ

ಗೌಡರ ಪ್ರಭಾವದಿಂದ ಆ ಕ್ಷೇತ್ರದಿಂದ ಚುನಾಯಿತರಾದರು. ಇದು ತನ್ನ ಕಾರ್ಯಗಳನ್ನು ಸಮರ್ಥಿಸಿಕೊಳ್ಳಲು ನೈತಿಕ ಬೆಂಬಲ ನೀಡಿತು, ಆದರೆ ಈ ಫಲಿತಾಂಶ ರೈತ ಸಂಘದಲ್ಲಿ ಯುವ ನಾಯಕರ ಬೆಳವಣಿಗೆಯ ಅವಕಾಶಕ್ಕೆ ನಿರೇರಚಿತು.

ಕಾರಣವೆಂದರೆ, ಮೊದಲನೆಯದಾಗಿ, ಕನ್ನಡ ದೇಶ ಪಕ್ಷದ ರಚನೆ ಸಂಘದಲ್ಲಿ ಒಂದು ಬಿರುಕನ್ನು ಹುಟ್ಟಿಸಿತು ಮತ್ತು ಎರಡನೆಯದಾಗಿ ವಿಧಾನಸಭೆ ಚುನಾವಣೆಗಳಲ್ಲಿ ರೈತ ಸಂಘದ ಶೋಚನೀಯ ಸೋಲು ನಂಜುಂಡಸ್ವಾಮಿಯವರ ಖ್ಯಾತಿಯನ್ನು ರೈತ ಸಂಘದ ಒಳಗೆ ಮತ್ತು ಕರ್ನಾಟಕದ ರಾಜಕೀಯ ವಲಯದಲ್ಲಿ ಕಡಿಮೆ ಮಾಡಿತು. ಆದರೆ ಜೈರಸ್ ಬನಜಿ ಹೇಳುವಂತೆ, ಈ ಸಂದರ್ಭದಲ್ಲಿ ನಂಜುಂಡಸ್ವಾಮಿಯವರ ಪ್ರಾಬಲ್ಯ ಸಂಘದಲ್ಲಿ ಇಳಿಮುಖವಾಗುವುದಕ್ಕೆ ಪ್ರಾರಂಭವಾಯಿತು. ಆದ್ದರಿಂದಲೇ ನಂಜುಂಡಸ್ವಾಮಿಯವರು ಸಂಘದಲ್ಲಿ ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ಸಾಮ್ರಾಜ್ಯಶಾಹಿ ವಿರೋಧಿಯಾಗಿ, ಕೃಷಿ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶದ ವಿರುದ್ಧ, ವಿದೇಶಿ ವಿರೋಧಿ ಪ್ರಚಾರವನ್ನು ಆರಂಭಿಸಿದರು ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ನಂಜುಂಡಸ್ವಾಮಿಯವರು ಕನ್ನಡ ವಾರಪತ್ರಿಕೆ 'ಹಾಯ್ ಬೆಂಗಳೂರು' ಇದರಲ್ಲಿ ಮಾಡಲ್ಪಟ್ಟ ಎಲ್ಲಾ ಆಪಾದನೆಗಳನ್ನು ನಿರಾಕರಿಸಿದರು. (ಈಗಾಗಲೇ ವಿವರಿಸಿದೆ) ಅವರು ತಮ್ಮ ಎಲ್ಲಾ ಚಟುವಟಿಕೆಗಳೂ ನ್ಯಾಯಯುತವಾಗಿವೆಯೆಂದು ಸಮರ್ಥಿಸಿಕೊಂಡರು ಮತ್ತು ೧೯೯೮ರ ಆಗಸ್ಟ್ ೧೦ರಂದು, ರೈತ ಸಂಘದಲ್ಲಿದ್ದ ತಮ್ಮ ಅಭಿಪ್ರಾಯದ ವಿರೋಧಿಗಳಿಗೆ ಒಂದು ಪತ್ರವನ್ನು ಬರೆದರು. ಅದನ್ನು ತಮ್ಮ ಅಂತಿಮ ಪತ್ರ ಎಂದು ಸಂಭೋಧಿಸಿದ್ದಾರೆ. ಅದರೊಂದಿಗೆ ೮ ಮತ್ತು ೯ನೇ ಜುಲೈ ೧೯೯೮ರಂದು ದಾವಣಗೆರೆಯಲ್ಲಿ ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿದ ಮೂರು ಮುಖ್ಯ ವಿಷಯಗಳಿಗೆ ಉತ್ತರಿಸಿದರು. ಆ ಮೂರು ಮುಖ್ಯ ವಿಷಯಗಳೆಂದರೆ, ಮೊದಲನೆಯದು, ವಿದೇಶ ಪ್ರವಾಸ, ಎರಡನೆಯರು, ಅಮೃತ್ ಭೂಮಿ ಟ್ರಸ್ಟ್, ಮೂರನೆಯದು ಕ.ರಾ.ರೈ.ಸಂ.ದ ಅಧ್ಯಕ್ಷತೆಯ ಬಗ್ಗೆ ಭಿನ್ನಾಭಿಪ್ರಾಯ. ಪತ್ರ ಹೀಗಿದೆ : ಕೆಲವು ಹಿರಿಯ ಸದಸ್ಯರು ಅದೇ ದಿನ (೧೯೯೮ರ ಜುಲೈ ೮ ಮತ್ತು ೯ರಲ್ಲಿ ದಾವಣಗೆರೆಯಲ್ಲಿ ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ) ಒಂದು ಉಪ ಸಮಿತಿಯ ರೂಪದಲ್ಲಿ ಸೇರಿದ್ದರು, ಅವರನ್ನು ಕುರಿತು, ನಾನು ಅನೇಕ ಅಂತರರಾಷ್ಟ್ರೀಯ ಕಾರ್ಯಕಾರಿ ಸಮಿತಿಗಳ ಸದಸ್ಯನಾಗಿರುವುದರಿಂದ ನಾನು ನನ್ನ ವೈಯಕ್ತಿಕ ವಿದೇಶ ಪ್ರವಾಸಗಳ ಬಗ್ಗೆ ಕ.ರಾ.ರೈ.ಸಂ. ವಿದೇಶ ಪ್ರವಾಸ ಆಯ್ಕೆ ಸಮಿತಿಗೆ ವಿಷಯ ತಿಳಿಸುವ ಅಗತ್ಯವಿಲ್ಲವೆಂಬ ನಿರ್ಧಾರವನ್ನು ವ್ಯಕ್ತಪಡಿಸಿದರು. ಆದರೆ ವಿದೇಶಗಳಲ್ಲಿ ಅಂತರರಾಷ್ಟ್ರೀಯ ಸಮ್ಮೇಳನಗಳಿಗೆ ಕ.ರಾ.ರೈ.ಸಂ.ದ ಪ್ರತಿನಿಧಿಗಳನ್ನು ಕಳಿಸುವ ಆಮಂತ್ರಣದ ಬಗ್ಗೆ ವಿದೇಶ ಪ್ರವಾಸ ಆಯ್ಕೆ ಸಮಿತಿಯ

ಮುಂದೆ ಇಡಬೇಕು ಮತ್ತು ಈ ಸಮಿತಿ ಅಂತರರಾಷ್ಟ್ರೀಯ ಸಮ್ಮೇಳನಗಳಿಗೆ ಯಾರು ಹೋಗುತ್ತಾರೆಂದು ಆಯ್ಕೆ ಮಾಡುತ್ತದೆ.

ಎರಡನೆಯದಾಗಿ, 'ಹಾಯ್ ಬೆಂಗಳೂರು' ಕನ್ನಡ ವಾರಪತ್ರಿಕೆ ೧೯೯೭ರಲ್ಲಿ ನಂಜುಂಡಸ್ವಾಮಿಯವರು ಚಾಮರಾಜನಗರ ಸಮೀಪ ೧೦೦ ಎಕರೆ ಭೂಮಿ ಖರೀದಿಸಿರು ಮತ್ತು ಅದನ್ನು ಅಮೃತ್ ಭೂಮಿ ಟ್ರಸ್ಟ್ ಎಂದು ನಾಮಕರಣ ಮಾಡಿದರು ಹಾಗೆಯೇ ತಮ್ಮ ಹೆಂಡತಿ ಮತ್ತು ಸಹೋದರ ಕುಮಾರಸ್ವಾಮಿಯ ಹೆಸರಿನಲ್ಲಿ ಸಂಘದ ನಿಯಮಗಳನ್ನು ವಿರೋಧಿಸಿ ನೊಂದಾಯಿಸಿದರು ಎಂದು ಆಪಾದಿಸಿತ್ತು. ಸಂಘದ ನಿಯಮಗಳ ಪ್ರಕಾರ, ಕ.ರಾ.ರೈ.ಸಂ.ದ ಪ್ರತಿಯೊಂದು ವ್ಯವಹಾರ ಕ.ರಾ.ರೈ.ಸಂ.ದ ಹೆಸರಿನಲ್ಲೇ ನಡೆಯಬೇಕು ಎಂದಿತು.

ನಂಜುಂಡಸ್ವಾಮಿಯವರು ಈ ಆಪಾದನೆಯನ್ನು ನಿರಾಕರಿಸಿದರು. ಮತ್ತು ಅವರ ಪತ್ರದಲ್ಲಿ, ಅಮೃತ ಭೂಮಿ ಟ್ರಸ್ಟ್ ಖಾಸಗಿ ಟ್ರಸ್ಟ್ ಅಲ್ಲ ಆದರೆ ಅದು ಒಂದು ಸಾರ್ವಜನಿಕ ಧಾನಶೀಲ ಟ್ರಸ್ಟಾಗಿದೆ ಎಂದು ವಿವರಿಸಿದರು. ಟ್ರಸ್ಟು ನಿಯಮದಂತೆ ಟ್ರಸ್ಟಿನ ಆಸ್ತಿ ಸಾರ್ವಜನಿಕ ಆಸ್ತಿ. ಧರ್ಮದರ್ಶಿಗಳು ಇಲ್ಲಿ ಸಂಬಳ ಪಡೆಯುವುದಿಲ್ಲ ಮತ್ತು ಟ್ರಸ್ಟಿನ ಆಸ್ತಿಯ ಮೇಲೆ ಯಾವುದೇ ಹಕ್ಕು ಹೊಂದಿಲ್ಲ. ಒಂದು ವೇಳೆ ಟ್ರಸ್ಟು ಅಸ್ತಿತ್ವ ಕಳೆದುಕೊಂಡರೆ ಎಲ್ಲಾ ಆಸ್ತಿ ಇದೇ ರೀತಿಯ ಉದ್ದೇಶಗಳುಳ್ಳ ಮತ್ತೊಂದು ಟ್ರಸ್ಟಿಗೆ ವರ್ಗಾವಣೆಯಾಗುತ್ತದೆ.

ಆದಾಯ ತೆರಿಗೆ ನಿಯಮ ೨(೧೫), ೧೧, ೧೨, ೧೩ ಮತ್ತು ೮೦(ಜಿ) ಪ್ರಕಾರ ಅಮೃತ್ ಭೂಮಿ ಟ್ರಸ್ಟು ನೊಂದಾಯಿಸಲ್ಪಟ್ಟಿದೆ ಮತ್ತು ನೀವು ನಿಮ್ಮ ಸಂಶಯಗಳನ್ನು ನೀವು ನಂಬುವ ವಕೀಲರಿಂದ ಸ್ಪಷ್ಟಪಡಿಸಿ ಕೊಳ್ಳಬಹುದು. ನಾನು ನೂರಾರು ಎಕರೆ ಭೂಮಿಯನ್ನು ನನಗಾಗಿ ಖರೀದಿಸುವಷ್ಟು ಮೂರ್ಖನಲ್ಲ. ನಾನು ಎಂದಿಗೂ ಹಾಗೆ ಮಾಡುವುದಿಲ್ಲ. ಇದು ಎಲ್ಲರಿಗೂ ತಿಳಿದಿದೆ. ಹಿಂದೆ ನಾನು ಇದನ್ನು ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರ ಜೊತೆ ಚರ್ಚಿಸಿದ್ದೇನೆ ಆದರೂ ಕೆಲವು ನೀಚರು ಇದರ ಬಗ್ಗೆ ಅವರಿಗೆ ಏನೂ ತಿಳಿದಿಲ್ಲವೆಂದು ಹೇಳುತಿದ್ದಾರೆ ಅದು ಅವರ ದುರ್ಬಲತೆ. ಸಂಘದ ಕೆಲವು ಸದಸ್ಯರಲ್ಲಿ ಅತೃಪ್ತಿ ಇದೆ, ಏಕೆಂದರೆ ಟ್ರಸ್ಟಿನಲ್ಲಿ ಸಂಘದ ಹಿರಿಯ ಸದಸ್ಯರನ್ನು ಸೇರಿಸಿಕೊಂಡಿಲ್ಲ. ಕಾರಣ, ಇದು ಪಕ್ಷಾಂತರದ ಯುಗವಾಗಿರುವುದರಿಂದ ಮತ್ತು ಕೆಟ್ಟ ಚಟುವಟಿಕೆಗಳ ಕಾಲವಾಗಿರುವುದರಿಂದ ನಾನು ಸ್ವಲ್ಪ ಮುಂಜಾಗ್ರತೆ ವಹಿಸಿದ್ದೇನೆ ಅಷ್ಟೇ. ಈ ಸಂಸ್ಥೆ ರೈತ ಚಳುವಳಿಗಾಗಿ ಮುಡುಪಾಗಿದೆ. ಅದು ಭವಿಷ್ಯದಲ್ಲಿ ರೈತರ ಚಟುವಟಿಕೆಗಳಿಂದಲೇ ಮುನ್ನಡೆಯಬೇಕು. ನನ್ನ ಉಯಿಲಿನಲ್ಲಿ ಈ ವ್ಯವಸ್ಥೆ ಬಗ್ಗೆ ಪ್ರಸ್ತಾಪಿಸಿದ್ದೇನೆ ಎಂದು ವಿವರಣೆಯನ್ನು ನೀಡಲಾಯಿತು.

'ಹಾಯ್ ಬೆಂಗಳೂರು' ಕನ್ನಡ ವಾರಪತ್ರಿಕೆ ನಂಜುಂಡಸ್ವಾಮಿಯವರ ಅಧ್ಯಕ್ಷತೆಯ ಬಗ್ಗೆ ಸ್ಪಷ್ಟೀಕರಣ ನೀಡಿತು. ಹೀಗೆ ಹಿಂದಿನ ೩ ಅಥವಾ ೪ ಸಭೆಗಳಲ್ಲಿ, ಆಧಾರ ರಹಿತ ವಿಷಯಗಳ ಮೇಲೆ ಚರ್ಚೆ ನಡೆದಿತ್ತು. ಯಾವುದೇ ಗೌರವಸ್ಥ ಸಂಸ್ಥೆಯ ಗೌರವಸ್ಥ ರಾಜ್ಯ ಸಮಿತಿ ಇಂತಹ ಕೆಲಸ ಮಾಡಬಾರದು. ಒಂದು ವೇಳೆ ಬಲವಾದ ಆಧಾರಗಳುಳ್ಳ ಆಪಾದನೆಗಳಿದ್ದರೆ ಅದನ್ನು ಶಿಸ್ತು ಸಮಿತಿಗೆ ನೀಡಬೇಕು, ಅದರ ಶಿಫಾರಸ್ಸುಗಳು ಮತ್ತು ಆಪಾದನೆಗಳನ್ನು ರಾಜ್ಯ ಕಾರ್ಯಕಾರಿ ಸಮಿತಿಯ ಚರ್ಚೆಗೆ ತರಬೇಕು. ಈ ರೀತಿಯ ಕೆಲವು ನಿಷ್ಪ ನೀತಿಯನ್ನು ಇನ್ನು ಮುಂದೆ ಅಳವಡಿಸಿಕೊಳ್ಳಬೇಕು (ಇದರೊಂದಿಗೆ, ಅಧ್ಯಕ್ಷರ ಗಮನಕ್ಕೆ ತರದೆ ಸಭೆಯ ದಿನಾಂಕಗಳನ್ನು ನಿಗಧಿಪಡಿಸುವುದು, ಕಾರ್ಯಕ್ರಮ ಪಟ್ಟಿಯಿಲ್ಲದೆ ಸೂಚನಾ ಪತ್ರಗಳನ್ನು ಕಳಿಸುವುದು, ಅಧ್ಯಕ್ಷರೊಂದಿಗೆ ಚರ್ಚಿಸದೆ ಕಾರ್ಯಕ್ರಮ ಪಟ್ಟಿ ತಯಾರಿಸುವುದು, ನೊಂದಣಿ ಪುಸ್ತಕ ಇಡುವುದು, ಇಂತಹ ಪ್ರಾಥಮಿಕ ದೋಷಗಳನ್ನು ಸರಿಪಡಿಸಬೇಕು) ಎಂದರು.

ಒಂದು ವೇಳೆ ಅಂತಹ ಬದಲಾವಣೆಗಳು ಕಂಡು ಬರದಿದ್ದರೆ, ಆಗ ದಾವಣಗೆರೆಯಲ್ಲಿ ನಡೆದಂತೆ, ಯಾರಾದರೂ ಆಧಾರ ರಹಿತ ಆಪಾದನೆಗಳನ್ನು ಮಾಡುವ ಮತ್ತು ಅಧಿಕಾರ ಹೊಂದಿದವರನ್ನು ಆಪಾದಿಸುವುದು ನಿಲ್ಲುವುದಿಲ್ಲ. ಇದು ಸಂಘದ ಆಂತರಿಕ ವಾತಾವರಣವನ್ನು ಹಾಳು ಮಾಡುತ್ತದೆ. ಆಗ ಸಂಘ ಮೂರನೇ ದರ್ಜೆಯ ರಾಜಕೀಯ ಪಕ್ಷವಾಗುತ್ತದೆ. ಇಂತಹ ಚಟುವಟಿಕೆಗಳನ್ನು ಪೂರ್ಣವಾಗಿ ನಿಲ್ಲಿಸಲು, ನಾನು ಜುಲೈ ೮ ಮತ್ತು ೯ನೇ ತಾರೀಖು ೧೯೯೮ರಲ್ಲಿ ನಡೆದ ಸಭೆಯಲ್ಲಿ ವ್ಯಕ್ತಪಡಿಸಿರುವಂತೆ, ಯಾರು ಅಧ್ಯಕ್ಷರನ್ನು ಆಪಾದನೆ ಮಾಡುವ ಮೂಲಕ ಹೊರ ಹಾಕಲು ಇಚ್ಛಿಸುತ್ತಾರೋ ಒಂದು ಅವಿಶ್ವಾಸ ನಿರ್ಣಯವನ್ನು ರಾಜ್ಯ ಸಮಿತಿಯಲ್ಲಿ ಎಲ್ಲಾ ದಾಖಲೆಗಳೊಂದಿಗೆ ಜಾರಿಗೆ ತರಬೇಕು.

ಈ ಷರತ್ತಿನ ಮೇಲೆ ನನ್ನ ನಿಲುವು ತುಂಬಾ ದೃಢವಾಗಿದೆ. ಹಾಗೆಂದ ಮಾತ್ರಕ್ಕೆ ನಾನು ಅಧ್ಯಕ್ಷತೆಯ ಬಗ್ಗೆ ಆಸೆ ಹೊಂದಿದ್ದೇನೆ ಎಂದರ್ಥವಲ್ಲ. ನನಗೆ ಏನು ಅವಶ್ಯಕತೆ ಇದೆ ಎಂದರೆ, ಸಂಘದಲ್ಲಿ ಸುಳ್ಳು ಆಪಾದನೆಗಳಿಗೆ ಎಷ್ಟು ಬೆಂಬಲವಿದೆ ಎಂದು ತಿಳಿಯಬೇಕಾಗಿದೆ. ಒಂದು ವೇಳೆ ಸುಳ್ಳು ಆಪಾದನೆ ಬಹುಮತ ಪಡೆದರೆ. ನನ್ನದೇನೂ ಅಭ್ಯಂತರವಿಲ್ಲ, ಆದರೆ, ಸಹ ಕಾರ್ಯಕರ್ತರೊಂದಿಗೆ ಸಂಶಯಾಸ್ಪದ ಸಂಬಂಧ ಇಟ್ಟುಕೊಳ್ಳುವ ಬದಲು, ನನಗೆ ಒಂದು ಸ್ಪಷ್ಟವಾದ ನಿರ್ಧಾರಕ್ಕೆ ಬರಲು ಸಹಾಯವಾಗುತ್ತದೆ.

ಆದ್ದರಿಂದ, ಒಂದು ಕಾರ್ಯಕ್ರಮ ಪಟ್ಟಿ ಮೂಲಕ ಈ ಅಂಶವನ್ನು ಪ್ರತಿಯೊಬ್ಬ ಸದಸ್ಯರಿಗೆ ತಿಳಿಸಬೇಕು ಮತ್ತು ರಾಜ್ಯ ಸಮಿತಿಯಲ್ಲಿ ಅವಿಶ್ವಾಸ ನಿರ್ಣಯ

ಮಂಡಿಸಬೇಕು. ಇದು ನನ್ನ ಅನುಪಸ್ಥಿತಿಯಲ್ಲಿ ನಡೆಯಲಿ, ಏಕೆಂದರೆ, ನೀವು ನನ್ನನ್ನು ನನ್ನ ಅನುಪಸ್ಥಿತಿಯಲ್ಲೇ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದಿರಿ. ಅಂತಿಮವಾಗಿ, ಈ ಪತ್ರ ಒಂದು ವೇಳೆ ಅವಿಶ್ವಾಸ ನಿರ್ಣಯಕ್ಕೆ ಉತ್ತರವಾದರೆ, ನಾನು ಅದನ್ನು ಎರಡನೇ ಬಾರಿಗೆ ಉತ್ತರಿಸುತ್ತೇನೆ ಮತ್ತು ನನಗೆ ನಿಮ್ಮೊಂದಿಗೆ ಮುಂದುವರಿಯಲು ಅಥವಾ ನಿಮ್ಮಿಂದ ದೂರ ಹೋಗಲು ಒಂದು ಅವಕಾಶ ಕೊಡಿ ಏಕೆಂದರೆ, ನಾನು ಹೇಗೆ ಭವಿಷ್ಯದಲ್ಲಿ ರೈತರ ಚಳುವಳಿಯೊಂದಿಗೆ ಮುಂದುವರಿಯಬೇಕೆಂದು ನಿರ್ಧರಿಸಬೇಕಾಗಿದೆ."

ಈ ಬೆಳವಣಿಗೆಯಲ್ಲಿ ಕಡಿದಾಳ್ ಶ್ಯಾಮಣ್ಣ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, "ನಂಜುಂಡಸ್ವಾಮಿಯವರು ಸಂಸ್ಥೆಯ ಬೆನ್ನೆಲುಬು ಎಂದಿದ್ದಾರೆ ಮತ್ತು ಸಂಘದಿಂದ ಒಂದು ವೇಳೆ ನಂಜುಂಡಸ್ವಾಮಿಯವರನ್ನು ಹೊರ ಹಾಕಿದರೂ, ಅವರು ವ್ಯಕ್ತಿಗತವಾಗಿ ಏನನ್ನೂ ಕಳೆದು ಕೊಳ್ಳುವುದಿಲ್ಲ. ಆದರೆ ಅದು ಸಂಘಕ್ಕೆ ಒಂದು ದೊಡ್ಡ ನಷ್ಟವಾಗುತ್ತದೆ." ಅವರು ಕ.ರಾ.ರೈ.ಸಂ.ದಲ್ಲಿ ಎರಡು ಪ್ರಕಾರದ ತೀವ್ರವಾದಿಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ ಒಂದು ಹಳೇ ತಲೆಮಾರು ಮತ್ತು ಇನ್ನೊಂದು ಹೊಸ ಯುವ ಪೀಳಿಗೆಯ ತೀವ್ರವಾದಿಗಳು. ಅವರ ಪ್ರಕಾರ ಹಳೇ ಪೀಳಿಗೆಯ ನಾಯಕರು ನಂಜುಂಡಸ್ವಾಮಿಯವರ ನಿರಂಕುಶ ಭಾವನೆಯನ್ನು ಒಪ್ಪಿಕೊಂಡಿದ್ದಾರೆ ಏಕೆಂದರೆ ಅವರ ಪ್ರಭುತ್ವವನ್ನು ವೈಯಕ್ತಿಕವಾಗಿ ಕ.ರಾ.ರೈ.ಸಂ. ಸ್ಥಾಪನೆಯಾದಾಗಿನಿಂದ ಅವರು ತಿಳಿದಿದ್ದಾರೆ. ಆದರೆ ಸಂಘದಲ್ಲಿ ನಂಜುಂಡಸ್ವಾಮಿಯವರು ಈಗಲೂ ಯುವಪೀಳಿಗೆ ನಾಯಕರು ಅವರ ನಿರಂಕುಶ ಭಾವನೆ ಒಪ್ಪದಿದ್ದರೂ ಒಬ್ಬ ಬಲಶಾಲಿ ನಾಯಕರಾಗಿದ್ದಾರೆ."

ಒಟ್ಟಾರೆಯಾಗಿ ನಂಜುಂಡಸ್ವಾಮಿಯವರು ಕ.ರಾ.ರೈ.ಸಂ.ದ ವಿವಾದಾತ್ಮಕ ಮತ್ತು ಶಕ್ತಿಶಾಲಿ ಬುದ್ಧಿವಂತಿಕೆಯ ಸಾಮರ್ಥ್ಯವಾಗಿದ್ದಾರೆ. ಮೊದಲನೆಯದಾಗಿ ಕ.ರಾ.ರೈ.ಸಂ. ತನ್ನ ಕಾರ್ಯಕ್ರಮ ಪಟ್ಟಿಯನ್ನು ಕೃಷಿ ಸರಕುಗಳಿಗೆ ನ್ಯಾಯಯುತ ಬೆಲೆಯಿಂದ ಬಹುರಾಷ್ಟ್ರೀಯ ಕಂಪೆನಿಗಳ ಕೃಷಿ ವ್ಯಾಪಾರದ ಬಗ್ಗೆ ವಿದೇಶೀ ವಿರೋಧಿ ಚಳುವಳಿಗೆ ಬದಲಾವಣೆಯಾಗಿದೆ. ಎರಡನೆಯದಾಗಿ ಬೆಂಬಲಿಗರು ಮತ್ತು ಪದಾಧಿಕಾರಿಗಳ ಅತೃಪಿಯ್ತು ಸಂಸ್ಥೆಯಲ್ಲಿ ಐಕ್ಯತೆಯನ್ನು ಸ್ಥಳಾಂತರಿಸಿದೆ. ಇದಕ್ಕೆ ಹೊರತಾಗಿ ನಂಜುಂಡಸ್ವಾಮಿಯವರು ಕ.ರಾ.ರೈ.ಸಂ.ದ ವಿವಾದಾತ್ಮಕ ಹಾಗೂ ಶಕ್ತಿಶಾಲಿ ಬುದ್ಧಿವಂತಿಕೆಯ ಸಾಮರ್ಥ್ಯವಾಗಿ ಮುಂದುವರೆಯುತ್ತಿದ್ದಾರೆ. (ನಂಜುಂಡಸ್ವಾಮಿಯವರ ಮರಣದಿಂದಾಗಿ ಆ ಶಕ್ತಿಶಾಲಿ ಬುದ್ಧಿವಂತಿಕೆಯು ಕಣ್ಮರೆಯಾಗಿರುವುದನ್ನು ಪ್ರಸ್ತುತ ಕ.ರಾ.ರೈ.ಸಂ.ದಲ್ಲಿ ಕಾಣಬಹುದಾಗಿದೆ.) ಅದರೂ ರೈತ ಸಂಘದಿಂದ ನಂಜುಂಡಸ್ವಾಮಿಯವರ ವೈಜ್ಞಾನಿಕ ಬೆಲೆಯ ಹೋರಾಟ ಈಗಲೂ ಮುಂದುವರೆದಿದೆ ಹಾಗೂ ಅದು ನಿರಂತರ ಎನಿಸುತ್ತಿದೆ.

ಅಧ್ಯಾಯ. ೪
ಡಂಕೆಲ್ ಪ್ರಸ್ತಾವನೆ ಮತ್ತು ಕ.ರಾ.ರೈ.ಸಂ.

ಗ್ಯಾಟ್‌ನ ಉರುಗ್ವೆ ಸುತ್ತಿನ ಮಾತುಕತೆಗಳು ಅಭಿವೃದ್ಧಿ ಮತ್ತು ಅಭಿವೃದ್ಧಿ ಶೀಲ ರಾಷ್ಟ್ರಗಳ ನಡುವೆ ಸಂಪೂರ್ಣವಾದ ಧೃವೀಕರಣವಾಗಿದೆ. ಇದರಲ್ಲಿ ಕೃಷಿಯ ಪ್ರಶ್ನೆ ಒಂದು ಪ್ರಮುಖವಾದ ಅಂಶವಾಗಿತ್ತು. ಡಂಕೆಲ್ ಪ್ರಸ್ತಾವನೆಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಕೃಷಿಯನ್ನು ಬಹುರಾಷ್ಟ್ರೀಯ ಕಂಪೆನಿಗಳ ಮುಂದಾಳತ್ವದಲ್ಲಿ ಒಗ್ಗೂಡಿಸಲು ಆದೇಶಿಸಿದವು.

ಗ್ಯಾಟ್ ಒಪ್ಪಂದ ಎರಡನೇ ಮಹಾ ಯುದ್ಧದ ನಂತರ ಅಸ್ತಿತ್ವಕ್ಕೆ ಬಂದಿತು. ಈ ಯುದ್ಧದ ನಂತರ, ಯುದ್ಧದಲ್ಲಿ ಯಾವ ರಾಷ್ಟ್ರಗಳು ಭಾಗವಹಿಸಿದ್ದವೋ ಅವುಗಳ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು, ಆದ್ದರಿಂದ ಗ್ಯಾಟ್ ಒಪ್ಪಂದದಿಂದ ಅವುಗಳು ತಮ್ಮ ಆರ್ಥಿಕತೆಯನ್ನು ಸುಧಾರಿಸಲು ನಿರ್ಧರಿಸಿದವು. ಇದು ಪುರಾತನ ವಸಾಹತು ಪದ್ಧತಿಯನ್ನು ನವ ಸಾಮ್ರಾಜ್ಯಶಾಹಿ ಪದ್ಧತಿಗೆ ಬದಲಾಯಿಸುವುದೇ ಆಗಿತ್ತು. ಉರುಗ್ವೆ ಸುತ್ತಿನ ಮಾತುಕತೆಗಳಲ್ಲಿ ಭಾಗವಹಿಸಿದವರು, ಎರಡನೇ ಮಹಾಯುದ್ಧದ ವಿಜಯಗಳಾಗಿದ್ದರು ಮತ್ತು ಜಿ-೭ ರಾಷ್ಟ್ರಗಳೆಂದು ಗುರುತಿಸಲ್ಪಟ್ಟಿದ್ದರು. ಈ ರಾಷ್ಟ್ರಗಳು ತಮ್ಮ ಆರ್ಥಿಕ ಉದ್ದೇಶ ಸಾಧನೆಗೆ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ನಿಯಂತ್ರಿಸಲು ಗ್ಯಾಟ್‌ನ್ನು ಒಂದು ಸಾಧನವಾಗಿ ಬಳಸುತ್ತಾ ಇವೆ. ಆರ್ಥರ್ ಡಂಕೆಲ್ ಗ್ಯಾಟ್‌ನ ಮುಖ್ಯಸ್ಥರಾಗಿದ್ದರು, ಉರುಗ್ವೆ ಸುತ್ತಿನ ಮಾತುಕತೆಗಳ ನಂತರ, ಅವರ ಶಿಫಾರಸ್ಸುಗಳನ್ನು ಡಂಕೆಲ್ ಪ್ರಸ್ತಾವನೆ ಎಂದು ಕರೆಯಲಾಯಿತು. ಅವರು ಸದಸ್ಯ ರಾಷ್ಟ್ರಗಳಿಗೆ ಅದನ್ನು ಒಪ್ಪಲು ಇಲ್ಲವೆ ನಿರಾಕರಿಸಲು ಅವಕಾಶ ನೀಡಿದರು. ಆದರೆ ಪರೋಕ್ಷವಾಗಿ ಅದನ್ನು ನಿರಾಕರಿಸಲು ಅವಕಾಶಗಳನ್ನು ಮಿತಗೊಳಿಸಿದರು.

ಪಾಶ್ಚಿಮಾತ್ಯ ವಸಾಹತುಶಾಹಿ ಪದ್ಧತಿಯು ಸಾಂಪ್ರದಾಯಿಕ ರೂಪ(ಬಂದೂಕು ದೋಣಿ: ಬಂದೂಕು ದೋಣಿ ಎಂದರೆ ಬಂದೂಕು ಅಮದು ಮಾಡಿಕೊಳ್ಳುವ ರಾಷ್ಟ್ರ, ತನ್ನ ಹಡುಗುಗಳಿದ್ದರೂ ಬಂದೂಕು ಮಾರುವ ರಾಷ್ಟ್ರದ ಹಡುಗುಗಳಿಂದಲೇ ಕಡ್ಡಾಯವಾಗಿ ಬಾಡಿಗೆ ನೀಡಿ ಅಮದು ಮಾಡಿಕೊಳ್ಳಬೇಕು.)ದ

ವ್ಯವಹಾರ ಪ್ರಾಮೀಣ್ಯತೆ ಸಹಿತ ಅಥವಾ ರಹಿತವಾಗಿ ಹೊಸ ರೀತಿಯ ನಿಯಂತ್ರಣ ಮತ್ತು ಪ್ರಾಬಲ್ಯಕ್ಕೆ ದಾರಿ ಮಾಡಿಕೊಟ್ಟಿದೆ. ಪಾಶ್ಚಿಮಾತ್ಯ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಪೂರೈಸಿಕೊಳ್ಳಲು ತಮ್ಮ ಆರ್ಥಿಕ ಬಲವನ್ನು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಪ್ರಭುತ್ವ ಸಾಧಿಸಲು ಬಳಸುತ್ತಿದೆ. ಸಸ್ಯಗಳ ಮತ್ತು ಪ್ರಾಣಿ ಪ್ರಕಾರಗಳ ಸ್ವಾಮ್ಯದ ಸನದು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳ ರಫ್ತುಗಳು ಪ್ರಾಥಮಿಕ ಸರಕುಗಳಾದ ಕಾಫಿ, ಹತ್ತಿ, ಕೋಕೋ ಇತ್ಯಾದಿಗಳ ಬೆಲೆಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಯಂತ್ರಗಳು ಅಥವಾ ಸಿದ್ಧ ವಸ್ತುಗಳ ಬೆಲೆಗಳ ವಿರುದ್ಧವಾಗಿ ಕಡಿಮೆಯಾಗುತ್ತವೆ. ಪಶ್ಚಿಮದ ತಾಂತ್ರಿಕ ಪ್ರಾಬಲ್ಯ ಸ್ವಾಮ್ಯದ ಸನದು, ಚಿಹ್ನೆ, ಸ್ವಾಮ್ಯದ ಹಕ್ಕು, ಕೈಗಾರಿಕಾ ವಿನ್ಯಾಸ ಒಳಗೊಂಡ ಒಂದು ಬೌದ್ಧಿಕ ಆಸ್ತಿ ಹಕ್ಕಿನ ಪದ್ಧತಿಯಿಂದ ಹೇರಲ್ಪಟ್ಟಿತು. ಈ ನಿಯಮಗಳು ತಂತ್ರಜ್ಞಾನ ಹೊಂದಿದವರಿಗೆ ಸಾಮಾನ್ಯವಾಗಿ ಅಂತರರಾಷ್ಟ್ರೀಯ ನಿಗಮಗಳಿಗೆ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳ ಮಾರುಕಟ್ಟೆಯ ಮೇಲೆ ಏಕಸ್ವಾಮ್ಯತ್ವದ ಹಕ್ಕುಗಳನ್ನು ನೀಡಿದವು.

ಅಂತರರಾಷ್ಟ್ರೀಯ ಬೀಜ ಕೈಗಾರಿಕೆ ಆಹಾರ ಸರಪಳಿಯ ಮೊದಲ ಕೊಂಡಿಯಾದ ಬೀಜದ ಪೂರ್ಣ ಹತೋಟಿ ಪಡೆಯಿತು. ಬೀಜದ ನಿಯಂತ್ರಣದ ಮೂಲಕ, ಅವರು ಆಹಾರವನ್ನು ನಿಯಂತ್ರಿಸಲು ಸಾಧ್ಯವಾಯಿತು. ಗ್ಯಾಟ್ ಹಾಕಿದ ಷರತ್ತಿನ ಮೇಲೆ ಒಂದು ವೇಳೆ ಎಲ್ಲಾ ರೈತರು ಮಾರುಕಟ್ಟೆ ಪ್ರವೇಶಿಸಿದರೆ. ಆಗ ಬೀಜ ಕೈಗಾರಿಕೆ ಪ್ರತಿ ವರ್ಷ ೭.೫ ಬಿಲಿಯನ್ ಡಾಲರ್‌ಗಳಷ್ಟು ಮಾರುಕಟ್ಟೆ ಪಡೆಯುತ್ತದೆ.

ಅಭಿವೃದ್ಧಿ ಶೀಲ ರಾಷ್ಟ್ರಗಳ ಸಣ್ಣ ಮತ್ತು ಸೀಮಾಂತ ರೈತರು ಮತ್ತು ಕೃಷಿ ಕಾರ್ಮಿಕರು ಬೀಜಗಳು, ಗೊಬ್ಬರಗಳು ಮತ್ತು ಕ್ರಿಮಿನಾಶಕಗಳ ಮೇಲೆ ಬಹುರಾಷ್ಟ್ರೀಯ ಕಂಪೆನಿಗಳು ಸ್ವಾಮ್ಯತೆ ಸಾಧಿಸಿರುವುದರಿಂದ ಹತೋಟಿ ಕಳೆದುಕೊಳ್ಳುವ ಗಂಡಾಂತರವನ್ನು ಎದುರಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಉದಾರೀಕರಣ ಕಾರ್ಯ ಮುಂದುವರೆಸುವ ನಿರ್ಧಾರ ಭವಿಷ್ಯದಲ್ಲಿ ರಾಷ್ಟ್ರದ ಅವನತಿ ಉಚ್ಚರಿಸಿದೆ. ಇದಲ್ಲದೆ ವಿಶ್ವವ್ಯಾಪಾರ ಸಂಘ ಶೋಷಣೆಯ ಆಧಾರವನ್ನು ಬಲಪಡಿಸಿದೆ ಮತ್ತು ಆಳವಾಗಿಸಿದೆ. ಅಂತರ ರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕಿನೊಂದಿಗೆ, ವಿಶ್ವ ವ್ಯಾಪಾರ ಸಂಘ ಜಾಗತೀಕರಣದ ಯುಗದಲ್ಲಿ ಒಂದು ಬಲಶಾಲಿ ಸಾಮ್ರಾಜ್ಯಶಾಹಿ ಶಕ್ತಿಯಾಗಿದೆ. ರೈತರ ಮತ್ತು ಕಾರ್ಮಿಕರ ಹೋರಾಟಗಳು ರಾಜ್ಯದಿಂದ ನಿಷ್ಕರುಣೆಯಿಂದ ದಮನ ಮಾಡಲ್ಪಟ್ಟಿವೆ ಮತ್ತು ಶ್ರೀಮಂತ ಹಾಗೂ ಬಡವರ ನಡುವಣ ಅಂತರ ನಿರಂತರವಾಗಿ ಹೆಚ್ಚುತ್ತಿದೆ.

ಮೊಟ್ಟ ಮೊದಲ ಬಾರಿಗೆ, ಕ.ರಾ.ರೈ.ಸಂ. ಡಂಕೆಲ್ ಪ್ರಸ್ತಾವನೆಯಲ್ಲಿನ ಈ ದೋಷಗಳನ್ನು ಎತ್ತಿ ಹಿಡಿದಿದೆ ಮತ್ತು ಜನರಲ್ಲಿ ಅರಿವು ಮೂಡಿಸಲು ಯತ್ನಿಸಿದೆ. ಅದು ಡೆಂಕೆಲ್ ಪ್ರಸ್ತಾವನೆಯನ್ನು ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ವಿಶ್ಲೇಷಿಸಿದೆ. ಎರಡು ಕಾರಣಗಳಿಗಾಗಿ ಅದು ಡಂಕೆಲ್ ಪ್ರಸ್ತಾವನೆಯ ಕೃಷಿ ನೀತಿಯನ್ನು ಟೀಕಿಸಿದೆ. ಮೊದಲನೆಯದಾಗಿ, ಕೃಷಿಗೆ ನೀಡುವ ಸಹಾಯಧನವನ್ನು ಹಿಂದಕ್ಕೆ ಪಡೆಯುವ ಸರ್ಕಾರದ ನಿರ್ಧಾರ. ಎರಡನೆಯದಾಗಿ, ಬೀಜ, ಸಸ್ಯ ಮತ್ತು ಪ್ರಾಣಿ ಪ್ರಕಾರಗಳ ಸ್ವಾಮ್ಯದ ಸನದನ್ನು ಒಳಗೊಂಡಿರುವ ಬೌದ್ಧಿಕ ಆಸ್ತಿ ಹಕ್ಕುಗಳು. ಭಾರತದಲ್ಲಿ, ಡಂಕೆಲ್ ಪ್ರಸ್ತಾವನೆಗಳ ಬಗ್ಗೆ ರೈತರು ಏಕ ರೀತಿಯ ಅಭಿಪ್ರಾಯವನ್ನು ಹೊಂದಿರಲಿಲ್ಲ. ಆದ್ದರಿಂದ ರಾಜ್ಯ ಡಂಕೆಲ್ ಪ್ರಸ್ತಾವನೆಯ ಬಗ್ಗೆ ರೈತರ ವಿರೋಧದ ಬಗ್ಗೆ ಹೆಚ್ಚು ಚಿಂತಿಸಲಿಲ್ಲ. ಶರದ್ ಜೋಶಿ, ಅಧ್ಯಕ್ಷರು, ಶೇತ್‌ಕಾರಿ ಸಂಘಟನೆ, ಡಂಕೆಲ್ ಪ್ರಸ್ತಾವನೆಯ ಪರವಾಗಿದ್ದರು. ಆದರೆ ಇತರರು ಅಂದರೆ, ಉತ್ತರ ಪ್ರದೇಶದಲ್ಲಿ ಮಹೇಂದ್ರ ಸಿಂಗ್ ಟಿಕಾಯತ್, ಪಂಜಾಬಿನಲ್ಲಿ ಲೋಂಗೋವಾಲಾ, ಒರಿಸ್ಸಾದಲ್ಲಿ ಕಿಸಾನ್ ಪಟ್ನಾಯಕ್, ತಮಿಳುನಾಡಿನಲ್ಲಿ ಶಿವಸ್ವಾಮಿ, ಆಂಧ್ರಪ್ರದೇಶದಲ್ಲಿ ಮಲ್ಲಾರೆಡ್ಡಿ ಡಂಕೆಲ್ ಪ್ರಸ್ತಾವನೆಯ ವಿರುದ್ಧವಾಗಿದ್ದರು.

ಮಹಾರಾಷ್ಟ್ರದ ರೈತ ಚಳುವಳಿಯ ಅಭಿಪ್ರಾಯಗಳೆಂದರೆ. ಅದು ೧೯೮೫ರಲ್ಲಿ ಕೃಷಿ ಉತ್ಪನ್ನದ ಮೇಲಿನ ರಫ್ತು ನಿರ್ಬಂಧವನ್ನು ರದ್ದುಗೊಳಿಸಲು ಬೆಂಬಲಿಸಿತು. ಅದೇ ವೇಳೆಗೆ ರೈತರ ಹಿತಾಸಕ್ತಿಗೆ ವಿರುದ್ಧವಾಗಿದ್ದ ನೀತಿಗಳನ್ನು ಅದು ವಿರೋಧಿಸಿತು. ಶರದ್ ಜೋಶಿ, ಹಿಂದೆ ವಿಶ್ವಸಂಸ್ಥೆ ನೌಕರರಾಗಿದ್ದವರು, ಮಹಾರಾಷ್ಟ್ರದಲ್ಲಿ ಡಂಕೆಲ್ ಪರವಾದ ರೈತ ಚಳುವಳಿಯನ್ನು ನಡೆಸಿದರು. ಜನತಾ ಪಕ್ಷದ ಆಡಳಿತ ಅವಧಿಯಲ್ಲಿ ಅವರು ಕೃಷಿ ಸ್ಥಾಯೀ ಸಮಿತಿಯ ಅಧ್ಯಕ್ಷರಾಗುವ ಅವಕಾಶ ಪಡೆದಿದ್ದರು. ಈ ಸ್ಥಾನದಿಂದ ಅವರು ವಿದೇಶೀ ಮಾರುಕಟ್ಟೆ ಹೊಂದಿದ ಕೆಲವು ಸರಕುಗಳನ್ನು ರಫ್ತು ಮಾಡಲು ಸರ್ಕಾರ ಅನುಮತಿ ನೀಡಬೇಕೆಂದು, ಆಹಾರ ತಂತ್ರಜ್ಞಾನ ಆಮದಿಗೆ ಅನುಮತಿ ನೀಡಬೇಕೆಂದು, ಉನ್ನತ ಗುಣಮಟ್ಟದ ಬೀಜಗಳನ್ನು ಆಮದು ಮಾಡಲು ಹೊಸ ಬೀಜ ನೀತಿ ಜಾರಿಗೆ ತರಲು, ನವೀಕರಣಕ್ಕೆ ಬೆಂಬಲ ನೀಡುವ ಯುವ ರೈತರನ್ನು ಇತರ ಪದ್ಧತಿಗಳಿಂದ ಕಲಿಯಲು ಮತ್ತು ಬಳಕೆಗೆ ತರಲು ವಿದೇಶ ಪ್ರವಾಸ ಕಳುಹಿಸುವ ಕಾರ್ಯಕ್ರಮ ಜಾರಿಗೆ ತರಲು, ಕೃಷಿ ಕಾರ್ಯಕ್ಕೆ ಸಲಕರಣೆಗಳನ್ನು ಹಾಗೂ ಸರಕುಗಳನ್ನು ಆಮದು ಮಾಡಲು ಕಾರ್ಯತಂತ್ರಗಳನ್ನು ಸರಳೀಕೃತ ಗೊಳಿಸಲು ಸಲಹೆ ಮಾಡಿದ್ದರು.

೧೯೯೧ರಲ್ಲಿ ಗ್ಯಾಟ್‌ಗೆ ಸಹಿ ಹಾಕಿದ ನಂತರ, ಮಹಾರಾಷ್ಟ್ರ ಸರ್ಕಾರ ಕೃಷಿ ಸಂಬಂಧೀ ಕೈಗಾರಿಕೆಗಳ ಪರವಾನಿಗೆ ರದ್ದುಗೊಳಿಸುವಂತೆ, ಕೃಷಿ ರಫ್ತುಗಳ

ನಿಯಂತ್ರಣ ರದ್ದುಗೊಳಿಸುವುದು ಮತ್ತು ವಿದೇಶಗಳಿಂದ ಕೃಷಿ ಉತ್ಪನ್ನ ಸರ್ಕಾರೀ ಡಂಪಿಂಗ್ (ರಾಶಿ ಹಾಕುವುದು) ರದ್ದುಗೊಳಿಸಲು ಒತ್ತಾಯಿಸಿತು. ಅಲ್ಲದೆ ಅದು ಡಂಕೆಲ್ ಪ್ರಸ್ತಾವನೆಗಳನ್ನು ಜಾಗತಿಕ ಮಟ್ಟದ ಪೈಪೋಟಿ ಎದುರಿಸಲು ರೈತರಿಗೆ ಸ್ವಾಯತ್ತತೆಗಾಗಿ ರಾಜ್ಯ ನೀಡುವ ಸಹಾಯಧನ ಮತ್ತು ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಹಿಂತೆಗೆದುಕೊಳ್ಳದಂತೆ ಒತ್ತಾಯಿಸಿ ಸಮರ್ಥಿಸಿತು. ಅಂತಿಮವಾಗಿ ಅದು ಭಾರತವನ್ನು 'ದುರ್ಬಲ ಬಂಡವಾಳ ಪ್ರಭುತ್ವ ಪದ್ಧತಿಯಿಂದ' 'ಪೈಪೋಟಿಯುತ ಬಂಡವಾಳ ಪ್ರಭುತ್ವಕ್ಕೆ' ಬದಲಾಯಿಸಲು ಸಹಾಯ ಮಾಡುತ್ತದೆ ಎಂದಿತು.

ಕ.ರಾ.ರೈ.ಸಂ. ಮತ್ತು ಉತ್ತರ ಪ್ರದೇಶದ ರೈತ ಚಳುವಳಿಗಳು ರಾಜ್ಯವನ್ನು 'ಮೃದುರಾಜ್ಯ'ವೆಂದು ನವ ಸಾಮ್ರಾಜ್ಯಶಾಹಿ ರೂಪರೇಷೆಗಳಿಗೆ ಸಂಬಂಧಿಸಿದಂತೆ ಅದರ ಮೃದುತ್ವ, ಪಾಶ್ಚಿಮಾತ್ಯ ಕಾರ್ಯತಂತ್ರ ಡಂಕೆಲ್ ಪ್ರಸ್ತಾವನೆಗೆ ಮೃದುತ್ವ, ಗ್ಯಾಟ್ ಒಪ್ಪಂದ ಮತ್ತು ಪಾಶ್ಚಿಮಾತ್ಯ ಸಂಪರ್ಕ ಮಾಧ್ಯಮದ ಮೂಲಕ ಸಾಂಸ್ಕೃತಿಕ ಪ್ರಾಬಲ್ಯದತ್ತ ಮೃದುತ್ವ, ಕೆಂಟುಕಿ ಚಿಕನ್ ಅಥವಾ ಅನುಭೋಗಿ ಸರಕುಗಳತ್ತ ಮೃದುತ್ವಕ್ಕಾಗಿ ಪರಿಗಣಿಸಿತು.

ಕ.ರಾ.ರೈ.ಸಂ. ಪಾಶ್ಚಿಮಾತ್ಯ ರಾಷ್ಟ್ರಗಳ ನಿರ್ದೇಶನದಂತೆ ಸರ್ಕಾರ ತನ್ನ ಸಹಾಯಧನಗಳನ್ನು ಹಿಂತೆಗೆದುಕೊಂಡಾಗ ಡಂಕೆಲ್ ಪ್ರಸ್ತಾವನೆಯನ್ನು ಆಕ್ರಮಿಸಿತು. ಕ.ರಾ.ರೈ.ಸಂ. ನೆಹರೂ ಅಭಿವೃದ್ಧಿ ಮಾದರಿ ಭಾರತೀಯ ಕೃಷಿಗೆ ಒಂದು ಶಾಪವೆಂದು ಟೀಕಿಸಿತು. ಏಕೆಂದರೆ ಅದು ಹುಟ್ಟಿದ ಪ್ರತಿಯೊಂದು ಮಗು ತನ್ನ ತಲೆಯ ಮೇಲೆ ೨೦೦೦ ರೂಪಾಯಿ ಸಾಲ ಹೊರುವಂತೆ ಮಾಡಿತು. ಆದ್ದರಿಂದ ಕ.ರಾ.ರೈ.ಸಂ. ನೆಹರೂ ಮಾದರಿಯನ್ನು ಭಾರತೀಯ ಅಭಿವೃದ್ಧಿ ನೀತಿಯ ದಾರಿ ತಪ್ಪಿಸಿದ ರೂಪವೆಂದು ಕರೆಯಿತು. ಕ.ರಾ.ರೈ.ಸಂ. ಪಾಶ್ಚಿಮಾತ್ಯ ಬಂಡವಾಳ ಪ್ರಭುತ್ವ ರಾಷ್ಟ್ರಗಳು ತಮ್ಮ ರಾಷ್ಟ್ರಗಳಲ್ಲಿ ಬೆಲೆ ನಿಯಂತ್ರಿಸಲು ಮತ್ತು ಹೆಚ್ಚುವರಿ ಉತ್ಪಾದನೆಗಾಗಿ ಸಹಾಯ ಧನವನ್ನು ಕೃಷಿಗೆ ನೀಡುತ್ತವೆ ಎಂದು ವಿವರಿಸಿತು. ಆದರೆ ಅವರು ತೃತೀಯ ಜಗತ್ತಿನ ರಾಷ್ಟ್ರಗಳು ಕೃಷಿಗೆ ನೀಡುವ ಎಲ್ಲಾ ಸಹಾಯಧನಗಳನ್ನು ಹಿಂತೆಗೆದು ಕೊಳ್ಳುವಂತೆ ಆದೇಶ ನೀಡುತ್ತಾರೆ.

ವೈ. ಕೆ. ಅಲಗ್ ಮತ್ತು ಇತರರ ಅಂದಾಜಿನ ಪ್ರಕಾರ, ಭಾರತೀಯ ರೈತನಿಗೆ ಕೊಡಬೇಕಾದ ಸಹಾಯ ಧನ ಶೇಕಡಾ ೪೦ಕ್ಕಿಂತ ಹೆಚ್ಚಿರಬೇಕು ಏಕೆಂದರೆ ಭಾರತೀಯ ಕೃಷಿ ಜಾಗತಿಕ ವ್ಯಾಪಾರದ ಸವಾಲುಗಳನ್ನು ಎದುರಿಸಲು ಪ್ರಮುಖವಾಗಿ ಒಣ ಹಾಗೂ ಅರೆ ಒಣ ಭೂಮಿಯಲ್ಲಿ ಮತ್ತು ರೈತರು ಕಡಿಮೆ ಉತ್ಪಾದನೆ ತರುವ ಏಕ ಬೆಳೆ ಪದ್ಧತಿಯಿಂದ ಹೆಚ್ಚು ಉತ್ಪಾದನೆ ತರುವ ಬಹುಮುಖ ಬೆಳೆ ಪದ್ಧತಿಗೆ

ವರ್ಗಾವಣೆ ಆಗಲು ಮತ್ತು ಒಂದು ವೇಳೆ ಭಾರತೀಯ ಕೃಷಿಯ ವೈವಿಧ್ಯಕರಣವನ್ನು ನಿರಂತರವಾಗಿ ಕಾಯ್ದುಕೊಳ್ಳಬೇಕಾದರೆ ಕೃಷಿ ವೈವಿಧ್ಧಿಕರಣ ಅಗತ್ಯವಿದೆ. ಭಾರತ ಈ ಸಹಾಯಧನವನ್ನು ಮುಂದುವರೆಸಲೇಬೇಕು.

ನಂಜುಂಡಸ್ವಾಮಿಯವರು ಇತರ ದೇಶಗಳ ಸಹಾಯಧನ ಭಾರತಕ್ಕೆ ಹೋಲಿಸಿ ಒಂದು ಪಟ್ಟಿಯನ್ನು ನೀಡಿದ್ದಾರೆ. ಅದು ಭಾರತೀಯ ಸಹಾಯಧನಕ್ಕಿಂತ ಹೆಚ್ಚಿದೆ ಮತ್ತು ಇಂದಿಗೂ ಮುಂದುವರಿಯುತ್ತಿದೆ.

ಪಟ್ಟಿ ಸಂಖ್ಯೆ ೧.೧೩

ರಾಷ್ಟ್ರಗಳು ನೀಡುತ್ತಿರುವ ಕೃಷಿ ಸಹಾಯಧನ

ರಾಷ್ಟ್ರ	ಬೆಳೆ ಉತ್ಪಾದನೆ ದರ (ರೂಪಾಯಿಗಳಲ್ಲಿ)	ಸಹಾಯಧನ ದರ (ರೂಪಾಯಿಗಳಲ್ಲಿ)
ಜಪಾನ್	೧೦೦	೭೨.೫೦
ದಕ್ಷಿಣ ಕೊರಿಯಾ	೧೦೦	೬೦.೬೭
ಕೊಲಂಬಿಯಾ	೧೦೦	೫೪.೫೦
ಯುರೋಪಿನ ಸಮುದಾಯ	೧೦೦	೩೭.೦೦
ಚೀನಾ	೧೦೦	೩೯.೧೭
ಯು.ಎಸ್.ಎ.	೧೦೦	೨೬.೨೭
ಪಾಕಿಸ್ತಾನ	೧೦೦	೨೧.೮೦
ಆಸ್ಟ್ರೇಲಿಯಾ	೧೦೦	೧೦.೩೩
ಭಾರತ	೧೦೦	೨.೩೩

ಟಿಪ್ಪಣಿ : ಭಾರತದಲ್ಲಿ ೨.೩೩ ರೂಪಾಯಿ ಸಹಾಯಧನ ದರ ಕೃಷಿಗೆ, ಆದರೆ ಇತರ ದೇಶಗಳಲ್ಲಿರುವಂತೆ ಒಬ್ಬ ರೈತನಿಗೆ ಅಲ್ಲ

ಮೂಲ : ನಂಜುಂಡಸ್ವಾಮಿಯವರ "ಡಂಕೆಲ್ ಪ್ರಸ್ತಾವನೆ ಕೆಟ್ಟ ಪರಿಣಾಮಗಳು", ೨೫ನೇ ಫೆಬ್ರವರಿ ೧೯೯೩ರಂದು ಕರ್ನಾಟಕ ವಿಧಾನ ಸಭೆಯಲ್ಲಿ ನೀಡಿದ ಭಾಷಣ.

ಇನ್ನಿತರ ಯಾವುದೇ ರಾಷ್ಟ್ರಕ್ಕೆ ಹೋಲಿಸಿದಾಗ ಭಾರತದಲ್ಲಿ ಕೃಷಿಗೆ ಇರುವ ಸಹಾಯಧನ ದರ ಕಡಿಮೆ ಇದೆ. ಕ.ರಾ.ರೈ.ಸಂ. ಆದ್ದರಿಂದ, ಭಾರತದಲ್ಲಿ ಸಹಾಯಧನವನ್ನು ತೆಗೆದು ಹಾಕಿದರೆ, ಆಹಾರ ವಸ್ತುಗಳ ಉತ್ಪಾದನಾ ವೆಚ್ಚ ಸಹಜವಾಗಿಯೇ ಹೆಚ್ಚುತ್ತದೆ ಎಂದು ವಾದಿಸಿತು. ಇದರೊಂದಿಗೆ ಆಹಾರ ವಸ್ತುಗಳ ಬೆಲೆಗಳೂ ಹೆಚ್ಚುತ್ತವೆ. ಇಂತಹ ಅವಕಾಶವನ್ನು ಬಳಸಿಕೊಂಡು, ಪಾಶ್ಚಿಮಾತ್ಯ ಬಂಡವಾಳ ಪ್ರಭುತ್ವ ದೇಶಗಳು ಭಾರತೀಯ ಮಾರುಕಟ್ಟೆಗೆ ತಮ್ಮ ಕೃಷಿ ಸರಕುಗಳನ್ನು ಒಟ್ಟಾಗಿ ಹಂಚಿಕೊಳ್ಳಲು ಬಯಸುತ್ತವೆ. ಪ್ರಾರಂಭದಲ್ಲಿ ಅವರು ತಮ್ಮ ಸರಕುಗಳನ್ನು ತುಲನಾತ್ಮಕವಾಗಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ಇದು ಭಾರತೀಯ ಕೃಷಿ ಮತ್ತು ಆಹಾರ ಉತ್ಪಾದನೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ನಿಧಾನವಾಗಿ, ಅನುಭೋಗಿಗಳು ಕಡಿಮೆ ಬೆಲೆಯ ಆಮದಾದ ಸರಕುಗಳನ್ನು ಬಯಸುತ್ತಾರೆ. ಇದು ಭಾರತೀಯರನ್ನು ಉತ್ಪಾದಕರಿಗೆ ಬದಲಿಗೆ ಕೇವಲ ಅನುಭೋಗಿಗಳಾಗಿ ಪರಿವರ್ತಿಸುತ್ತದೆ. ಕ.ರಾ.ರೈ.ಸಂ. ನಿರೀಕ್ಷಿಸುವಂತೆ ಅದು ಮುಂದಿನ ದಿನಗಳಲ್ಲಿ ಬಂಡವಾಳ ಪ್ರಭುತ್ವ ದೇಶಗಳು ತೃತೀಯ ಜಗತ್ತಿನ ದೇಶಗಳಲ್ಲಿ ತಮ್ಮ ಸರಕುಗಳನ್ನು ಒಟ್ಟಾಗಿ ಹಂಚಿಕೊಳ್ಳುವ ಮೂಲಕ ನವ ಸಾಮ್ರಾಜ್ಯಶಾಹಿ ಸ್ಥಾಪನೆಗೆ ಅವಕಾಶ ನೀಡುತ್ತದೆ.

ಕ.ರಾ.ರೈ.ಸಂ.ದ ಪ್ರಕಾರ ಸರಕುಗಳನ್ನು ಪೈಪೋಟಿಯುತ ಬೆಲೆಯಲ್ಲಿ ಮಾರಾಟ ಮಾಡುವ ಈ ನೀತಿ, ತೃತೀಯ ಜಗತ್ತನ್ನೂ ಒಳಗೊಂಡಂತೆ ವಿಶ್ವ ಮಾರುಕಟ್ಟೆಯನ್ನು ಆಕ್ರಮಿಸಲು ಬಂಡವಾಳಶಾಹಿ ದೇಶಗಳು ಹಾಕಿಕೊಂಡ ಬೃಹತ್ ಕಾರ್ಯತಂತ್ರದ ಒಂದು ಭಾಗವಾಗಿದೆ. ಬಂಡವಾಳಶಾಹಿ ರಾಷ್ಟ್ರಗಳು ಇಂತಹ ಕಾರ್ಯತಂತ್ರಗಳನ್ನು ತೃತೀಯ ಜಗತ್ತಿನ ಮೇಲೆ ಪ್ರಾಬಲ್ಯ ಸಾಧಿಸಲು ಬಳಸುತ್ತವೆ. ಬಂಡವಾಳಶಾಹಿ ರಾಷ್ಟ್ರಗಳು ತೃತೀಯ ಜಗತ್ತಿನ ಮೇಲೆ ಪ್ರಭುತ್ವ ಸಾಧಿಸಲು ಸಾಲ ನೀಡುವಾಗ ಅದರ ಜೊತೆಯಲ್ಲೇ ಕೆಲವು ಇತರ ಷರತ್ತು ವಿಧಿಸುವುದು ಮತ್ತು ಜನರ ಭಾಗವಹಿಸುವಿಕೆ ಅವಕಾಶವಿಲ್ಲದಂತೆ ಅವರ ನಿರ್ಧಾರ ಕೈಗೊಳ್ಳುವ ಹಕ್ಕನ್ನು ನಿರಾಕರಿಸುವುದು ಇಂತಹ ಕಾರ್ಯತಂತ್ರಗಳನ್ನು ಬಳಸುತ್ತವೆ. ಇದು ಒಂದು ರಾಷ್ಟ್ರದ ಸಾರ್ವಭೌಮತೆಗೆ ಪೆಟ್ಟು ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ಈ ಕಾರ್ಯತಂತ್ರದಿಂದ ನಂಜುಂಡಸ್ವಾಮಿಯವರು ಅಭಿಪ್ರಾಯ ಪಡುವಂತೆ ಭಾರತೀಯ ಸರ್ಕಾರ ಮಾರುಕಟ್ಟೆ ನಿಯಂತ್ರಣದ ಎಲ್ಲಾ ಅಧಿಕಾರಗಳನ್ನು ಕಳೆದುಕೊಳ್ಳುತ್ತದೆ. ಅವುಗಳೆಂದರೆ ಆಮದು ಪ್ರಮಾಣ ನಿಗದಿಸುವ ಅಧಿಕಾರ, ಆಮದು ಅನುಮತಿ, ಇದು ನಮ್ಮ ಆಹಾರ ಮಾರುಕಟ್ಟೆಯ ದ್ವಾರಗಳನ್ನು ಬಂಡವಾಳಶಾಹಿ ದೇಶಗಳಿಗೆ ತೆರೆಯುತ್ತದೆ ಅದನ್ನು ಅವರು ಜಾಗತಿಕ ಆಹಾರ ಮಾರುಕಟ್ಟೆ ಎಂದು ಕರೆಯುತ್ತಾರೆ.

ಕ.ರಾ.ರೈ.ಸಂ. ಹೇಳಿರುವಂತೆ, ಡಂಕೆಲ್ ಪ್ರಸ್ತಾವನೆಗಳು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಕೃಷಿ ಸರಕುಗಳನ್ನು ಕನಿಷ್ಟ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವಂತೆ ಒತ್ತಡ ಹೇರಿವೆ. ಡಂಕೆಲ್ ಪ್ರಸ್ತಾವನೆ ಭಾರತ ಸರ್ಕಾರಕ್ಕೆ ಪ್ರಸ್ತುತ ಮಾರುಕಟ್ಟೆ ಪ್ರವೇಶ ಅವಕಾಶಗಳಲ್ಲಿ ೧೯೮೬-೮೭ ಅವಧಿಯ ಸರಾಸರಿ ವಾರ್ಷಿಕ ಆಮದಿಗಿಂತ ಕಡಿಮೆ ಇಲ್ಲದಂತೆ ಆಮದು ಮಾಡಿಕೊಳ್ಳಬೇಕು ಅಥವಾ ಆ ಅವಧಿಯಲ್ಲಿ ಆಮದಿಗೆ ಅನುಮತಿಯಿದ್ದಷ್ಟು ಆಮದು ಮಾಡಿಕೊಳ್ಳಬೇಕೆಂದು ಷರತ್ತುಗಳನ್ನು ವಿಧಿಸಿತು. ೧೯೮೬ ರಿಂದ ೮೯ರವರೆಗೆ ಯಾವುದು ಹೆಚ್ಚೋ ಅದನ್ನು ಭಾರತ ಬೇಕಾಗಿರಲಿ, ಬೇಡದಿರಲಿ ಮಾಡಿಕೊಳ್ಳಬೇಕು. ಈ ಸರಾಸರಿಯ ಆಧಾರದ ಮೇಲೆ, ೧೯೯೩ರಲ್ಲಿ ಭಾರತ ಸುಮಾರು ೭೦ ಲಕ್ಷ ಟನ್ನುಗಳಷ್ಟು ಆಹಾರ ವಸ್ತುಗಳನ್ನು ಮುಕ್ತ ಮಾರುಕಟ್ಟೆಯಿಂದ ಕಡ್ಡಾಯವಾಗಿ ಆಮದು ಮಾಡಿಕೊಳ್ಳಲಾಯಿತು. ಏಕೆಂದರೆ ವಿಶ್ವಬ್ಯಾಂಕು ಅದನ್ನು ಭಾರತದ ಕೈಗಾರಿಕೆಗಳಿಗೆ ಸಾಲ ಬಿಡುಗಡೆ ಮಾಡಲು ಅವಶ್ಯಕವೆಂದು ಹೇಳಿತು. ಇಂತಹ ಮುಕ್ತ ಮಾರುಕಟ್ಟೆ ಪ್ರವೇಶ ಅಥವಾ ಉದಾರೀಕರಣದ ನೀತಿ ಭಾರತೀಯ ಕೃಷಿಯನ್ನು ತೀವ್ರ ಒತ್ತಡಕ್ಕೆ ಒಳಪಡಿಸುತ್ತದೆ ಮತ್ತು ಅಂತಿಮವಾಗಿ ಅದನ್ನು ನಾಶಪಡಿಸುತ್ತದೆ.

ಕ.ರಾ.ರೈ.ಸಂ. ಹೇಳುವಂತೆ, ಅಮೇರಿಕಾದ ಕೃಷಿ ಮತ್ತು ಧಾನ್ಯ ವ್ಯಾಪಾರಿಗಳು ಅಮೆರಿಕಾ ಸರ್ಕಾರದಿಂದ ಅಧಿಕ ಸಹಾಯಧನ ಪಡೆದಿದ್ದರು. ಆದ್ದರಿಂದ ಕಾರ್ಗಿಲ್ ಕಂಪನಿ ವಿಶ್ವದಲ್ಲಿ ೬ನೇ ದೊಡ್ಡ ಧಾನ್ಯದ ವ್ಯಾಪಾರಿಯಾಗಿತ್ತು ಅಲ್ಲದೆ ಅಮೇರಿಕಾ ಸಂಯುಕ್ತ ಸಂಸ್ಥಾನದಿಂದ ಹೆಚ್ಚು ಸಹಾಯಧನ ಪಡೆದ ಪಲಾನುಭವಿಯಾಗಿತ್ತು. ಒಂದು ವೇಳೆ ಭಾರತ ತನ್ನ ಆಹಾರ ಮಾರುಕಟ್ಟೆಯ ದ್ವಾರಗಳನ್ನು ತೆರೆದರೆ, ಈ ಬಹುರಾಷ್ಟ್ರೀಯ ಸಂಸ್ಥೆಗಳು ಅಸ್ತಿತ್ವದಲ್ಲಿರುವ ಬೆಲೆಗಿಂತ ಕಡಿಮೆ ಬೆಲೆಗೆ ಆಹಾರ ವಸ್ತುಗಳನ್ನು ಮಾರುವ ಸಾಮರ್ಥ್ಯ ಹೊಂದಿವೆ. ಉದಾಹರಣೆ, ಅವರು ಸೂರ್ಯಕಾಂತಿ ಎಣ್ಣೆಯನ್ನು ಪ್ರತಿ ಕೆ.ಜಿ.ಗೆ ೨೦ ರೂಪಾಯಿಯಂತೆ ಬಿಡುಗಡೆ ಮಾಡಬಹುದು (ಭಾರತದ ಮಾರುಕಟ್ಟೆಯಲ್ಲಿ ಅದು ಪ್ರತಿ ಕೆ. ಜಿ. ಗೆ ೪೦ ರೂಪಾಯಿಯಿದ್ದರೆ) ಏಕೆಂದರೆ ಅದು ಅಧಿಕ ಸಹಾಯಧನ ಪಡೆಯುತ್ತದೆ ಮತ್ತು ಅಧಿಕ ಉತ್ಪಾದನೆ ಹೊಂದಿದೆ. ನಿಖರವಾಗಿ ಅದು ಸೂರ್ಯಕಾಂತಿ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅಂತಿಮವಾಗಿ ಅದು ಭಾರತದ ಕೃಷಿ ಕಾರ್ಯಕ್ಷೇತ್ರದಿಂದ ಮರೆಯಾಗಬಹುದು.

ಅಮೇರಿಕಾದಲ್ಲಿ ೧೯೭೦ರವರೆಗೆ, ಆಹಾರ ಧಾನ್ಯಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಅವರು ಹೆಚ್ಚುವರಿ ಆಹಾರ ಧಾನ್ಯಗಳನ್ನು ಬೆಲೆ ಇಳಿತ ತಪ್ಪಿಸಲು ಅಥವಾ ಬೆಲೆ ಸ್ಥಿತಿಯನ್ನು ವಿಶ್ವ ಮಾರುಕಟ್ಟೆಯಲ್ಲಿ ಕಾಯ್ದುಕೊಳ್ಳಲು

ಸಮುದ್ರಕ್ಕೆ ಎಸೆಯುತ್ತಿದ್ದರು. ಬೃಹತ್ ಪ್ರಮಾಣದ ಹಾಲು ಮತ್ತು ತುಪ್ಪವನ್ನು ಉತ್ಪಾದಿಸಲಾಗಿತ್ತು ಮತ್ತು ಬೆಟ್ಟದಷ್ಟು ಬೆಣ್ಣೆ ಮತ್ತು ಗಿಣ್ಣನ್ನು ಮೈಲುತುತ್ತ ಬೆರೆಸಿ ವಿಷವಾಗಿಸಲಾಗಿತ್ತು. ೧೯೭೦ರಿಂದ ೧೯೯೦ರವರೆಗೆ ಅಮೇರಿಕಾ ಸರ್ಕಾರ ಮತ್ತೊಂದು ಕಾರ್ಯತಂತ್ರವನ್ನು ಅಳವಡಿಸಿಕೊಂಡಿತು. ಅದು ತನ್ನ ರೈತರನ್ನು ತಮ್ಮ ಭೂಮಿಯಲ್ಲಿ ಅರ್ಧಭಾಗ ಸಾಗುವಳಿ ಮಾಡಬಾರದೆಂದು ಕೇಳಿಕೊಂಡಿತು ಮತ್ತು ಆ ಅರ್ಧ ಭಾಗದ ಸಾಗುವಳಿ ಮಾಡದ ಭೂಮಿಗೆ ಅದರ ಸಾಗುವಳಿ ಮಾಡಲಾದ ಉತ್ಪಾದನಾ ಭಾಗದಷ್ಟು ಸಮನಾಗಿ ಪಾವತಿ ಮಾಡುವ ಭರವಸೆ ನೀಡಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೃಷಿ ಸರಕುಗಳ ಬೆಲೆ ಸ್ಥಿರತೆ ಕಾಪಾಡಲು ಇದು ನ್ಯಾಯೋಚಿತವಾಗಿತ್ತು.

ಪ್ರಸ್ತುತದಲ್ಲಿ, ಅಮೇರಿಕಾ ಮೂರನೇ ಕಾರ್ಯತಂತ್ರವನ್ನು ಜಾರಿಗೆ ತಂದಿದೆ, ಸಮುದ್ರಕ್ಕೆ ಎಸೆಯುವ ಬದಲಿಗೆ ಅಥವಾ ಅರ್ಧದಷ್ಟು ಭೂಮಿಯನ್ನು ಸಾಗುವಳಿ ಮಾಡದೇ ಹಾಗೆ ಉಳಿಸುವುದಕ್ಕೆ ಬದಲಾಗಿ ಜಾರಿಗೆ ತಂದಿರುವ ಕಾರ್ಯತಂತ್ರ ಏನೆಂದರೆ, ತನ್ನ ಹೆಚ್ಚುವರಿ ಉತ್ಪನ್ನಕ್ಕೆ ಮೂರನೇ ವಿಶ್ವದ ರಾಷ್ಟ್ರಗಳನ್ನು ಮಾರುಕಟ್ಟೆಯಾಗಿ ಪರಿವರ್ತಿಸುವುದು. ಈ ಮೂರನೇ ಕಾರ್ಯತಂತ್ರವನ್ನು ಜಾರಿಗೆ ತರಲು ಅಮೇರಿಕಾದ ಸಾಮ್ರಾಜ್ಯಶಾಹಿ ಗ್ಯಾಟ್ ಒಪ್ಪಂದವನ್ನು ಸಾಧನವನ್ನಾಗಿ ಬಳಸಿಕೊಂಡಿತು.

ಕೆಲವು ವಿಮರ್ಶಕರ ಪ್ರಕಾರ, ಒಂದು ವೇಳೆ ನಮಗೆ ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಗೆ ಪಡೆಯಲು ಸಾಧ್ಯವಾದರೆ, ನಾವೇಕೆ ಅದನ್ನು ಬೆಳೆಯಬೇಕು ? ಭಾರತೀಯ ಜನ ವಿರೋಧೀ ವೇದಿಕೆ ಎಂಬ ಸಂಘಟನೆ ಹೈದ್ರಾಬಾದ್‌ನಲ್ಲಿ ಒಂದು ಒಡಂಬಡಿಕೆಯನ್ನು ವ್ಯವಸ್ಥೆಗೊಳಿಸಿತ್ತು. ಅದು ಎಲ್ಲಿಯವರೆಗೆ "ನಿಷ್ಠುರ ಹೋರಾಟ"ವನ್ನು ವಿಶ್ವವ್ಯಾಪಾರ ಸಂಘದ ಕಾರ್ಯತಂತ್ರಗಳ ವಿರುದ್ಧ ಮಾಡುವುದಿಲ್ಲವೋ ಅಲ್ಲಿಯವರೆಗೆ ಅಭಿವೃದ್ಧಿಶೀಲ ರಾಷ್ಟ್ರಗಳು ಮತ್ತು ಅದರ ಜನರು ತಮ್ಮ ಸಂಪತ್ತನ್ನು ಕಳೆದುಕೊಳ್ಳುತ್ತಾರೆ. ಅವರ ಪರಿಸರ ಹದಗೆಡುತ್ತದೆ ಮತ್ತು ಅವುಗಳ ಕೃಷಿ ಜನರನ್ನು ಕಾಪಾಡಲು ಅಸಮರ್ಥವಾಗುತ್ತದೆ ಎಂಬ ಘೋಷಣೆಯನ್ನು ಅಳವಡಿಸಿಕೊಂಡಿತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸರಕು ಸೇವೆ ಕೊಳ್ಳುವ ಮತ್ತು ಬಳಸುವ "ನಾವು ಗೊಂಬೆಗಳಾಗುತ್ತೇವೆ." ಇದರೊಂದಿಗೆ, ಘೋಷಣೆ "ಜೀವಂತ, ಕಾರ್ಯತತ್ಪರರು ಮತ್ತು ರಚನಾತ್ಮಕ ಮನುಷ್ಯರಾದ ನಾವು ನಿರ್ಜೀವ ಅನುಭೋಗಿಗಳಾಗಿ ಬದಲಾಗುತ್ತೇವೆ." ಎಂದು ಎಚ್ಚರಿಕೆ ನೀಡಿತು.

ಕರ್ನಾಟಕದಲ್ಲಿ, ಸಹಾಯಧನ ಹಿಂದಕ್ಕೆ ಪಡೆಯುವ ವಿರುದ್ಧ ಚಳುವಳಿಗಳು ಪ್ರಾರಂಭವಾದವು. ರೈತರು ಸಹಾಯಧನ ಹಿಂತೆಗೆದುಕೊಂಡರೆ ಆಂತರಿಕ ಉತ್ಪಾದನಾ

ವೆಚ್ಚ ಮತ್ತು ಕೃಷಿ ಸರಕುಗಳ ಬೆಲೆಗಳು ಹೆಚ್ಚುತ್ತವೆ ಮತ್ತು ರೈತರನ್ನು ರೈತರ ಸ್ಥಾನದಿಂದ "ಸಣ್ಣ ರೈತರು" "ಕೂಲಿ ಕಾರ್ಮಿಕರಾಗಿ" ಪರಿವರ್ತನೆ ಮಾಡುತ್ತದೆಂದು ಹೆದರಿದರು.

ನಂಜುಂಡಸ್ವಾಮಿಯವರು ವಿಮರ್ಶಕರ ಈ ಸಂದೇಹವನ್ನು ಹೀಗೆ ಸ್ಪಷ್ಟಪಡಿಸಿದರು. ಈ ವರ್ಷ ಮಾರುಕಟ್ಟೆಯಲ್ಲಿ ಶೇಂಗಾ ಎಣ್ಣೆ ಬೆಲೆ ೩೫ ರೂಪಾಯಿ ಅಥವಾ ೩೭ ರೂಪಾಯಿ, ಅಮೇರಿಕಾ ಅದನ್ನು ಕೇವಲ ೨೫ ರೂಪಾಯಿಗೆ ಮಾರಬಹುದು. ಮುಂದಿನ ವರ್ಷ ನಾವು ಶೇಂಗಾ ಬೆಳೆಯಲು ಸಾಧ್ಯವಿಲ್ಲ. ಇತರ ಬೆಳೆಗಳಿಗೂ ಇದೇ ಆಗುತ್ತದೆ. ಒಂದೇ ವರ್ಷದ ಅವಧಿಯಲ್ಲಿ ಕೋಟಿ ಗಟ್ಟಲೆ ರೈತರು ಸಾಗುವಳಿ ರಹಿತರಾಗುತ್ತಾರೆ. ತದ ನಂತರ ಒಂದು ವೇಳೆ ಅಮೇರಿಕಾ ಸರ್ಕಾರ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿದರೂ, ನಾವು ಅದನ್ನು ಖರೀದಿಸಲು ಸಾಧ್ಯವಿಲ್ಲ ಏಕೆಂದರೆ ಭಾರತ ಈಗಾಗಲೇ ಸಂದಾಯ ಬಾಕಿ ಸಂಕಷ್ಟದಲ್ಲಿದೆ ಅಂದರೆ 'ಸಾಲ ಬೋನು' 'ಸಾಲ ವ್ಯಾಪಾರ' ಅಧಿಕವಾಗಿದ್ದು ಈ ಬೋನಿನಿಂದ ಶಾಶ್ವತವಾಗಿ ಹೊರಬರಲು ಸಾಧ್ಯವಿಲ್ಲವೆಂದು ಅವರು ಹೇಳಿದರು.

ಕೆಲವು ವಿಮರ್ಶಕರು ಅಂತರರಾಷ್ಟ್ರೀಯ ಪೈಪೋಟಿ ಎದುರಿಸುವ ಭಾರತದ ಧಾನ್ಯ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ. ಅನೇಕ ಅಧ್ಯಯನಗಳು ಭಾರತದ ಆಹಾರ ಧಾನ್ಯ ಉತ್ಪಾದನೆಯ ಅಂದಾಜನ್ನು ಇತರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಹೋಲಿಸಿ ಕೈಗೊಳ್ಳಲು ಪ್ರಯತ್ನಿಸಿವೆ. ಅವರು ಅದನ್ನು ಅಂತರ್‌ದೇಶೀಯ ಹೋಲಿಕೆಯನ್ನು ಪ್ರತಿ ಹೆಕ್ಟೇರು ಭೂಮಿಯ ಗೊಬ್ಬರಗಳ ಬಳಕೆ ಕೃಷಿ ಉತ್ಪಾದನಾ ದಕ್ಷತೆಯೊಂದಿಗೆ ಹೋಲಿಸಿ ಪರಿಶೀಲಿಸಿದ್ದಾರೆ.

ಅಮೇರಿಕಾದ ಉತ್ಪನ್ನಗಳಾದ ಬೇಳೆ ಕಾಳುಗಳು, ದ್ವಿದಳ ಧಾನ್ಯಗಳು, ಕಬ್ಬು ಮತ್ತು ಆಲೂಗಡ್ಡೆ ದರಗಳು ಭಾರತಕ್ಕಿಂತ ೨.೫, ೩, ೧೦೨ ಮತ್ತು ೨ ಕ್ರಮವಾಗಿ ಹೆಚ್ಚಿವೆ. ಆದರೆ ಅಮೇರಿಕಾ ಕೇವಲ ೪೩.೩ ಕೆಜಿ ಎನ್.ಪಿ.ಎಂ. ಪ್ರತಿ ಹೆಕ್ಟೇರಿಗೆ ಬಳಸಿದರೆ ಭಾರತ ೬೪.೧ ಕೆಜಿ ಬಳಸುತ್ತದೆ. ಹಾಗೆಯೇ, ಕೆನಡ, ಅರ್ಜೆಂಟೀನಾ, ಮೆಕ್ಸಿಕೋ ಮತ್ತು ಥೈಲೆಂಡ್‌ಗಳು ಹೆಚ್ಚು ಉತ್ಪನ್ನ ದರ ಹೊಂದಿದ್ದರೂ, ಭಾರತಕ್ಕೆ ಹೋಲಿಸಿದಾಗ ಕಡಿಮೆ ಪ್ರಮಾಣದ ಪೌಷ್ಟಿಕಾಂಶಗಳನ್ನು ಬಳಸುತ್ತಾರೆ."

ಹೀಗೆ ಭಾರತದ ಅಧ್ಯಯನದ ಪ್ರಕಾರ ಸಹಾಯಧನ ವಿಷಯದಲ್ಲಿ ಪೈಪೋಟಿಯುತ ಅನುಕೂಲತೆಯನ್ನು ಪಡೆಯುತ್ತಿಲ್ಲ. ಉರುಗ್ವೆ ಸುತ್ತಿನಲ್ಲಿ ಆಜ್ಞೆಯಾದಂತೆ ಸಹಾಯಧನದ ಇಳಿತಗಳು ಉಷ್ಣ ಬೆಳೆಗಳಾದ ಗೋಧಿ, ಎಣ್ಣೆ

ಬೀಜಗಳು, ಬೀಟ್ ರೂಟ್ ಮತ್ತು ಸಕ್ಕರೆ ಬೆಲೆಗಳನ್ನು ಹೆಚ್ಚಿಸುತ್ತದೆ ಎಂಬ ಅಂಶವನ್ನು ಪ್ರಮುಖವಾಗಿ ಗಮನಿಸಬೇಕಾಗಿದೆ.

ಭಾರತದ ಸಾಂಪ್ರದಾಯಿಕ ಕೃಷಿ ಬೆಳೆಗಳ ರಫ್ತು ಬೆಲೆಗಳು, ಭಾರತಕ್ಕೆ ತುಲಾನಾತ್ಮಕ ಅನುಕೂಲತೆಯನ್ನು ನೀಡಿದೆ. ಆದ್ದರಿಂದ ಉರುಗ್ವೆ ಸುತ್ತಿನ ಫಲಿತಾಂಶದಿಂದ ಪ್ರಭಾವಿತವಾಗುವುದಿಲ್ಲ. ಪ್ರಸ್ತುತದಲ್ಲಿ ಭಾರತ ಎಣ್ಣೆ ಬೀಜಗಳು ಮತ್ತು ಖಾದ್ಯತೈಲಗಳ ನಿವ್ವಳ ಆಮದುದಾರನಾಗಿದೆ. ಆದ್ದರಿಂದ ಈ ಸರಕುಗಳ ವ್ಯಾಪಾರದಲ್ಲಿ ಭಾರತದಲ್ಲಿ ಭಾರತ ಮತ್ತಷ್ಟು ಕೆಳಮಟ್ಟಕ್ಕೆ ಹೋಗುತ್ತದೆ.

ಡಂಕೆಲ್ ಪ್ರಸ್ತಾವನೆ ಮತ್ತು ಗ್ಯಾಟ್ ಉದಾರೀಕರಣ ನೀತಿಗಳಿಂದ ಭಾರತದ ಕೃಷಿಯ ಮೇಲಾಗುವ ಪರಿಣಾಮಗಳ ಬಗ್ಗೆ ರೈತ ಸಂಘಗಳಲ್ಲಿ ಭಿನ್ನಾಭಿಪ್ರಾಯವಿದೆ. ಶರದ್ ಜೋಶಿಯವರ ಪ್ರಕಾರ ಕಡಿಮೆ ಬೆಲೆ ಮತ್ತು ನಗರ ಪಕ್ಷಪಾತ ಕೃಷಿ ಸರಕುಗಳನ್ನು ಪ್ರಾದೇಶಿಕ ಅಥವಾ ರಾಷ್ಟ್ರೀಯ ಆಹಾರ ಕೊರತೆ ಪರಿಗಣಿಸದೆ, ರಫ್ತು ಮಾಡಲು ಅವಕಾಶ ನೀಡುವುದು, ಅದನ್ನು ಪರಿಹರಿಸುತ್ತದೆ. ಆದರೆ ಇದು ರಾಜ್ಯದ ಮಧ್ಯಸ್ಥಿಕೆಯಿಲ್ಲದೆ ಸಾಧ್ಯವಿಲ್ಲವೆಂದು ಅವರು ಒಪ್ಪಿಕೊಳ್ಳುತ್ತಾರೆ. ಇದರೊಂದಿಗೆ 'ಮಧ್ಯಮ ಸ್ತರದ ರೈತ' ಭಾರತದಲ್ಲಿ 'ವಿದೇಶೀಯರೊಂದಿಗೆ ಪೈಪೋಟಿ ನಡೆಸಲಾರ' ಎಂದು ಹೇಳುತ್ತಾರೆ. ಆದರೆ ನಂಜುಂಡಸ್ವಾಮಿ ಮತ್ತು ಮಹೇಂದ್ರ ಸಿಂಗ್ ಟಿಕಾಯತ್ ಗ್ಯಾಟ್‌ಗೆ ವಿರುದ್ಧವಾಗಿದ್ದರು. ಅವರ ಪ್ರಕಾರ ರೈತರು ಸರ್ಕಾರದ ಸಹಾಯಧನದಿಂದ ದೂರವಿಡಲ್ಪಟ್ಟರೆ, ಆಗ ಅವರು 'ವಿದೇಶೀಯರಿಂದ' ರಕ್ಷಣೆ ಬಯಸುತ್ತಾರೆ. ಅವರು ಜೋಶಿಯವರ ಪ್ರಮುಖ ಬೇಡಿಕೆಗಳಾದ ರಫ್ತು ಪರ, ಮುಕ್ತ ವ್ಯಾಪಾರ ನವ ರೈತ ಚಳುವಳಿಗಳಲ್ಲೇ ಈ ಕಾರ್ಯತಂತ್ರ ವರ್ಗಭೇದಕ್ಕೆ ಅವಕಾಶ ಮಾಡಿ ಕೊಡುತ್ತದೆ. ಅಂತಹ ನೀತಿಯಿಂದ ಅನುಕೂಲ ಪಡೆಯುವ ಶ್ರೀಮಂತ ರೈತರು ಮತ್ತು ಬಡರೈತರು ಯಾರಿಗೆ ಅದು ಕಾರ್ಮಿಕ ವರ್ಗೀಕರಣ ಎನಿಸುತ್ತದೋ ಅವರ ನಡುವೆ ಭಿನ್ನತೆ ಉಂಟುಮಾಡುತ್ತದೆಂದು ಟೀಕಿಸಿದ್ದಾರೆ.

೧೯೯೧ರಲ್ಲಿ ನರಸಿಂಹರಾವ್ ಸರ್ಕಾರ, ಆರ್ಥಿಕ ಉದಾರೀಕರಣದ ಧ್ಯೇಯ ವಚನದೊಂದಿಗೆ ಅಸ್ತಿತ್ವಕ್ಕೆ ಬಂದಿತು ಮತ್ತು ೧೯೯೩ರಲ್ಲಿ ಒಂದು ಹೊಸ ಆರ್ಥಿಕ ನೀತಿಯನ್ನು ಅಳವಡಿಸಿತು. ಇದು ಶರದ್ ಜೋಶಿ ಮತ್ತು ಇತರ ರೈತರ ಪ್ರತಿನಿಧಿಗಳು 'ಕೃಷಿ ರಹಿತ, ನೀತಿ ರಹಿತ, ತೀರ್ಮಾನ ರಹಿತ' ಎಂದು ಟೀಕಿಸಿದರು. ಅಂತಿಮವಾಗಿ ಶೇತ್ಕಾರೀ ಸಂಘಟನೆ ತನ್ನ ಹೋರಾಟಕ್ಕೆ ಪ್ರಣಾಳಿಕೆಯಾಗಿ ಈ ಕರಡನ್ನು ಅಳವಡಿಸಿಕೊಂಡಿತು. ಒಬ್ಬ ಪ್ರಸಿದ್ಧ ವಾಮಪಂಥದವರ ಪ್ರಕಾರ 'ಶ್ರೀಮಂತ ರೈತರು ಗೊಬ್ಬರ ಸಹಾಯಧನಗಳನ್ನು' ಒತ್ತಾಯಿಸುತ್ತಾರೆ ಎಂದಿದ್ದಾರೆ. ಶೇತ್ಕಾರಿ

ಸಂಘಟನೆ ಸ್ಪಷ್ಟವಾಗಿ ಸಹಾಯಧನಗಳನ್ನು ವಿರೋಧಿಸಿತು. ಆದರೆ ಕ.ರಾ.ರೈ.ಸಂ. ಈ ವಿಷಯದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಲಿಲ್ಲ ಮತ್ತು ಗೊಬ್ಬರ ಸಹಾಯಧನಗಳನ್ನು ಹೆಚ್ಚಿನ ಉತ್ಪಾದನಾ ವೆಚ್ಚಗಳಿಗಾಗಿ ರೈತರಿಗೆ ಪರಿಹಾರ ಧನ ನೀಡುವುದಾದರೆ ಹಿಂದಕ್ಕೆ ಪಡೆಯಬಹುದೆಂದು ಹೇಳಿತು. ಸಹಾಯಧನ ಹಿಂತೆಗೆದು ಕೊಳ್ಳುವ ಬಗ್ಗೆ ತೀವ್ರ ವಿರೋಧವು ಎಡಪಕ್ಷಗಳಾದ ಸಿ.ಪಿ.ಐ ಮತ್ತು ಸಿ.ಪಿ.ಐ.(ಎಂ) ಮತ್ತು ನಕ್ಸಲೀಯರ ಜನ ಸಮರ ಗುಂಪಿನಿಂದ ಕಂಡುಬಂದಿತ್ತು. ಸಮಾಜವಾದಿಗಳಿಂದ ಜನತಾ ದಳ ಮತ್ತು ಸಮಾಜವಾದಿ ಯುವ ಸಂಘಟನೆಗಳಾದ ಸಂಘರ್ಷ ವಾಹಿನಿ, ಸಹಾಯಧನ ಹಿಂತೆಗೆದುಕೊಳ್ಳುವುದನ್ನು ವಿರೋಧಿಸಿದವು ಮತ್ತು ಈ ಕಾರಣಕ್ಕಾಗಿ ರೈತರನ್ನು ಸಂಘಟಿಸಲು ಯತ್ನಿಸಿದವು. ಇದಕ್ಕೆ ಪ್ರತಿಯಾಗಿ, ಶೇತ್ಕಾರಿ ಸಂಘಟನೆ ಮತ್ತು ಕಿಸಾನ್ ನಿರ್ದೇಶಕರ ಸಮಿತಿಗಳು ಡಂಕೆಲ್ ಪರ ರ್‍ಯಾಲಿಗಳನ್ನು ನಡೆಸಿದವು ಇದು ಅವರು ಬಂಡವಾಳದಾರರ ಪರ ರೈತರಲ್ಲದೆ ಸಾಮ್ರಾಜ್ಯಶಾಹಿ ಏಜೆಂಟುಗಳೆಂಬ ಸಂದೇಶವನ್ನು ಉಂಟು ಮಾಡಿತು. ಮಾರ್ಚ್ ೩೧ರ ದೆಹಲಿ ರ್‍ಯಾಲಿಯಲ್ಲಿ, ಅವರು ಡಂಕೆಲ್ ಪ್ರಸ್ತಾವನೆಯನ್ನು "ರೈತರು ಸ್ವಾತಂತ್ರ್ಯಕ್ಕಾಗಿ" ಮತ್ತು "ಧನ್ಯವಾದ ಡಂಕೆಲ್" (ಡಂಕೆಲ್‌ಗೆ ಧನ್ಯವಾದ ಅವರ ಪ್ರಸ್ತಾವನೆಗಾಗಿ) ಎಂದು ವಿವರಿಸಿದರು. ಶರದ್ ಜೋಶಿ ಇದಕ್ಕೆ ಹೊಂದಿಕೊಂಡಂತೆ, ಸ್ವಾಮ್ಯದ ಸನದು ರೈತರನ್ನು ಬಹುರಾಷ್ಟ್ರೀಯ ಕಂಪೆನಿಗಳ ದಾಸನಾಗಿಸುವುದಿಲ್ಲವೆಂದು, ಒಂದು ವೇಳೆ ಹಾಗೆ ಆದರೂ, ಅದು ಪ್ರಸ್ತುತ ಭಾರತದ "ರಾಜ್ಯದ ಗುಲಾಮಗಿರಿ"ಗಿಂತ ಉತ್ತಮವೆಂದು ಹೇಳಿದರು.

ನಂಜುಂಡಸ್ವಾಮಿಯವರು ಅವರ ಪ್ರತಿರೂಪರಾದ ಮಹಾರಾಷ್ಟ್ರದ ಶರದ್ ಜೋಶಿಗೆ ವಿರುದ್ಧವಾಗಿದ್ದಾರೆ, ಅವರು ಡಂಕೆಲ್ ಪ್ರಸ್ತಾವನೆಯನ್ನು 'ರೈತ ವಿರೋಧಿ ಮತ್ತು ಕೃಷಿ ವಿರೋಧಿ' ಎಂದು ಕರೆದಿದ್ದಾರೆ. ಅವರು ವಿಶ್ವ ಬ್ಯಾಂಕು ಮತ್ತು ಇತರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಮತ್ತು ೧೯೯೧ರಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಆರ್ಥಿಕ ನೀತಿಗಳು ರಾಷ್ಟ್ರದ ಕೃಷಿಗೆ ದಂಡನೆ ನೀಡಿವೆ ಎಂದು ಕಾಳಜಿ ವ್ಯಕ್ತಪಡಿಸಿದ್ದಾರೆ. ಕೃಷಿ ಕ್ಷೇತ್ರಕ್ಕೆ ಕೊಡಲಾದ ಸಹಾಯಧನಗಳ ರದ್ಧತಿ, ಕೃಷಿ ಸರಕುಗಳ ಹಾಗೂ ಆಹಾರ ವಸ್ತುಗಳ ವಿದೇಶದಿಂದ ಮುಕ್ತ ಆಮದು, ಬೀಜಗಳು ಮತ್ತು ಸಸಿಗಳು ಇತ್ಯಾದಿಗಳ ಸ್ವಾಮ್ಯದ ಸನದಿಗೆ ಅನುಮತಿ ನೀಡುವುದು ಇದೇ ಮುಂತಾದುವು ಸರಾಸರಿ ರೈತನಿಗೆ ಅನಿರೀಕ್ಷಿತ ತೊಂದರೆ ಉಂಟು ಮಾಡುತ್ತವೆ. ಆದ್ದರಿಂದ ಅವರು ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ನಡೆದ ರೈತರ ಅಧಿಕ ಪ್ರಮಾಣದ ಆತ್ಮಹತ್ಯೆಗಳಿಗೆ ಈ ಎಲ್ಲಾ ಜಾಗತಿಕ ಅಂಶಗಳು ಕಾರಣವಾಗಿದೆ ಎಂದು ಸಮರ್ಥಿಸಿದರು. ಅವರು ನೀಡಿದ ಬದಲಿ ಸ್ಥಿತಿ ಎಂದರೆ, ರೈತರು ಸಾಂಪ್ರದಾಯಿಕ ಸಾಗುವಳಿ ವಿಧಾನಕ್ಕೆ ಹಿಂತಿರುಗಬೇಕೆಂದು ಹೇಳಿದರು. ಹಾಗೂ ಹೆಚ್ಚುತ್ತಿರುವ ಜನ

ಸಂಖ್ಯೆಗೆ ಆಹಾರ ಒದಗಿಸುವ ಮತ್ತು ಬೆಳೆ ಬೆಳೆಯುವ ಅಪಾಯದಿಂದ ಕೂಡಿದ ಆಧುನಿಕ ವಿಧಾನಗಳನ್ನು ನಿವಾರಿಸಲು ಇರುವ ಮಾರ್ಗ ಇದೊಂದೇ, ಎಂದಿದ್ದಾರೆ.

ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತು ಕ.ರಾ.ರೈ.ಸಂ.

ಸಸ್ಯಗಳು ಮತ್ತು ಪ್ರಾಣಿಗಳನ್ನು ಒಳಗೊಂಡಂತೆ ಎಲ್ಲಾ ಜೈವಿಕ ಪ್ರಕಾರಗಳ ಸ್ವಾಮ್ಯದ ಸನದು, ಜ್ಞಾನದ ಖಾಸಗೀಕರಣ, ಸಾಕ್ಷ್ಯಗಳ ಹೊರೆ, ಬೀಜಗಳು ಮತ್ತು ಸಸ್ಯಗಳು ಹಾಗೂ ವಂಶವಾಹಕಗಳ (ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಗುಣಗಳನ್ನು ವರ್ಗಾಯಿಸುವ) ಏಕಸ್ವಾಮ್ಯ ಸಾಧಿಸುವುದು, ಡಂಕೆಲ್ ಪ್ರಸ್ತಾವನೆಯ ಭೀಕರ ಭಾಗವಾಗಿದೆ. ಜೈವಿಕ ಗೊಬ್ಬರ ಮತ್ತು ಜೈವಿಕ ಕೀಟನಾಶಕಗಳ ಸಾಂಪ್ರದಾಯಿಕ ಸಾಗುವಳಿಯನ್ನು ಪುರಾತನ ಕಾಲದಿಂದಲೂ ಬಳಸಲಾಗುತ್ತಿದೆ. ಇನ್ನು ಕೆಲವೇ ಅವಧಿಯಲ್ಲಿ ಅವುಗಳನ್ನು ಸ್ವಾಮ್ಯದ ಸನದಿನ ಪಟ್ಟಿಯಲ್ಲಿ ಸೇರಿಸಲಾಗುತ್ತದೆ. ಏಕೆಂದರೆ ಡಂಕೆಲ್ ಪ್ರಸ್ತಾವಣೆ ಪೇಟೆಂಟ್ ಕಾಯ್ದೆಯಲ್ಲಿ ಸೂಕ್ಷ್ಮ ಜೈವಿಕಗಳನ್ನು ಸೇರಿಸುವಂತೆ ಒತ್ತಾಯಿಸುತ್ತಿದೆ. ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳ ಮೇಲಿನ ಡಂಕೆಲ್ ಪ್ರಸ್ತಾವನೆಗಳು ಭಾರತದಲ್ಲಿ ಕೃಷಿ ಅಭಿವೃದ್ಧಿಗೆ ಅಪಾಯ ಉಂಟುಮಾಡುತ್ತವೆ. ಅದು ಭಾರತದ ೧೯೭೦ರ ಪೇಟೆಂಟ್ ಕಾಯ್ದೆಯನ್ನು ಬದಲಾಯಿಸಲು ಒತ್ತಾಯಿಸಿದೆ, ಅದರ ಮೂಲಕ ಜೈವಿಕ ಪ್ರಕಾರಗಳ ಪೇಟೆಂಟ್ ಮಾಡುವುದು ಮತ್ತೆ ಪೇಟೆಂಟನ್ನು ೨೦ ವರ್ಷಕ್ಕೆ ವಿಸ್ತರಿಸುವುದು ಭಾರತಕ್ಕೆ ಪ್ರತಿಕೂಲವಾಗಿವೆ. ಡಂಕೆಲ್ ಪ್ರಸ್ತಾವನೆ ಪೇಟೆಂಟ್ ರಕ್ಷಣೆ ಕುರಿತಂತೆ ಮೂರು ಆಯ್ಕೆಗಳನ್ನು ನೀಡಿತು. ಮೊದಲ ಅವಕಾಶದ ಪ್ರಕಾರ, ಏನನ್ನೂ ಬೇಕಾದರೂ ಪೇಟೆಂಟ್ ಮಾಡಬಹುದು. ಎರಡನೆ ಅವಕಾಶವೆಂದರೆ, ಇದು ಸಸ್ಯಗಳ ಪೇಟೆಂಟನ್ನು ಕಡ್ಡಾಯಗೊಳಿಸಲಿಲ್ಲ. ಅದು ಸಸ್ಯ ಸಂಸ್ಕರಣ ಶಾಸ್ತ್ರಜ್ಞರ ಹಕ್ಕುಗಳನ್ನು ಕಡ್ಡಾಯಗೊಳಿಸಿತು.

ಮೂರನೇ ಅವಕಾಶ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳ ಹಿತಾಸಕ್ತಿಗಳನ್ನು ರಕ್ಷಿಸಿತು. ಅಮೇರಿಕಾ ಮೊದಲ ಅವಕಾಶದ ಬಗ್ಗೆ ಆಸಕ್ತಿ ಹೊಂದಿದೆ ಯುರೋಪಿನ ಸಂಘಟನೆ ಎರಡನೆ ಅವಕಾಶಕ್ಕೆ ಬದ್ಧವಾಗಿರಲು ಬಯಸಿದೆ. ಈ ಎರಡೂ ಅವಕಾಶಗಳು ಭಾರಕ್ಕೆ ಪ್ರತಿಕೂಲವಾಗಿದೆ.

ಸಸ್ಯ ಸಂಶೋಧಕರ ಹಕ್ಕುಗಳ ರೂಪದಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳ ರಕ್ಷಣೆಯ ವಿಸ್ತರಣೆ ಬೀಜಗಳ ಬೆಲೆ ಹೆಚ್ಚಳಕ್ಕೆ ಕೃಷಿಯ ಮೇಲೆ ಬಹುರಾಷ್ಟ್ರೀಯ ಕಂಪೆನಿಗಳ ಪ್ರಾಬಲ್ಯ, ಹೊಂದಾಣಿಕೆಯ ಸಂಶೋಧನಾ ನಿಯಂತ್ರಣದಿಂದಾಗಿ ಹೊಸ ತಳಿಗಳ ನಿಧಾನವಾದ ವಿಸ್ತರಣೆ, ಸಾರ್ವಜನಿಕ ವಲಯದ ಸಂಶೋಧನಾ ದುರ್ಬಲತೆ ಮತ್ತು ಜೈವಿಕ ವಿಕಾಸದ ಸವೆತಕ್ಕೆ ಅವಕಾಶ ಮಾಡಿಕೊಡುತ್ತದೆ.

ಹೊಸ ಒಪ್ಪಂದದಿಂದ ಭಾರತದ ಕೃಷಿ ಭೀಕರವಾದ ಆಘಾತವನ್ನು ಎದುರಿಸುತ್ತಿದೆ. ೬೦ರ ದಶಕದಿಂದ, ವಿಶ್ವ ಬ್ಯಾಂಕು, ರಾಕ್ ಫೆಲ್ಲರ್, ಫೋರ್ಡ್ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಅಡಿಯಲ್ಲಿ ಆರಂಭಗೊಂಡ ಹಸಿರು ಕ್ರಾಂತಿ, ಭಾರತದ ರೈತರನ್ನು ಕೃಷಿ ವ್ಯಾಪಾರ ಬಹುರಾಷ್ಟ್ರೀಯು ಕಂಪೆನಿಗಳ ಅನುಬಂಧವನ್ನಾಗಿಸಿತು. ಇದನ್ನು ವಿಶಾಲವಾದ ಮೂಲಭೂತ ಸೌಕರ್ಯಗಳನ್ನು ಸಾರ್ವಜನಿಕ ಹಾಗೂ ಸಹಕಾರಿ ವಲಯಗಳಲ್ಲಿ ಸಂಶೋಧನಾ ಸಂಸ್ಥೆಗಳು, ಮಾರುಕಟ್ಟೆ ಹಾಗೂ ಹಣಕಾಸಿನ ಸೌಲಭ್ಯಗಳನ್ನು ಸಮರ್ಪಕವಾಗಿ ಸಾಮ್ರಾಜ್ಯಶಾಹಿ ಮೇಲ್ವಿಚಾರಣೆಯಲ್ಲಿ ಸ್ಥಾಪಿತವಾದ ಆಂತರಿಕ ಸಂಸ್ಥೆಗಳೊಂದಿಗೆ ಸಂಯೋಜಿಸುವ ಮೂಲಕ ಪೂರ್ಣಗೊಳಿಸಲಾಯಿತು.

ಪ್ರಸ್ತುತದಲ್ಲಿ ವಿಶ್ವದಲ್ಲಿ ಬೀಜ ಕೈಗಾರಿಕೆ ಅತ್ಯಂತ ಲಾಭದಾಯಕವಾದ ಉದ್ದಿಮೆ ಎನಿಸಿದೆ. ಅದು ಪ್ರತಿ ವರ್ಷ ೭.೫ ಬಿಲಿಯನ್ ಡಾಲರ್‌ಗಳಷ್ಟು ಮಾರುಕಟ್ಟೆ ವ್ಯವಹಾರ ಹೊಂದಿದೆ. ಆದ್ದರಿಂದ ಬಹುರಾಷ್ಟ್ರೀಯ ಕಂಪೆನಿಗಳು ಡಂಕೆಲ್ ಪ್ರಸ್ತಾವನೆ ಅಡಿಯಲ್ಲಿ ಬೀಜ ಕೈಗಾರಿಕೆಯ ಮೇಲೆ ಪೂರ್ಣ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಪ್ರಣಾಳಿಕೆ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿವೆ. ಆದರೆ ಅದು ಕೇವಲ ಬೀಜ ಕೈಗಾರಿಕೆಗೆ ಮಾತ್ರವಲ್ಲ ಆದರೆ ಆಹಾರ ಸರಪಳಿ ಪೂರ್ಣವಾಗಿ. ಮಾನ್‌ಸ್ಯಾಂಟೋದ ರಾಬರ್ಟ್ ಫಾರ್‌ಲೆ ಹೇಳುವಂತೆ "ನೀವು ಸಾಧಿಸ ಹೊರಟಿರುವುದು ಕೇವಲ ಬೀಜ ಕೈಗಾರಿಕೆಗಳ ಕ್ರೋಢೀಕರಣ ಮಾತ್ರವಲ್ಲ, ಅದು ಪೂರ್ಣವಾಗಿ ಆಹಾರ ಸರಪಳಿಯ ಕ್ರೋಢೀಕರಣವಾಗಿದೆ."

ವಂದನಾ ಶಿವ ವಿಶ್ಲೇಷಿಸಿರುವಂತೆ, ಬಹುರಾಷ್ಟ್ರೀಯ ಕಂಪೆನಿಗಳ ಹಕ್ಕುಗಳು ಪ್ರಬಲವಾದಷ್ಟು, ರೈತರ ಹಕ್ಕುಗಳು ದುರ್ಬಲವಾಗುತ್ತವೆ. ಏಕೆಂದರೆ ರೈತರ ಹಕ್ಕುಗಳ ವಿನಾಶ ಬಹುರಾಷ್ಟ್ರೀಯ ಕಂಪೆನಿಗಳ ಏಕಸ್ವಾಮ್ಯವನ್ನು ಸೃಷ್ಟಿಸುತ್ತದೆ. ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳು ಗ್ಯಾಟ್ ಮತ್ತು ವಿಶ್ವವ್ಯಾಪಾರ ಸಂಘಟನೆಯ ಬೀಜ ಪೂರೈಕೆಯ ಮೇಲೆ ಏಕಸ್ವಾಮ್ಯ ನಿಯಂತ್ರಣ ಸಾಧಿಸಲು ಇರುವ ಒಂದು ಸಾಧನವಾಗಿತ್ತು.

ವಂದನಾಶಿವ ಅವರ ಪ್ರಕಾರ, ಭಾರತದಲ್ಲಿ ಶೇಕಡಾ ೭೦ಕ್ಕಿಂತ ಹೆಚ್ಚು ಭಾಗ ಬೀಜ ಪೂರೈಕೆ ರೈತರ ಬೀಜ ಪೂರೈಕೆಯನ್ನೇ ಅವಲಂಭಿಸಿದೆ, ಕೈಗಾರಿಕಾ ಪ್ರಧಾನ ರಾಷ್ಟ್ರಗಳಲ್ಲಿ ಹೆಚ್ಚಾಗಿ ರೈತರು ಬೀಜ ಕೈಗಾರಿಕೆಗಳನ್ನೇ ಅವಲಂಭಿಸಿದ್ದಾರೆ. ಪೇಟೆಂಟ್ ಕಾಯ್ದೆಗಳು ಸಂಕರಣ ಶಾಸ್ತ್ರಜ್ಞರಾಗಿ ಅಥವಾ ಉತ್ಪಾದಕ ವರ್ಗದ ಸದಸ್ಯರಾಗಿ ಸಸ್ಯ ಸರಕುಗಳನ್ನು ಮುಕ್ತವಾಗಿ ಉಳಿಸುವ ಮತ್ತು ವಿನಿಮಯ

ಮಾಡುವ ಪರಿಸ್ಥಿತಿಯಿಂದ ರೈತರನ್ನು ಪೂರ್ಣ ಸ್ವಾತಂತ್ರ್ಯ ರಹಿತ ಪರಿಸ್ಥಿತಿಗೆ ತಳ್ಳಿದೆ.

ಅಸಾದಿ ಉಲ್ಲೇಖಿಸಿರುವಂತೆ, ಕ.ರಾ.ರೈ.ಸಂ. ಕೇಂದ್ರ ಸರ್ಕಾರ ಗ್ಯಾಟ್ ಒಪ್ಪಂದವನ್ನು ಒಪ್ಪಿಕೊಂಡಾಗಿನಿಂದ, "ಕ.ರಾ.ರೈ.ಸಂ. ಪವಾಡ ಸದೃಶ ಬೀಜಗಳ ದಂತಕಥೆಯ ಮೂಲಕ ಬೀಜಗಳ ವಸಾಹತುಕರಣ, ಜೈವಿಕ ವೈವಿಧ್ಯತೆಯ ನಾಶ, ಮತ್ತು ಹಸಿರು ಕ್ರಾಂತಿ ಹಾಗೂ ಏಕ ಸಂಸ್ಕೃತಿಯ ಮೂಲಕ ಪರಿಸರ ಸ್ಥಿಮಿತತೆಯ ನಾಶ, ಮಣ್ಣಿನ ವಿಷ ಮತ್ತು ಹೆಚ್ಚಾದ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಸವೆತ ಮತ್ತು ಇತರ ಪರಿಸರ ವಿಷಯಗಳೊಂದಿಗೆ ಅಂದರೆ ನೈಸರ್ಗಿಕ ಸಂಪನ್ಮೂಲಗಳ ಅವ್ಯವಸ್ಥಿತ ಬಳಕೆ ಮುಂತಾದವುಗಳ ವಿರುದ್ಧ ಹೋರಾಡುತ್ತಿತ್ತು."

ಭಾರತ ಸರ್ಕಾರ ಹೊಸ ಬೌದ್ಧಿಕ ಆಸ್ತಿ ಹಕ್ಕು ಕಾಯ್ದೆಯನ್ನು ಅಮೆರಿಕಾ ಸರ್ಕಾರ ಮತ್ತು ವಿಶ್ವ ವ್ಯಾಪಾರ ಸಂಘದ ಒತ್ತಡದಿಂದ ಜಾರಿಗೆ ತಂದಿತು. ನಾರ್ಮನ್ ಬೋರ್‌ಲಾಗ್, ಹಸಿರು ಕ್ರಾಂತಿ ಪ್ರಸಿದ್ಧಿಯ ವಿಜ್ಞಾನಿ ಹಾಗೂ ನೊಬೆಲ್ ಶಾಂತಿ ಪ್ರಶಸ್ತಿ ಪಡೆದವರು, ಈ ಕಾಯ್ದೆ ವಿರುದ್ಧ ತಮ್ಮ ಕಳಕಳಿ ವ್ಯಕ್ತಪಡಿಸಿದರು ಹಾಗೂ ಸಸ್ಯ ಜೈವಿಕ ಸಂಪನ್ಮೂಲಗಳ ಮತ್ತು ಬೀಜಗಳ, ಸಸ್ಯಗಳ ಪೇಟೆಂಟ್ ವಿರುದ್ಧ ಕಾಳಜಿ ವ್ಯಕ್ತಪಡಿಸಿದರು. ಪ್ರೊಫೆಸರ್ ಬೋರ್ ಲಾಗ್, "ನಾವು ಪೇಟೆಂಟಿಂಗ್ ವಿರುದ್ಧ ಹೋರಾಡಿದೆವು. ನಾನು ಮತ್ತು ದಿವಂಗತ ಗ್ಲೆನ್ ಆಂಡರ್‌ಸನ್ (ಅಂತರರಾಷ್ಟ್ರೀಯ ಗೋಧಿ ಮತ್ತು ಮೆಕ್ಕೆ ಜೋಳದ ಸಂಶೋಧನಾ ಸಂಸ್ಥೆಯ ಮುಖ್ಯಸ್ಥ) ಭಾರತ ಮತ್ತು ಇತರ ವೇದಿಕೆಗಳೊಂದಿಗೆ ಪೇಟೆಂಟ್ ಮಾಡುವುದರ ವಿರುದ್ಧ ವಿರೋಧ ದಾಖಲಿಸ ತೊಡಗಿದೆವು ಹಾಗೂ ಸದಾ ಸೂಕ್ಷ್ಮ ಜೈವಿಕಕಣಗಳ ಮುಕ್ತ ವಿನಿಮಯದ ಪರವಾಗಿದ್ದೆವು." ಎಂದು ಹೇಳಿದರು.

ಶ್ರೀ ಗ್ಲಿಕ್‌ಮನ್ ಕೂಡ ಉದಾರೀಕರಣ ರೈತರು ಬೀಜಗಳಿಗಾಗಿ ಬಹುರಾಷ್ಟ್ರೀಯ ಕಂಪೆನಿಗಳ ಮೇಲೆ ಅವಲಂಬಿಸುವಂತೆ ಮಾಡುತ್ತದೆ. ಅದು ಕೃಷಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಏಕೆಂದರೆ ಬಹುರಾಷ್ಟ್ರೀಯ ಕಂಪೆನಿಗಳ ಮೇಲಿನ ಅವಲಂಬನೆ ಜನರ ಆಹಾರ ಪದ್ಧತಿಯನ್ನು ಅಕ್ಕಿಯಿಂದ ಗೋಧಿಗೆ, ಧಾನ್ಯದಿಂದ ಕೋಳಿಗೆ ಮತ್ತು ಜೈವಿಕ ವಸ್ತುಗಳಿಗೆ ಬದಲಾಯಿಸುತ್ತದೆ ಎಂದು ಒತ್ತುಕೊಟ್ಟು ಹೇಳಿದರು. ಅಂತಿಮವಾಗಿ ಅದು ಬೆಳೆ ಪದ್ಧತಿಯನ್ನೇ ಬದಲಾಗುತ್ತಿರುವ ಅನುಭೋಗಿ ಅಭಿಲಾಷೆಗೆ ತಕ್ಕಂತೆ ಬದಲಾಯಿಸುತ್ತದೆ.

ಕ.ರಾ.ರೈ.ಸಂ. ಕಾರ್ಗಿಲ್ ಕಂಪೆನಿಯನ್ನು ಆಕ್ರಮಣ ಮಾಡಿತು. ಈ

ಕಂಪೆನಿಯು ಎಲ್ಲಾ ಅಧಿಕಾರಿಗಳು ಅಮೆರಿಕಾ ಸರ್ಕಾರಕ್ಕೆ ಹಿಂದೆ ಸಲಹೆಗಾರರಾಗಿದ್ದರಿಂದ ಮತ್ತು ಅವರಲ್ಲಿ ಅನೇಕರು ಗ್ಯಾಟ್ ಮತ್ತು ಕಾರ್ಗಿಲ್ ಕಂಪೆನಿಯಲ್ಲಿ ಏಕಕಾಲಕ್ಕೆ ಕಾರ್ಯನಿರ್ವಹಿಸುತ್ತಿದ್ದರಿಂದ, ಅವರ ಸ್ವಾಮಿನಿಷ್ಠೆ ಬಹುರಾಷ್ಟ್ರೀಯ ಕಂಪೆನಿಗೆ ಇರಬೇಕೆಂಬುದು ನಿಶ್ಚಿತವಾಗಿತ್ತು. ಹಾಗೆಯೇ, ಕಾರ್ಗಿಲ್ ಕಂಪೆನಿಯ ಕೆಲವು ಬರಹಗಳು ಕ.ರಾ.ರೈ.ಸಂ.ದ ತೀವ್ರಗಾಮಿಗಳು ಈ ಕಂಪೆನಿಯನ್ನು ಲೂಟಿ ಮಾಡಲು ಪ್ರೇರೇಪಿಸಿದವು. ಹೇಗೆಂದರೆ, "ಬೀಜವನ್ನು ನಿಯಂತ್ರಿಸುವವನು, ರೈತರನ್ನು ನಿಯಂತ್ರಿಸಬಹುದು" ಮತ್ತು "ಆಹಾರ ಧಾನ್ಯಗಳ ವ್ಯಾಪಾರವನ್ನು ನಿಯಂತ್ರಿಸುವವನು ರಾಷ್ಟ್ರವನ್ನು ನಿಯಂತ್ರಿಸಬಹುದು" ಇತ್ಯಾದಿ. ಇದು ರೈತರಲ್ಲಿ ಭೀತಿಯನ್ನು ಉಂಟು ಮಾಡಿತು. ಒಂದೆಡೆ ಭಾರತೀಯ ಕೃಷಿ ತನ್ನ ಎಲ್ಲಾ ಸಾಂಪ್ರದಾಯಿಕ ಬೀಜಗಳನ್ನು ಕಳೆದುಕೊಳ್ಳುತ್ತಿದೆ. ಮತ್ತೊಂದೆಡೆ, ಭಾರತೀಯ ಕೃಷಿ, ಕೃಷಿ ವ್ಯಾಪಾರೀ ಬಹುರಾಷ್ಟ್ರೀಯ ಕಂಪೆನಿಗಳ ಮುಂದಾಳ್ತನಕ್ಕೆ ಒಳಪಡಿಸುತ್ತದೆ. ಅಂತಿಮವಾಗಿ ಇದು ಕಾರ್ಗಿಲ್ ಕಂಪೆನಿಯನ್ನು ಲೂಟಿ ಮಾಡಲು ಅವಕಾಶ ನೀಡಿತು. ಕ.ರಾ.ರೈ.ಸಂ. ಕಾರ್ಗಿಲ್ ಕಂಪೆನಿಯನ್ನೇ ಆಕ್ರಮಣ ಮಾಡಿತು, ಏಕೆಂದರೆ ಉತ್ತರ ಕರ್ನಾಟಕದಲ್ಲಿ ಅದು ಸೂರ್ಯಕಾಂತಿ ಬೀಜಗಳನ್ನು ವಿತರಿಸಿತು, ರೈತರು ಅದನ್ನು ಬಿತ್ತನೆ ಮಾಡಿದರು ಮತ್ತು ಉತ್ತಮ ಫಸಲು ಪಡೆದರು, ಆದರೆ ಬೀಜಗಳನ್ನು ಕಂಪೆನಿಗೆ ಮಾರಬೇಕೆಂದು ಅವರಿಗೆ ಆದೇಶ ನೀಡಲಾಯಿತು. ಆದ್ದರಿಂದ ರೈತರು ಬೀಜ ಉತ್ಪಾದಿಸುವ ಮತ್ತು ಮಾರುವ ಹಕ್ಕನ್ನು ಕಳೆದುಕೊಂಡರು, ಇದು ಪ್ರತಿ ವರ್ಷ ರೈತರು ಬೀಜಗಳನ್ನು ಕಾರ್ಗಿಲ್ ಕಂಪೆನಿಯಿಂದಲೇ ಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಉಂಟು ಮಾಡಿತು. ಆಗ ಅವರು ತಾವು ತಮ್ಮ ಹಕ್ಕುಗಳನ್ನು ಕಳೆದುಕೊಂಡು ಬೀಜಗಳಿಗಾಗಿ ಬಹುರಾಷ್ಟ್ರೀಯ ಕಂಪೆನಿಯನ್ನೇ ಅವಲಂಬಿಸಬೇಕೆಂದು ಭಾವಿಸಿದರು. ಕ.ರಾ.ರೈ.ಸಂ. ಭಾರತದಂತಹ ಜನ ಭರಿತ ರಾಷ್ಟ್ರದಲ್ಲಿ ಹೇಗೆ ಅದನ್ನು ಜಾರಿಗೆ ತರಲಾಯಿತೆಂದು ರಾಜ್ಯವನ್ನು ಪ್ರಶ್ನಿಸಿತು.

೧೯೮೦ರಲ್ಲಿ ಪ್ರಾರಂಭವಾದಾಗಿನಿಂದ ೧೯೯೨-೯೩ರವರೆಗೆ, ಕ.ರಾ.ರೈ.ಸಂ. ಬಹುರಾಷ್ಟ್ರೀಯ ಕಂಪೆನಿಗಳ ಬಗ್ಗೆ ಸೈದ್ಧಾಂತಿಕವಾಗಿ ಚರ್ಚಿಸಿತು ಮತ್ತು ಸ್ವದೇಶೀ ಕೃಷಿ ಬೆಳೆಗಳ ಮೇಲೆ ವಿದೇಶೀ ನೆರವಿನ ಪರಿಣಾಮಗಳ ಬಗ್ಗೆ ಚರ್ಚಿಸಿತು. ಹೀಗಿದ್ದರೂ ಪೇಟೆಂಟ್ ಆಳ್ವಿಕೆಯ ಬಗ್ಗೆ ಯಾವುದೇ ತೀವ್ರ ಕ್ರಮ ತೆಗೆದುಕೊಳ್ಳಲಿಲ್ಲ. ೧೯೮೬ರಲ್ಲಿ ಆಸಾದಿ ಉಲ್ಲೇಖಿಸಿರುವಂತೆ, ಮಹಾರಾಷ್ಟ್ರದ ಹೈ ಬ್ರೀಡ್ ಬೀಜ ಕಂಪೆನಿ ಒಪ್ಪಂದದ ರೈತರಿಗೆ "ಬೆಳೆಗಾರ ಕಂಪೆನಿ ಪೂರೈಸುವ ಬೀಜವನ್ನು ಹೊರತು ಪಡಿಸಿ ಇತರ ಯಾವುದೇ ಬೀಜ ಬಳಸಬಾರದು ಮತ್ತು ವರ್ಗಾಯಿಸಲು ಬರುವುದಿಲ್ಲ ಅಥವಾ ಹಿಂದಕ್ಕೆ ಕೊಡಲು ಸಾಧ್ಯವಿಲ್ಲ ಮತ್ತು ಯಾವ ಋತುವಿನಲ್ಲಿ ಅದನ್ನು ಬಳಸಲಾಗಿದೆಯೋ ಆಗಲೇ ಅದನ್ನು ಪೇಟೆಂಟ್ ಮಾಡಬೇಕು." ಇದನ್ನು ಒಪ್ಪುವಂತೆ

ತಾಕೀತು ಮಾಡಿತು. ಕ.ರಾ.ರೈ.ಸಂ. ತನ್ನ ಚಳುವಳಿಗೆ ಇದನ್ನು ಆಧಾರವಾಗಿ ಅಳವಡಿಸಿಕೊಂಡಿತು.

ಮೊಟ್ಟ ಮೊದಲ ಬಾರಿಗೆ, ಕೇಂದ್ರ ಸರ್ಕಾರ ೧೯೯೧ರಲ್ಲಿ ಕೃಷಿಯ ರಸಗೊಬ್ಬರದ ಸಹಾಯಧನವನ್ನು ಹಿಂದಕ್ಕೆ ತೆಗೆದು ಕೊಂಡಿತು. ಕ.ರಾ.ರೈ.ಸಂ. ಹೋರಾಟಗಳ ಮೂಲಕ ಡಂಕೆಲ್ ವಿರೋಧವಾದ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತು. ಅಲ್ಲದೆ ಅದು ಡಂಕೆಲ್ ಪ್ರಸ್ತಾವನೆಗಳನ್ನು ಹಲವು ರೀತಿಯಲ್ಲಿ ಆರೋಪಿಸಿತು. ಮೊದಲನೆಯದಾಗಿ, ಸಹಾಯಧನವನ್ನು ಹಿಂದಕ್ಕೆ ಪಡೆಯುವುದು, ರಸಗೊಬ್ಬರಗಳ ಬೆಲೆಯನ್ನು ಮತ್ತು ಪರೋಕ್ಷವಾಗಿ ಆಹಾರ ಧಾನ್ಯಗಳ ಬೆಲೆಗಳನ್ನು ಹೆಚ್ಚಿಸುತ್ತದೆ. ಎರಡನೆಯದಾಗಿ, ತೃತೀಯ ಜಗತ್ತಿನ ರಾಷ್ಟ್ರಗಳನ್ನು ಅಧೀನತೆಯ ವಿಷವೃತ್ತದಲ್ಲಿ ಸಿಲುಕಿಸಲು ನೆರವು ಮತ್ತು ಸಾಲಗಳ ಗಂಟನ್ನು ದುರುಪಯೋಗಮಾಡಿ ಕೊಳ್ಳುವುದು. ಕೊನೆಯದಾಗಿ, ಭಾರತದಲ್ಲಿ ಕೃಷಿಗೆ ನೀಡಿರುವ ಸಹಾಯಧನ ತುಲನಾತ್ಮಕವಾಗಿ ಬಹಳ ಕಡಿಮೆ ಎಂದು ಅದು ವಾದಿಸಿತು.

ಅದೇ ವೇಳೆಗೆ ಕ.ರಾ.ರೈ.ಸಂ., ಕೇಂದ್ರ ಸಂಸ್ಥೆಗಳನ್ನು ಹಾಗೂ ಹಲವು ಬೌದ್ಧಿಕ ಸಂಸ್ಥೆಗಳನ್ನು ಸಂಪರ್ಕಿಸಿತು. (ಡಂಕೆಲ್ ಪ್ರಸ್ತಾವನೆಗಳನ್ನು ಆಗ ವಿರೋಧಿಸುತ್ತಿದ್ದರು) ಇದು ಕರ್ನಾಟಕದಲ್ಲಿ ರೈತ ಚಳುವಳಿಗೆ ಹೊಸ ಬೆಂಬಲವನ್ನು ನೀಡಿತು. ಅವರಲ್ಲಿ ಪ್ರಮುಖ ಚಿಂತಕರಾದ ತೃತೀಯ ಜಗತ್ತಿನ ಜಾಲದ ವಂದನಾಶಿವ, ವಂಶವಾಹಿ ಪ್ರಣಾಳಿಕೆಯ ಡಾ ॥ ಸುಮನ್ ಸಹಾಯ್, ನವಧಾನ್ಯದ ಡಾ ॥ ವನಜ ರಾಮ್ ಪ್ರಸಾದ್, ಪೇಟೆಂಟ್ ಕಾಯ್ದೆ ಮೇಲಿನ ರಾಷ್ಟ್ರೀಯ ಕಾರ್ಯ ತಂಡದ ಬಿ. ಕೆ. ಕೇಯ್ಲು, ಕ.ರಾ.ರೈ.ಸಂ. ತೃತೀಯ ಜಗತ್ತಿನ ಜಾಲದ ಸಂಯೋಗದೊಂದಿಗೆ ೧೯೯೨ರ ಫೆಬ್ರವರಿಯಲ್ಲಿ. "ಸಣ್ಣ ರೈತರ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಡಂಕೆಲ್ ಪ್ರಸ್ತಾವನೆಯ ಮುಷ್ಠಿಯಿಂದ ರಕ್ಷಿಸಲು" ಒಂದು ಕಾರ್ಯತಂತ್ರ ಯೋಜನೆ ತಯಾರಿಸಲು ಒಂದು ಚರ್ಚಾ ಕೂಟವನ್ನು ವ್ಯವಸ್ಥೆಗೊಳಿಸಿತು.

ರಾಷ್ಟ್ರ ವ್ಯಾಪ್ತಿ 'ಬೀಜ ಸತ್ಯಾಗ್ರಹ' ತೀರ್ಮಾನವನ್ನು ೧೯೯೨ರ ಅಕ್ಟೋಬರ್‌ನಲ್ಲಿ ಹೊಸಪೇಟೆಯಲ್ಲಿ ನಡೆದ ರ್‍ಯಾಲಿಯಲ್ಲಿ ಕ.ರಾ.ರೈ.ಸಂ. ತೆಗೆದುಕೊಂಡಿತು. ಒಂದು ತಿಂಗಳ ನಂತರ ಅದು ಡಂಕೆಲ್ ಪ್ರಸ್ತಾವನೆ ಮೇಲೆ ಐದು ತೀರ್ಮಾನಗಳನ್ನು ಕೈಗೊಂಡಿತು. ಅವುಗಳೆಂದರೆ :

೧) ನಿರ್ಧಾರ ಕೈಗೊಳ್ಳುವ ಮೊದಲು ಸರ್ಕಾರ ರೈತ ಪ್ರತಿನಿಧಿಗಳನ್ನು ಸಂಪರ್ಕಿಸಬೇಕು.

೨) ಡಂಕೆಲ್ ಪ್ರಸ್ತಾವನೆಗೆ ಸಹಿ ಹಾಕುವ ಮೊದಲು ಕೇಂದ್ರ ಸರ್ಕಾರ ಎಲ್ಲಾ

ರಾಜ್ಯ ಶಾಸಕಾಂಗಗಳನ್ನು ಸಂಪರ್ಕಿಸಬೇಕು.

೩) ಬೌದ್ಧಿಕ ಆಸ್ತಿ ಹಕ್ಕುಗಳಲ್ಲಿ ಸಸ್ಯ ಮತ್ತು ಜೈವಿಕ ವಸ್ತುಗಳನ್ನು ಪೇಟೆಂಟ್ ಮಾಡುವುದನ್ನು ರದ್ದು ಪಡಿಸಬೇಕು.

೪) ರೈತರ ಉತ್ಪಾದಿಸುವ, ಸುಧಾರಿಸುವ ಮತ್ತು ಮಾರಾಟದ ಹಕ್ಕುಗಳನ್ನು ಸಂರಕ್ಷಿಸಬೇಕು.

೫) ಬೀಜ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶವನ್ನು ರದ್ದು ಪಡಿಸಬೇಕು.

ವಂದನಾ ಶಿವ ಅವರು ಭಾರತದಲ್ಲಿ ರೈತರ ಚಳುವಳಿಯನ್ನು ಪರಿಶೀಲಿಸಿರುವಂತೆ ಬೌದ್ಧಿಕ ಆಸ್ತಿ ಹಕ್ಕನ್ನು ಬೀಜ ಮತ್ತು ಸಸ್ಯ ವಂಶವಾಹಿ ಸಂಪನ್ಮೂಲಗಳಲ್ಲಿ ಅಳವಡಿಸುವುದನ್ನು ವಿರೋಧಿಸಿದರು ಏಕೆಂದರೆ ಅದು ವಿಸ್ತೃತವಾದ ಪರಿಣಾಮಗಳನ್ನು ಹೊಂದಿದೆ. ೧೯೯೩ರ ಮಾರ್ಚ್‌ನಲ್ಲಿ, ಭಾರತದ ಎಲ್ಲಾ ಭಾಗಗಳಿಂದ ರೈತರು ಐತಿಹಾಸಿಕ ಕೆಂಪು ಕೋಟೆ ಮೈದಾನದಲ್ಲಿ ಸೇರಿದ್ದರು. ಅವರು ಡಂಕೆಲ್ ಪ್ರಸ್ತಾವನೆಯನ್ನು ವಿರೋಧಿಸಿದರು ಮತ್ತು ಅದನ್ನು ಸುಟ್ಟು ಹಾಕಿದರು. ಅವರು ಗ್ಯಾಟ್‌ನಿಂದ ರೈತರ ಸಸ್ಯ ಸಂಕರಣ ಶಾಸ್ತ್ರಜ್ಞರ ಹಕ್ಕುಗಳ ಸಂರಕ್ಷಣೆಗೆ ಸಂಬಂಧಿಸಿದ ಸರ್ಕಾರದ ದುರ್ಬಲವಾದ ಹೇಳಿಕೆಗಳನ್ನು ಟೀಕಿಸಿದರು. ಅವರು ಬೀಜದ ಹಕ್ಕು ಒಂದು ಧನಾತ್ಮಕ ಹಕ್ಕು, ಋಣಾತ್ಮಕ ಹಕ್ಕು ಅಲ್ಲ, ಅದು ಮೂಲಭೂತ ಹಕ್ಕು ಆದರೆ ರಿಯಾಯ್ತಿ ಅಲ್ಲ ಎಂದು ಹೇಳಿದರು ಮತ್ತು ಅವರು ತಮ್ಮ ಬೀಜದ ಹಕ್ಕನ್ನು "ಸಮುದಾಯದ ಬೌದ್ಧಿಕ ಹಕ್ಕುಗಳೆಂದು" ಕರೆದರು.

ಮತ್ತೊಂದು, ಹಕ್ಕುಗಳಿಗಾಗಿ ರೈತರ ಧನಾತ್ಮಕ ಪ್ರದರ್ಶನ ೧೯೯೩ರ ಆಗಸ್ಟ್ ೧೫ರ, ಸ್ವಾತಂತ್ರ್ಯ ದಿನದಂದು, ಕಂಡು ಬಂದಿತು. ರೈತರು ತಮ್ಮ ಜ್ಞಾನ ಮತ್ತು ಜೈವಿಕ ವೈವಿಧ್ಯತೆ "ಸಾಮೂಹಿಕ ಜ್ಞಾನ ಸನದು" ಇದರಿಂದ ರಕ್ಷಿಸಲ್ಪಡುತ್ತದೆ ಎಂದು ಘೋಷಿಸಿದರು. ವಂದನಾ ಶಿವ ಉಲೇಖಿಸಿರುವಂತೆ, "ಅವರು ಯಾವುದೇ ಕಂಪೆನಿ ಅವರ ಸ್ಥಳೀಯ ಜ್ಞಾನ ಅಥವಾ ಸಂಪನ್ಮೂಲಗಳನ್ನು ಸ್ಥಳೀಯ ವರ್ಗಗಳ ಅನುಮತಿಯಿಲ್ಲದೆ ಬಳಸಿದರೆ ಬೇವಿನ ಪೇಟೆಂಟ್‌ಗಳ ವಿಷಯದಲ್ಲಿ ಇರುವಂತೆ ಅದು ಬೌದ್ಧಿಕ ದರೋಡೆ, ಎಂದು ಒತ್ತಾಯಿಸಿದರು.

ಕ.ರಾ.ರೈ.ಸಂ. ಇಂದಿನವರೆಗೂ ಭಾರತೀಯ ರೈತರು ಬೀಜ ಸಂಕರಣ ಶಾಸ್ತ್ರಜ್ಞರ ಹಕ್ಕನ್ನು ಅನುಭವಿಸಿದ್ದರು ಮತ್ತು ಅವರಿಂದ ಸಂಶೋಧಿಸಲ್ಪಟ್ಟ ಹಲವು ಹೊಸ ತಳಿ ಬೀಜಗಳು ಅಂದರೆ ಭಾರತೀಯ ರೈತರು ಅಕ್ಕಿಯನ್ನು ತಯಾರಿಸಿದರು ಮತ್ತು ಅಧಿಕ ರೋಗ ನಿರೋಧಕ ವಂಶವಾಹಿಗಳನ್ನು ಅಕ್ಕಿ ತಳಿಗಳಲ್ಲಿ ಕಂಡುಹಿಡಿದರು

ಎಂದು ಹೇಳಿತು. ಅದಕ್ಕೆ ಮುನ್ನ, ಭತ್ತ ಮತ್ತು ಅಕ್ಕಿ ಇರಲಿಲ್ಲ. ಭಾರತದಲ್ಲಿ ಕೃಷಿ ಬೀಜ ಉತ್ಪಾದನೆಯ ಮತ್ತು ಹೈಬ್ರೀಡ್ ಬೀಜಗಳ ಮೂಲಕ ಪ್ರಾರಂಭವಾಯಿತು. ಭಾರತದ ರೈತ ಕಾಡಿನಿಂದ ಒರಟು ಸಸ್ಯಗಳನ್ನು ತೆಗೆದುಕೊಂಡರು, ಜಾಗರೂಕತೆಯಿಂದ ಆಯ್ಕೆ ಮಾಡಿದರು ಮತ್ತು ಅವುಗಳನ್ನು ಸುಧಾರಿಸಿದರು. ಅದೇ ರೀತಿ ಅಭಿವೃದ್ಧಿಶೀಲ ರಾಷ್ಟ್ರಗಳ ರೈತರು ಹಲವು ಬೀಜಗಳನ್ನು ಅಭಿವೃದ್ಧಿ ಪಡಿಸಿದರು. ಉದಾಹರಣೆಗೆ, ಬೊಲಿವಿಯಾದ ರೈತರು ಮೊಟ್ಟ ಮೊದಲು ರೋಗವಿರೋಧೀ ಆಲೂಗಡ್ಡೆಗಳನ್ನು ಬೆಳೆಸಿದರು. ಪಶ್ಚಿಮ ಆಫ್ರಿಕಾದ ರೈತರು ಕೀಟ ವಿರೋಧೀ ಹುರಳೀಕಾಯಿ ತಳಿಗಳನ್ನು ಕಂಡು ಹಿಡಿದರು. ಆದರೆ ಡಂಕೆಲ್ ಪ್ರಸ್ತಾವನೆಯ ಪೇಟೆಂಟ್ ಕಾಯ್ದೆಯಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವೆ ತಾರತಮ್ಯ ಇದೆ. ಅದು ಕೈಗಾರಿಕಾ ಪ್ರಧಾನ ರಾಷ್ಟ್ರಗಳ ಹೊಸ ತಳಿಗಳ ಸಂಶೋಧನೆಯನ್ನು ಗುರುತಿಸಿತು ಮತ್ತು ಅವುಗಳನ್ನು ಬೌದ್ಧಿಕ ಆಸ್ತಿ ಎಂದು ಪರಿಗಣಿಸಿತು. ಆದರೆ ಅದು ಅಭಿವೃದ್ಧಿ ಶೀಲ ರಾಷ್ಟ್ರಗಳ ೫೦೦ ತಲೆಮಾರಿನ ಮೀಸಲಿಡಲ್ಪಟ್ಟ ಬೌದ್ಧಿಕ ಆವಿಷ್ಕಾರಗಳನ್ನು, ಕೇವಲ ಅದೃಷ್ಟ ಅಥವಾ ದೇವರ ಸೃಷ್ಟಿಯ ಕೆಲಸ ಎಂದು ಕಡೆಗಣಿಸಿತು.

ಭಾರತದ ೧೯೭೦ರ ಪೇಟೆಂಟ್ ಕಾಯ್ದೆ, ಕೃಷಿ ಮತ್ತು ತೋಟಗಾರಿಕೆಯನ್ನು ಪೇಟೆಂಟ್ ಮಾಡುವಲ್ಲಿ ಸೇರಿಸಿಲ್ಲ. ಅಮೇರಿಕಾ ಈ ಎರಡು ವಲಯಗಳನ್ನು ಈ ಕಾಯ್ದೆ ಅಡಿ ಸೇರಿಸುವಂತೆ ಒತ್ತಾಯ ಪಡಿಸುತ್ತಿದೆ. ನಾನು ಇಲ್ಲಿ ಕ.ರಾ.ರೈ.ಸಂ. ಪ್ರಾಮುಖ್ಯತೆ ನೀಡಿರುವ, ಭಾರತದ ಕೃಷಿಗೆ ಮಾರಕವಾಗಿರುವ ಕೆಲವು ಪೇಟೆಂಟ್ ನಿರ್ಧಾರಗಳನ್ನು ಚರ್ಚಿಸಿದ್ದೇನೆ. ಭಾರತದ ಕೆಲವು ಪ್ರದೇಶಗಳು ಮತ್ತು ಪಾಕಿಸ್ತಾನದ ಉತ್ಪನ್ನವಾಗಿರುವ ಬಾಸ್‌ಮತಿ ಅಕ್ಕಿಯನ್ನು ಅಮೇರಿಕಾ ಪೇಟೆಂಟ್ ಮಾಡಲು ನಿರ್ಧರಿಸಿರುವುದು ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕು ಒಪ್ಪಂದದ ಉಲ್ಲಂಘನೆಯಾಗಿದೆ.

ಮೊದಲನೆಯದಾಗಿ, ಬೇವಿನ ಮತ್ತು ನಂತರ ಅರಿಶಿನದ ಔಷಧೀಯ ಗುಣಗಳು, ಇದನ್ನು ಭಾರತ ಸಫಲವಾದ ರೀತಿಯಲ್ಲಿ ಹೋರಾಟ ಮಾಡಿತು. ಬಾಸ್‌ಮತಿ ಅಕ್ಕಿಯ ಪೇಟೆಂಟ್ ಉತ್ಪನ್ನದ ಭೌಗೋಳಿಕ ಮೂಲದ ಪ್ರಶ್ನೆಯನ್ನು ಒಳಗೊಳ್ಳುತ್ತದೆ. ಇದು ವಿಶ್ವವ್ಯಾಪಾರ ಸಂಘದ ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳ ಅಸ್ಪಷ್ಟವಾದ ಲಕ್ಷಣವಾಗಿದೆ. ತನ್ನಲೇ ಬಹಳಷ್ಟು ವಿರೋಧ ಹೊಂದಿರುವ ಒಪ್ಪಂದವಾಗಿದೆ. ಬಾಸ್‌ಮತಿ ಅಕ್ಕಿ ಭಾರತದಿಂದ ಮತ್ತು ಪಾಕಿಸ್ತಾನದಿಂದ ಹೊರಕ್ಕೆ ಇರುವ ಉತ್ಪಾದಕರ, ಅದರಲ್ಲೂ ಅಮೇರಿಕಾದ ಉತ್ಪಾದಕರ ಗುರಿಯಾಗಿದೆ. ಏಕೆಂದರೆ ಅದರ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇತರ ಯಾವುದೇ ವಿಧದ

ಅಕ್ಕಿಗಿಂತ ಹೆಚ್ಚಾಗಿದೆ. ರೈಸ್‌ಟೆಕ್, ಅಮೇರಿಕಾ ಅಕ್ಕಿ ಉತ್ಪಾದಿಸುವ ಬಹುರಾಷ್ಟ್ರೀಯ ಕಂಪೆನಿಯೇ, ಇಂತಹದೇ ವಿಧಗಳ ಮೇಲೆ ಪೇಟೆಂಟ್ ಪಡೆದಿತ್ತು. ಕಾಸ್‌ಮತಿ ಮತ್ತು ಟೆಕ್ಸ್‌ಮತಿ, ಆದರೆ ಅವರ ಮಾರುಕಟ್ಟೆ ಭಾಗ ಮತ್ತು ಅವರು ಪಡೆಯುವ ಬೆಲೆ ಸ್ಪಷ್ಟವಾಗಿ ಬಾಸ್‌ಮತಿ ಹೊಂದಿರುವ ಪ್ರಬಲ ಸ್ಥಾನದೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಈಗ ಇರುವ ವಿಷಯವೆಂದರೆ ಅಮೇರಿಕಾದ ಪೇಟೆಂಟ್ ಕಛೇರಿಗೆ ಭಾರತದ ಕೆಲವು ಪ್ರದೇಶಗಳು (ಡೆಹರಾಡೂನ್) ಮತ್ತು ಪಾಕಿಸ್ತಾನದ ಉತ್ಪನ್ನವಾಗಿರುವ ಬಾಸ್‌ಮತಿ ಅಕ್ಕಿಗೆ ಪೇಟೆಂಟ್ ನೀಡುವ ಹಕ್ಕು ಇದೆಯೋ, ಇಲ್ಲವೋ ಎಂಬುದೇ ಆಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಬಾಸ್‌ಮತಿ ಅಕ್ಕಿಯಂತೆ ಭೌತಿಕ ಲಕ್ಷಣಗಳುಳ್ಳ ಯಾವುದೇ ಅಕ್ಕಿಯನ್ನು ಬಾಸ್‌ಮತಿ ಅಕ್ಕಿ ಎಂದು ಅರ್ಥೈಸಬಹುದೇ? ಇದು ಹೊಸ ಸರಕನ್ನು ಪೇಟೆಂಟ್ ಮಾಡಿದಂತೆ ಅಲ್ಲ ಏಕೆಂದರೆ ಸರಕು ಸ್ಪಷ್ಟವಾಗಿ ಹೇಳುವುದಾದರೆ ಹೊಸ ಸರಕು ಅಲ್ಲ. ಈ ಎಲ್ಲಾ ಪ್ರಶ್ನೆಗಳು ಬಾಸ್‌ಮತಿ ಅಕ್ಕಿ ಪೇಟೆಂಟ್ ಮಾಡುವುದಕ್ಕೆ ಸಂಬಂಧಿಸಿದಂತೆ ಉದ್ಭವಿಸುತ್ತವೆ.

ಅಮೇರಿಕಾದ ನ್ಯಾಯಾಲಯದ ತೀರ್ಪಿನಂತೆ ಬಾಸ್‌ಮತಿ ಎಂಬ ಪದಕ್ಕಾಗಿ ಅಮೇರಿಕಾದ ಅಕ್ಕಿ ಉತ್ಪಾದಕನಿಗೆ ನೀಡಿದ ಪೇಟೆಂಟ್, ಪೇಟೆಂಟ್ ಕಾಯ್ದೆಗೆ ವಿರುದ್ಧವಾಗಿದೆ. ಏಕೆಂದರೆ ನ್ಯಾಯಾಲಯ 'ಬಾಸ್‌ಮತಿ' ಎಂಬುದು ಸಾಮಾನ್ಯವಾಗಿ ಭಾರತದ ಕೆಲವು ಭಾಗಗಳಲ್ಲಿ (ಡೆಹರಾಡೂನ್) ಬೆಳೆಯಲಾಗುವ ಪರಿಮಳ ಭರಿತ ಅಕ್ಕಿಗೆ ಬಳಸುವ ಹೆಸರು ಎಂಬುದು ನ್ಯಾಯಾಲಯಕ್ಕೆ ತಿಳಿದಿರಲಿಲ್ಲ. ಅಮೇರಿಕಾದ ನ್ಯಾಯಾಲಯ ಬಾಸ್‌ಮತಿ ಎಂಬುದು ಒಂದು ವ್ಯಾಪಾರದ ಗುರುತಿನ ಹೆಸರು ಹಾಗೆಯೇ ವಿಶ್ವದ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬೆಳೆಯಲಾಗುವ ಉತ್ಪನ್ನದ ಪ್ರಕಾರವನ್ನು ಸೂಚಿಸುವುದಿಲ್ಲ ಎಂಬ ತಪ್ಪು ಅರ್ಥ ವಿವರಣೆ ಹೊಂದಿತ್ತು. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಬರುವ ಸರಕುಗಳ ಭೌಗೋಳಿಕ ಸೂಚನೆಗಳನ್ನು ಕೇವಲ ತಾಂತ್ರಿಕತೆಯ ಕಾರಣಕ್ಕಾಗಿ ಹಿಂದಕ್ಕೆ ತಳ್ಳಲು ಸಾಧ್ಯವಿಲ್ಲ. ಅಂತಹ ಭಾವನೆ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳು ನ್ಯಾಯೋಚಿತವಲ್ಲದ ರೀತಿಯಲ್ಲಿ ವರವಾಗಿವೆ ಎಂಬ ಅಭಿಪ್ರಾಯುವನ್ನು ಬಲಪಡಿಸುತ್ತದೆ.

ಕ.ರಾ.ರೈ.ಸಂ. ಒಂದು ಮನವಿಯನ್ನು ಮುಖ್ಯ ನ್ಯಾಯಾಧೀಶರು, ಉನ್ನತ ನ್ಯಾಯಾಲಯ, ನವದೆಹಲಿ, ಇವರ ವಿಳಾಸಕ್ಕೆ ಭಾರತದ ಸಾಂಪ್ರದಾಯಿಕ ಸರಕುಗಳನ್ನು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳು ಕೊಳ್ಳೆ ಹೊಡೆಯುತ್ತಿರುವುದರ ವಿರುದ್ಧ ಸಲ್ಲಿಸಿತು. ಅದು ಈ ಕೆಳಗಿನ ಅಂಶಗಳಿಗೆ ಒತ್ತು ನೀಡಿತು.

೧) ಅಮೇರಿಕಾದ ಪ್ರಜೆಯಾದ ಶ್ರೀ ರಾಬರ್ಟ್ ಲಾರ್ಸನ್ ಬೇವಿನ ಮರದ ಜೈವಿಕ ಕೀಟ ನಾಶಕದ ಗುಣಗಳಿಗಾಗಿ ಪೇಟೆಂಟ್ ಪಡೆದು ಕೊಂಡರು (ಪೇಟೆಂಟ್ ಸಂಖ್ಯೆ : ೪೫೫೬೫೬೨).

೨) ಭಾರತೀಯರು ಬೇವಿನ ಜೈವಿಕ ಕೀಟನಾಶಕವನ್ನು ೧೦,೦೦೦ ವರ್ಷಗಳಿಂದ ಬಳಸಿದ್ದರು. ಈಗ ಅದರ ಸಾಂಪ್ರದಾಯಿಕ ಸಮುದಾಯಿಕ ಜ್ಞಾನದ ಹಕ್ಕನ್ನು ತನ್ನ ಖಾಸಗಿ ಆಸ್ತಿಯಂತೆ ಅದನ್ನು ಪೇಟೆಂಟ್ ಮಾಡಿಕೊಳ್ಳುವ ಮೂಲಕ ಇಲ್ಲವಾಗಿಸಿದ್ದಾರೆ.

೩) ಶ್ರೀ ಲಾರ್ಸನ್ ಈ ಪೇಟೆಂಟನ್ನು ಅಮೇರಿಕಾದ ಗ್ರೇಸ್ ಅವರಿಗೆ ಒಂದೂವರೆ ಲಕ್ಷ ಡಾಲರುಗಳಿಗೆ ಮಾರಾಟ ಮಾಡಿದ್ದಾರೆ.

೪) ಡಾ. ಜೇಮ್ಸ್ ಕ್ಲಾರ್ಕ್ ಅಮೇರಿಕಾದ ಪ್ರಜೆ, ಬೇವಿನ ಜೈವಿಕ-ಕೀಟನಾಶಕ ಗುಣದ ಪೇಟೆಂಟನ್ನು ಪಡೆದುಕೊಂಡಿದ್ದಾರೆ. ಪೇಟೆಂಟ್ ಸಂಖ್ಯೆ : ೫೦೪೭೨೪೨. ಅದನ್ನು ಗ್ರೇಸ್ ಮತ್ತು ಕಂಪನಿ ಖರೀದಿಸಿದೆ.

೫) ಡಬ್ಲ್ಯೂ.ಆರ್. ಗ್ರೇಸ್ ಕಂಪೆನಿ ಭಾರತದ ಪಿಜ್ ಮಾರ್ಗೋ ಪ್ರೈವೇಟ್ ಲಿಮಿಟೆಡ್‌ನ ಸಹಯೋಗದೊಂದಿಗೆ ೨೦ ಟನ್ನುಗಳಷ್ಟು ಬೇವಿನ ಬೀಜ ಕೀಟ ನಾಶಕಗಳನ್ನು ಪ್ರತಿ ದಿನ ಶುದ್ಧೀಕರಿಸುತ್ತಿದೆ ಮತ್ತು ಅಮೇರಿಕಾಕ್ಕೆ ರಫ್ತು ಮಾಡುತ್ತಿದೆ. ಅದು ಕರ್ನಾಟಕದ ತುಮಕೂರು ಜಿಲ್ಲೆಯ ಅಂತರಾಸನಹಳ್ಳಿಯಲ್ಲಿದೆ.

೬) ಡಬ್ಲ್ಯೂ.ಆರ್. ಗ್ರೇಸ್ ಕಂಪೆನಿ ಬೇವಿನ ಕೀಟ ನಾಶಕಗಳನ್ನು ಉತ್ಪಾದಿಸುತ್ತಿದೆ ಮತ್ತು ಅಂತರಾಷ್ಟ್ರೀಯವಾಗಿ ಮಾರ್ಗೋಸನ್-ಒ ಮತ್ತು ಬಯೋನೀಮ್ ಹೆಸರಿನಲ್ಲಿ ಮಾರಾಟ ಮಾಡುತ್ತಿದೆ.

೭) ಕರ್ನಾಟಕದ ಗ್ರೇಸ್ ಕಂಪೆನಿ, ಬೇವಿನ ಕೀಟನಾಶಕಗಳ ತಯಾರಿಕೆಯಲ್ಲಿ ವಿಶ್ವದಲ್ಲೇ ಪ್ರಥಮ ಕಂಪೆನಿಯಾಗಿ ಅಸ್ತಿತ್ವಕ್ಕೆ ಬಂದಿತು ಎಂದು ಹೇಳಿದೆ. ಆದರೆ ಇದು ನಿಜವಲ್ಲ. ಭಾರತದಲ್ಲಿ ಬಹಳ ದೀರ್ಘಕಾಲದಿಂದಲೂ ಅದನ್ನು ಉತ್ಪಾದಿಸುತ್ತಿರುವ ಸಣ್ಣ ಕೈಗಾರಿಕಾ ಘಟಕಗಳು ಹಲವಷ್ಟಿದೆ.

೮) ಬೇವಿನ ಸಕ್ರಿಯ ತತ್ವಗಳು ಫೇಟೆಂಟ್ ಹಕ್ಕಿನ ನಿಯಂತ್ರಣದಲ್ಲಿವೆ.

ಅ) ಇದು ತೃತೀಯ ಜಗತ್ತಿನ ರಾಷ್ಟ್ರಗಳ ಬೌದ್ಧಿಕ ಕೊಡುಗೆಗಳಿಗೆ ನೇರವಾದ ಹೊಡೆತವಾಗಿದೆ.

ಆ) ಇದು ತೃತೀಯ ಜಗತ್ತಿನ ರಾಷ್ಟ್ರಗಳ ಬೌದ್ಧಿಕ ಆಸ್ತಿ ಹಕ್ಕುಗಳ ದರೋಡೆಯಾಗಿದೆ.

ಇ) ಪ್ರಸ್ತುತದಲ್ಲಿ, ತೃತೀಯ ಜಗತ್ತಿನ ರಾಷ್ಟ್ರಗಳ ಬೌದ್ಧಿಕ ಆಸ್ತಿ ಹಕ್ಕುಗಳ ಗುರುತಿಸುವಿಕೆಯನ್ನು ಕೇವಲ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮಾತ್ರ ಮಾಡುತ್ತಿವೆ ಎಂಬ ಅಭಿಪ್ರಾಯವಿದೆ. ಇಲ್ಲವಾದರೆ ಅವರು

ನಿರುಪಯುಕ್ತರು.

೯) ತೃತೀಯ ಜಗತ್ತಿನ ರಾಷ್ಟ್ರಗಳ ಸಾಮುದಾಯಿಕ ಆಸ್ತಿ ಮತ್ತು ಜ್ಞಾನದ ರಕ್ಷಣೆಗೆ ಒಂದು ನಿರ್ದಿಷ್ಟ ಸಂಸ್ಥೆ ಇಲ್ಲ. ಇದು ಬೇವಿನ ವ್ಯಾಜ್ಯದಿಂದ ತಿಳಿಯುತ್ತದೆ.

೧೦) ಡಂಕೆಲ್ ಪ್ರಸ್ತಾವನೆಯ ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳು, ಅಭಿವೃದ್ಧಿ ಶೀಲ ರಾಷ್ಟ್ರಗಳ ದರೋಡೆಗೆ ಅವಕಾಶ ನೀಡಿವೆ. ನಿರಂಕುಶ ಅಂತರರಾಷ್ಟ್ರೀಯ ಕಾನೂನಿನೊಂದಿಗೆ ಇದು ಕ್ರಮ ಬದ್ಧವಾಗಿ ಹೆಣೆದು ಕೊಂಡಿದೆ.

೧೧) ಭಾರತ ಸರ್ಕಾರ ಕೂಡ ಅಮೇರಿಕಾದ ಸೂಪರ್ ೩೦೧ ಕಾಯ್ದೆಯ ಒತ್ತಡದಿಂದ, ರಹಸ್ಯವಾಗಿ ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಿತು. ಹಾಗೆಯೇ ಅದು ತನ್ನ ಸಾರ್ವಭೌಮ ಶಕ್ತಿ ಹಾಗೂ ೯೦ ಕೋಟಿ ಜನ ಸಂಖ್ಯೆಯ ಮಾನವ ಹಕ್ಕುಗಳು ಹಾಗೂ ಮೂಲಭೂತ ಹಕ್ಕುಗಳನ್ನು ಬಿಟ್ಟುಕೊಟ್ಟಿದೆ.

ಈ ಅಂಶಗಳ ಆಧಾರದ ಮೇಲೆ, ಕ.ರಾ.ರೈ.ಸಂ. ಉನ್ನತ ನ್ಯಾಯಲಯವನ್ನು ಆಸಕ್ತಿ ವಹಿಸುವಂತೆ ಮತ್ತು ಈ ಕೆಳಗಿನ ನಿರ್ಧಾರ ಕೈಗೊಳ್ಳುವಂತೆ ಕೇಳಿಕೊಂಡಿತು.

ಅ) ರಾಬರ್ಟ್ ಲಾರ್ಸನ್ ಮತ್ತು ಜೇಮ್ಸ್ ಕ್ಲಾರ್ಕ್‌ಗೆ ನೀಡಲಾದ ಪೇಟೆಂಟ್‌ಗಳನ್ನು ವಾಪಸ್ಸು ಪಡೆಯುವಂತೆ ಅಮೇರಿಕಾ ಸರ್ಕಾರವನ್ನು ಕೇಳುವುದು.

ಆ) ಡಂಕೆಲ್ ಪ್ರಸ್ತಾವನೆಯಲ್ಲಿನ ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳ ಭಾಗವನ್ನು ತಿರಸ್ಕರಿಸಲು ನಿರ್ಧಾರ ಕೈಕೊಳ್ಳುವಂತೆ ಭಾರತ ಸರ್ಕಾರಕ್ಕೆ ಆದೇಶ ನೀಡುವುದು.

ಇ) ಅದು ಅಂತಿಮವಾಗಿ ನ್ಯಾಯಲಯ ತೃತೀಯ ಜಗತ್ತಿನ ರಾಷ್ಟ್ರಗಳ ಮತ್ತು ನಿರ್ದಿಷ್ಟವಾಗಿ ಭಾರತದ ಬೌದ್ಧಿಕ ಆಸ್ತಿ ಹಕ್ಕುಗಳ ರಕ್ಷಣೆಗೆ ಪರಿಣಾಮಕಾರಿ ವಿಶ್ಲೇಷಣೆ ಮತ್ತು ಅಂತರರಾಷ್ಟ್ರೀಯ ಬೌದ್ಧಿಕ ಆಸ್ತಿ ಜಾರಿಗೆ ತರುವಲ್ಲಿ ಆಸಕ್ತಿ ವಹಿಸಬೇಕೆಂದು ಒತ್ತಾಯಿಸಿತು.

ಡಂಕೆಲ್ ಪ್ರಸ್ತಾವನೆಯಲ್ಲಿ ಭಾರತೀಯ ಕೃಷಿಗೆ ಕಾನೂನು ಸೂಚನೆಗಳು ಹಾಗೂ ಪೇಟೆಂಟ್ ಕಾಯ್ದೆ

ನಾಗರೀಕ ಮತ್ತು ಆಡಳಿತಾತ್ಮಕ ವಿಧಾನಗಳು ಸಾಕ್ಷಿಯ ಆಧಾರ, ಪ್ರತಿಬಂಧಕಾಜ್ಞೆಗಳು, ತೊಂದರೆಗಳು ಮತ್ತು ಇತರ ಪರಿಹಾರಗಳ ಅವಕಾಶಗಳನ್ನು ಒಳಗೊಂಡಿವೆ. ಅವುಗಳ ಪ್ರಕಾರ ಸಾಕ್ಷಿಯ ಹೊರೆ ಕಾಯ್ದಿರಿಸಲಾಗುತ್ತದೆ. ಅಂದರೆ, ಭಾರತದಲ್ಲಿ ಪ್ರತ್ಯೇಕವಾದ ಕ್ರಿಮಿನಲ್ ಕಾಯ್ದೆ ಮತ್ತು ವಿಧಾನ ಶೇಕಡಾ ೭೬ರಷ್ಟು

ಜನಸಂಖ್ಯೆಗೆ (ರೈತರಿಗೆ) ಇದೆ. ಡಂಕೆಲ್ ಪ್ರಸ್ತಾವನೆಗಳಲ್ಲಿ ಸಾಕ್ಷಿಯ ಹೊರೆ ತದ್ವಿರುದ್ಧವಾಗಿದೆ. ಅದರಲ್ಲಿ ಬಹುರಾಷ್ಟ್ರೀಯ ಕಂಪೆನಿ ರೈತರ ವಿರುದ್ಧ ಒಂದು ಆಪಾದನೆ ಮಾಡಿದರೆ ಸಾಕು ರೈತ ಅಪರಾಧಿಯಾಗುತ್ತಾನೆ, ಆಗ ಅವನು ತಾನು ನಿರಪರಾಧಿ ಎಂಬುದನ್ನು ಸಾಬೀತು ಪಡಿಸಬೇಕು. ನಂಜುಂಡಸ್ವಾಮಿಯವರು ಸಾಕ್ಷಿಯ ಹೊರೆಯ ವಿಧಾನದ ಆಧಾರದ ಮೇಲೆ ಎರಡು ಬಗೆಯ ನ್ಯಾಯಗಳಿವೆ ಎಂದಿದ್ದಾರೆ. ಒಂದು ಆ್ಯಂಗ್ಲೊ ಸ್ಯಾಕ್ಷನ್ ನ್ಯಾಯಶಾಸ್ತ್ರ ಮತ್ತೊಂದು ಫ್ರೆಂಚ್ ನ್ಯಾಯಶಾಸ್ತ್ರಗಳಾಗಿವೆ ಎಂದು ಹೇಳುವ ಮೂಲಕ ಟೀಕಿಸಿದ್ದಾರೆ. ಆಂಗ್ಲೊ-ಸ್ಯಾಕ್ಷನ್ ನ್ಯಾಯಶಾಸ್ತ್ರದ ಪ್ರಕಾರ ಒಬ್ಬ ಆಪಾದಿತ ಅಪರಾಧಿ ಎಂದು ಸಾಬೀತಾಗುವವರೆಗೂ ಅವನು ನಿರಪರಾಧಿ, ಆದರೆ ಫ್ರೆಂಚ ನ್ಯಾಯಶಾಸ್ತ್ರದ ಪ್ರಕಾರ ಒಬ್ಬ ಅಪಾದಿತ ಅವನು ತಾನು ನಿರಪರಾಧಿ ಎಂದು ಸಾಬೀತು ಪಡಿಸುವವರೆಗೂ ಅವನು ಅಪರಾಧಿಯೇ ಆಗಿರುತ್ತಾನೆ.

ಡಂಕೆಲ್ ಪ್ರಸ್ತಾವನೆಯ ೩೪ನೇ ಒಪ್ಪಂದದ ಕಲಮು ಸಾಕ್ಷಿಯ ಹೊರೆಯ ಕುರಿತು ವಿವರಿಸುತ್ತದೆ. ಅದು ಸಾಕ್ಷಿಯ ಹೊರೆಯನ್ನು ಆಕ್ಷೇಪಣೆ ಮಾಡುವವನಿಂದ ರಕ್ಷಕನಿಗೆ ಅದಲು ಬದಲು ಮಾಡುತ್ತದೆ. ಇದು ಬಹುರಾಷ್ಟ್ರೀಯ ಕಂಪೆನಿಗಳನ್ನು ಲಾಭದಾಯಕ ಸ್ಥಾನದಲ್ಲಿರಿಸುತ್ತದೆ. ಪರೋಕ್ಷವಾಗಿ, ಡಂಕೆಲ್ ಪ್ರಸ್ತಾವನೆ ರೈತರಿಗೆ ಪ್ರತ್ಯೇಕವಾದ ಕ್ರಿಮಿನಲ್ ಕಾಯ್ದೆಯನ್ನು ಒತ್ತಾಯಿಸಿತು. ಇದು ಭಾರತದ ಸಂವಿಧಾನಕ್ಕೆ ವಿರುದ್ಧವಾಗಿದೆ. ಇದು ಡಂಕೆಲ್ ಪ್ರಸ್ತಾವನೆಯಲ್ಲಿ ಬರುವ ಪ್ರಕೃತಿ ನ್ಯಾಯ ಮತ್ತು ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಕ್ಕೆ ವಿರುದ್ಧವಾಗಿರುವ ಸಾಕ್ಷಿಯ ಹೊರೆಯಾಗಿದೆ.

ಡಂಕೆಲ್ ಪ್ರಸ್ತಾವನೆ ವಿವರಿಸುವ ಸಾಕ್ಷಿಯ ಹೊರೆಯ ತತ್ವ ರಾಜ್ಯ ಪಟ್ಟಿಯ ಹಲವು ವಿಷಯಗಳನ್ನು ಪ್ರತಿಪಾದಿಸುತ್ತದೆ. ಆದರೂ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಡಂಕೆಲ್ ಪ್ರಸ್ತಾವನೆ ಸಹಿ ಮಡುವ ನಿರ್ಧಾರದ ಬಗ್ಗೆ ನಿಷ್ಕ್ರಿಯವಾಗಿವೆ. ಅದ್ದರಿಂದ ಕ.ರಾ.ರೈ.ಸಂ. ರಾಜ್ಯ ಸರ್ಕಾರಗಳು ಮುನಿಸಿಪಾಲಿಟಿಗಳ ಸ್ಥಾನಕ್ಕೆ ಇಳಿಸಲ್ಪಟ್ಟಿವೆ ಎಂದು ಟೀಕಿಸಿದೆ.

ಡಂಕೆಲ್ ಪ್ರಸ್ತಾವನೆ ಮತ್ತು ಕೃಷಿ ಸಂಶೋಧನೆ

ಕರ್ನಾಟಕದಲ್ಲಿ ರೈತ ಚಳುವಳಿ ಪೇಟೆಂಟ್ ಕಾಯ್ದೆಯನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳ ಕೃಷಿ ಸಂಶೋಧನೆಗೆ ಅಡಚಣೆ ಉಂಟು ಮಾಡುತ್ತದೆಂದು

ಪರಿಗಣಿಸುತ್ತದೆ. ಅದು ಸಂಶೋಧನೆ ಮತ್ತು ವೈಜ್ಞಾನಿಕ ಜ್ಞಾನದ ಮೇಲೂ ದೊಡ್ಡ ಅಡಚಣೆ ಕಂಡು ಬರುತ್ತದೆಂಬ ಭೀತಿಯನ್ನು ವ್ಯಕ್ತಪಡಿಸಿದೆ. ಪೇಟೆಂಟ್ ವಿಜ್ಞಾನಿಗಳು ೨೦ ವರ್ಷಗಳವರೆಗೆ ಹೊಸ ವಿಧಗಳ ಸಸ್ಯ ಸೃಷ್ಟಿಸುವ ಕಾರ್ಯವನ್ನು ಮಾಡದಂತೆ ತಡೆಯುತ್ತವೆ. ಅಂತಹ ದೀರ್ಘ ಅವಧಿಯ ನಂತರ, ಯಾವುದೇ ವಿದಧ ಸೃಷ್ಟಿ ಕಾರ್ಯ ನಿರುಪಯುಕ್ತವಾಗುತ್ತದೆ. ಇದು ಸಣ್ಣ ಬೀಜ ಕಂಪೆನಿಗಳು ಮತ್ತು ರೈತರನ್ನು ಬೀಜಗಳ ಗುಣೀಕರಣ ಮತ್ತು ಇತರರಿಗೆ ಮಾರುವುದನ್ನು ತಡೆಯುತ್ತದೆ. ಇದನ್ನು ಚಳುವಳಿ ಜ್ಞಾನದ ಬಂಡವಾಳಶಾಹಿ ನಿರ್ಬಂಧ ಎಂದು ಕರೆಯಿತು. ಗ್ಯಾಟ್ ಆಗಲಿ ಅಥವಾ ಅಮೇರಿಕಾವಾಗಲಿ ಈ ಶಕ್ತಿ ಹೊಂದಿಲ್ಲ, ಏಕೆಂದರೆ ನಂಜುಂಡಸ್ವಾಮಿಯವರು ಹೇಳುವಂತೆ "ನಮ್ಮ ನಿರ್ಧಾರ ಎಂದರೆ ಜ್ಞಾನ ಒಂದು ಆಸ್ತಿಯಲ್ಲ ಮತ್ತು ಜ್ಞಾನವನ್ನು ಪೇಟೆಂಟ್ ಮಾಡಲು ಸಾಧ್ಯವಿಲ್ಲ. ಜ್ಞಾನ ಸಾಮಾಜಿಕ ಸಂಬಂಧಗಳು ಮತ್ತು ಸಾಮಾಜಿಕ ಚಟುವಟಿಕೆಗಳ ಫಲ ಮತ್ತು ಜ್ಞಾನ ಸಮಾಜದ ಆಸ್ತಿ ಮತ್ತು ಅದನ್ನು ಎಂದಿಗೂ ಪೇಟೆಂಟ್ ಮಾಡಲು ಬಿಡಬಾರದು. ಪೇಟೆಂಟ್ ಕಾಯ್ದೆಯಲ್ಲಿನ ಮತ್ತೊಂದು ಒಳ ಸಂಚಿನ ಅಂಶವೆಂದರೆ ಅದು ಜೈವಿಕ ಗೊಬ್ಬರಗಳನ್ನು ಮತ್ತು ಜೈವಿಕ ಕೀಟ ನಾಶಕಗಳನ್ನು ಉತ್ಪಾದಿಸುವ ಹಕ್ಕುಗಳನ್ನು ರದ್ದುಪಡಿಸುತ್ತದೆ. ಅಂತಿಮವಾಗಿ ಬೀಜ ಸ್ವಾತಂತ್ರ್ಯ ನಾಶವಾಗುತ್ತದೆ."

ಭಾರತದ ೧೯೭೦ರ ಪೇಟೆಂಟ್ ಕಾಯ್ದೆ ಕೃಷಿಯ ಸಸ್ಯ ಮತ್ತು ಪ್ರಾಣಿ ಪ್ರಕಾರಗಳು, ಜೈವಿಕ ತಂತ್ರಜ್ಞಾನ ಮತ್ತು ಅಣುಶಕ್ತಿಯ ಪೇಟೆಂಟ್ ಮಾಡುವುದನ್ನು ಒಳಗೊಂಡಿರಲಿಲ್ಲ. ಅದರೆ ಪ್ರಸ್ತುತದಲ್ಲಿ ಡಂಕೆಲ್ ಪ್ರಸ್ತಾವನೆ ಭಾರತ ಸರ್ಕಾರವನ್ನು ಅದನ್ನು ಬದಲಾಯಿಸುವಂತೆ ಒತ್ತಾಯ ಪಡಿಸುತ್ತಿದೆ. ಭಾರತ ಇತ್ತೀಚೆಗೆ ಅದಕ್ಕೆ ಬಲಿಯಾಗಿದೆ. ಬದಲಾವಣೆ ಉದ್ದೇಶ ಪೂರ್ವಕವಾದ ರಾಜಕೀಯ ಆಯ್ಕೆಯಾಗಿರಬೇಕು, ಆದ್ದರಿಂದ ೧೯೭೦ರ ಪೇಟೆಂಟ್ ಕಾಯ್ದೆಯನ್ನು ಡಂಕೆಲ್ ಪ್ರಸ್ತಾವನೆ ನಿರ್ದೇಶನದಂತೆ ಬದಲಾಯಿಸಬೇಕು. ಈ ಉದಾಹರಣೆ ಶ್ರೀಮಂತ ರಾಷ್ಟ್ರಗಳು ಈ ಪೇಟೆಂಟ್ ಕಾಯ್ದೆಯ ಉಪಯೋಗ ಪಡೆಯುತ್ತವೆಂದು ಸಾಬೀತು ಪಡಿಸುತ್ತದೆ. ಭಾರತದಲ್ಲಿ ಹೆಚ್ಚಿನ ಪೇಟೆಂಟುಗಳ ಹೆಚ್ಚಿನ ಭಾಗಗಳು ಕೈಗಾರಿಕಾ ಪ್ರಧಾನ ರಾಷ್ಟ್ರಗಳ ಬಹುರಾಷ್ಟ್ರೀಯ ಕಂಪೆನಿಗಳ ಒಡೆತನದಲ್ಲಿವೆ. ಪ್ರತಿ ವರ್ಷ ಭಾರತದಲ್ಲಿ ನೀಡಲಾದ ೩೦೦೦ ಪೇಟೆಂಟುಗಳಲ್ಲಿ ಸುಮಾರು ೩/೪ ಭಾಗ ಅವರಿಗೇ ಸೇರುತ್ತದೆ. ಪ್ರಮುಖ ವಿಜ್ಞಾನಿಗಳು, ನ್ಯಾಯಾಧೀಶರು ಮತ್ತು ಇತರರು ಭಾರತದ ಕೃಷಿ ಸಂಶೋಧನೆ ಮತ್ತು ಆಹಾರ ರಕ್ಷಣೆಯ ಮೇಲೆ ದುಷ್ಪರಿಣಾಮಗಳಾಗುತ್ತವೆ ಒಂದು ವೇಳೆ ಭಾರತ ಡಂಕೆಲ್ ಪ್ರಸ್ತಾವನೆಗೆ ಸಹಿ ಹಾಕಿದರೆ ಮತ್ತು ಜಾರಿಗೆ ತಂದರೆ ಎಂದು ಭೀತಿ ವ್ಯಕ್ತಪಡಿಸಿದ್ದಾರೆ.

ಕುಲಾಂತರಿ (ಟರ್ಮಿನೇಟರ್) ಬೀಜ ತಂತ್ರಜ್ಞಾನ ಮತ್ತು ಕ.ರಾ.ರೈ.ಸಂ.

ಕ.ರಾ.ರೈ.ಸಂ. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ವಿವಾದಸ್ಪದ 'ಬೊಲ್ ಗಾರ್ಡ್' ಹತ್ತಿ ಬೆಳೆಯ ಪ್ರಯೋಗಾತ್ಮಕ (ಭೂ–ಭಾಗ) ಬಯಲನ್ನು ನಾಶಪಡಿಸಿತು. ನಂಜುಂಡಸ್ವಾಮಿಯವರು, ನಾವು ಮಾನ್‌ಸ್ಯಾಂಟೋ ಎಂಬ ಕ್ರಿಮಿನಲ್ ಸಂಸ್ಥೆ ರಾಷ್ಟ್ರದಲ್ಲಿ ಕೈಗೊಳ್ಳುತ್ತಿದ್ದ ಕಾನೂನು ಬಾಹಿರವಾದ ಎರಡನೇ ಬಯಲು ಪ್ರಯೋಗವನ್ನು ನಾಶಪಡಿಸಿದೆವು ಎಂದು ಹೇಳಿದರು. ಅವರು ಮಾನ್‌ಸ್ಯಾಂಟೋ ಕಂಪೆನಿಯನ್ನು ಅದೇ ಕಾರ್ಯಕ್ಕಾಗಿ "ಆಪರೇಷನ್ ಕ್ರಿಮೆಷನ್ ಮಾನ್‌ಸ್ಯಾಂಟೊ" ಎಂಬ ಹೆಸರಿನಲ್ಲಿ ಆಂಧ್ರಪ್ರದೇಶ, ಮಹಾರಾಷ್ಟ್ರ, ಪಂಜಾಬ್ ಮತ್ತು ಹರಿಯಾಣಗಳಲ್ಲಿ ಬೀಜಗಳು ಪ್ರಯೋಗಕ್ಕೆ ಒಳಪಡುತ್ತಿರುವ ಕಡೆಗಳಲ್ಲಿ ಮುಂದುವರೆಸಲಾಗುತ್ತದೆ ಎಂದು ಎಚ್ಚರಿಸಿದರು. ಸಂಘ, ಭಾರತ ಸರ್ಕಾರಕ್ಕೆ ಉತ್ಪತ್ತಿ ಮೂಲದ ಪ್ರಕಾರ ಯೋಜಿಸಿದ ಬೆಳೆಗಳನ್ನು ಅಳವಡಿಸಲು ಅನುಮತಿ ನೀಡಲು ವಿಶ್ವದ ಇತರ ರಾಷ್ಟ್ರಗಳು "ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿರುವಾಗ" ಹೇಗೆ ಸಾಧ್ಯವಾಯಿತು ಎಂದು ಆತಂಕ ವ್ಯಕ್ತಪಡಿಸಿತು.

ಆಂಧ್ರಪ್ರದೇಶದಲ್ಲಿ ರೈತರು ಮಾನ್‌ಸ್ಯಾಂಟೋ ತಯಾರಿಸಿದ ಬೋಲ್‌ಗಾರ್ಡ್ ಹತ್ತಿ ಬೆಳೆಯ ವಿವಾದಸ್ಪದ ಪ್ರಯೋಗ ಬಯಲನ್ನು ೧೯೯೮ರ ಡಿಸೆಂಬರ್ ೧ರಂದು ವಾರಂಗಲ್ ಜಿಲ್ಲೆಯಲ್ಲಿ ನಾಶಪಡಿಸಿತು. ಮಾನ್‌ಸ್ಯಾಂಟೋ ತನ್ನ ಭಾರತೀಯ ಘಟಕ ಮಹಾರಾಷ್ಟ್ರ ಹೈಬ್ರೀಡ್ ಬೀಜ ಕಂಪೆನಿಯೊಂದಿಗೆ ಸಂದೇಹಾಸ್ಪದ 'ಕುಲಾಂತರಿ ಬೀಜ' ತಂತ್ರಜ್ಞಾನ ಬೆಳವಣಿಗೆ ಮಾಡಿತು. ಅದರಲ್ಲಿ ಒಂದು ಬಾರಿ ಬಳಸಿದ ಬೀಜವನ್ನು ಮತ್ತೇ ಆ ಬೀಜ ಮೊಳಕೆಯೊಡೆಯದಂತೆ ತಡೆಯುವ ವಂಶವಾಹಕ ಅಳವಡಿಸಿರುತ್ತದೆ, ಅದಕ್ಕಾಗಿ ಅದು ಕೆಂಗಣ್ಣಿಗೆ ಗುರಿಯಾಗಿದೆ. ಕ.ರಾ.ರೈ.ಸಂ. ಈ ತಂತ್ರಜ್ಞಾನ ಭಾರತದ ರೈತರಿಗೆ ಆತ್ಮಘಾತುಕವಾಗಿದೆ ಏಕೆಂದರೆ ಪ್ರತಿ ಬೆಳೆಗೆ ಅವರು ಬೀಜಗಳನ್ನು ಬಹುರಾಷ್ಟ್ರೀಯ ಕಂಪೆನಿಗಳಿಂದ ಕೊಳ್ಳುವಂತೆ ಒತ್ತಾಯಿಸಲಾಗುತ್ತದೆ.

ರಾಷ್ಟ್ರೀಯ ಜೈವಿಕ ವೈವಿಧ್ಯತೆ ಕಾಪಾಡುವ ದೃಷ್ಟಿಯಿಂದ ಮತ್ತು ಬಹುರಾಷ್ಟ್ರೀಯ ಕಂಪೆನಿಗಳು ಆಹಾರ ಸಾಮ್ರಾಜ್ಯ ಶಾಹಿಯನ್ನು ವಿಧಿಸುವುದನ್ನು ತಡೆಯುವ ದೃಷ್ಟಿಯಿಂದ ಕ.ರಾ.ರೈ.ಸಂ. ರಾಷ್ಟ್ರದಾದ್ಯಂತ ಬೃಹತ್ ಪ್ರಚಾರ ಕೈಗೊಳ್ಳಲು ನಿರ್ಧರಿಸಿತು. ಇದಕ್ಕೆ ಸಂಬಂಧಿಸಿದಂತೆ ನಂಜುಂಡಸ್ವಾಮಿಯವರು ಪಂಜಾಬ್, ಹರಿಯಾಣ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಒತ್ತಡ ಗುಂಪುಗಳನ್ನು ಸಂಪರ್ಕಿಸಿದರು. ನಂಜುಂಡಸ್ವಾಮಿಯವರು ಜೈವಿಕ ವೈವಿಧ್ಯತೆಯ ವ್ಯಾಪಾರೀಕರಣ ರಾಷ್ಟ್ರದ ಶ್ರೀಮಂತ ಜೈವಿಕ ವೈವಿಧ್ಯತೆಯನ್ನು ನಾಶಪಡಿಸುತ್ತಿದೆ ಮತ್ತು ಏಕ

ಸಂಸ್ಕೃತಿ ಆಚರಣೆಗಳಿಗೆ ದಾರಿ ಮಾಡಿಕೊಡುತ್ತಿದೆ ಎಂದು ಆಪಾದಿಸಿದರು. ನಂಜುಂಡಸ್ವಾಮಿಯವರು ಭಾರತೀಯ ವಿಜ್ಞಾನ ಸಂಸ್ಥೆ ಮಾನ್‌ಸ್ಯಾಂಟೋ ಕಂಪೆನಿಯನ್ನು ಪ್ರೋತ್ಸಾಹಿಸುತ್ತಿರುವ ಆಪಾದನೆಯ ಮೇಲೆ ಕೆಂಡ ಕಾರಿದರು. ಅದು ಉತ್ಪತ್ತಿ ಮೂಲದ ಮೂಲಕ ತಯಾರಾದ ಹತ್ತಿ ಬೆಳೆಯ ಬಯಲು ಪ್ರಯೋಗ ನಡೆಸುತ್ತಿದೆ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಗೆ ಒಂದು ವೇಳೆ ಅದು ಈ ಕಾರ್ಯಕ್ಕೆ ತನ್ನ ಬೆಂಬಲ ಮುಂದುವರೆಸಿದರೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

ಪ್ರೊಫೆಸರ್ ಜೇಮ್ಸ್ ವ್ಯಾಟ್‌ಸನ್, ನೊಬೆಲ್ ಪಾರಿತೋಷಕ ವಿಜೇತರು, ಉತ್ಪತ್ತಿ ಮೂಲದ ಸುಧಾರಿತ ಜೈವಿಕ ರಚನೆ ಮತ್ತು ಫಲಿತಾಂಶದ ವಾಣಿಜ್ಯೀಕರಣದಲ್ಲಿ ಪೂರ್ಣ ಪಾರದರ್ಶಕತೆಯ ವಿಷಯದಲ್ಲಿ ಬಹಳಷ್ಟು ಜಾಗರೂಕತೆ ಇರಬೇಕೆಂದು ಹೇಳಿದರು. ಆದರೆ ಮಾನ್‌ಸ್ಯಾಂಟೋ ಈ ಪಾರದರ್ಶಕತೆಯ ಅಂಶಕ್ಕೆ ವಿರುದ್ಧವಾಗಿತ್ತು.

ಕರ್ನಾಟಕ ವಿಮೋಚನಾರಂಗದ ರಾಜ್ಯ ಅಧ್ಯಕ್ಷರಾದ ಸಿರಿಮನೆ ನಾಗರಾಜ ಇವರು ಮಾನ್‌ಸ್ಯಾಂಟೋ ಕಂಪೆನಿ "ಒಪ್ಪಂದದ ಉಲ್ಲಂಘನೆ" ಯ ತೀವ್ರ ಅಪರಾಧಗಳ ಆಪಾದನೆಗೆ ಗ್ರೇಟ್ ಬ್ರಿಟನ್ನಿನಲ್ಲಿ ಮತ್ತು ಇತರ ರಾಷ್ಟ್ರಗಳಲ್ಲಿ ಒಳಗಾಗಿದೆ ಎಂದು ಆಪಾದಿಸಿದರು. ಅವರು ವಿಶ್ವವ್ಯಾಪಾರ ಸಂಘದ ನಂತರದ ಸಂದರ್ಭದಲ್ಲಿ, ರೈತರ ಹಕ್ಕುಗಳು ಮತ್ತು ಸವಲತ್ತುಗಳು ರದ್ದುಗೊಳಿಸಲ್ಪಟ್ಟವು ಮತ್ತು ಬಹುರಾಷ್ಟ್ರೀಯ ಕಂಪೆನಿಗಳು ಅದರಿಂದಲೇ ತೃತೀಯ ಜಗತ್ತಿನ ಮೇಲೆ ಹೊಸ ಗುಲಾಮಗಿರಿ ವಿಧಿಸುವ ಸ್ಥಾನ ಪಡೆದವು ಎಂದು ಅಭಿಪ್ರಾಯ ಪಡುತ್ತಾರೆ.

ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಸಂಶೋಧನಾ ಸಂಸ್ಥೆಯ ತೀವ್ರಗಾಮಿಗಳು ಒಂದು ಮಿಲಿಯನ್ ಟನ್ನುಗಳಷ್ಟು ಸೋಯಾಬೀನ್ಸ್‌ನ್ನು ಅಮೇರಿಕಾದಿಂದ ಭಾರತ ಆಮದು ಮಾಡಿಕೊಳ್ಳಲು ಆದೇಶಿಸಿರುವುದನ್ನು ಟೀಕಿಸಿದರು. ಏಕೆಂದರೆ ಅದನ್ನು ಮಾನ್‌ಸ್ಯಾಂಟೋ ಕುಲಾಂತರಿ ತಂತ್ರಜ್ಞಾನದ ಪ್ರಕಾರ ತಯಾರಾದ ಬೀಜದಿಂದ ಅಭಿವೃದ್ಧಿ ಪಡಿಸಿತ್ತು ಮತ್ತು ಈಗಾಗಲೇ ಯುರೋಪಿನ ಸಮುದಾಯ ಮತ್ತು ಚೀನಾ ಅದನ್ನು ತಿರಸ್ಕರಿಸಿದ್ದವು.

ಸಿ. ಭೈರೇಗೌಡ, ಕರ್ನಾಟಕ ಸರ್ಕಾರದ ಕೃಷಿ ಮಂತ್ರಿಗಳು, ಮತ್ತೊಂದು ಗಮನಾರ್ಹ ಅಂಶವನ್ನು ವ್ಯಕ್ತಪಡಿಸಿದರು ಅದೇನೆಂದರೆ, ಕುಲಾಂತರಿ ತಂತ್ರಜ್ಞಾನ ಕೆಲವು ಅಪಾಯಗಳನ್ನು ರೈತರಿಗೆ ಒಡ್ಡುತ್ತದೆ ಅಲ್ಲದೆ ಹೆಚ್ಚಿದ ಬೀಜ ಬೇಡಿಕೆ ಕುಲಾಂತರಿ ತಂತ್ರಜ್ಞಾನವನ್ನು ಅವಲಂಬಿಸಿದ್ದು ಒಂದು ನಿರ್ದಿಷ್ಟ ಬೀಜ ವಿತರಕರ ಏಕಸ್ವಾಮ್ಯಕ್ಕೆ ದಾರಿಮಾಡಿಕೊಡುತ್ತದೆ.

ಪ್ರಸಿದ್ಧ ಪರಿಸರ ತಜ್ಞರಾದ ಡಾ ॥ ವಂದನಾ ಶಿವ ಮಾನ್‌ಸ್ಯಾಂಟೊ ಕಂಪೆನಿ ವಿಶ್ವದಾದ್ಯಂತ ಜನರ ಕೋಪವನ್ನು ಆಹ್ವಾನಿಸಿದೆ ಏಕೆಂದರೆ ಅದರ ಜೈವಿಕ ಉತ್ಪತ್ತಿ ವಿಧಾನದ ಮೂಲಕ ತಯಾರಾದ ಬೆಳೆಗಳು ಜೈವಿಕ ವೈವಿಧ್ಯತೆಗೆ ಪ್ರತಿಕೂಲವಾಗಿವೆ ಎಂದು ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಅವರು ವಿಶ್ವದಾದ್ಯಂತ ಅಮೆರಿಕಾದ ಬಹುರಾಷ್ಟ್ರೀಯ ಕಂಪೆನಿಯಾದ ಮಾನ್‌ಸ್ಯಾಂಟೋ ವಿರುದ್ಧ ಪ್ರಚಾರ ಕೈಗೊಳ್ಳಲಾತ್ತದೆ. ೧೯೯೯ರ ಫೆಬ್ರವರಿಯಲ್ಲಿ ಮೆಕ್ಸಿಕೋದಲ್ಲಿ ಅದರ ಕಾರ್ಯ ಯೋಜನೆಯನ್ನು ರೂಪಿಸಲಾಗುತ್ತದೆ ಎಂದು ಹೇಳಿದರು.

ಪ್ರಾಣಿ ಮತ್ತು ಪ್ರಕೃತಿ ಭಾರತ ಪ್ರಾಜೆಕ್ಟ್‌ನ ಪ್ರಮುಖ ಸಂಪರ್ಕ ಆಧಿಕಾರಿಯಾದ ಡಾ॥ ಮೈಕೆಲ್ ಡಬ್ಲ್ಯೂ. ಫಾಕ್ಸ್‌ರವರು ಮಾನ್‌ಸ್ಯಾಂಟೋ ಕಂಪೆನಿಯನ್ನು, ಅದು ರೈತರನ್ನು ಪ್ರತಿ ವರ್ಷ ಕಂಪೆನಿಯ ಮಳಿಗೆಗಳಿಂದ ಹೊಸ ಬೀಜಕೊಳ್ಳುವಂತೆ ಒತ್ತಾಯಿಸುತ್ತಿದೆ ಎಂದು ಟೀಕಿಸಿದ್ದಾರೆ. ಅವರು ಕುಲಾಂತರಿ ವಂಶವಾಹಕ ಇತರ ರೈತರ ಬೆಳೆಗಳಿಗೂ ಹರಡುತ್ತದೆ ಅವುಗಳ ಸಹಜ ಬೀಜವನ್ನು ನಿರ್ವೀರ್ಯಗೊಳಿಸುತ್ತದೆ ಮತ್ತು ಒರಟು ಹುಲ್ಲು ಮತ್ತು ಇತರ ಬೀಜಗಳೂ ನಿರ್ವೀರ್ಯವಾಗಬಲ್ಲವು ಎಂದು ಎಚ್ಚರಿಸಿದ್ದಾರೆ.

ಡಾ॥ ವಂದನಾಶಿವ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಜನರು ಭೂಮಿ, ನೀರು ಮತ್ತು ಜೈವಿಕ ವೈವಿಧ್ಯತೆಯ ಮೇಲೆ ಹಕ್ಕು ಪಡೆದಿರುತ್ತಾರೆ. ಇವು ಆಹಾರ ಉತ್ಪಾದಿಸಲು ಮೂರು ಮುಖ್ಯ ಘಟಕಾಂಶ ಪಾದಾರ್ಥಗಳಾಗಿವೆ ಮತ್ತು ಈ ಹಕ್ಕನ್ನು ಒಂದು ಹಿಡಿಯಷ್ಟು ಬಹುರಾಷ್ಟ್ರೀಯ ಕಂಪೆನಿಗಳು ಖರೀದಿಸಲು ವಾಸ್ತವವಾಗಿ ಸಾಧ್ಯವಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಅವರು ಕೃಷಿಯ ಸಾಂಸ್ಥೀಕರಣ ಎಂದರೆ ಒಪ್ಪಂದದ ಸಾಗುವಳಿ ಎಂದು ಅಭಿಪ್ರಾಯ ಪಡುತ್ತಾರೆ. ಅದರಲ್ಲಿ ಜನರು ಮತ್ತು ರೈತರು ತಮ್ಮ ಉದ್ದೇಶದ ಮಾಲೀಕರಾಗಿರುವುದಿಲ್ಲ. ಆದರೆ ಉತ್ಪಾದನಾ ಪದ್ಧತಿಯಲ್ಲಿ ಕೇವಲ ಗುಲಾಮರಾಗಿರುತ್ತಾರೆ. ಜನರ ಕಾರ್ಯಕ್ರಮ ಸೂಚಿ ಮತ್ತು ಜಾಗತಿಕ ಕಾರ್ಯಕ್ರಮ ಸೂಚಿಯ ನಡುವೆ ಕಲಹ ಸನ್ನಿಹಿತವಾಗಿದೆ, ಎಂದಿದ್ದಾರೆ.

ಇಲ್ಲಿ ಮಾನ್‌ಸ್ಯಾಂಟೋ ಬಗ್ಗೆ ಕೆಲವು ಸತ್ಯಾಂಶಗಳಿವೆ, ಅದೇನೆಂದರೆ ನಮ್ಮ ರೈತರು ಕಂಪೆನಿಯ ಹಕ್ಕು ಬಾದ್ಯತೆಗಳಿಂದ ಪ್ರಭಾವಿತರಾಗುವ ಮೊದಲು ತಿಳಿಯಬೇಕು. ಇತ್ತೀಚಿನ ವರ್ಷಗಳಲ್ಲಿ, ಬೀಜ ಕಂಪೆನಿಗಳು ರೈತರನ್ನು ನಿಯಂತ್ರಿಸಲು ಬೌದ್ಧಿಕ ಆಸ್ತಿ ಕಾಯಿದೆಗಳನ್ನು ಬಳಸಲು ಪ್ರಾರಂಭಿಸಿವೆ. ಕಂಪೆನಿಗಳು ಪೂರ್ಣವಾಗಿ ಸ್ಥಳೀಯ ಬೀಜಗಳನ್ನು ರೈತರು ಉಳಿಸುವ ಅಥವಾ ಮರು ಮಾರಾಟ ಮಾಡುವುದನ್ನು

ತಡೆಯುವುದು ಕಂಪೆನಿಗಳಿಗೆ ಕಷ್ಟವಾಯಿತು. ಅವರು ವಾಸ್ತವವಾಗಿ ಯಾರು ಪೇಟೆಂಟಾದ ಬೀಜಗಳನ್ನು ಉಳಿಸಿದರೋ ಅಥವಾ ಮರುಬಳಕೆ ಮಾಡಿದರೋ ಆ ರೈತರನ್ನು ನ್ಯಾಯಾಲಯಕ್ಕೆ ಎಳೆದರು, ನಂತರ ಇದು ಬಹುರಾಷ್ಟ್ರೀಯ ಕಂಪೆನಿಗಳ ಸ್ಥಾಪನೆಯ ಮೇಲೆಯೇ ಪ್ರತಿಕೂಲ ಪರಿಣಾಮ ಉಂಟು ಮಾಡಿತು. ಆದ್ದರಿಂದ ಮಾನ್‌ಸ್ಯಾಂಟೋದಂತಹ ಬಹುರಾಷ್ಟ್ರೀಯ ಕಂಪೆನಿಗಳು ನ್ಯಾಯಾಲಯದ ಮಧ್ಯಸ್ಥಿಕೆಯಿಲ್ಲದೇ ನೇರವಾಗಿ ರೈತರನ್ನು ನಿಯಂತ್ರಿಸಲು ಕುಲಾಂತರಿ ಬೀಜ ತಂತ್ರಜ್ಞಾನವನ್ನು ಜಾರಿಗೆ ತಂದವು.

ಡಂಕೆಲ್ ಪ್ರಸ್ತಾವನೆ ಮತ್ತು ಕೃಷಿ ಸರಕುಗಳ ಆಮದು ಮತ್ತು ರಫ್ತು ಹಾಗೂ ಬಹುರಾಷ್ಟ್ರೀಯ ಕಂಪೆನಿಗಳು

ಕೆಲವು ವಿಮರ್ಶಕರ ಪ್ರಕಾರ, ಇತರ ಗ್ಯಾಟ್ ಸದಸ್ಯರಂತೆಯೇ ಭಾರತ ಕೂಡ ಅಧಿಕ ರಫ್ತು ಮಾಡಲು ಅವಕಾಶವಿದೆ. ಅದರ ಮೂಲಕ, ಭಾರತದ ಕೃಷಿ ರಫ್ತು ಹೆಚ್ಚಳ ಪಡೆಯುತ್ತದೆ ಮತ್ತು ಅದು ಭಾರತದ ವಿದೇಶೀ ವಿನಿಮಯಕ್ಕೆ ಹೆಚ್ಚು ಅನುಕೂಲಕರವಾಗಿರುತ್ತದೆ. ಆದರೆ ಡಂಕೆಲ್ ಪ್ರಸ್ತಾವನೆ ಅದನ್ನು ಅಲ್ಲಗಳೆಯಿತು. ಕ.ರಾ.ರೈ.ಸಂ. ಹೇಳುವಂತೆ, ಒಂದು ವೇಳೆ ಭಾರತ ರಫ್ತುದಾರನ ಸ್ಥಾನ ಪಡೆದರೆ ಆಗ ಡಂಕೆಲ್ ಪ್ರಸ್ತಾವನೆಯಲ್ಲಿ ಬಂಡವಾಳಶಾಹಿ ಪರವಾದ ಮತ್ತು ಸಾಮ್ರಾಜ್ಯಶಾಹಿ ಅವಕಾಶಗಳಿವೆ, ಅವುಗಳೆಂದರೆ ಆರೋಗ್ಯ ರಕ್ಷಣ ಸಂಬಂಧವಾದ ಮತ್ತು ಮಾನಸಿಕ ಆರೋಗ್ಯ ರಕ್ಷಣ ಕ್ರಮಗಳಾಗಿವೆ. ಈ ಕ್ರಮಗಳನ್ನು ಬಳಸುವ ಮೂಲಕ ಅವರು ಭಾರತದಿಂದ ಯಾವುದೇ ವಸ್ತುವಿನ ಆಮದನ್ನು ರದ್ದು ಪಡಿಸಬಹುದು.

ಕ.ರಾ.ರೈ.ಸಂ. ಡಂಕೆಲ್ ಪ್ರಸ್ತಾವನೆಯ ಮತ್ತೊಂದು ದ್ವಂದ್ವಾತ್ಮಕ ವಿಧಾನವನ್ನು ದೂಷಿಸಿದೆ, ಅದು ಉತ್ಪತ್ತಿ ಮೂಲದ ಸಂಪನ್ಮೂಲಗಳ ಒಡೆತನಕ್ಕೆ ಸಂಬಂಧಿಸಿದೆ. ಒಂದು ವೇಳೆ ಉತ್ಪತ್ತಿ ಮೂಲದ ಸಂಪನ್ಮೂಲಗಳು ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಸೇರಿದರೆ, ಆಗ ಅವುಗಳನ್ನು ಮಾನವ ಜನಾಂಗದ ಸಾಮಾನ್ಯ ಆಸ್ತಿಯೆಂದು ಪರಿಗಣಿಸಲಾಗುತ್ತದೆ. ಆದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಉತ್ಪತ್ತಿ ಮೂಲದ ಸಂಪನ್ಮೂಲಗಳು ಯಾವ ರಾಷ್ಟ್ರದಲ್ಲಿ ಕಂಡು ಬರುತ್ತವೆಯೋ ಆ ರಾಷ್ಟ್ರಕ್ಕೆ ಸಂಬಂಧಿಸಿದ ಆಸ್ತಿಯೆಂದು ಪರಿಗಣಿಸಲಾಗುತ್ತದೆ.

ಕ.ರಾ.ರೈ.ಸಂ. ಹೇಳುವಂತೆ ಡಂಕೆಲ್ ಪ್ರಸ್ತಾವನೆಯ ಉದಾರೀಕರಣ ನೀತಿಯಂತೆ ಭಾರತ ಬಹುರಾಷ್ಟ್ರೀಯ ಕಂಪೆನಿಗಳನ್ನು ಶೇಕಡಾ ೧೦೦ರಷ್ಟು ಈಕ್ವಿಟಿಯೊಂದಿಗೆ ಬರಮಾಡಿಕೊಳ್ಳಬೇಕು. ಇಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಪರೋಪಕಾರಿಗಳಾಗಿ ಬರುತ್ತಿಲ್ಲ. ಆದರೆ ಸಾಮ್ರಾಜ್ಯ ಶಾಹಿಗಳಾಗಿ ಮತ್ತು ವಸಾಹತು

ಶಾಹಿಗಳಾಗಿ ಬರುತಿದ್ದಾರೆ. ಅವರು ಸಿದ್ಧ ವಸ್ತುಗಳನ್ನು ಉತ್ಪಾದಿಸುತ್ತಾರೆ ಮತ್ತು ರಫ್ತು ಮಾಡುತ್ತಾರೆ. ಆದ್ದರಿಂದ, ಸ್ಥಳೀಯ ರೈತರು ಮತ್ತು ಉತ್ಪಾದಕರು ಅನುಭೋಗದಲ್ಲಾಗಲಿ ಅಥವಾ ಉತ್ಪಾದನೆಯಲ್ಲಾಗಲೀ ಭಾಗಿಗಳಾಗುವುದಿಲ್ಲ. ಆದರೆ ಸ್ಥಳೀಯ ಉತ್ಪಾದಕರು ಬಿಳಿಯ ಸಾಮ್ರಾಜ್ಯಶಾಹಿಗಳು ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆಹೊಡೆಯುವುದನ್ನು ನೋಡುವ ಪ್ರೇಕ್ಷಕರು ಮಾತ್ರ ಆಗಿರುತ್ತಾರೆ.

ಜಿ. ಕೆ. ಹೆಲ್ಸೈನರ್ ಪ್ರಕಾರ, "ಐತಿಹಾಸಿಕವಾಗಿ, ಬಹುರಾಷ್ಟ್ರೀಯ ಉದ್ದಿಮೆಗಳು ಪ್ರಮುಖವಾಗಿ, ತಮ್ಮ ಸೇವೆಗಳನ್ನು (ಬಂಡವಾಳ, ಕುಶಲತೆ, ತಂತ್ರಜ್ಞಾನ ಇತ್ಯಾದಿ) ನೇರ ಬಂಡವಾಳ ಹೂಡಿಕೆ ಎಂದು ಕರೆಯಲಾಗುವ ಒಂದು ಯೋಜನೆಯಲ್ಲಿ ನೀಡಲು ಅವರಿಗೆ ಅನುಮತಿ ನೀಡುವ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಅದರೆ ಬಹುರಾಷ್ಟ್ರೀಯ ಕಂಪೆನಿಗಳ ಪಾತ್ರ ಅಂತರರಾಷ್ಟ್ರೀಯ ಪೈಪೋಟಿಗೆ ಸಂಬಂಧಿಸಿದಂತೆ, ವಿಷಯದ ಮುಖ್ಯ ಸಮಸ್ಯೆಯೆಂದರೆ ಮಾರುಕಟ್ಟೆ.

೧೯೮೮ರಲ್ಲಿ, ಅನೇಕ ಬಹುರಾಷ್ಟ್ರೀಯ ಕಂಪೆನಿಗಳು ಬೀಜ ನೀತಿಯ ಉದಾರೀಕರಣದ ಲಾಭ ಪಡೆದು ಭಾರತಕ್ಕೆ ಪ್ರವೇಶಿಸಿದವು. ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಯಾದ ಮಾನ್‌ಸ್ಯಾಂಟೋ ಕಾಂಡ ಹುಳು ವಿರೋಧೀಯೆಂದು ಹೇಳಲಾದ ಹತ್ತಿ ಪ್ರಕಾರವನ್ನು ಪೇಟೆಂಟ್ ಮಾಡಿಕೊಂಡಿತು. ಹತ್ತಿಯ ಈ ಭೀಕರ ಕೀಟ ಅದನ್ನು ೯ ಬಿಲಿಯನ್ ಡಾಲರ್‌ಗೆ ಮಾರಟಕ್ಕಿಡುವಂತೆ ಮಾಡಿತು. ಪೇಟೆಂಟ್ ರಕ್ಷಣೆ ಪ್ರಕಾರ, ಆ ಪ್ರಕಾರವನ್ನು ಮಾನ್‌ಸ್ಯಾಂಟೋ ಹತ್ತಿ ಎಂಬುದಾಗಿಯೇ ಬೆಳೆಸಬೇಕಾಗಿತ್ತು ಮತ್ತು ಸ್ವದೇಶೀ ಪ್ರಕಾರಗಳಲ್ಲಿ ಅದರ ಕಾಂಡ ಕೀಟ ವಿರೋಧಿ ಲಕ್ಷಣವನ್ನು ವರ್ಗಾಯಿಸಲು ನಮ್ಮ ವ್ಯವಸಾಯ ವಿಧಾನದಲ್ಲಿ ಬಳಸಲು ಸಾಧ್ಯವಿರಲಿಲ್ಲ. ಕೆಲವು ಬಹುರಾಷ್ಟ್ರೀಯ ಕಂಪೆನಿಗಳು ಪೇಟೆಂಟ್ ಕಾಯ್ದೆಗಳನ್ನು ಉಚಿತ ಕ್ರಮದಲ್ಲಿ ಸಂಯೋಜಿಸುವ ಮೂಲಕ ಭಾರತದ ಕೃಷಿ ಸಂಶೋಧನೆ ಮತ್ತು ಆರ್ಥಿಕ ಪ್ರಗತಿಗೆ ತಡೆಯೊಡ್ಡಿದವು.

ಬಹುರಾಷ್ಟ್ರೀಯ ಕಂಪೆನಿಗಳ ಬಗ್ಗೆ ದಿನೇಶ್ ಆಬ್ರೋಲ್ ಒಂದು ಬೇರೆ ರೀತಿಯ ಅಭಿಪ್ರಾಯ ನೀಡಿದ್ದಾರೆ. ಮೊದಲನೆಯದಾಗಿ, ಗೊಬ್ಬರಗಳಿಗೆ ವಿಶಾಲ ಮಾರುಕಟ್ಟೆಯಿಂದ ಪಡೆದ ಆರ್ಥಿಕ ಲಾಭಗಳು ಮತ್ತು ಕೀಟನಾಶಕ ಹಾಗೂ ಗೊಬ್ಬರಗಳ ಕೈಗಾರಿಕೆಯಲ್ಲಿನ ಹೂಡಿಕೆಕೂಡ ಸಾಕಷ್ಟಿತ್ತು. ಎರಡನೆಯದಾಗಿ, ಅಮೇರಿಕಾ ಸರ್ಕಾರದ ರಾಜಕೀಯ ಉದ್ದೇಶಗಳೂ ಬಹುರಾಷ್ಟ್ರೀಯ ಕಂಪೆನಿಗಳ ಪಾಲ್ಗೊಳ್ಳುವಿಕೆಗೆ ಅಂದರೆ 'ಸಮತಾವಾದಿ ನಿರ್ದೇಶಿತ ಅರ್ಥಶಾಸ್ತ್ರಕ್ಕೆ' ವಿರುದ್ಧವಾಗಿ ಬಂಡವಾಳಶಾಹಿ ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವಲ್ಲಿ ಕೊಡುಗೆ ನೀಡಿದವು. ಅದು ಹಿಂದಿನ

ರಷ್ಯಾದ ವಿಭಜನೆವರೆಗೂ ಮುಂದಿವರಿಯಿತು. ಈಗ ರಷ್ಯಾದ ಪ್ರಜಾಪ್ರಭುತ್ವ ಸ್ವತಂತ್ರ ರಾಷ್ಟ್ರಗಳು ಎಂಬ ವಿಭಜನೆಯ ನಂತರ, ಅಮೇರಿಕಾ ಸರ್ಕಾರದ ಏಕೈಕ ಉದ್ದೇಶವೆಂದರೆ ತನ್ನ ಸರಕುಗಳಿಗೆ ಮಾರುಕಟ್ಟೆ ಪಡೆಯುವುದು ಮತ್ತು ಲಾಭಗಳಿಸುವುದು.

ಆರ್. ಹೆಚ್. ಪಾಟೀಲ ಹೇಳುವಂತೆ, ಯುರೋಪಿನ ಬಹುರಾಷ್ಟ್ರೀಯ ಕಂಪೆನಿಗಳು ಅಮೇರಿಕಾದ ಕಂಪೆನಿಗಳಿಗೆ ಹೋಲಿಸಿದರೆ ಚಿಕ್ಕದಾಗಿದ್ದವು. ಅತಿಥೇಯ ರಾಷ್ಟ್ರಗಳನ್ನು ಶೋಷಣೆ ಮಾಡುವ ಸಾಮರ್ಥ್ಯವೂ ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳಿಗಿಂತ ಕಡಿಮೆಯಿರುತ್ತದೆ. ಏಕೆಂದರೆ ಅದು ಬಲವಾದ ರಾಜಕೀಯ ಶಕ್ತಿಯ ಹಿನ್ನೆಲೆ ಹೊಂದಿದೆ.

ನಂಜುಂಡಸ್ವಾಮಿಯವರು ಭಾರತದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂಬ ಕಾರಣಕ್ಕಾಗಿ ಅಮೇರಿಕಾವನ್ನು ಟೀಕಿಸಿದರು ಮತ್ತು ಅಮೇರಿಕಾ "ಜೈವಿಕ ವೈವಿಧ್ಯತೆ, ಪೇಟೆಂಟ್ ಮತ್ತು ಸಸ್ಯ ಪ್ರಕಾರಗಳ ಸಂರಕ್ಷಣೆಯ ವಿಷಯದಲ್ಲಿ ಮೂರು ಮುಖ್ಯ ನೀತಿಗಳನ್ನು ರಚಿಸುವಂತೆ ಭಾರತದ ಹಸ್ತಗಳನ್ನು ತಿರುಚುತ್ತಿದೆ" ಎಂದು ಹೇಳಿದರು. ಅವರು ಶೇಕಡಾ ೮೦ರಷ್ಟು ಬಿತ್ತನೆ ಬೀಜ ರೈತರಿಂದಲೇ ಉತ್ಪಾದನೆಯಾಗುತ್ತದೆ ಮತ್ತು ಬೀಜ ಕಂಪೆನಿಗಳು ಉಳಿದ ಶೇಕಡಾ ೨೦ರಷ್ಟನ್ನು ನೀಡುತ್ತದೆ ಎಂದು ಹೇಳಿದರು. ಬಹುರಾಷ್ಟ್ರೀಯ ಕಂಪೆನಿಗಳು ಕೃಷಿಕರ ಆಸಕ್ತಿಗಳನ್ನು ನಿಗ್ರಹಿಸುವ ಮೂಲಕ ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದವು.

ಹಲವಾರು ದಶಕಗಳವರೆಗೆ ಭಾರತದಲ್ಲಿ ಕಾರ್ಯವೆಸಗಿದ ಬಹುರಾಷ್ಟ್ರೀಯ ಕಂಪೆನಿಗಳು ವ್ಯಾಪಾರಸ್ಥರ ಪಾತ್ರವನ್ನು ತಾಂತ್ರಿಕ ಬದಲಾವಣೆಯ ವೇಗವರ್ಧಕಗಳಂತೆ ಆದ್ಯತೆಯಿಂದ ಪರಿಗಣಿಸಿದ್ದವು. ಅವರು ವಿದೇಶೀ ಕಂಪೆನಿಗಳೊಂದಿಗೆ ಕೇವಲ ಮೂಲಭೂತ ಕೈಗಾರಿಕೆಗಳಲ್ಲಿ ಮಾತ್ರ ಸಹಭಾಗಿಗಳಾಗಿದ್ದವು ಮತ್ತು ಅವುಗಳ ರಫ್ತು ದಾಖಲೆ ಇಂಜಿನೀಯರಿಂಗ್ ಸರಕುಗಳಲ್ಲಿ ಬಹಳ ದುರ್ಬಲವಾಗಿತ್ತು.

ಕ.ರಾ.ರೈ.ಸಂ. ವಿದೇಶೀ ರಾಷ್ಟ್ರಗಳ ನಿಯಮಾನುಸಾರ ಕೈಗಾರಿಕಾ ಯೋಜನೆಯನ್ನು ಕೈಗೊಂಡಿದ್ದಕ್ಕಾಗಿ ಕೇಂದ್ರ ಸರ್ಕಾರವನ್ನು ಟೀಕಿಸಿತು. ಆದ್ದರಿಂದ ಭಾರತದ ಕೈಗಾರಿಕೆಗಳು ವಿಲಾಸಿ ಸರಕುಗಳ ಉತ್ಪಾದಕರ ಮಟ್ಟಕ್ಕೆ ಇಳಿದಿವೆ. ಆದರೂ ಇದರಿಂದ ಸರ್ಕಾರ ಪಾಠ ಕಲಿತಿಲ್ಲ. ಈಗ ಅದು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಕೃಷಿಯನ್ನು ಅದೇ ನೀರಿಗೆ ತಳ್ಳುತ್ತಿದೆ. ಅದರ ಮೂಲಕ ಭಾರತದ ರೈತರನ್ನು ಅದು ಗುಲಾಮರ ಮಟ್ಟಕ್ಕೆ ತಳ್ಳಿದೆ ಮತ್ತು ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳನ್ನು ಅವರಿಗೆ ಬೀಜ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟು ಮತ್ತು ನಮ್ಮ

ಮಾರುಕಟ್ಟೆಯನ್ನು ಅವರಿಗೆ ತೆರೆದಿಡುವ ಮೂಲಕ ನವವಸಾಹತುಶಾಹಿಗೆ ಅವಕಾಶ ನೀಡಿದೆ.

ಡಂಕೆಲ್ ಪ್ರಸ್ತಾವನೆ ಮತ್ತು ರೈತರ ಹಕ್ಕುಗಳು

ಕ.ರಾ.ರೈ.ಸಂ. ಹೇಳುವಂತೆ, ಡಂಕೆಲ್ ಪ್ರಸ್ತಾವನೆ ಮೂಲಭೂತ ಮಾನವ ಹಕ್ಕುಗಳನ್ನು ವಿರೋಧಿಸುತ್ತದೆ. ಡಂಕೆಲ್ ಪ್ರಸ್ತಾವನೆಯನ್ನು ಅಳವಡಿಸುವ ಮೂಲಕ ಒಬ್ಬ ರೈತ ತನ್ನದೇ ಆದ ಬೀಜ ಮತ್ತು ಗೊಬ್ಬರವನ್ನು ಉತ್ಪಾದಿಸುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಅದು ಸಂಶೋಧನೆಯ ಮೇಲೆ ದುಷ್ಪರಿಣಾಮ ಬೀರುತ್ತದೆ ಮತ್ತು ಅಂತಿಮವಾಗಿ ರೈತರ ಮಾನವ ಹಕ್ಕುಗಳ ವೆಚ್ಚದಲ್ಲಿ ಜ್ಞಾನ ಖಾಸಗಿ ಕಂಪೆನಿಗಳ ಆಸ್ತಿಯಾಗುತ್ತದೆ.

ಭಾರತ ಸರ್ಕಾರ ಸಸ್ಯ ಪ್ರಕಾರದ ಮೇಲೆ ಒಂದು ಕಾಯ್ದೆಯನ್ನು ಜಾರಿಗೆ ತಂದಿತು. ಅದು ರೈತರನ್ನು ಸಾಗುವಳಿದಾರ ಮತ್ತು ಸಂರಕ್ಷಕ ಎಂದು ವ್ಯಾಖ್ಯಾನಿಸಿತು. ಆದರೆ ಪೋಷಕ ಎಂದಲ್ಲ. ವಂದನಾ ಶಿವ ಅಭಿಪ್ರಾಯ ಪಡುವಂತೆ, ಪೋಷಕನಾಗಿ ರೈತರ ಪ್ರಮುಖ ಪಾತ್ರವನ್ನು ಪ್ರಸ್ತಾವನೆಯ ಶಾಸನದಲ್ಲಿ ಅಲ್ಲಗಳೆಯಲಾಗಿದೆ. ಅದುದರಿಂದ ಅದು ಸಹಜವಾಗಿ ರೈತರ ಹಕ್ಕುಗಳನ್ನು ರಕ್ಷಿಸುವಲ್ಲಿ ಅಸಮರ್ಥವಾಗಿದೆ.

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ 'ರೈತರ ಹಕ್ಕುಗಳ' ಪರಿಭಾವನೆಯನ್ನು ಪೋಷಕರ ಹಕ್ಕುಗಳಿಗೆ ಸಮಾನಾಂತರವಾಗಿ ಪರಿಗಣಿಸಿದೆ. ಹಿಂದೆ ಹಾಗೂ ಪ್ರಸ್ತುತದಲ್ಲಿ, ರೈತರನ್ನು ಪೋಷಕರಾಗಿ ಗುರುತಿಸಲಾಗಿದೆ ಮತ್ತು ಬೆಳೆ ಸಸ್ಯಗಳ ಅಭಿವೃದ್ಧಿ ಮತ್ತು ಕಾಯುವಿಕೆಯಲ್ಲಿ ಅವರು ಫಲಾಪೇಕ್ಷೆಯಿಲ್ಲದೆ ಕೊಡುಗೆ ನೀಡಿದ್ದಾರೆ. ವಿಶ್ವದ ಶೇಕಡಾ ೯೦ಕ್ಕಿಂತ ಹೆಚ್ಚು ತಿಳಿದಿರುವ ಆಹಾರ ಮತ್ತು ವಾಣಿಜ್ಯ ಬೆಳೆಗಳು ಅಭಿವೃದ್ಧಿಶೀಲ ರಾಷ್ಟ್ರಗಳ ರೈತರ ಪರಿಶ್ರಮದ ಫಲವಾಗಿದೆ. ಈ ಡಂಕೆಲ್ ಪ್ರಸ್ತಾವನೆಯ ಪೇಟೆಂಟ್ ಭಾಗ ಸಂಶೋಧಕನ ಹಕ್ಕುಗಳನ್ನು ಬದಿಗೊತ್ತಿ ಅದರ ನವೀನತೆಯನ್ನು ಕಲ್ಪಿಸುವವನಿಗೆ ಹಕ್ಕನ್ನು ನೀಡುತ್ತಿದೆ.

ಇದೇ ವೇಳೆಗೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಒಂದು ಹೊಸ ತಾತ್ವಿಕ ವಾದವನ್ನು ಕಂಡುಹಿಡಿದಿದ್ದಾರೆ. ಅದೇನೆಂದರೆ ಮೂಲ ಉತ್ಪತ್ತಿ ಸಂಪನ್ಮೂಲಗಳು "ಮಾನವ ಜನಾಂಗದ ಪಿತೃಧನ" ಎಂಬುದೇ ಆಗಿದೆ. ಅನೇಕ ಸಂಸ್ಥೆಗಳು ಈ ತತ್ವದ ವಿರುದ್ಧ "ವಂಶವಾಹಿ ಪ್ರಣಾಳಿಕೆ" ಯನ್ನು ಹೊಸದೆಹಲಿಯಿಂದ ವ್ಯವಸ್ಥೆಗೊಳಿಸುವ ಮೂಲಕ ಜನಪರ ಸಂಘಟನೆಗಳಾದ ಕ.ರಾ.ರೈ.ಸಂ., ಸ್ವಯಂ ಗುಂಪುಗಳಾದ

ವಿಜ್ಞಾನ ಮತ್ತು ಅಭಿವೃದ್ಧಿ ವೇದಿಕೆ, ಸಮಕಾಲೀನ ಅಧ್ಯಯನ ವೇದಿಕೆ ಬೆಂಗಳೂರು. ರಾಜಕೀಯ ಪಕ್ಷಗಳಾದ ಸಿಪಿಐ ಮತ್ತು ಸಿಪಿಐ (ಎಂ) ಹಾಗೂ ಇತರ ಪ್ರಜಾಪ್ರಭುತ್ವವಾದಿ ಸಂಸ್ಥೆಗಳು ವಿರೋಧಿಸಿವೆ. ಅವರು ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಕಂಪೆನಿಗಳು ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿರುವ ಸೂಕ್ಷ್ಮ ಜೈವಿಕ ಜೀವದ್ರವ್ಯವನ್ನು ಖಾಸಗೀಕರಣ ಗೊಳಿಸಲು ಪಿತೂರಿನಡೆಸುತ್ತಿವೆ ಮತ್ತು ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಗಳನ್ನು ಹೊಸ ವಸಾಹತು ಶಾಹಿ ರಾಷ್ಟ್ರಗಳನ್ನಾಗಿಸಲು ಪಿತೂರಿ ನಡೆಸುತ್ತಿವೆ ಎಂಬ ಭೀತಿ ವ್ಯಕ್ತಪಡಿಸಿದ್ದಾರೆ.

ಡಂಕೆಲ್ ಪ್ರಸ್ತಾವನೆಯ ಪೇಟೆಂಟ್ ವಿಧಾನ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವೆಚ್ಚದಾಯಕವಾಗಿದ್ದು ರೈತರು ಏಕರೂಪದ ಮತ್ತು ವಂಶವಾಹಿಯಾಗಿ ಚಿಕ್ಕ ಆಧಾರವುಳ್ಳ ಆಧುನಿಕ ಕೃಷಿ ಅಳವಡಿಸುವಂತೆ ಒತ್ತಾಯಿಸಿದೆ ಮತ್ತು ಅವರು ಕೊಳ್ಳುವ ಬೀಜಗಳು ಅಥವಾ ಪ್ರಾಣಿಗಳ ಆವಿಷ್ಕಾರ ಮಾಡಲು ಅಸಮರ್ಥರನ್ನಾಗಿ ಮಾಡಿದೆ. ದೀರ್ಘಾವಧಿಯಲ್ಲಿ ಸಾಂಪ್ರಾದಾಯಿಕ ವಿಧಗಳು ನಾಶ ಹೊಂದುತ್ತವೆ. ಅದರೊಂದಿಗೆ ಕೃಷಿ ಆರ್ಥಿಕ ಪದ್ಧತಿಯ ಸ್ಥಿರತೆ ಮತ್ತು ಮುಂದುವರಿಕೆಯ ಮೇಲೆ ತೀವ್ರತರ ಪರಿಣಾಮಗಳುಂಟಾಗುತ್ತವೆ.

ಈ ವಿಧಾನದ ಫಲವಾಗಿ ಪಿ. ಜೆ. ಜೇಮ್ಸ್ ಹೇಳುವಂತೆ, ಸಾವಿರಕ್ಕಿಂತ ಹೆಚ್ಚು ಅಕ್ಕಿ ಪ್ರಕಾರಗಳು ಮನಿಲಾದಲ್ಲಿರುವ ಸಾಮ್ರಾಜ್ಯಶಾಹಿ ನಿಯಂತ್ರಿತ ಅಂತರರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆಯ ನಿಯಂತ್ರಣದಲ್ಲಿ ಸೇರಿವೆ. ಅವರು ಈ ವಿಧಾನವನ್ನು ಹೀಗೆ ಸಂಕ್ಷಿಪ್ತವಾಗಿ ಹೇಳಿದ್ದಾರೆ, "ಭಾರತೀಯ ಬೀಜಗಳು, ಈ ತೀರವನ್ನು ಬಿಟ್ಟ ಮೇಲೆ ಅಮೇರಿಕಾದ ರಹದಾರಿ ಪರವಾನಗಿಯನ್ನು ಪಡೆಯುತ್ತವೆ" ಎಂದು.

ಜೈವಿಕ ವಸ್ತುಗಳ ಪೇಟೆಂಟ್‌ನ ತೀವ್ರತರ ಪರಿಣಾಮಗಳನ್ನು "ಒಂದು ವೇಳೆ ಜೈವಿಕ ವಸ್ತುಗಳಿಗೆ ಭಾರತ ಪೇಟೆಂಟ್ ಆಳ್ವಿಕೆಯನ್ನು ಒಪ್ಪಿಕೊಂಡರೆ, ಅದು ಅಭಿವೃದ್ಧಿ, ಲಭ್ಯತೆ ಮತ್ತು ಬೀಜಗಳ ವಿತರಣೆ ಗೊಬ್ಬರಗಳು ಮತ್ತು ಕೀಟ ನಾಶಕಗಳನ್ನು ಜೈವಿಕ ತಂತ್ರಜ್ಞಾನದಲ್ಲಿ ಈಗಾಗಲೇ ತಮ್ಮ ಸಾಮ್ರಾಜ್ಯ ಸ್ಥಾಪಿಸಿರುವ ಬಹುರಾಷ್ಟ್ರೀಯ ಕಂಪೆನಿಗಳಿಗೆ ಬಿಟ್ಟು ಕೊಟ್ಟಂತೆಯೇ" ಎಂದು ಸುಮನ್ ಸಹಾಯ್ ನಿರೀಕ್ಷೆ ಮಾಡಿದ್ದಾರೆ.

ವಾಸ್ತವಿಕವಾಗಿ ವಂದನಾಶಿವ ಹೇಳುವಂತೆ, ಬಹುರಾಷ್ಟ್ರೀಯ ಕಂಪೆನಿಗಳು ಕೃಷಿ ಕ್ಷೇತ್ರದಲ್ಲಿ ಪೇಟೆಂಟ್ ಮಾಡಲು ಬಿಟ್ಟರೆ ನಾವು ಈ ಕೆಳಗಿನ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

೧) ಇದು ಸಸ್ಯ ವಸ್ತುಗಳ ನಿಯಂತ್ರಣದಲ್ಲಿ ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಕಂಪೆನಿಗಳು ಏಕಸ್ವಾಮ್ಯ ಸಾಧಿಸಲು ಪ್ರೋತ್ಸಾಹ ನೀಡುತ್ತದೆ.

೨) ಕೃಷಿ ಉತ್ಪಾದನಾಂಗಗಳಾದ ಬೀಜಗಳು, ಗೊಬ್ಬರಗಳು, ಕೀಟ ನಾಶಕಗಳು ಮತ್ತು ಔಷದೀ ಸಸ್ಯ ರಕ್ಷಕಗಳು ಮುಂತಾದುವುಗಳಿಗೆ ರೈತರು ಬಹುರಾಷ್ಟ್ರೀಯ ಕಂಪೆನಿಗಳನ್ನು ಅವಲಂಬಿಸಬೇಕಾಗುತ್ತದೆ.

೩) ಕೃಷಿ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಏಕಸ್ವಾಮ್ಯ ನಿಯಂತ್ರಣ, ರೈತರ ಪ್ರಕಾರಗಳು ಅಧಿಕ ಪ್ರಮಾಣದಲ್ಲಿ ಮರೆಯಾಗುವಂತೆ ಮಾಡುತ್ತದೆ. ಹೀಗೆ ಏಕ ಸಾಗುವಳಿಗೆ ದಾರಿ ಮಾಡಿಕೊಡುತ್ತದೆ. ಇದರ ಪರಿಣಾಮವಾಗಿ ಜೈವಿಕ ವೈವಿಧ್ಯತೆ ನಾಶವಾಗಿ ನಮ್ಮ ದೇಶದ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆಯನ್ನು ನಾಶಮಾಡುತ್ತದೆ.

೪) ಗೌರವ ಧನ ಪಾವತಿಯಿಂದಾಗಿ ಬೀಜಗಳ ಬೆಲೆಗಳು ಹೆಚ್ಚುತ್ತವೆ.

೫) ಬೌದ್ಧಿಕ ಆಸ್ತಿ ಹಕ್ಕುಗಳ ಆರ್ಥಿಕತೆ ಸಣ್ಣ ರೈತರನ್ನು ಸಾಲಗಾರರನ್ನಾಗಿ ಮತ್ತು ದರಿದ್ರರನ್ನಾಗಿ ಮಾಡುತ್ತದೆ.

೬) ಕೃಷಿ ಸಮಾಜದ ಅಧಿಕ ಪ್ರಮಾಣದ ಮೂಲೋತ್ಪಾಟನೆ, ಸಾಮಾಜಿಕ ವಿಘಟನೆ, ಅಪರಾಧಗಳ ಹೆಚ್ಚಳ ಮತ್ತು ಕಾನೂನು ಮತ್ತು ಶಿಸ್ತಿನ ನಾಶಕ್ಕೆ ದಾರಿ ಮಾಡಿಕೊಡುತ್ತದೆ.

೭) ಕೃಷಿ ವಲಯದಲ್ಲಿ ಬೌದ್ಧಿಕ ಆಸ್ತಿ ರಕ್ಷಣೆ ಮತ್ತು ಸಸ್ಯ ಪ್ರಕಾರಗಳು ಆಹಾರ ರಕ್ಷಣೆಯನ್ನು ಕಡೆಗಣಿಸುತ್ತದೆ.

೮) ಬೀಜ ಮತ್ತು ಸಸ್ಯಗಳ ಬೌದ್ಧಿಕ ಆಸ್ತಿ ಹಕ್ಕುಗಳು ರಾಷ್ಟ್ರದ ಸಾಲವನ್ನು ೧೦ ಪಟ್ಟು ಹೆಚ್ಚಿಸುತ್ತವೆ.

೯) ಆಹಾರ ಸುರಕ್ಷತೆಯ ನಿರ್ಲಕ್ಷ್ಯ ಆಹಾರ ಆಮದುಗಳನ್ನು ಹೆಚ್ಚಿಸುತ್ತದೆ ಮತ್ತು ಇದರಿಂದಾಗಿ ವಿದೇಶೀ ವಿನಿಮಯ ಹೊರೆ ಹೆಚ್ಚುತ್ತದೆ, ಹೀಗೆ ಅಂತರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕುಗಳಂತಹ ಸಂಸ್ಥೆಗಳಿಂದ ಹೆಚ್ಚಿನ ಷರತ್ತುಗಳನ್ನು ಆಹ್ವಾನಿಸುತ್ತದೆ.

೧೦). ಆಹಾರದ ಅಸುರಕ್ಷತೆ ಕೈಗಾರಿಕಾ ಪ್ರಧಾನ ರಾಷ್ಟ್ರಗಳಲ್ಲಿ ಆಹಾರವನ್ನು ಒಂದು ಶಸ್ತ್ರವಾಗಿ ಪರಿವರ್ತಿಸುತ್ತದೆ. ಹೀಗೆ ಪೂರ್ಣ ಗುಲಾಮಗಿರಿ ಮತ್ತು ಪುನರ್ ವಸಾಹತುಕರಣಕ್ಕೆ ದಾರಿ ಮಾಡಿಕೊಡುತ್ತದೆ.

ಆದ್ದರಿಂದ, ಜೈವಿಕ ವಸ್ತುಗಳ ಮತ್ತು ಬೀಜಗಳ ಪೇಟೆಂಟ್ ಮಾಡುವುದು ಕೇವಲ ಅವುಗಳನ್ನು ಪೇಟೆಂಟ್ ಮಾಡುವುದಷ್ಟೇ ಅಲ್ಲ, ಆದರೆ ಅದು ರೈತರ ಹಕ್ಕುಗಳನ್ನು ಕಿತ್ತೊಯ್ಯುತ್ತದೆ ಮತ್ತು ಅಂತಿಮವಾಗಿ ಅವರ "ಜೀವನಗಳನ್ನೂ" ಎಂದಿದ್ದಾರೆ.

ನಂಜುಂಡಸ್ವಾಮಿಯವರು, ರೈತರ ಹಕ್ಕುಗಳ ಪ್ರಮುಖ ಮುಖಂಡರಾಗಿ, ರೈತರ ಹಕ್ಕುಗಳ ರಕ್ಷಣೆಯ ಬಗ್ಗೆ ಗಂಭೀರವಾದ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಅವರು ರೈತರ ಹಕ್ಕುಗಳ ಒಂದು ಮನವಿಯನ್ನು, ವಿಶ್ವ ಸಂಸ್ಥೆಯ ಸ್ಥಾಯೀ ಅಭಿವೃದ್ಧಿ ಸಮಿತಿಯ ೫ನೇ ಸಭೆಯ ಕಾರ್ಯಕ್ರಮ ಪಟ್ಟಿಯಲ್ಲಿ ಪ್ರತಿಪಾದಿಸಿದರು ಸಮಿತಿ ಅವುಗಳಲ್ಲಿ ಹಲವನ್ನು ಒಪ್ಪಿಕೊಂಡಿತು. ಅವುಗಳು ಈ ಕೆಳಗಿನಂತಿವೆ.

೧) ಶಾಶ್ವತ ಕಾರ್ಯ ಸಮಿತಿಯ ರಚನೆ ಮತ್ತು ರೈತರ ಹಕ್ಕುಗಳ ರಕ್ಷಣೆಗೆ ವಿಶ್ವ ಒಪ್ಪಂದ ಸಭೆ ರಚನೆ.

೨) ರೈತ ಸಂಘಗಳ ಅನೇಕ ನಾಯಕರನ್ನು ಸಲಹಾಗಾರರಾಗಿ ಗುರುತಿಸುವುದು ಮತ್ತು ನೇಮಿಸುವುದು.

೩) ರೈತರ ಹಕ್ಕುಗಳ ರಕ್ಷಣೆಗೆ ಒಂದು ಶಾಸನದ ಕಾಯ್ದೆಯನ್ನು ರೂಪಿಸುವುದು.

೪) ಕೃಷಿ ಸಂಬಂಧೀ ಚಟುವಟಿಕೆಗಳನ್ನು ರೈತರ ಮೂಲಭೂತ ಹಕ್ಕುಗಳೆಂದು ಘೋಷಿಸುವುದು.

ಕೃಷಿ ಮತ್ತು ಆಹಾರ ಸಂಬಂಧೀ ಬೀಜಗಳನ್ನು ಸಂಗ್ರಹಿಸಲು, ಬಳಸಲು ಉತ್ಪಾದಿಸಲು ಮತ್ತು ಮಾರಾಟ ಮಾಡಲು. ವಿಶ್ವ ಸಂಸ್ಥೆ ಮುಂದಿನ ಸಭೆಯಲ್ಲಿ ಈ ಎಲ್ಲಾ ಶಿಫಾರಸ್ಸುಗಳನ್ನು ಚರ್ಚಿಸಲು ಒಂದು ತೀರ್ಮಾನ ಕೈಗೊಂಡಿತು.

ವಂದನಾಶಿವ, ಅವರು ರೈತರ ಹಕ್ಕುಗಳ ಬಗ್ಗೆ ಸದರ್‌ಲ್ಯಾಂಡ್ ಅವರು ಹೊಂದಿದ್ದ ನಿಷ್ಕ್ರಿಯವಾದ ಭಾವನೆಯನ್ನು ಟೀಕಿಸಿದರು. ಅವರು ರೈತರ ಸವಲತ್ತುಗಳ ಬಗ್ಗೆ ಕೇವಲ ಆಶ್ವಾಸನೆಗಳನ್ನು ಮಾತ್ರ ನೀಡಿದರು, ಆದರೆ ಎಲ್ಲಿಯೂ ರೈತರ ಹಕ್ಕುಗಳ ಬಗ್ಗೆ ಹೇಳಲಿಲ್ಲ. ಆದ್ದರಿಂದ ವಂದನಾಶಿವ ಅವರನ್ನು ಸವಲತ್ತು ಒಂದು ಹಕ್ಕಲ್ಲ ಎಂದು ಟೀಕಿಸಿದರು. ಅವರು ರೈತರ ಹಕ್ಕುಗಳನ್ನು ಅಂತರರಾಷ್ಟ್ರೀಯ ಅಥವಾ ರಾಷ್ಟ್ರೀಯ ಸಂಸ್ಥೆಗಳ ನಿಧಿಯ ದೌಡು ಆಗಿರಬಹುದು ಎಂದು ವಿಶ್ಲೇಷಿಸಿದರು. ಅದರೆ ನಿಧಿ ಒಂದು ಹಕ್ಕಲ್ಲ, ಎಂದಿದ್ದಾರೆ.

ವಂದನಾಶಿವ ಅವರು ರೈತರ ಹಕ್ಕುಗಳ ಒಂದು ಪಟ್ಟಿಯನ್ನು ನೀಡಿದ್ದಾರೆ. ಅವುಗಳು ಈ ಕೆಳಗಿನಂತಿವೆ.

೧) ರೈತರ ಹಕ್ಕುಗಳು ಅವರ ಭೂತ, ವರ್ತಮಾನ ಮತ್ತು ಭವಿಷ್ಯದ ಸಸ್ಯ ಜೈವಿಕ ಉತ್ಪತ್ತಿ ಮೂಲದ ಸಂರಕ್ಷಣೆ, ಸುಧಾರಣೆ ಮತ್ತು ವಿನಿಮಯದ ಕೊಡುಗೆಯಿಂದ ಉದ್ಭವಿಸುತ್ತವೆ.

೨) ಸಸ್ಯ ಬೆಳವಣಿಗೆಯಲ್ಲಿ ರೈತರ ಆವಿಷ್ಕಾರ ಸಾಮೂಹಿಕವಾಗಿ ಮತ್ತು ಒಟ್ಟಾರೆಯಾಗಿ ನಡೆಯುತ್ತದೆ. ಆದ್ದರಿಂದ ಸಂರಕ್ಷಕರಾಗಿ ಮತ್ತು

ಉತ್ಪಾದಕರಾಗಿ ಅವರ ಪಾತ್ರದಿಂದ ಉದ್ಭವಿಸುವ ರೈತರ ಹಕ್ಕುಗಳು ಕೃಷಿ ವರ್ಗಗಳಲ್ಲಿ ತೊಡಗಿಸಲ್ಪಡಬೇಕು ಆದರೆ ವೈಯಕ್ತಿಕ ರೈತರಿಗಲ್ಲ.

೩) ರೈತರ ಹಕ್ಕುಗಳು ಬೀಜ ಉತ್ಪಾದನೆ ಮತ್ತು ಸಸ್ಯದ ಜೈವಿಕ ಉತ್ಪತ್ತಿ ಮೂಲದ ಸಂಪನ್ಮೂಲಗಳಲ್ಲಿ ರೈತರ ಬೌದ್ಧಿಕ ಕೊಡುಗೆಗಳಿಂದ ಪಡೆಯಲಾಗಿವೆ. ಆದ್ದರಿಂದ ಈ ಹಕ್ಕುಗಳು ಅವರ ಜೊತೆಯಲ್ಲೇ ಇರಬೇಕು.

೪) ಜೈವಿಕ ವೈವಿಧ್ಯತೆಯ ಸಂರಕ್ಷಣೆಯಲ್ಲಿ ರೈತರ ಹಕ್ಕುಗಳು ಒಂದು ಅವಶ್ಯಕ ಉಪ ಅಂಗವಾಗಿದೆ.

೫) ರೈತರು ಬೀಜ ವಸ್ತುವಿನ ಮತ್ತು ಸಸ್ಯದ ಜೈವಿಕ ಉತ್ಪತ್ತಿ ಮೂಲದ ಸಂಪನ್ಮೂಲಗಳ ಉತ್ಪಾದಕರು, ಸಂರಕ್ಷಕರು ಮತ್ತು ಒಡೆಯರಾಗಿದ್ದಾರೆ ರೈತರ ಹಕ್ಕುಗಳು ಸಮುದಾಯ ಒಡೆತನದ ಹಕ್ಕುಗಳಾಗಿವೆ. ಕೇವಲ ಉಸ್ತುವಾರಿ ಹಕ್ಕುಗಳಾಗಿಲ್ಲ.

೬) ಪರಿಸರ ರಕ್ಷಣೆಯ ಹಕ್ಕು

೭) ಅನುಭೋಗಿಗಳಾಗಿ ರೈತರ ಹಕ್ಕುಗಳು

೮) ಬೀಜ ಏಕಸ್ವಾಮ್ಯಗಳನ್ನು ಬೀಜ ಅನುಭೋಗಿಗಳಾಗಿ ಆಕ್ಷೇಪಣೆ ಮಾಡುವ ರೈತರ ಹಕ್ಕುಗಳು.

೯) ಕೃಷಿ ಉತ್ಪಾದಕರಾಗಿ ಆಹಾರ ಸಂರಕ್ಷಣೆಯ ಹಕ್ಕು.

೧೦) ಆರೋಗ್ಯಕರ ಅನುಭೋಗಕ್ಕೆ ವೈವಿಧ್ಯಮಯ ಮತ್ತು ಪೌಷ್ಠಿಕ ಆಹಾರ ಉತ್ಪಾದಿಸುವ ಹಕ್ಕು.

ಚಳುವಳಿಯ ಪ್ರಾಯೋಗಿಕ ಹಂತ

ಅಭಿವೃದ್ಧಿ ಶೀಲ ರಾಷ್ಟ್ರಗಳನ್ನು ನವವಸಾಹತುಕರಣಗೊಳಿಸಲು ಬಳಕೆಯಾಗುತ್ತಿರುವ ಒಂದು ಪ್ರಮುಖ ಉಪಕರಣ ಎಂದರೆ, ವಿಶ್ವ ವ್ಯಾಪಾರ ಸಂಘ. ಇದು ಬಹುರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಂಪೆನಿಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನುಸುಳುವಂತೆ ಅವಕಾಶ ನೀಡುತ್ತಿತ್ತು ಮತ್ತು ಅರ್ಥ ವ್ಯವಸ್ಥೆಗಳನ್ನು ಅನುಭೋಗ ವಿಧಾನ, ಸಂಪ್ರದಾಯ ಮತ್ತು ಇತರ ಆಚಾರಗಳನ್ನು ತಮ್ಮ ಉದ್ದೇಶಕ್ಕೆ ಸರಿ ಹೊಂದುವಂತೆ ಪುನರ್ ರೂಪಿಸಲು ಮತ್ತು ಅಧಿಕ ಲಾಭ ಪಡೆದು ಕೊಳ್ಳಲು ಅವಕಾಶ ನೀಡುತ್ತಿತ್ತು. ಜಾಗತೀಕರಣ ಎಂದರೆ ಕೇವಲ ಸ್ಥಳೀಯ ಅರ್ಥ ವ್ಯವಸ್ಥೆಯನ್ನು ಅಂತರರಾಷ್ಟ್ರೀಯ ವ್ಯವಸ್ಥೆಯೊಂದಿಗೆ ಒಗ್ಗೂಡಿಸುವುದೇ ಅಲ್ಲದೆ ಸ್ಥಳೀಯ ಮತ್ತು ರಾಷ್ಟ್ರೀಯ, ನೈಸರ್ಗಿಕ ಮತ್ತು ಬೌದ್ಧಿಕ ಸಂಪನ್ಮೂಲಗಳನ್ನು ಬಹುರಾಷ್ಟ್ರೀಯ ಕಂಪೆನಿಗಳ ಅಧೀನಕ್ಕೆ ತಳ್ಳುವುದೇ ಆಗಿದೆ.

ಅಮೇರಿಕಾದ ಒಂದು ಬಹುರಾಷ್ಟ್ರೀಯ ಕಂಪೆನಿಯಾದ, ಕಾರ್ಗಿಲ್

ಸೀಡ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಇದರ ಬೆಂಗಳೂರಿನ ಸೇಂಟ್ ಮಾರ್ಕ್ ರಸ್ತೆಯಲ್ಲಿರುವ ಸಂಯುಕ್ತ ಕಛೇರಿಗೆ ರೈತರ ಮುತ್ತಿಗೆ, ಇದು ಕ.ರಾ.ರೈ.ಸಂ.ದ ಅಡಿಯಲ್ಲಿ ನಡೆದುದು ಅದರ ಹೆಚ್ಚುತ್ತಿರುವ ಕಾದಾಟದ ಗುರುತಾಗಿದೆ. ಕ.ರಾ.ರೈ.ಸಂ. ತಾನು ಡಂಕೆಲ್ ಪ್ರಸ್ತಾವನೆ ವಿರೋಧಿ ಎಂಬುದಾಗಿ ದೆಹಲಿಯಲ್ಲಿರುವ ಸರ್ಕಾರಕ್ಕೆ ಸಂದೇಶ ಕಳಿಸುವ ತನ್ನ ವಿಧಾನವಾಗಿದೆ. ಅದರಲ್ಲೂ ಪ್ರಮುಖವಾಗಿ ಭಾರತದ ಉಷ್ಣಪ್ರದೇಶದ ಸಸ್ಯಗಳು ಮತ್ತು ಬೀಜಗಳ ವಂಶವಾಹಿಗಳ ಪೇಟೆಂಟ್ ಮಾಡುವುದನ್ನು ವಿರೋಧಿಸುತ್ತದೆ. ಇಂತಹ ಪುಂಡಾಟದ ಕೃತ್ಯ ಕ.ರಾ.ರೈ.ಸಂ.ವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ತಂದಿತು. ಕಂಪೆನಿಯ ಅಂಕಿ ಸಂಖ್ಯೆ ಮಾಹಿತಿ ಮೂಲವನ್ನು ಮತ್ತು ಅದರ ದಾಖಲೆಗಳನ್ನು ಸುಟ್ಟು ಹಾಕಿದ್ದು ಅಂತರರಾಷ್ಟ್ರೀಯವಾಗಿ ಕೆಲವು ತರಂಗಗಳನ್ನು ಉಂಟು ಮಾಡಿತು.

ಈ ಘಟನೆಯು ನಂತರ, ಈ ಮಿಶ್ರಣದ ಯೋಜಕರಾದ ನಂಜುಂಡಸ್ವಾಮಿಯುವರು ಅದು ಹಲವು ಕಾರ್ಯಕ್ರಮಗಳಲ್ಲಿ ಬೀಜ ಉತ್ಪಾದನೆಯನ್ನು ಕೈಗೊಳ್ಳುವಂತೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅನುಮತಿ ನೀಡುವ ಕೇಂದ್ರದ ನೀತಿಯ ಬಗ್ಗೆ ರೈತರ ಅಸಮ್ಮತಿ ತೋರ್ಪಡಿಸಲು ಹಾಕಿಕೊಂಡ ಮೊಟ್ಟ ಮೊದಲ ಕಾರ್ಯಕ್ರಮವೆಂದು ಆಶಿಸಿದರು. ಅವರು ಕ.ರಾ.ರೈ.ಸಂ. 'ಬೀಜ ಸತ್ಯಾಗ್ರಹವನ್ನು' ಗಾಂಧೀಜಿಯುವರ ಉಪ್ಪಿನ ಸತ್ಯಾಗ್ರಹದ ಮಾರ್ಗದಲ್ಲಿ ನಡೆಸಲಿದೆಯೆಂದು ಬೆದರಿಕೆ ಹಾಕಿದರು. ಅದೇ ವೇಳೆಗೆ, ಕ.ರಾ.ರೈ.ಸಂ. ಕೃಷಿ ವ್ಯಾಪಾರದಲ್ಲಿ ತೊಡಗಿದ ಮತ್ತೆ ೧೧ ಬಹುರಾಷ್ಟ್ರೀಯ ಕಂಪೆನಿಗಳಿಗೆ ಬಿಟ್ಟು ಹೊರಡುವ ಸೂಚನೆಗಳನ್ನು ನೀಡಿತು. ಈ ಆಕ್ರಮಣ ಅನೇಕ ಪ್ರಶ್ನೆಗಳನ್ನು ಹಿಂಸೆಯ ಸಿದ್ಧಾಂತ, ಉದಾರೀಕರಣದ ಮುಂದುವರಿಕೆ, ಡಂಕೆಲ್ ಪ್ರಸ್ತಾವನೆಗಳು, ರೈತ ಸಮುದಾಯದ ವಿವೇಚನೆ ಮತ್ತು ಅಂತಿಮವಾಗಿ ಭಾರತದ ರಾಜ್ಯದ ಸ್ವರೂಪದ ಬಗ್ಗೆ ತೆರೆದು ಕೊಂಡಿತು.

ಕ.ರಾ.ರೈ.ಸಂ. ಗ್ಯಾಟ್ ಪ್ರಸ್ತಾವನೆಗಳ ಮೇಲೆ ಒಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ವ್ಯವಸ್ಥೆ ಮಾಡಿತು. ಇದರಲ್ಲಿ ಭಾರತದ ವಿವಿಧ ರಾಜ್ಯಗಳ ಮತ್ತು ಕರ್ನಾಟಕದ ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರು ಐಕ್ಯಮತದಿಂದ 'ಡಂಕೆಲ್ ಪ್ರಸ್ತಾವನೆಗಳನ್ನು' ವಿರೋಧಿಸಿದರು ಮತ್ತು ಅಂತರ ರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕುಗಳ ಒತ್ತಡಕ್ಕೆ ತಲೆಭಾಗಬಾರದೆಂದು ಸರ್ಕಾರವನ್ನು ಒತ್ತಾಯಿಸಿದರು ಮತ್ತು ಭಾರತದಲ್ಲಿ ರೈತ ಸಮುದಾಯದ ಸಾರ್ವಭೌಮತೆಯನ್ನು ಉಳಿಸಿಕೊಡಬೇಕೆಂದು ಒತ್ತಾಯಿಸಿದರು.

ಕ.ರಾ.ರೈ.ಸಂ. ಅಂತಿಮವಾಗಿ ರಾಜ್ಯಕ್ಕೆ ಒಂದು ಬೇಡಿಕೆಗಳ ಪಟ್ಟಿಯನ್ನು

ಸಲ್ಲಿಸಿತು, ಅದು "ನಾವು ಹೊಸ ರೀತಿಯ ಸಸ್ಯಗಳ ಅಭಿವೃದ್ಧಿಗೆ ನಮ್ಮದೇ ಆದ ಸಂಶೋಧನಾ ಪದ್ಧತಿಯನ್ನು ರೂಪಿಸುವ ನಮ್ಮ ಸಾರ್ವಭೌಮ ಹಕ್ಕನ್ನು ಬಿಟ್ಟುಕೊಡಬಾರದು ಎಂದು ಕೇಳಿಕೊಂಡಿತು. ಬೌದ್ಧಿಕ ಆಸ್ತಿ ಹಕ್ಕುಗಳನ್ನು ಗ್ಯಾಟ್ ಒಪ್ಪಂದದ ಭಾಗವಾಗಿ ಮಾಡಬಾರದು. ಮತ್ತೆ, ನಾವು ನಮ್ಮ ಬೀಜಗಳ ಅನಿಯಂತ್ರಿತ ಗುಣಾಕಾರದ ಹಕ್ಕಿನೊಂದಿಗೆ ರಾಜಿ ಮಾಡಿಕೊಳ್ಳಬಾರದು." ಇದು ವಿಶ್ವದ ಎಲ್ಲಾ ಮೂಲೆಗಳಿಂದಲೂ ಪ್ರಶಂಸೆ ಪಡೆಯಿತು. ಅದರಲ್ಲಿ ವಾಂಷಿಗ್‌ಟನ್ ಜೈವಿಕ ತಂತ್ರಜ್ಞಾನ ಕಾರ್ಯ ಸಮಿತಿಯ ನಿರ್ದೇಶಕರಾದ ಬರ್ತ್ ಬರೋಸ್ ನಂಜುಂಡಸ್ವಾಮಿಯವರಿಗೆ ಒಂದು ಪತ್ರ ಬರೆದು ಅದರಲ್ಲಿ "ಸಮಿತಿ ಬೀಜ ಸತ್ಯಾಗ್ರಹದ ಬಗ್ಗೆ ತಿಳಿದುಕೊಂಡಿದೆ ಮತ್ತು ಸಂತೋಷ ಪಟ್ಟಿದೆ ಹಾಗೂ ನಿಮ್ಮೊಂದಿಗೆ ಮತ್ತು ಇತರ ಭಾರತೀಯ ನಾಯಕರೊಂದಿಗೆ ಗ್ಯಾಟ್‌ನ ಡಂಕೆಲ್ ಪ್ರಸ್ತಾವನೆಯನ್ನು ತಿರಸ್ಕರಿಸಲು ನಿಮ್ಮೊಂದಿಗೆ ಸಮ್ಮತಿಸಲು ಪ್ರೋತ್ಸಾಹಿಸಿದೆ. ನಾವು ನಿಮ್ಮ ಬೇಡಿಕೆಗಳ ಪಟ್ಟಿಯನ್ನು ಬೆಂಬಲಿಸುತ್ತೇವೆ. ಮತ್ತು ಜೀವ ಪ್ರಕಾರಗಳ ಪೇಟೆಂಟ್ ಮಾಡುವುದನ್ನು ತೀವ್ರವಾಗಿ ತಿರಸ್ಕರಿಸಲು ನಿಮ್ಮೊಂದಿಗೆ ಸೇರುತ್ತೇವೆ." ಎಂದು ಹೇಳಿದರು. ೧೯೯೩ರ ಜುಲೈ ೧೨ರಂದು, ಮತ್ತೊಮ್ಮೆ ಕ.ರಾ.ರೈ.ಸಂ. ಕಾರ್ಗಿಲ್ ಕಂಪೆನಿಯನ್ನು ಆಕ್ರಮಣ ಮಾಡಿತು, ಅದು ವಾಸ್ತವವಾಗಿ ಮೊದಲ ಸುತ್ತಿನ ಮುಂದುವರಿಕೆಯೇ ಆಗಿತ್ತು ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧ ಹೋರಾಟದ ಮುಂದುವರಿಕೆ ಆಗಿತ್ತು.

ಕ.ರಾ.ರೈ.ಸಂ. ದ್ವಿದಳ ಧಾನ್ಯ ಪ್ರಕಾರಗಳು, ಸಸ್ಯಗಳು, ಸಾಗುವಳಿ ಉಪಕರಣಗಳು, ಕೃಷಿ ವಿಧಾನಗಳು, ಕೃಷಿ ಅರಿವು ಮತ್ತು ಜ್ಞಾನ ಇವೆಲ್ಲವೂ ಇಲ್ಲಿಯವರೆಗೂ ನಮ್ಮ ಸಾಂಪ್ರದಾಯಿಕ ಆಸ್ತಿಯಾಗಿವೆ ಎಂದು ಹೇಳಿತು. ಆದರೆ ಅವುಗಳಲ್ಲಿ ಕೆಲವೊಂದನ್ನು ಬಹುರಾಷ್ಟ್ರೀಯ ಕಂಪೆನಿಗಳು ಡಂಕೆಲ್ ಪ್ರಸ್ತಾವನೆ ಅಡಿಯಲ್ಲಿ ದರೋಡೆ ಮಾಡಿವೆ ಮತ್ತು ಪೇಟೆಂಟ್ ಮಾಡಿಕೊಂಡಿವೆ. ಇಲ್ಲಿಂದ ಮುಂದೆ ನಾವು ನಮ್ಮ ಸಾಂಪ್ರದಾಯಿಕ ಆಸ್ತಿಯ ಲೂಟಿಯನ್ನು ಡೆಂಕೆಲ್ ಪ್ರಸ್ತಾವನೆಯ ಬೌದ್ಧಿಕ ಆಸ್ತಿ ಹಕ್ಕುಗಳ ಮುಖವಾಡದಲ್ಲಿ ಮುಂದುವರೆಯಲು ಅವಕಾಶ ನೀಡಬಾರದು. ಕ.ರಾ.ರೈ.ಸಂ. ಒಂದು ವೇಳೆ ಯಾವುದೇ ರಾಷ್ಟ್ರ ಅಥವಾ ಬಹುರಾಷ್ಟ್ರೀಯ ಕಂಪೆನಿಗಳು ಭಾರತೀಯ ಸಮುದಾಯದ ಬೌದ್ಧಿಕ ಆಸ್ತಿಯನ್ನು ಪೇಟೆಂಟ್ ಮಾಡಲು ಯತ್ನಿಸಿದರೆ, ಆಗ ರೈತರು ಅವರನ್ನು ಶಿಕ್ಷಿಸುತ್ತಾರೆ ಎಂದು ಎಚ್ಚರಿಸಿತು.

ಕ.ರಾ.ರೈ.ಸಂ. ಭಾರತದ ಅಭಿವೃದ್ಧಿ ಹಳ್ಳಿಗಳಲ್ಲೇ ಇದೆ ಎಂಬ ಗಾಂಧೀಜಿಯವರ ತತ್ವದಲ್ಲಿ ನಂಬಿಕೆ ಇಟ್ಟಿದೆ. ಕ.ರಾ.ರೈ.ಸಂ. ಭಾರತವನ್ನಾಳಿದ ರಾಜಕೀಯ ಪಕ್ಷಗಳನ್ನು ಗಾಂಧೀಜಿಯವರ ಈ ಅಭಿಪ್ರಾಯವನ್ನು ಅಲ್ಲಗಳೆದುದಕ್ಕಾಗಿ ಆರೋಪಿಸಿದೆ. ಇದರ ಬದಲಾಗಿ, ಅವರು ಪಾಶ್ಚಿಮಾತ್ಯ ಕೈಗಾರಿಕಾಕರಣದ ಕೂಟವನ್ನು ಮತ್ತು ಈಗ

ಬಹುರಾಷ್ಟ್ರೀಯ ಕಂಪೆನಿಗಳಂತಹ ಹೊಸ ವಸಾಹತುಶಾಹಿಗಳ ನಾಯಕತ್ವದಲ್ಲಿ ಭಾರತವನ್ನು ಪುನಃ ವಸಾಹತುಶಾಹಿಗೊಳಿಸಲು ಗ್ಯಾಟ್ ಅನ್ನು ಬಳಸಿಕೊಳ್ಳುತ್ತಿವೆ ಎಂದು ನಿಂದಿಸುತ್ತಿದೆ.

ಕ.ರಾ.ರೈ.ಸಂ. ೧೯೯೬ರ ಜನವರಿ ೩೦ರಂದು ಕೆಂಟುಕಿ ಫ್ರೈಡ್ ಚಿಕನ್ ಮೇಲೆ ಆಕ್ರಮಣ ಮಾಡಿತು. ಇದು ಬಹುರಾಷ್ಟ್ರೀಯ ಕಂಪೆನಿಗಳ ಮೇಲಿನ ತೀವ್ರ ಆಕ್ರಮಣವಾಗಿತ್ತು. ಈ ಬಾರಿ, ಸರ್ಕಾರದ ನಿಲುವು ಕಠಿಣವಾಗಿತ್ತು ಮತ್ತು ಅದು ೧೦೧ ರೈತ ತೀವ್ರಗಾಮಿಗಳ ಮೇಲೆ ಕ.ರಾ.ರೈ.ಸಂ.ದ ಅಧ್ಯಕ್ಷರಾದ ನಂಜುಂಡಸ್ವಾಮಿಯವರನ್ನೂ ಒಳಗೊಂಡಂತೆ ನ್ಯಾಯಯಲದಲ್ಲಿ, ಮೊಕದ್ದಮೆಗಳನ್ನು ಹೂಡಿತು. ಅನೇಕ ವ್ಯಕ್ತಿಗಳು ಮತ್ತು ಸಂಸ್ಥೆಗಳು ಅಂದರೆ ನರ್ಮದಾ ಬಚಾವೋ ಆಂದೋಲನದ ನಾಯಕಿ ಮೇಧಾ ಪಾಟ್‌ಕರ್ ಮತ್ತು ತೃತೀಯ ಜಗತ್ತಿನ ಕೂಟದ ವಂದನಾಶಿವ, ನಂಜುಂಡಸ್ವಾಮಿಯವರ ವಿರುದ್ಧದ ಸರ್ಕಾರದ ನಿಲುವನ್ನು ಟೀಕಿಸಿದರು. ಆದರೆ ಕರ್ನಾಟಕದ ರೈತರು ಅವರ ಬಂಧನ ಅಥವಾ ಬಿಡುಗಡೆಯ ಬಗ್ಗೆ ಶೀಘ್ರವಾಗಿ ಪ್ರತಿಕ್ರಿಯೆ ತೋರಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಕೆಂಟುಕಿ ಫ್ರೈಡ್ ಚಿಕನ್ ಬಹುರಾಷ್ಟ್ರೀಯ ಕಂಪೆನಿಗಳ ವಿಷಯದ ಬಗ್ಗೆ ರೈತರಿಗೆ ಆಸಕ್ತಿ ಇರಲಿಲ್ಲ. ಮತ್ತೊಂದು ಕಡೆ, ಕ.ರಾ.ರೈ.ಸಂ.ದ ತೀವ್ರಗಾಮಿಗಳ ಒಂದು ಗುಂಪು ನಂಜುಂಡಸ್ವಾಮಿಯವರನ್ನು ಅವರು ಕೆಂಟುಕಿ ಫ್ರೈಡ್ ಚಿಕನ್ ವಿಷಯವನ್ನೇ ಏಕೆ ತೆಗೆದುಕೊಂಡರು, ಸಕ್ಕರೆ ಅಥವಾ ಹತ್ತಿ ಬೆಲೆಗಳ ವಿಷಯಗಳನ್ನು ಏಕೆ ತೆಗೆದು ಕೊಳ್ಳಲಿಲ್ಲ ? ಎಂದು ಪ್ರಶ್ನಿಸಿದರು. ಅವರು ನಂಜುಂಡಸ್ವಾಮಿಯವರ ರಾಜಕೀಯ ಆಕಾಂಕ್ಷೆ ರೈತ ಸಂಘದ ಉದ್ದೇಶಗಳ ವಿರುದ್ಧ ಇಡೀ ಚಳುವಳಿಯನ್ನು ರಾಜಕೀಯಗೊಳಿಸುವಂತೆ ಮಾಡಿತು ಎಂದು ಆರೋಪಿಸಿದರು. ಅವರು ಕ.ರಾ.ರೈ.ಸಂ.ದಲ್ಲಿ ತಮ್ಮ ಸ್ಥಾನ ಕಳೆದು ಕೊಳ್ಳುತ್ತಿದ್ದರು ಎಂದು ಅವರಿಗೆ ತಿಳಿಯಿತು. ಆದ್ದರಿಂದ ಅವರು 'ವಸಾಹತುಶಾಹಿ' ವಿರುದ್ಧ ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧ ಕೃಷಿ ವ್ಯಾಪಾರದಲ್ಲಿ ಪೂರ್ತಿಯಾಗಿ ವಿದೇಶೀ ವಿರೋಧೀ ಪ್ರಚಾರ ಮಾಡುವ ಮೂಲಕ ತಿರುಗಿ ಬಿದ್ದರು ಎಂಬ ಆಪಾದನೆ ಮಾಡಲಾಯಿತು. ಬ್ಯಾನರ್ಜಿ ವಿವರಿಸಿರುವಂತೆ, 'ಅವರ ವಾಕ್ ಬಾಣ ಒರಟಾಗಿ ಎಡ ಪಂಥೀಯವಾಗಿತ್ತು, ರಾಜಕೀಯ ಅರಿವು ಸ್ವದೇಶೀ ಜಾಗರಣ ಮಂಚ (ಆರ್. ಎಸ್. ಎಸ್. ನಿಯಂತ್ರಣದಲ್ಲಿರುವ)ದ ತನ್ನ ಎರಡನೇ ಸ್ವಾತಂತ್ರ್ಯ ಸಮರಕ್ಕೆ ಹತ್ತಿರವಾಗಿತ್ತು.

ನಂಜುಂಡಸ್ವಾಮಿಯವರು ಸ್ವದೇಶೀ ಪರಿಭಾವನೆಯನ್ನು, ಭಾರತವನ್ನು ಯುರೋಪು ಮತ್ತು ಅಮೇರಿಕಾ ಖಂಡದ ಪಾಶ್ಚಿಮಾತ್ಯ ರಾಷ್ಟ್ರಗಳ ತಾಂತ್ರಿಕ ಗುಲಾಮಗಿರಿಯಿಂದ ರಕ್ಷಿಸಲು ಮಹಾತ್ಮ ಗಾಂಧೀಯವರು ಜಾರಿಗೆ ತಂದ ಪರಿಭಾವನೆ

ಎಂದು ಪ್ರತಿಪಾದಿಸಿದರು. ಅವರು ಮುಂದುವರೆಸುತ್ತಾ, ಗಾಂಧೀಯವರು "ಸ್ವದೇಶೀ" ಅಂದರೆ ಹೊಸ ಸ್ಥಳೀಯ ಉತ್ಪಾದನಾ ಪದ್ಧತಿಯನ್ನು ಸ್ವಾವಲಂಬನೆಗೆ ಸ್ವದೇಶೀಯಾಗಿ ಉತ್ಪಾದಿಸಲು ಗಾಂಧೀ ಅವರು ಜಾರಿಗೆ ತಂದರು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕ.ರಾ.ರೈ.ಸಂ. ಪಾಶ್ಚಿಮಾತ್ಯ ಬಂಡವಾಳ ಶಾಹಿ ರಾಷ್ಟ್ರಗಳು ತಮ್ಮ ನವವಸಾಹತು ಗುಂಪಿನ ವಶದಲ್ಲಿ ಭಾರತವನ್ನು ಎಳೆಯಲು ರಚಿಸಲಾದ ಒಂದು ಕ್ರಮಬದ್ಧವಾದ ಪಿತೂರಿಯಾಗಿದೆ ಎಂದು ನಂಬಿದ್ದರು. ಏಕೆಂದರೆ ಭಾರತದ 'ಬಡಕಲು ಬಂಡವಾಳಶಾಹಿ' 'ಪಾಶ್ಚಿಮಾತ್ಯ ಚೈತನ್ಯ ಪೂರ್ಣ ಬಂಡವಾಳಶಾಹಿ'ಯೊಂದಿಗೆ ಪೈಪೋಟಿ ನಡೆಸಲು ಅಸಮರ್ಥವಾಗಿತ್ತು. ಆದ್ದರಿಂದ, ಪ್ರತಿಯೊಂದು ಅಂತರರಾಷ್ಟ್ರೀಯ ಒಪ್ಪಂದ ಪಾಶ್ಚಿಮಾತ್ಯ ಬಂಡವಾಳಶಾಹಿ ವರ್ಗದ ಪ್ರಬಲ ಸ್ಥಾನವನ್ನು ಉಳಿಸಿಕೊಳ್ಳಲು ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ವಿಧಾನಗಳನ್ನು ಬಳಸುತ್ತಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ರೈತ ಸಂಘ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತ ಭಾರತದಲ್ಲಿ ಉತ್ಪಾದನೆಯ ಮೂಲಗಳನ್ನು ನಾಶಪಡಿಸಿತ್ತು ಎಂದು ಹೇಳುತ್ತದೆ. ಈ ವಾದವನ್ನು ನಂಜುಂಡಸ್ವಾಮಿಯವರು ಈ ಕೆಳಗಿನ ಉದಾಹರಣೆಯಲ್ಲಿ ವ್ಯಕ್ತಪಡಿಸಿದ್ದಾರೆ "೧೯೫೦ರಲ್ಲಿ, ಪಶ್ಚಿಮ ಯುರೋಪಿನ ಪ್ರತಿ ಉಪಕರಣ ೩೦,೦೦೦ ರೂಪಾಯಿಗೆ ದೊರೆಯುತ್ತಿತ್ತು. ಅದಕ್ಕೆ ಹೋಲಿಸಿದರೆ ಭಾರತದಲ್ಲಿ ಪ್ರತಿ ಉಪಕರಣ ಕೇವಲ ೧೫೦ ರೂಪಾಯಿಗಳಷ್ಟಿತ್ತು ಮತ್ತು ಅಮೇರಿಕಾದಲ್ಲಿ ಪ್ರತಿ ಉಪಕರಣ ೫೦,೦೦೦ ರೂಪಾಯಿಗಳಾಗಿತ್ತು. ೧೯೯೦ರ ವೇಳೆಗೆ ಅಮೇರಿಕಾದಲ್ಲಿ ಪ್ರತಿ ಉಪಕರಣ ೨೦ ಪಟ್ಟು ಹೆಚ್ಚಿದೆ. ಅದು ಸುಮಾರು ಅಮೇರಿಕಾದಲ್ಲಿ ಪ್ರತಿ ಉಪಕರಣ ೧೦ ಲಕ್ಷ ರೂಪಾಯಿಗಳಾಗಿದೆ. ಯುರೋಪಿನಲ್ಲಿ ಪ್ರತಿ ಉಪಕರಣ ೬ ಲಕ್ಷ ರೂಪಾಯಿಗೆ ಹೆಚ್ಚಿದೆ ಭಾರತದಲ್ಲಿ ಪ್ರತಿ ಉಪಕರಣ ೧೯೫೦ರಲ್ಲಿ ಇದ್ದುದಕ್ಕಿಂತ ಕಡಿಮೆಯಿದೆ." ಸ್ವಾತಂತ್ರ್ಯ ನಂತರವೂ ಭಾರತದ ರಾಜಕೀಯ ಅಧಿಕಾರ ಹೊಂದಿರುವ ಬಡಕಲು ಬಂಡವಾಳಶಾಹಿಗಳು, ಹಳೆಕಾಲದ ವಸಾಹತುಶಾಹಿ ಕಾನೂನುಗಳು ಮತ್ತು ತಂತ್ರಜ್ಞಾನಗಳನ್ನೇ ಮುಂದುವರೆಸುತ್ತಿದ್ದಾರೆ. ವಸಾಹತುಶಾಹಿಗಳಾಗಿ, ಅವರು ಇಂದಿಗೂ ಕೂಡ ಜನರಿಗೆ ಶಿಕ್ಷಣದ ಮೂಲವಾಗಿದ್ದಾರೆ.

ತಮ್ಮ ಉತ್ಪಾದನೆಯ ಮಾರಾಟ ಮತ್ತು ಸಂಪತ್ತಿನ ಸಮಾನ ಹಂಚಿಕೆಯನ್ನು ನೀಡಿಲ್ಲ. ಅದರ ಮೂಲಕ ವಸಾಹತಿನ ಸಾಮ್ರಾಜ್ಯಶಾಹಿಗಳು ಬಡಕಲು ಬಂಡವಾಳಶಾಹಿ ಒಂದೆಡೆ ಮತ್ತು ಮತ್ತೊಂದೆಡೆ ಆಡಳಿತ ನಡೆಸುವ ಉತ್ತಮ ಜನರಿಂದ ಸ್ಥಳಾಂತರಗೊಂಡಿದ್ದಾರೆ. ಕ.ರಾ.ರೈ.ಸಂ.ದ ಬಡಕಲು ಬಂಡವಾಳಶಾಹಿವಾದ

ತನ್ನ ಅರ್ಥವನ್ನು ಪರಿಸ್ಥಿತಿಗೆ ತಕ್ಕಂತೆ ಅಂತರರಾಷ್ಟ್ರೀಯ ವಲಯದಲ್ಲಿ ಭಾರತದ ಬಂಡವಾಳಶಾಹಿಗಳು ಬಡಕಲು ಬಂಡವಾಳಶಾಹಿಗಳು ಎಂದು ವರ್ಗಾಯಿಸಿತು. ಆಂತರಿಕ ವಲಯದಲ್ಲಿ, ಕೈಗಾರಿಕಾ ಬಂಡವಾಳಶಾಹಿಗಳು ಮತ್ತು ರೈತರ ನಡುವೆ, ರೈತರು ಅಥವಾ ಕೃಷಿಕರು ಬಡಕಲು ಬಂಡವಾಳಶಾಹಿಗಳು.

ರೈತ ಸಂಘ ಹಿಂದಿನ ವಸಾಹತು ಮಾಲೀಕರು ಭಾರತದ ನಿಧಾನಗತಿಯ ಅಭಿವೃದ್ಧಿಗೆ ಜವಾಬ್ದಾರರು ಎಂದು ಅಭಿಪ್ರಾಯಪಡುತ್ತಾರೆ. ಚಳುವಳಿ ನವ ವಸಾಹತುಶಾಹಿ ವಿಧಾನಗಳಾದ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಗಳು ೧೯೮೦ರಲ್ಲಿ ಉದಾರೀಕರಣದ ಹೆಸರಿನಲ್ಲಿ ಪಶ್ಚಿಮದ ಬಹುರಾಷ್ಟ್ರೀಯ ಕಂಪನಿಗಳ ಮೂಲಕ ನಾಲ್ಕು ಪ್ರಕಾರಗಳಲ್ಲಿ ಅಸ್ತಿತ್ವಕೆ ಬಂದಿವೆ ಅವುಗಳೆಂದರೆ : ಲೂಟಿ ಸಾಮ್ರಾಜ್ಯಶಾಹಿ, ಬೌದ್ಧಿಕ ಸಾಮ್ರಾಜ್ಯಶಾಹಿ, ಭಾಷಾ ಸಾಮ್ರಾಜ್ಯಶಾಹಿ ಮತ್ತು ಉತ್ಪಾದನಾ ಸಾಮ್ರಾಜ್ಯಶಾಹಿ.

ಕೆಂಟುಕಿ ಫ್ರೈಡ್ ಚಿಕನ್‌ನಂತಹ ಬಹುರಾಷ್ಟ್ರೀಯ ಕಂಪೆನಿಯ ಅಥವಾ ಆಹಾರ ಕಂಪೆನಿಯ ಮೇಲಿನ ಮೂರನೇ ಆಕ್ರಮಣದ ನಂತರ ಕ.ರಾ.ರೈ.ಸಂ. "ಸಿದ್ಧ ಆಹಾರದ ಕಂಪೆನಿಗಳ ಪ್ರವೇಶ ರಾಷ್ಟ್ರದ ಆಹಾರ ಸುರಕ್ಷತೆಯನ್ನು ಮತ್ತು ೬೭ ದಶಲಕ್ಷ ರೈತ ಕುಟುಂಬಗಳನ್ನು ತನ್ಮೂಲಕ ಭಾರತದ ಕೃಷಿಯನ್ನೇ ಹಾಳು ಮಾಡಿ ವಿದೇಶೀ ಆಹಾರದ ಮೇಲೆ ಶಾಶ್ವತ ಅವಲಂಬನೆಯನ್ನು ಸ್ಥಾಪಿಸುತ್ತದೆ" ಎಂದು ಹೇಳಿತು. ಈ ಅಭಿಪ್ರಾಯವನ್ನು ಕ.ರಾ.ರೈ.ಸಂ.ದ ಅಧ್ಯಕ್ಷರಾದ ಪ್ರೊಫೆಸರ್ ನಂಜುಂಡಸ್ವಾಮಿಯವರು ೧೯೯೫ರ ಆಗಸ್ಟ್ ೧೮ರಂದು ಕರ್ನಾಟಕದ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿದರು. ಹೀಗೆ, "ಅನೇಕ ಸಿದ್ಧ ಆಹಾರ ಸರಪಳಿಗಳು ಹೋಟೆಲುಗಳಾಗಿ ಕಟ್ಟಡದ ಮುಂಭಾಗಗಳಲ್ಲಿ ಪ್ರವೇಶಿಸಿದವು. ಅವು ಹೊಸ ಕೃಷಿ ತಂತ್ರಜ್ಞಾನವನ್ನು ಮತ್ತು ಬೆಳೆ ಪ್ರಕಾರಗಳನ್ನು ಅವಶ್ಯಕತೆಗೆ ತಕ್ಕಂತೆ ಜಾರಿಗೆ ತರಲು ಇಲ್ಲಿ ಬಂದಿವೆ. ಪೆಪ್ಸಿಕೋ ಹೋಟೆಲುಗಳ ಸರಪಳಿ ಪ್ರತಿದಿನ ೧,೫೦,೦೦೦ ಕ್ಕಿಂತಲೂ ಹೆಚ್ಚು ಕೋಳಿ ಮರಿಗಳನ್ನು ಮತ್ತು ೨೫,೦೦೦ ಮೇಕೆಗಳನ್ನು ಪ್ರತಿವಾರ ಬೇಡಿಕೆ ಸಲಿಸುತ್ತದೆ. ಮ್ಯಾಕ್ ಡೊನಾಲ್ಡ್ ೧೦,೦೦,೦೦೦ ಮೇಕೆಗಳನ್ನು ಪ್ರತಿವಾರ ಬಯಸುತ್ತದೆ. ಅವರೆಲ್ಲರೂ ಭಾರತಕ್ಕೆ ಬರಲು ಇಚ್ಛಿಸುತ್ತಾರೆ. ಏಕೆಂದರೆ ಕೋಳಿ ಸಾಗಾಣಿಕೆ ಮತ್ತು ಹೈನುಗಾರಿಕೆಗೆ ಭಾರತ ಸರ್ಕಾರ ಅಧಿಕ ಸಹಾಯಧನ ಕೊಡುತ್ತದೆ. ಭಾರತದ ಶ್ರಮ ಮತ್ತು ಆಹಾರ ವಸ್ತುಗಳು ಹಾಗೂ ರಾಸುಗಳೂ ಕೂಡ ಕಡಿಮೆ ವೆಚ್ಚದ್ದಾಗಿದೆ. ವಿಶ್ವದ ಮಾಂಸ ಕೈಗಾರಿಕೆ ವಾರ್ಷಿಕವಾಗಿ ಇಂದು ೧೫೦ ಮಿಲಿಯನ್ ಟನ್ನುಗಳನ್ನು ಅನುಭೋಗಿಸುತ್ತಿದೆ. ಅಮೇರಿಕಾ ಒಂದೇ ತನ್ನ ೨೬೦ ಮಿಲಿಯನ್ ಜನಸಂಖ್ಯೆಯೊಂದಿಗೆ ೪೮ ಮಿಲಿಯನ್

ಟನ್ನುಗಳಷ್ಟು, ಪ್ರಮುಖವಾಗಿ ತೃತೀಯ ಜಗತ್ತಿನ ರಾಷ್ಟ್ರಗಳು ಪೂರೈಸುವ ಮಾಂಸವನ್ನು ಅನುಭೋಗಿಸುತ್ತಿದೆ.

ಹಾಗೆಯೇ ಈ ವಿಶ್ವದ ಸಿದ್ಧ ಆಹಾರ ಸರಪಳಿಗಳಿಗೆ ಇನ್ನೂ ಅಧಿಕವಾಗಿ ಬೇಕಾಗುವುದನ್ನು ಸ್ಥಳೀಯವಾಗಿ ಲಭ್ಯವಿರುವ ಆಹಾರ ವಸ್ತುಗಳು ಮತ್ತು ಭಾರತದಂತಹ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ರಫ್ತಿಗಾಗಿ ಸ್ಥಳೀಯವಾಗಿ ಲಭ್ಯವಿರುವ ಪ್ರಾಣಿಗಳನ್ನು ಬಳಸಿ ಅಭಿವೃದ್ಧಿ ಪಡಿಸಿದ ಮಾಂಸ ತಂತ್ರಜ್ಞಾನದಿಂದ ಪೂರೈಸಬೇಕಾಗುತ್ತದೆ. ಆಂಧ್ರಪ್ರದೇಶದ ಮೇಡಕ್ ಜಿಲ್ಲೆಯ ಕಬೀರ್‌ನಲ್ಲಿರುವ ಕಸಾಯಿ ಖಾನೆ ಒಂದೇ ಪ್ರತಿ ವರ್ಷ ೪೦ ಲಕ್ಷ ಹಸುಗಳು, ಎಮ್ಮೆಗಳು, ಕುರಿಗಳು ಮತ್ತು ಮೇಕೆಗಳನ್ನು ಕೊಲ್ಲುತ್ತಿದೆ. ಇಲ್ಲಿಯವರೆಗೆ ಇದು ಭಾರತದ ೨೫೦ ಕೋಟಿ ಜಾನುವಾರುಗಳನ್ನು ಮುಗಿಸಿದೆ, ಇದನ್ನು ಯಾರಾದರೂ ಊಹಿಸಬಹುದೆ ?"

ಮನೇಕಾ ಗಾಂಧಿಯವರು ಕೂಡ ಕೃಷಿ ಮೂಲ ಸೌಕರ್ಯಗಳ ಬಗ್ಗೆ ಮತ್ತು ಜಾನುವಾರುಗಳ ಬಗ್ಗೆ ಇಂತಹದೇ ಕಾಳಜಿಯನ್ನು ವ್ಯಕ್ತಪಡಿಸಿದರು, ಅವರು "ರೈತರು ತಮ್ಮ ಹಸುಗಳನ್ನು ಹೆಚ್ಚಿನ ಬೆಲೆಗೆ ಮಾರುವ ಮೂಲಕ ಭೂಮಿ ಮತ್ತು ಕೃಷಿ ಮೂಲ ಸೌಕರ್ಯಗಳ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಿದ್ದಾರೆ. ರೈತರು ಹತ್ತಿರದ ಹಳ್ಳಿಗಳಲ್ಲಿ ಅಂತಹದೇ ಹಸುಗಳನ್ನು ತುಲನಾತ್ಮಕವಾಗಿ ಕಡಿಮೆ ಬೆಲೆಗೆ ಖರೀದಿಸಬಹುದೆಂದು ಭಾವಿಸಿರಬಹುದು. ಆದರೆ ಸಿದ್ಧ ಆಹಾರ ಕಂಪೆನಿಗಳು ತಮ್ಮ ಚಾಮರದ ಅಡಿಯಲ್ಲಿ ಕ್ರಮಬದ್ಧವಾಗಿ ಎಲ್ಲಾ ಹಳ್ಳಿಗಳನ್ನು ಸೇರಿಸಿಕೊಳ್ಳುತ್ತಿವೆ. ಹಸುಗಳನ್ನು ಮಾಂಸಕ್ಕಾಗಿ ಕೊಲ್ಲುವುದು, ಉತ್ತರಪ್ರದೇಶ ಮತ್ತು ಹರಿಯಾಣಗಳಲ್ಲಿ ತೀವ್ರವಾಗಿ ನಡೆಯುತ್ತಿದೆ, ಸದ್ಯದಲ್ಲೆ, ಅದು ಇತರ ರಾಜ್ಯಗಳಿಗೂ ಹರಡುತ್ತದೆ. ಕೃಷಿ ಮೂಲ ಸೌಕರ್ಯಗಳನ್ನು ಕಳೆದುಕೊಂಡ ಮೇಲೆ ರೈತರು ಟೊಮಾಟೋ ಸಾಗುವಳಿ ಮಾಡಲು (ಗೋಧಿಗೆ ಬದಲಾಗಿ) ಕೆಂಟುಕಿ ಫ್ರೈಡ್ ಚಿಕನ್‌ಗೆ, ಬಹುರಾಷ್ಟ್ರೀಯ ಕಂಪೆನಿಗಳ ಆದೇಶಾನುಸಾರವಾಗಿ ಟೊಮಾಟೋ, ತಿಳಿಸಾರು ಪೂರೈಸಲು ಹೋಗಬೇಕು. ರಸಾಯನಿಕ ಪೂರಿತ ಟೊಮಾಟೋ ಮಾಂಸದ ತೂಕವನ್ನು ಹೆಚ್ಚಿಸುತ್ತದೆ. ಅದು ಹಲವು ಖಾಯಿಲೆಗಳಿಗೆ ದಾರಿ ಮಾಡಿಕೊಡುತ್ತದೆ. ಅಮೇರಿಕಾ ಒಂದರಲ್ಲೇ, ಸುಮಾರು ೨೦ ಮಿಲಿಯನ್ ಜನರು ಕೆಂಟುಕಿ ಮತ್ತು ಮಾಕ್ಡ್ ಡೊನಾಲ್ಡ್ ಕೋಳಿ ಮರಿಗಳನ್ನು ತಿಂದು ಹಲವು ಖಾಯಿಲೆಗಳಿಂದ ನರಳುತ್ತಿದ್ದಾರೆ. ಆದ್ದರಿಂದ ಅಧಿಕ ಮಂದಿ ಅಮೇರಿಕನ್ನರು ಮಾಂಸಾಹಾರಕ್ಕೆ ಬದಲಾಗಿ ಸಸ್ಯಹಾರವನ್ನು ಹೆಚ್ಚು ಇಷ್ಟಪಡುತ್ತಿದ್ದಾರೆ."

ಆದ್ದರಿಂದ, ಕ.ರಾ.ರೈ.ಸಂ. ರಾಷ್ಟ್ರದಿಂದ ಬಹುರಾಷ್ಟ್ರೀಯ ಕಂಪೆನಿಗಳನ್ನು ಹೊರದೂಡುವಂತೆ ವಾದಿಸಿತು. ಅದು ಈಗಾಗಲೇ ಇರುವ ಕಂಪೆನಿ ಓಡಿಸಲು

ಮತ್ತು ಹೊಸ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶ ತಡೆಯಲು ಮೂರು ಮಾರ್ಗಗಳನ್ನು ಸಲಹೆ ಮಾಡಿತು. ಮೊದಲನೆಯದಾಗಿ, ಅಭಿವೃದ್ಧಿಗೆ ಒಂದು ಬದಲಿ ಮಾರ್ಗವನ್ನು ಆವಿಷ್ಕಾರ ಮಾಡುವುದು, ಎರಡನೆಯದು, ಈಗಿರುವ 'ಮೃದು ರಾಜ್ಯ'ಕ್ಕೆ ಬದಲಾಗಿ 'ಬಲಶಾಲಿ ರಾಜ್ಯ'ವನ್ನು ಸ್ಥಾಪಿಸುವುದು, ಅಂತಿಮವಾಗಿ ಬಹುರಾಷ್ಟ್ರೀಯ ಕಂಪೆನಿಗಳ ಮೇಲೆ ನೇರ ಕ್ರಮ ಅಥವಾ ಆಕ್ರಮಣ, ಎಂಬುದಾಗಿದೆ.

ಒಂದು (ತೀವ್ರಗಾಮಿ ಸಂಘಗಳು ಹೈದ್ರಾಬಾದ್‌ನಲ್ಲಿ ವ್ಯವಸ್ಥೆ ಗೊಳಿಸಿದ) ಸಭೆಯಲ್ಲಿ ಸರ್‌ಜಿಯೋ ಹರ್ನಾಂಡೆಸ್, ಪ್ಲೆ ಫೇರ್ ಯುರೋಪ್‌ನ, ನಿರ್ದೇಶಕರು, ಸಲ್ಲಿಸಿದ ಪತ್ರಿಕೆಯಲ್ಲಿ ವಿಶ್ವ ವ್ಯಾಪಾರ ಸಂಘದ ವಿಮರ್ಶೆಯಲ್ಲಿ ಹೇಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ನಿಯಂತ್ರಿಸಲ್ಪಟ್ಟ ೬ ದಶಕ ತುಂಬಿದ ಗ್ಯಾಟ್ ವಿಶ್ವ ವ್ಯಾಪಾರ ಸಂಘದ ರೂಪದಲ್ಲಿ ಬಡರಾಷ್ಟ್ರಗಳಿಗೆ ವ್ಯಾಪಾರ ಮತ್ತು ಹೂಡಿಕೆಯ ಷರತ್ತುಗಳನ್ನು ಸೂಚಿಸಲು ಹೇಗೆ ಮೇಲೆ ಬಂದಿತು ಮತ್ತು ಹೊಸ ಅಂತರರಾಷ್ಟ್ರೀಯ ಹಣಕಾಸಿನ ಮಾರುಕಟ್ಟೆಯನ್ನು ಶ್ರೀಮಂತ ರಾಷ್ಟ್ರಗಳ ಕೂಟ ಪ್ರಾಬಲ್ಯ ಸಾಧಿಸಲು ಕ್ರಮಬದ್ಧವಾಗಿ ಹೇಗೆ ಬಂದಿತು ಎಂದು ವಿವರಿಸಿದರು. ವಿಷಯಗಳ ಹೊಸ ವಿಧಾನದಲ್ಲಿ, ಹಣಕಾಸಿನ ಬಂಡವಾಳ ಪ್ರಭುತ್ವಕ್ಕಿಂತ ಹೆಚ್ಚು ಬಲಶಾಲಿಯಾಗಿತ್ತು. ನಿಯಮಗಳ ಪಾಲನೆ ಮಾಡದೆ ಇರುವ ರಾಷ್ಟ್ರಗಳ ವಿರುದ್ಧ ಆರ್ಥಿಕ ದಿಗ್ಬಂಧನ ವಿಧಿಸುವ ದಂಡಿಸುವ ವಿಧಾನದ ಬಗೆ ಇತ್ತೀಚೆಗೆ ವಿಶ್ವ ವ್ಯಾಪಾರ ಸಂಘ ನಿರ್ಧಾರ ಕೈಗೊಂಡಿರುವುದು ಉಸಿರುಗಟ್ಟಿಸುವ ಅಪಾಯ ಹೊಂದಿದೆ. ಆದ್ದರಿಂದ ೧೯೯೯ರ ಅಕ್ಟೋಬರ್‌ನಲ್ಲಿ ವಿಶ್ವವಾಣಿಜ್ಯ ಸಂಘಟನೆಯವರ ಹೊಸ ಸುತ್ತಿನ ಮಾತುಕತೆ ಪ್ರಾರಂಭವಾಗುವ ಮೊದಲು ವಿಶ್ವ ವ್ಯಾಪಾರ ಸಂಘದ ವಿರುದ್ಧ ಜನರ ವಿರೋಧವನ್ನು ಒಗ್ಗೂಡಿಸುವುದು ಅವಶ್ಯಕವೆಂದು ಸಲಹೆ ಮಾಡಿದರು.

ಜನರ ಚಳುವಳಿಗಳ ರಾಷ್ಟ್ರೀಯ ಮೈತ್ರಿಕೂಟ, ದೆಹಲಿಯಲ್ಲಿ ಇದೇ ರೀತಿಯ ಸಭೆಯನ್ನು ಕರೆದು, "ವಿಶ್ವದ ಶೋಷಣೆಯ ಒಪ್ಪಂದಗಳನ್ನು" ಅಂದರೆ ಗ್ಯಾಟ್ ಮತ್ತು ಬಹುಪಕ್ಷೀಯ ಹೂಡಿಕೆಯ ಒಪ್ಪಂದಗಳಿಗೆ ತನ್ನ ವಿರೋಧವನ್ನು ತೀವ್ರಗೊಳಿಸಲು ನಿರ್ಧರಿಸಿತು. ಮೈತ್ರಿಕೂಟ ಅಂತಹ ಚಲನೆಯನ್ನು ಪ್ರತಿರೋಧಿಸಲು, ಜನರು ತಮ್ಮ ಜಲ, ಭೂಮಿ ಮತ್ತು ಅರಣ್ಯ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವುದು ಅವಶ್ಯಕ ಎಂದು ನಂಬುತ್ತದೆ.

ಶ್ರೀ. ಎಸ್. ರಾಮಚಂದ್ರನ್ ಪಿಳ್ಳೆ, ಸಿ.ಪಿ.ಎಂ. ಪಾಲಿಟ್ ಬ್ಯೂರೋ ಸದಸ್ಯರು ಮತ್ತು ಆಲ್ ಇಂಡಿಯಾ ಕಿಸಾನ್ ಸಭಾದ ಕಾರ್ಯದರ್ಶಿಗಳು, ಕ.ರಾ.ರೈ.ಸಂ. ಮತ್ತು ಕರ್ನಾಟಕ ಪ್ರಾಂತ ರೈತ ಸಂಘಗಳು ಸಂಯುಕ್ತವಾಗಿ ವ್ಯವಸ್ಥೆಗೊಳಿಸಿದ

ರೈತರ ಮತ್ತು ಕೃಷಿ ಕಾರ್ಮಿಕರ ಸಭೆಯಲ್ಲಿ ಭಾರತದ ಕೃಷಿಯಲ್ಲಿ ವಿಶ್ವ ವ್ಯಾಪಾರ ಸಂಘಟನೆ ನಿರ್ದೇಶಿಸಿದ ಕ್ರಮಗಳನ್ನು ಜಾರಿಗೆ ತಂದಾಗಿನಿಂದ, ಕೃಷಿ ಕ್ಷೇತ್ರದಲ್ಲಿನ ಹೂಡಿಕೆ ಸುಮಾರು ಶೇಕಡಾ ಎರಡಕ್ಕಿಂತ ಅಧಿಕ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಅಭಿಪ್ರಾಯಪಟ್ಟರು. ಹೊಸ ಪೇಟೆಂಟ್ ಆಳ್ವಿಕೆ, ಅರಿಶಿನ ಕೊಂಬು ಮತ್ತು ಬಾಸ್‌ಮತಿ ಅಕ್ಕಿಯ ರಫ್ತಿನಲ್ಲಿ ಭಾರತ ಅನುಭವಿಸಿದ್ದ ಸಾಂಪ್ರದಾಯಿಕ ಅನುಕೂಲತೆಗಳನ್ನು ಭಾರತದಿಂದ ಕೊಂಡೊಯ್ಯಲು ಬೆದರಿಕೆ ಹಾಕುತ್ತಿದೆ. ಸಭೆಯಲ್ಲಿ ಹಾಜರಿದ್ದ ಶಾಸಕಾಂಗದ ಸದಸ್ಯರಾದ ಕೆ. ಎಸ್. ಪುಟ್ಟಣ್ಣಯ್ಯ ಮತ್ತು ಜಿ. ವಿ. ಶ್ರೀರಾಮರೆಡ್ಡಿ ಹಾಗೂ ಇತರರು, ಭಾರತ ಸರ್ಕಾರ ವಿಶ್ವ ವ್ಯಾಪಾರ ಸಂಘಕ್ಕೆ ತನ್ನ ಸಾರ್ವಭೌಮತೆಯನ್ನು ಒಪ್ಪಿಸಬಾರದೆಂದು, ಆಮದಿನ ಮೇಲಿನ ಪ್ರಮಾಣಾತ್ಮಕ ನಿರ್ಬಂಧ ತೆಗೆಯಲು ಮತ್ತು ೧೯೭೦ರ ಭಾರತೀಯ ಪೇಟೆಂಟ್ ಕಾಯ್ದೆಯನ್ನು ತಿದ್ದುಪಡಿ ಮಾಡಲು ಅದರ ಒತ್ತಡಕ್ಕೆ ತಲೆಬಾಗಬಾರದೆಂದು ಒಂದು ತೀರ್ಮಾನವನ್ನು ಮಂಡಿಸಿದರು.

ಭಾರತ ಒಂದು ಕೃಷಿ ಆಧಾರಿತ ರಾಷ್ಟ್ರ ಮತ್ತು ಅದರ ಶೇಕಡಾ ೭೦ರಷ್ಟು ವಿದೇಶೀ ವಿನಿಮಯಗಳಿಗೆ ಕೃಷಿಯಿಂದಲೇ ಬರುತ್ತದೆ. ಭೂಮಿ ಮತ್ತು ಜಲವನ್ನು ಹೊರತು ಪಡಿಸಿ, ಕೃಷಿಯಲ್ಲಿ ಇತರ ಮೂರು ಮುಖ್ಯ ಉತ್ಪಾದನಾಂಗಗಳೆಂದರೆ ಬೀಜ, ಗೊಬ್ಬರ ಮತ್ತು ಕೀಟನಾಶಕಗಳು. ಈ ಮೂರು ಉತ್ಪಾದನಾಂಗಗಳನ್ನು ಗ್ಯಾಟ್ ಒಪ್ಪಂದದ ಪ್ರಕಾರ ಪೇಟೆಂಟ್ ಮಾಡಬಹುದು ಮತ್ತು ವಿದೇಶೀ ಏಕಸ್ವಾಮ್ಯ ನಿಯಂತ್ರಣಕ್ಕೆ ಒಳಪಡಿಸಬಹುದು. ಆದ್ದರಿಂದ ರೈತರ ಹಿತಾಸಕ್ತಿಯ ದೃಷ್ಟಿಯಿಂದ ಮತ್ತು ಒಟ್ಟಾರೆಯಾಗಿ ರಾಷ್ಟ್ರದ ಹಿತದೃಷ್ಟಿಯಿಂದ, ಸರ್ಕಾರ ಗ್ಯಾಟ್‌ನಿಂದ ಬೌದ್ಧಿಕ ಆಸ್ತಿಯನ್ನು ತೆಗೆಯುವಂತೆ ಒತ್ತಾಯ ಪಡಿಸಬೇಕು. ಆ ಅವಧಿಯಲ್ಲಿ ಈ ಪ್ರಸ್ತಾವನೆ ಯುರೋಪಿನ ಸಮುದಾಯದಿಂದ ಕ್ರಿಯಾಶೀಲ ಬೆಂಬಲವನ್ನು ಪಡೆದಿತ್ತು.

ನಂಜುಂಡಸ್ವಾಮಿಯವರು ವ್ಯಕ್ತಪಡಿಸಿರುವ ವಿಶ್ವ ವಾಣಿಜ್ಯ ಸಂಘಟನೆ ತೃತೀಯ ಜಗತ್ತಿನ ವಿರುದ್ಧ ಮತ್ತು ಪಶ್ಚಿಮದ ಪರವಾಗಿ ಕೆಲಸ ಮಾಡುತ್ತದೆ ಇದರಿಂದ ತೃತೀಯ ಜಗತ್ತು ಪಶ್ಚಿಮದ ಬಂಧಿತ ಶ್ರಮಿಕನಾಗಿರುತ್ತವೆ ಎಂಬ ಭೀತಿ ಸತ್ಯವಾಗಿದೆ. ವಿಶ್ವ ವಾಣಿಜ್ಯ ಸಂಘಟನೆ ರಾಷ್ಟ್ರದ ರಾಜಕಾರಣದಲ್ಲಿ ಅನುಕೂಲವಾಗಿರಬಹುದು ಆದರೆ ಅದುವೇ ಇತರ ತತ್ವಗಳನ್ನು ತಳ್ಳಿಹಾಕುವ ತತ್ವದಲ್ಲಿ. ಆದ್ದರಿಂದ ಅಂತಹ ಪೇಟೆಂಟುಗಳನ್ನು ರದ್ದು ಮಾಡಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರವನ್ನು ಅವರು ಒತ್ತಾಯಿಸಿದರು. ಒಂದು ವೇಳೆ ವಿಶ್ವ ವಾಣಿಜ್ಯ ಸಂಘಟನೆ ಪೇಟೆಂಟ್ ನೀಡುವುದನ್ನು ನಿಲ್ಲಿಸದಿದ್ದರೆ ಅದು ವಿಶ್ವ ವಾಣಿಜ್ಯ ಸಂಘಟನೆಯಿಂದ ದೂರ ಇರಲು ಚಿಂತಿಸಬೇಕು.

ಪ್ರೊಫೆಸರ್ ಎಂ. ಎಸ್. ಸ್ವಾಮಿನಾಥನ್, ಹೇಳುವಂತೆ ಭಾರತದಲ್ಲಿ ಕೃಷಿ ನೀತಿ ವಿಜ್ಞಾನದಿಂದ ಸಹಾಯಧನಕ್ಕೆ ವರ್ಗಾಯಿಸಲ್ಪಟ್ಟಿದೆ. ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಕೃಷಿ ವಿಭಾಗದಲ್ಲಿ ಪರಿಣಿತರು ಇಲ್ಲವಾಗಿದ್ದಾರೆ. ಅರ್ಥವ್ಯವಸ್ಥೆಯ ಜಾಗತೀಕರಣ ಮತ್ತು ವಿಶ್ವ ವ್ಯಾಪಾರ ಒಪ್ಪಂದದ ಫಲವಾಗಿ ನಮ್ಮ ರೈತ ಕುಟುಂಬಗಳನ್ನು ನಮ್ಮ ಮಾರುಕಟ್ಟೆಯಲ್ಲಿ ಆಮದಾದ ಕೃಷಿ ಸರಕುಗಳ ಪ್ರವಾಹದಿಂದ ರಕ್ಷಿಸಲು ಯಾವುದೇ ದೀರ್ಘಾವದೀ ವಿಧಾನ ಗಮನಕ್ಕೆ ಬಂದಿಲ್ಲ.

ಆಹಾರ ಮತ್ತು ಕೃಷಿ ಸರಕುಗಳನ್ನು ಶೇಕಡಾ ೭೦ರಷ್ಟು ಜನ ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಭಿಸಿರುವ ಮತ್ತು ೧೦೦ ಮಿಲಿಯನ್ ಭೂ ಹಿಡುವಳಿಗಳಲ್ಲಿ ಶೇಕಡಾ ೭೫ರಷ್ಟು ಒಂದು ಹೆಕ್ಟೇರು ಅಥವಾ ಕಡಿಮೆ ಪ್ರಮಾಣ ಹೊಂದಿರುವ ರಾಷ್ಟ್ರದಲ್ಲಿ, ಆಮದು ಮಾಡಿಕೊಂಡರೆ ನಿರುದ್ಯೋಗವನ್ನು ಆಮದು ಮಾಡಿಕೊಂಡಂತೆಯೇ, ಪರಿಣಾಮ ಬೀರುತ್ತದೆಂಬ ಅರಿವು ಇರಲಿಲ್ಲ. ಆದ್ದರಿಂದ, ಅವರು ಭಾರತ ಮಾಹಿತಿ ಉಪಕರಣ, ಅಂತರಿಕ್ಷ, ಜೈವಿಕ ಮತ್ತು ಪುನರ್ ಉತ್ಪಾದಿಸಲಾಗುವ ಅಣು ತಂತ್ರಜ್ಞಾನಗಳನ್ನು ಬಳಸಿಕೊಂಡು ಸ್ಪಷ್ಟ ಕೃಷಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಮತ್ತು ಬೆಂಬಲಿಸುವ ಅವಶ್ಯಕತೆ ಇದೆಯೆಂದು ಒತ್ತಿ ಹೇಳಿದರು. ಇದರೊಂದಿಗೆ, ಭಾರತಕ್ಕೆ ಇದನ್ನು ಒತ್ತಿ ಹೇಳಿದರು ಮತ್ತು ರಾಷ್ಟ್ರವನ್ನು "ಹಡಗಿನಿಂದ ಬಾಯಿಗೆ" (ರಾಷ್ಟ್ರವೊಂದು ತನ್ನ ಅನುಭೋಗಕ್ಕೆ ಅಮದನ್ನೇ ಅವಲಂಬಿಸಿರುವುದು) ಎಂಬ ನೀತಿಯ ಅಸ್ತಿತ್ವಕ್ಕೆ ಹೋಗುವುದನ್ನು ತಡೆಯಲು ರಾಜಕೀಯ ದೃಷ್ಟಿಕೋನದ ಅವಶ್ಯಕತೆ ಇದೆ."

ಹೀಗೆ ಒಟ್ಟಿನಲ್ಲಿ ಹೇಳುವುದಾದರೆ, ಕ.ರಾ.ರೈ.ಸಂ. ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ಒಂದೆಡೆ ಬಹುರಾಷ್ಟ್ರೀಯ ಕಂಪೆನಿಗಳನ್ನು ಆಕ್ರಮಿಸುತ್ತದೆ ಮತ್ತು ಇನ್ನೊಂದೆಡೆ ರೈತರ ಹಕ್ಕುಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ. ಅದು ತನ್ನ ಚಳುವಳಿಗೆ ಚಿಂತನಾ ವರ್ಗವನ್ನು ಬಳಸಿಕೊಳ್ಳುತ್ತಿದೆ. ಆದರೂ ಅದು ತನ್ನ ವಿಜಯದ ಹಾದಿಯಲ್ಲಿ ಬಹಳಷ್ಟು ದೂರ ಸಾಗಬೇಕಾಗಿದೆ.

ಅಧ್ಯಾಯ. ೫
ಪರಿಸರ, ಸ್ತ್ರೀವಾದ ಮತ್ತು ಕ.ರಾ.ರೈ.ಸಂ.

ಸ್ವಾತಂತ್ರ್ಯ, ಸಮಾನತೆ ಇತ್ಯಾದಿಗಳನ್ನು ಯಾರೊಬ್ಬರಿಂದಲೂ ಕೇಳಿ ಪಡೆದುಕೊಳ್ಳಲು ಇರುವ ಚಳುವಳಿ ಮಹಿಳಾಪರ ಚಳುವಳಿಯಲ್ಲ. ಇದಕ್ಕೆ ಬದಲಾಗಿ, ಅದು ಅವರ ಮೇಲಿರುವ ಪುರಷ ಪ್ರಾಬಲ್ಯವನ್ನು ತೆಗೆದುಹಾಕಲು ಇರುವ ಚಳುವಳಿಯಾಗಿದೆ. ಆದ್ದರಿಂದ, ಮಹಿಳಾವಾದಿಗಳು ಹೇಳುವಂತೆ ಈ ಕಾರ್ಯವನ್ನು ಸಾಧಿಸಿದರೆ ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಎಲ್ಲವನ್ನೂ ಅನುಭವಿಸಬಹುದು. ಸರಾಹ ಗ್ರಿಮ್‌ಕೆ, ಇಂತಹದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ "ನಾನು ನನ್ನ ಸ್ತ್ರೀಜಾತಿಗೆ ಏನೂ ಉಪಕಾರವನ್ನು ಕೇಳುವುದಿಲ್ಲ. ನಾನು ನಮ್ಮ ಸಮಾನತೆಯ ಹಕ್ಕನ್ನು ತ್ಯಜಿಸುವುದಿಲ್ಲ. ನಾನು ನನ್ನ ಸಹೋದರರನ್ನು ಕೇಳುವುದಿಷ್ಟೆ ಅವರು ನಮ್ಮ ಕುತ್ತಿಗೆಗಳಿಂದ ಅವರ ಪಾದವನ್ನು ತೆಗೆಯಲಿ." ಅವರು ಮುಂದುವರೆಸುತ್ತಾ, "ಪುರುಷ ಮತ್ತು ಮಹಿಳೆ ನಿಜವಾಗಿ ಪರಸ್ಪರ ಪೂರಕವಾಗಿದ್ದಾರೆ ಮತ್ತು ಒಂದು ವೇಳೆ ಅವರು ಸೌಹಾರ್ದಯುತ ಜೀವನಕ್ಕಾಗಿ ಪರಸ್ಪರ ಸಹಕರಿಸಿದರೆ ಅದೊಂದು ಬೇರೆಯೇ ಆದ ಪ್ರಪಂಚವಾಗುತ್ತದೆ.

ಅರ್ನೆಸ್ಟೀನ್ ಎಲ್. ರೋಸ್ ಹೀಗೆ ಹೇಳಿದ್ದಾರೆ, "ಮಾನವೀಯತೆ ಯಾವುದೇ ಲಿಂಗವನ್ನು ನೋಡುವುದಿಲ್ಲ : ಮನಸ್ಸು ಯಾವುದೇ (ಪುರುಷ ಮತ್ತು ಸ್ತ್ರೀ ಜಾತಿ) ಲಿಂಗವನ್ನು ನೋಡುವುದಿಲ್ಲ ; ಜೀವನ ಮತ್ತು ಮರಣ, ಸುಖ ಮತ್ತು ನೋವು, ಸಂತೋಷ ಮತ್ತು ದುಃಖ ಯಾವುದೇ ಲಿಂಗವನ್ನು ನೋಡುವುದಿಲ್ಲ. ಪುರುಷನಂತೆ, ಸ್ತ್ರೀ ಕೂಡ ತನ್ನ ಇಚ್ಛೆಯಿಂದ ಅಸ್ತಿತ್ವಕ್ಕೆ ಬರುವುದಿಲ್ಲ, ಅವನಂತೆಯೇ, ಅವಳು ಭೌತಿಕ, ಮಾನಸಿಕ ಮತ್ತು ನೈತಿಕ ಅಧಿಕಾರಗಳನ್ನು ಪಡೆದಿದ್ದಾಳೆ. ಅವನಂತೆಯೇ ಪ್ರಾಕೃತಿಕ ನಿಯಮಗಳ ಉಲ್ಲಂಘನೆಗೆ ಅವಳೂ ಕೂಡ ದಂಡವನ್ನು ಕೊಡಬೇಕು ಮತ್ತು ಅಜ್ಞಾನದಿಂದ ಅವಳು ಇನ್ನೂ ಹೆಚ್ಚಿನ ದಂಡಗಳನ್ನು ಅನುಭವಿಸಬೇಕು. ಪುರುಷನಂತೆ, ಅವಳೂ ಕೂಡ ತನ್ನ ರಾಷ್ಟ್ರದೊಂದಿಗೆ ಸುಖಿಸುತ್ತಾಳೆ ಅಥವಾ ಕಷ್ಟ ಪಡುತ್ತಾಳೆ. ಆದರೂ ಅವಳನ್ನು ಅವನ ಸಮಾನಳಂತೆ ಪರಿಗಣಿಸುವುದಿಲ್ಲ." ಮಹಿಳೆಯರು ಮತ್ತು ಬಡ ರೈತ ವರ್ಗದ ಯುವತಿಯರಿಂದ ದಮನಕಾರಿ ಸಾಮಾಜಿಕ ಸಂಬಂಧಗಳ ವಿರುದ್ಧ ಕೈಗೊಳ್ಳಲಾದ ಹೋರಾಟ, ಉತ್ಪಾದನೆಗಿಂತ ಹೆಚ್ಚು ಪ್ರಮುಖವಾಗಿದೆ. ಏಕೆಂದರೆ, ನಗರ ಪ್ರದೇಶದ ಮಹಿಳೆಯರೂ ಕೂಡ ಅಭಿವ್ಯಕ್ತಿ

ಸ್ವಾತಂತ್ರ್ಯವನ್ನು ಪೂರ್ಣವಾಗಿ ಅನುಭವಿಸುತ್ತಿಲ್ಲ, ಅಂತಹ ಪರಿಸ್ಥಿತಿಯಲ್ಲಿ ರೈತ ಮಹಿಳೆಯರು ತಮ್ಮ ಮನೆಗಳಿಂದ ಹೊರಬರುವುದು ಮತ್ತು ತಮ್ಮ ಹಕ್ಕುಗಳನ್ನು ಕೇಳುವುದೇ ಒಂದು ಸಾಧನೆಯಾಗಿದೆ.

ವಾಸ್ತವಾಗಿದೆ, ಮಹಿಳೆಯರು ಪುರುಷರಿಗಿಂತ ಹೆಚ್ಚು ಕೆಲಸ ಮಾಡುತ್ತಾರೆ. ಪುರುಷರು ಸಾಮಾನ್ಯವಾಗಿ ಒಂದು ಅಥವಾ ಎರಡು ನಿರ್ದಿಷ್ಟ ಕೆಲಸಗಳನ್ನು ಮಾಡುತ್ತಾರೆ. ಆದರೆ ಮನೆಯ ಒಳಗೆ ಮತ್ತು ಮನೆಯ ಹೊರಗೆ ಎಲ್ಲಾ ರೀತಿಯ ಕೆಲಸಗಳನ್ನು ಮಹಿಳೆಯರು ಮಾಡುತ್ತಾರೆ. ಆದ್ದರಿಂದ, ಗೈಲ್ ಓಂವೆಟ್ ಹೇಳುವಂತೆ "ಮಹಿಳೆಯರು ಕೃಷಿಯ ಸಂಶೋಧಕರಾಗಿದ್ದಾರೆ. ತೃತೀಯ ಜಗತ್ತಿನ ಎಲ್ಲಾ ಕೃಷಿ ಸಮಾಜಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ, ಅವರು ಒಂದು ಪ್ರಮುಖ ಉತ್ಪಾದನಾ ಪಾತ್ರವನ್ನು ಮನೆಯ ಹೊರಗೆ ರೈತ ಸಾಗುವಳಿದಾರರಾಗಿ (ಗಣತಿಯಲ್ಲಿ ಸೇರಿಸಿಕೊಳ್ಳದ ಪ್ರತಿಫಲ ನೀಡದ ಕುಟುಂಬ ಶ್ರಮಿಕರಾಗಿ) ಅಥವಾ ಕೃಷಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಒಟ್ಟಿನಲ್ಲಿ ಪುರುಷರಿಗಿಂತ ಅವರು ಹೆಚ್ಚು ಗಂಟೆಗಳ ದುಡಿಮೆ ಮಾಡುತ್ತಾರೆ. ಇದನ್ನು ಗೈಲ್ ಓಂವೆಟ್‌ರವರು ಪಟ್ಟಿ ಸಂಖ್ಯೆ ೧.೧೪ರಲ್ಲಿ ವಿವರಿಸಿದ್ದಾರೆ.

ಪಟ್ಟಿ ಸಂಖ್ಯೆ : ೧.೧೪

ಕೃಷಿ ಕಾರ್ಮಿಕರಾಗಿ ಮಹಿಳೆಯರ ಶೇಕಡವಾರು ದುಡುಮೆಯ ಪ್ರಮಾಣ

ಕೃಷಿಯಲ್ಲಿ ಮಹಿಳೆ	
ವರ್ಷ	ಕೃಷಿ ಕಾರ್ಮಿಕರಾಗಿ ಮಹಿಳೆಯರ ಶೇಕಡವಾರು ದುಡಿಮೆ ಪ್ರಮಾಣ
೧೯೦೧	೪೬.೬೩
೧೯೧೧	೪೯.೧೫
೧೯೨೧	೪೫.೮೨
೧೯೩೧	೪೫.೬೭
೧೯೫೧	೩೬.೯೩
೧೯೬೧	೪೫.೦೪
೧೯೭೧	೩೮.೪೦

ಮೂಲ : ಗೈಲ್ ಓಂವೆಟ್, ೧೯೭೮, ವುಮಿನ್ ಆ್ಯಂಡ್ ರೂರಲ್ ರಿವೋಲ್ಟ್ ಇನ್ ಇಂಡಿಯಾ, ದ ಜರ್ನಲ್ ಆಫ್ ಪೇಸೆಂಟ್ ಸ್ಟಡೀಸ್. ಸಂಪುಟ ೧೫, ಸಂಖ್ಯೆ ३, ಪುಟ ३೭೮.

ಓಂವೆಟ್ ಮುಂದುವರೆಸುತ್ತಾ ಮಹಾರಾಷ್ಟ್ರ ರೈತ ಮಹಿಳಾ ಚಳುವಳಿಯ ತಮ್ಮ ಸ್ವಂತ ಅನುಭವ ಹೇಳುತ್ತಾ ಮಹಿಳೆಯರು ಅತ್ಯಂತ ಬಲಿಷ್ಠ ಹೋರಾಟದ ಮನೋಭಾವ ಹೊಂದಿದ್ದಾರೆ. ಮಹಿಳೆಯರು ಮೆರವಣಿಗೆಯಲ್ಲಿ ಮುಂದಿದ್ದಾರೆ, ಪೋಲಿಸರ ಗೋಡೆಗಳನ್ನು ಮತ್ತು ಹೋರಾಟವನ್ನು ಬೇಧಿಸುವುದರಲ್ಲಿ ಪ್ರಥಮರು, ಮಾತುಕತೆಗಳಲ್ಲಿ ಅತ್ಯಂತ ದೃಢ ಸಂಕಲ್ಪವುಳ್ಳವರು, ರಸ್ತೆಗಳಲ್ಲಿ ವಾಹನಗಳ ಓಡಾಟ ತಡೆಯುವಂತಹ ಹೊಸ ಹೋರಾಟ ವಿಧಾನಗಳ ಸಂಶೋಧಕರಾಗಿದ್ದಾರೆ ಎನ್ನುತ್ತಾರೆ.

ಫ್ರಾಂಕ್ ಎಲಿಸ್, ರೈತ ಮಹಿಳಾ ಚಳುವಳಿಯ ಬಗ್ಗೆ ಇಂತಹದೇ ಅಭಿಪ್ರಾಯ ವ್ಯಕ್ತಪಡಿಸುತ್ತಾ, ಮಹಿಳೆಯರು ರೈತ ಸಮಾಜದಲ್ಲಿ ಅಸದೃಶ ಕೃಷಿ ಉತ್ಪಾದಕರಾಗಿದ್ದಾರೆ ಎನ್ನುತ್ತಾರೆ. ವಿಶ್ವದ ಕೃಷಿ ಸಮುದಾಯದಲ್ಲಿ ಅವರು ಕೃಷಿ ಉತ್ಪಾದನೆಯ ಭೌತಿಕ ಕೆಲಸಕ್ಕೆ ಕೊಡುಗೆ ಸಲ್ಲಿಸುತ್ತಾರಲ್ಲದೆ ಇತರ ಅನೇಕ ರೀತಿಯಲ್ಲಿ ರೈತ ಕುಟುಂಬದ ಜೀವನಾಧಾರಕ್ಕೆ ಬೆಂಬಲ ನೀಡುತ್ತಾರೆ. ಇತ್ತೀಚೆಗಷ್ಟೇ ಮಹಿಳೆಯರ ಪಾತ್ರವನ್ನು ವಿಶ್ಲೇಷಣೆಯ ಕಾರ್ಯಕ್ರಮ ಪಟ್ಟಿಯಲ್ಲಿ ಮತ್ತು ರೈತ ಕೃಷಿ ಉತ್ಪಾದನೆಯ ಸಂಶೋಧನೆಯಲ್ಲಿ ಸೇರಿಸಲಾಗಿದೆ.

ನಿರ್ದಿಷ್ಟವಾಗಿ ರೈತ ಮಹಿಳೆಯರ ಅಧ್ಯಯನ ಮತ್ತು ಸಂಶೋಧನೆ ಮತ್ತು ಸಾಮಾನ್ಯವಾಗಿ ಮಹಿಳೆಯರ ಅಧ್ಯಯನ ಹಾಗೂ ಸಂಶೋಧನೆ ಇತ್ತೀಚಿನ ವಿಷಯವಾಗಿದೆ. ೧೯೭೦ರಿಂದ ಭಾರತದಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಅಧ್ಯಯನಗಳ ಸಂಖ್ಯೆಯಲ್ಲಿ ನಿರಂತರ ಬೆಳವಣಿಗೆ ಕಂಡುಬಂದಿದೆ. ಆದರೂ, ಕೇವಲ ೧೯೮೦ರಲ್ಲಿ ಅನೇಕ ಚಳುವಳಿಗಳಲ್ಲಿ ಮಹಿಳೆಯರ ಪಾತ್ರ ಹಾಗೂ ಭಾಗವಹಿಸುವಿಕೆ ಭಾರತದಲ್ಲಿ ಮಹಿಳೆಯರ ಸ್ಥಾನದ ವಿಶ್ಲೇಷಣೆಯಲ್ಲಿ ಒಂದು ಪ್ರಮುಖ ಪ್ರಶ್ನೆಯಾಗಿದೆ.

ವಿಶ್ವ ಸಂಸ್ಥೆಯು ೧೯೭೫ರಿಂದ ೧೯೮೫ರ ಅವಧಿಯನ್ನು ಮಹಿಳೆಯರ ದಶಕವೆಂದು ಘೋಷಿಸಿದ್ದಾರೆ. ದಶಕದ ಕೊನೆಯಲ್ಲಿ, ಅಧಿಕಾರದ ಅಸಮಾನ ಹಂಚಿಕೆ, ಮತ್ತು ಕೇವಲ ಲಿಂಗ ಅಸಮಾನತೆಗೆ ಬದಲಾಗಿ ವರ್ಗ ಅಸಮಾನತೆಯ ವಿಶಾಲ ಚೌಕಟ್ಟಿನಲ್ಲಿ ಮಹಿಳಾ ಪ್ರಶ್ನೆಯನ್ನು ವಿಸ್ತೃತವಾಗಿ ಪರಿಗಣಿಸಲಾಯಿತು. ಅನೇಕ ತೃತೀಯ ವಿಶ್ವದ ರಾಷ್ಟ್ರಗಳಲ್ಲಿ ಮಹಿಳಾ ಅಸಮಾನತೆ, ಸಾಮ್ರಾಜ್ಯಶಾಹಿ,

ವಸಾಹತುಶಾಹಿ, ನವ ವಸಾಹತುಶಾಹಿ ಮತ್ತು ಅಂತರರಾಷ್ಟ್ರೀಯ ವಲಯದಲ್ಲಿ ನ್ಯಾಯೋಚಿತವಲ್ಲದ ಆರ್ಥಿಕ ಸಂಬಂಧಗಳ ಫಲವಾಗಿರುವ, ಜನರ ಬಡತನ ಮತ್ತು ಸಾಮಾನ್ಯ ಹಿಂದುಳಿದಿರುವಿಕೆಯಿಂದ ಉದ್ಭವಿಸುತ್ತದೆ. ಇತ್ತೀಚೆಗೆ ಸಾಮ್ರಾಜ್ಯಶಾಹಿ ವಿರೋಧೀ ಚಳುವಳಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪುನರುತ್ಥಾನಗೊಳಿಸಿವೆ. ಇದು ಸಮಾನತೆಗಾಗಿ ಮಹಿಳಾ ಚಳುವಳಿಗಳಿಗೆ ದಾರಿ ಮಾಡಿಕೊಟ್ಟಿದೆ.

ಐತಿಹಾಸಿಕವಾಗಿ ಕರ್ನಾಟಕದಲ್ಲಿ ಮಹಿಳೆಯರು ನ್ಯಾಯವಾದ ರೀತಿಯಲ್ಲಿ ತಮ್ಮ ಸ್ಥಾನ ಮಾನ ಮತ್ತು ಸ್ವಾತಂತ್ರ್ಯವನ್ನು ಅನುಭವಿಸಲಿಲ್ಲ. ಇದಕ್ಕೆ ಹೊರತಾಗಿ, ಹಲವು ಕ್ಷೇತ್ರಗಳಲ್ಲಿ ಮತ್ತು ಹಲವು ಸ್ತರಗಳಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ಉದಾಹರಣೆಗೆ, ಅತ್ತಿಮಬ್ಬೆ ತನ್ನ ಪತಿಯನ್ನು ಕಳೆದುಕೊಂಡ ಮೇಲೆ ಧಾನ ಚಿಂತಾಮಣಿಯಾದಳು. ಅವಳು ಚಿಕ್ಕ ವಯಸ್ಸಿನಲ್ಲಿಯೇ ತನ್ನೆಲ್ಲಾ ಆಸ್ತಿಯನ್ನು ದಾನ ಮಾಡಿದಳು. ಅವಳು ೧೫೦೦ ಚಿನ್ನದ ಜೈನ ಮೂರ್ತಿಗಳನ್ನು ಕೊಡುಗೆಯಾಗಿ ನೀಡಿದಳು, ಲಕ್ಕುಂಡಿಯಲ್ಲಿ ದೊಡ್ಡದಾದ ಒಂದು ದೇವಾಲಯವನ್ನು ಕಟ್ಟಿಸಿದಳು, ರನ್ನನನ್ನು ಅಜಿತ ಪುರಾಣ ಬರೆಯುವಂತೆ (ಮಹತ್ತರ ಸಾಹಿತ್ಯ ಕೃತಿ) ಕೇಳಿಕೊಂಡಳು. ಅಕ್ಕಮಹಾದೇವಿ, ಬಸವೇಶ್ವರರ ಸಮಕಾಲೀನರು ಮತ್ತು ೧೨ನೇ ಶತಮಾನದ ಸಮಾಜ ಸುಧಾರಕರು. ಕಿತ್ತೂರು ಚೆನ್ನಮ್ಮ, ಕಿತ್ತೂರಿನ ಮಹಾರಾಣಿ ಮತ್ತು ವೀರ ವನಿತೆ. ಅವಳು ಬ್ರಿಟಿಷರ ಸಾಮ್ರಾಜ್ಯ ಶಾಹಿ ಆಡಳಿತದ ವಿರುದ್ಧ ಹೋರಾಡಿದಳು. ಬೆಳವಡಿ ಮಲ್ಲಮ್ಮ, ಯುದ್ಧ ಭೂಮಿಗೆ ೨೦೦೦ ಮಹಿಳಾ ಯೋಧರನ್ನು ಮುನ್ನಡೆಸಿದಳು. ಅಲ್ಲಿ ಅವಳ ಪತಿ ಯುದ್ಧ ಮಾಡುವಾಗಲೇ ಸಾವನ್ನಪ್ಪಿದ. ರಾಣಿ ಅಬ್ಬಕ್ಕ ಉಲ್ಲಾಳ ಯುದ್ಧದಲ್ಲಿ (೧೬೧೮ ರಲ್ಲಿ) ಉಲ್ಲಾಳದಲ್ಲಿ (ಮಂಗಳೂರು) ಪೋರ್ಚುಗೀಸರನ್ನು ಸೋಲಿಸಿದಳು. ಸ್ವಾತಂತ್ರ್ಯ ಚಳುವಳಿಯಲ್ಲೂ ಅನೇಕ ಮಹಿಳೆಯರು ಭಾಗವಹಿಸಿದ್ದರು. ಅವರಲ್ಲಿ ಕೆಲವರು ಈ ಕೆಳಗಿನಂತಿದ್ದಾರೆ. ಕಮಲಾದೇವಿ ಚಟ್ಟೋಪಾಧ್ಯಾಯ (ದಕ್ಷಿಣ ಕನ್ನಡ), ಉಮಾ ಬಾಯಿ ಕುಂದಾಪುರ (ಹುಬ್ಬಳ್ಳಿ), ಯಶೋಧರ ದಾಸಪ್ಪ (ಮೈಸೂರು), ಬಳ್ಳಾರಿ ಸಿದ್ದಮ್ಮ, ನಾಗರತ್ನಮ್ಮ ಹಿರೇಮಠ (ಚಿತ್ರದುರ್ಗ), ಮಹಾದೇವಿ ತಾಯಿ ದೊಡ್ಡಮನೆ (ಉತ್ತರ ಕನ್ನಡ), ನಾಗಮ್ಮ ಪಾಟೀಲ್, ಲೀಲಾವತಿ ಮಾಗಡಿ, ಕೃಷ್ಣಂಬಾಯಿ ಪಂಜೀಕರ್ (ಧಾರವಾಡ ಜಿಲ್ಲೆ). ಇವರೆಲ್ಲರೂ ತಮ್ಮ ಕುಟುಂಬಗಳನ್ನು ತೊರೆದರು ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಈ ಕಾರಣಕ್ಕಾಗಿ ಅವರನ್ನು ಹಲವು ಬಾರಿ ಬಂಧಿಸಲಾಯಿತು.

ಕೃಷಿ ರಚನೆ ಮತ್ತು ಉತ್ಪಾದನಾಂಗಗಳ ಒಡೆತನದಲ್ಲಿ ಮೂಲಭೂತ ಬದಲಾವಣೆಗಳು ಕಂಡು ಬಂದಾಗಿನಿಂದ, ಗೇಲ್ ಓಂವೆಟ್ ಹೇಳುವಂತೆ,

ಮಹಿಳೆಯರನ್ನು ಒಂದು ಸುಧಾರಿತ ವ್ಯವಹಾರಕ್ಕೆ ಗ್ರಾಮೀಣ ಮಹಿಳೆಯರನ್ನು ಲಿಂಗ ವರ್ಗದೊಂದಿಗೆ ರಾಜಿ ಸ್ಥಾನದಲ್ಲಿರಿಸಿದೆ. ಹೀಗೆ ಮಹಿಳೆಯರು ತಮ್ಮ ಉಳಿವಿಗಾಗಿ ಅರ್ಥ ಪೂರ್ಣ ಹೋರಾಟ ಕೈಗೊಳ್ಳಲು ವೈಯಕ್ತಿಕ ಅಧಿಕಾರವನ್ನು ಕಳೆದು ಕೊಂಡಿದ್ದರು. ಆ ಪರಿಸ್ಥಿತಿಗಳಲ್ಲಿ ಮತ್ತು ಸಂದರ್ಭಗಳಲ್ಲಿ ಮಹಿಳಾ ವಿಷಯಗಳು ಮತ್ತು ಚಳುವಳಿಗಳು ಲಿಂಗ ಸಮಾನತೆಯಿಂದ ನಿಯಂತ್ರಿಸಲ್ಪಟ್ಟಿದ್ದವು ಮತ್ತು ನಿರ್ದೇಶಿಸಲ್ಪಟ್ಟಿದ್ದವು.

ವಾಸ್ತವವಾಗಿ, ಮಹಿಳೆಯರ ವಿಷಯ ಕ.ರಾ.ರೈ.ಸಂ.ದ ಮೂಲ ಬೇಡಿಕೆಯ ಪಟ್ಟಿಯಲ್ಲಿ ಸ್ಥಾನ ಪಡೆದಿರಲಿಲ್ಲ. ೧೯೮೦ರಲ್ಲಿ ಹೂವಿನ ಹಡಗಲಿ ತಾಲ್ಲೂಕು ರೈತ ಸಂಘ ಮತ್ತು ಶಿವಮೊಗ್ಗಾ ಜಿಲ್ಲೆಯ ಸಾಗರ ರೈತ ಸಂಘ ಎಂಬ ಎರಡು ರೈತ ಸಂಘಗಳು ಅಸ್ತಿತ್ವಕ್ಕೆ ಬಂದವು. ಅವು ತಮ್ಮ ಕರ ಪತ್ರಗಳಲ್ಲಿ ಮಹಿಳೆಯರ ಪೆನ್‌ಶನ್ (ವೃದ್ಧಾಪ್ಯ ವೇತನ) ಮತ್ತು ಕೂಲಿಯ ಅಂಶಗಳ ಬೇಡಿಕೆಗಳನ್ನು ಒಳಗೊಂಡಿದ್ದವು.

ಹೂವಿನ ಹಡಗಲಿ ತಾಲ್ಲೂಕು ರೈತ ಸಂಘ ಕೂಲಿಯನ್ನು ಭೂ ರಹಿತ ಕಾರ್ಮಿಕರ ನಿಯಮದ ಪ್ರಕಾರ ನಿರ್ಧಾರವಾದ ಕೂಲಿಗಳಿಗಾಗಿ ಬೇಡಿಕೆ ಸಲ್ಲಿಸಿತು. ಅದು ಪ್ರತಿದಿನ ರೈತ ಮಹಿಳಾ ಕಾರ್ಮಿಕರಿಗೆ ನಾಲ್ಕು ರೂಪಾಯಿ ಪುರುಷರಿಗೆ ಆರು ರೂಪಾಯಿಗಳಷ್ಟಿತ್ತು ಮತ್ತು ಅವರಿಗೆ ದನ, ಕೋಳಿ ಮತ್ತು ಸಣ್ಣ ಕೈಗಾರಿಕೆಗಳಿಗಾಗಿ ಸಾಲದ ಸೌಲಭ್ಯಗಳನ್ನು ಅದು ಒತ್ತಾಯಿಸಿತು. ಅಂತಿಮವಾಗಿ ಸರ್ಕಾರವನ್ನು ಮಹಿಳೆಯರನ್ನು ಸಶಕ್ತಗೊಳಿಸಲು ಕಾರ್ಯಕ್ರಮ ಕೈಗೊಳ್ಳುವಂತೆ ಒತ್ತಾಯಿಸಿತು. ಸಾಗರ ರೈತ ಸಂಘ ವೃದ್ಧಾಪ್ಯ ವೇತನವನ್ನು ರೈತ ಮಹಿಳಾ ಕಾರ್ಮಿಕರಿಗಾಗಿ ಒತ್ತಾಯಿಸಿತು ಹಾಗೂ ಅವರಿಗೆ ಕಾರ್ಮಿಕ ನಿವೃತ್ತಿ ವೇತನವನ್ನು ಒತ್ತಾಯಿಸಿತು.

ಮೊಟ್ಟ ಮೊದಲ ಬಾರಿಗೆ, ಕ.ರಾ.ರೈ.ಸಂ. ರೈತ ಮಹಿಳೆಯರ ಸಮಸ್ಯೆಗಳನ್ನು ತನ್ನ 'ಹೋರಾಟದ ಹಾಡುಗಳು' ಇದರಲ್ಲಿ ವ್ಯಕ್ತಪಡಿಸಿತು, ಇದು ರೈತ ಮಹಿಳೆಯರ ದುಃಖ ಪೂರ್ಣ ಜೀವನವನ್ನು ಹೊರಗೆಡಹಿತು ಮತ್ತು ಲಿಂಗ ಸಮಾನತೆಗಾಗಿ ಅದು ಒತ್ತಾಯಿಸಿತು. ೧೯೮೦ರ ಅಂತ್ಯದ ವೇಳೆಗೆ, ರೈತ ಮಹಿಳೆಯರ ವಿಷಯ ಕ.ರಾ.ರೈ.ಸಂ.ದ ಆಶ್ರಯದಲ್ಲಿ ಪ್ರಮುಖವಾದ ಸ್ಥಾನವನ್ನು ಪಡೆಯಿತು. ೧೯೮೬ರಲ್ಲಿ, ಕ.ರಾ.ರೈ.ಸಂ. ತನ್ನ ಮಹಾರಾಷ್ಟ್ರದ ಪ್ರತಿರೂಪ ಮಹಾರಾಷ್ಟ್ರ ಶೇತ್ಕಾರಿ ಸಂಘಟನೆಯಂತೆ ಮಹಿಳಾ ಸಮ್ಮೇಳನವನ್ನು ನಡೆಸಿತು. ಕ.ರಾ.ರೈ.ಸಂ. ಲಿಂಗ ಸಮಾನತೆಯಂತಹ ಮಹಿಳಾ ವಿಷಯಗಳನ್ನು ಪ್ರಸ್ತಾಪಿಸಿತು ಮತ್ತು ಮಹಿಳೆಯರ ಎಲ್ಲಾ ರೀತಿಯ ದಮನವನ್ನು ಅದರಲ್ಲೂ ರೈತ ಮಹಿಳೆಯರ ದಮನವನ್ನು ವಿರೋಧಿಸಿತು. ಆದರೂ ಮಹಾರಾಷ್ಟ್ರ ಚಳುವಳಿ ಮಹಿಳೆಯರ ವಿಷಯವನ್ನು ಹೆಚ್ಚು ಅರ್ಥ ಪೂರ್ಣವಾಗಿ,

ಆಧುನೀಕತೆಯ ಭಾಗವಾಗಿ, ನೋಡಿಕೊಳ್ಳುವ ರೀತಿಯಲ್ಲಿ ಸಮಾನತೆಯ ಬೇಡಿಕೆ, ಆಸ್ತಿ ಹಕ್ಕಿನಲ್ಲಿ ಸಮಪಾಲು, ಲಿಂಗ ಬೇಧ (ತಾರತಮ್ಯ) ನಿಲ್ಲಿಸುವುದು ಇತ್ಯಾದಿ ಒಳಗೊಂಡಂತೆ ವಿವರಿಸಿತು.

೧೯೮೭ರಲ್ಲಿ, ಕ.ರಾ.ರೈ.ಸಂ. ಹುಲಿಯಾಳದಲ್ಲಿ ಮಹಿಳಾ ಸಮ್ಮೇಳನವನ್ನು ನಡೆಸಿತು. ಸಮ್ಮೇಳನ ಅನೇಕ ಮಹಿಳಾ ವಿಷಯಗಳನ್ನು ಹಿಂದೆಂದಿಗಿಂತ ಹೆಚ್ಚು ಅಧಿಕಾರಯುತವಾಗಿ ಚರ್ಚಿಸಿತು. ಸಮ್ಮೇಳನ ಮಹಿಳೆಯರನ್ನು ಮನುಷ್ಯರಂತೆ ಗುರುತಿಸುವುದು, ಕೂಲಿ ಸಮಾನತೆ, ಆಸ್ತಿಯ ಸಮಾನ ಒಡೆತನದ ಹಕ್ಕು ಮತ್ತು ಶೋಷಣೆಯಿಂದ ಮುಕ್ತಿ ಬಗ್ಗೆ ಅನೇಕ ತೀರ್ಮಾನಗಳನ್ನು ಕೈಗೊಂಡಿತು. ನಂತರ, ಕ.ರಾ.ರೈ.ಸಂ. ತನ್ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಮಹಿಳಾ ಸಮ್ಮೇಳನ ನಡೆಸಲು, ರೈತ ಮಹಿಳಾ ಚಳುವಳಿಗಳನ್ನು ಪ್ರಚಾರ ಮಾಡಲು ಮತ್ತು ಪ್ರೋತ್ಸಾಹಿಸಲು ನಿರ್ಧಾರ ಕೈಗೊಂಡಿತು.

ಕ.ರಾ.ರೈ.ಸಂ. ಮಹಿಳೆಯರ ಸಮಸ್ಯೆಗಳನ್ನು ವಾಸ್ತವಿಕ ಅರ್ಥದಲ್ಲಿ ಪರಿಗಣಿಸಿದೆ ಮತ್ತು ವಾಸ್ತವಿಕವಾಗಿ ಪರಿಹಾರ ಸೂಚಿಸಲು ಪ್ರಯತ್ನಿಸಿದೆ. ಮೊದಲನೆಯದಾಗಿ, ನಮ್ಮ ಸಮಾಜದ ಕ್ರೂರ ಸಾಮಾಜಿಕ ಪಿಡುಗಾಗಿರುವ ವರದಕ್ಷಿಣೆಯ ಸಮಸ್ಯೆಯನ್ನು ಸಬಲವಾಗಿ ನಿರ್ವಹಿಸಿದೆ. ಕ.ರಾ.ರೈ.ಸಂ. ಭಾರತೀಯ ಸಮಾಜ ಹೆಣ್ಣನ್ನು ಒಂದು ಅನುಭೋಗದ ವಸ್ತುವಾಗಿ, ಮಾರಾಟದ ವಸ್ತುವಾಗಿ ಮತ್ತು ಲಾಭ ಗಳಿಸುವ ಒಂದು ಸಾಧನವಾಗಿ ಪರಿಗಣಿಸಿರುವುದನ್ನು ತೀವ್ರವಾಗಿ ಟೀಕಿಸಿದೆ. ಆದ್ದರಿಂದ, ಅದು ವರದಕ್ಷಿಣೆ ಕೊಡುವುದನ್ನು ಮತ್ತು ತೆಗೆದು ಕೊಳ್ಳುವುದನ್ನು ಕಟುವಾಗಿ ವಿರೋಧಿಸಿದೆ ಮತ್ತು ಇವೆರಡನ್ನೂ ಕ್ರಿಮಿನಲ್ ಅಪರಾಧವೆಂದು ಪರಿಗಣಿಸಿದೆ. ಹಲವು ವರದಕ್ಷಿಣೆ ಸಾವುಗಳನ್ನು ಕ.ರಾ.ರೈ.ಸಂ. ಮಧ್ಯಸ್ಥಿಕೆಯಿಂದ ಉಳಿಸಿದೆ. ಉದಾಹರಣೆಗೆ, ಅದು ಶ್ರೀಮತಿ ವೀರಣ್ಣ ಅವರ ವರದಕ್ಷಿಣೆಗಾಗಿ ಪೀಡಿಸುವ ಸಂಗತಿಯನ್ನು ನಿರ್ವಹಿಸಿದೆ. ಆ ಸಂಗತಿ ಹೀಗಿತ್ತು : ಶ್ರೀ. ಹೆಚ್. ಎ. ನಾಗರಾಜ, ವೃತ್ತಿಯಲ್ಲಿ ಉಪನ್ಯಾಸಕರಾಗಿದ್ದು ತಮ್ಮ ಪತ್ನಿ ವೀಣಾಳನ್ನು ವರದಕ್ಷಿಣೆಗಾಗಿ ಪೀಡಿಸುತ್ತಿದ್ದರು ಮತ್ತು ತಮ್ಮ ತಂದೆ ತಾಯಿಗಳ ಬೆಂಬಲದಿಂದ ವೀಣಾ ಅವರು ಗರ್ಭಪಾತ ಮಾಡಿಸಿಕೊಳ್ಳುವಂತೆ ಮಾಡಿದರು, ಅಂತಿಮವಾಗಿ ಬೆಂಕಿ ಹಚ್ಚಿ ಅವಳನ್ನು ಕೊಲ್ಲಲು ನಿರ್ಧರಿಸಿದರು. ಅದೇ ವೇಳೇಗೆ, ಅದೃಷ್ಟ ಬಲದಿಂದ, ಕ.ರಾ.ರೈ.ಸಂ.ದ ಮಹಿಳಾ ಘಟಕ ಇದನ್ನು ತಿಳಿದು ಕೊಂಡು ಇನ್ನೊಂದು ವರದಕ್ಷಿಣೆ ಸಾವನ್ನು ತಪ್ಪಿಸಿತು. ನಂತರ ಅದು ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೆಳಗಿನ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿತು. ಅಪರಾಧಿ ಹೆಚ್. ಎ. ನಾಗರಾಜ ಮತ್ತು ಅವರ ತಂದೆ ತಾಯಿಗಳನ್ನು ಬಂಧಿಸಬೇಕು ಮತ್ತು ನ್ಯಾಯಂಗ ಕಸ್ಟಡಿಯಲ್ಲಿ ಇಡಬೇಕು

ಹಾಗೂ ಹೆಚ್. ಎ. ನಾಗರಾಜ ಅವರನ್ನು ಒಬ್ಬ ಸಮಾಜ ಘಾತಕ ಎಂದು ಪರಿಗಣಿಸಬೇಕು ಮತ್ತು ಸೇವೆಯಿಂದ ವಜಾ ಮಾಡಬೇಕು. ಶ್ರೀಮತಿ ವೀಣಾ ಇವರನ್ನು ಪೋಲಿಸ್ ರಕ್ಷಣೆಯಲ್ಲಿ ಕಾಪಾಡಬೇಕು. ಸಬಂಧಪಟ್ಟ ಇಲಾಖೆಗಳ ಎಲ್ಲಾ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಮತ್ತು ಅಪರಾಧಿಗಳನ್ನು ಶಿಕ್ಷಿಸಬೇಕು. ವರದಕ್ಷಿಣೆಗಾಗಿ ಪೀಡಿಸುವ ಸಂಗತಿಗಳಲ್ಲಿ ಕ.ರಾ.ರೈ.ಸಂ.ದ ಮಧ್ಯಸ್ಥಿಕೆಯಿಂದ, ಗ್ರಾಮೀಣ ಜನರಲ್ಲಿ ವರದಕ್ಷಿಣೆ ವಿರುದ್ಧ ಸಾಕಷ್ಟು ಅರಿವು ಹೆಚ್ಚಿದೆ.

ಅದೇ ವೇಳೆಯಲ್ಲಿ ಕ.ರಾ.ರೈ.ಸಂ. ಸರಳ ವಿವಾಹ ಎಲ್ಲಾ ಸಾಮಾಜಿಕ ಪಿಡುಗುಗಳಿಗೆ ಪರಿಹಾರ ಮತ್ತು ಮಾನಸಿಕ ಹಾಗೂ ಧಾರ್ಮಿಕ ಬಂಧನ, ಸ್ವಮತಾಭಿಮಾನ, ದುಂದುವೆಚ್ಚ ಮತ್ತು ಎಲ್ಲಾ ಇತರ ಜಾತಿ ಮತ್ತು ವರ್ಗ ಸಂಬಂಧೀ ಸಮಸ್ಯೆಗಳಿಂದ ಮುಕ್ತಿ ಎಂದು ಹೇಳಿದೆ. ಅದು ಲಿಂಗ ಸಮಾನತೆಯನ್ನು ಬೆಂಬಲಿಸುತ್ತದೆ ಮತ್ತು ವೈಜ್ಞಾನಿಕ ಚಿಂತನೆಗೆ ಅವಕಾಶ ನೀಡುತ್ತದೆ. ಶೋಷಣೆ ಮೂಢನಂಬಿಕೆಯ ಫಲ, ಇಲ್ಲಿ ಮೂಢನಂಬಿಕೆಗೆ ಅವಕಾಶವಿಲ್ಲ. ಅದು ಜೀವನ ಸಂಗಾತಿಗಳ ನಡುವೆ ಬಲಶಾಲಿಯಾದ ನಂಬಿಕೆ ಮತ್ತು ಪ್ರೀತಿಯಿಂದ ಕೂಡಿದ ಜೀವನ ಬಂಧನವನ್ನು ನೀಡುತ್ತದೆ. ಆದ್ದರಿಂದ ಕ.ರಾ.ರೈ.ಸಂ. ಹಲವಾರು ಸರಳ ವಿವಾಹಗಳನ್ನು ನಡೆಸಿದೆ. ಇದು ಸಮಾನರ ಸಮಾಜ ನಿರ್ಮಾಣಕ್ಕೆ ಕ.ರಾ.ರೈ.ಸಂ. ನೀಡಿದ ಕೊಡುಗೆಯಾಗಿದೆ. ಕ.ರಾ.ರೈ.ಸಂ. ಅಸ್ತಿತ್ವಕ್ಕೆ ಬಂದಾಗಿನಿಂದ ರೈತರ ಅಭಿವೃದ್ಧಿಗಾಗಿ ಹೋರಾಡಿದೆ. ಆದರೆ ಅದು ಹೇಳುವಂತೆ, ಜನತಾ ಮತ್ತು ಕಾಂಗ್ರೆಸ್ ಸರ್ಕಾರಗಳು ತಮ್ಮ ಊಳಿಗಮಾನ್ಯ ಪದ್ಧತಿಯಲ್ಲಿ ರೈತರು ಮತ್ತು ರೈತ ಮಹಿಳೆಯರನ್ನು ಗುಲಾಮರಂತೆ ಇರಿಸಿಕೊಂಡಿದ್ದರು. ಅದು ರೈತ ಮಹಿಳೆಯರನ್ನು ಅನಾಗರಿಕ ರಾಜಕಾರಣಿಗಳು ಮತ್ತು ಭ್ರಷ್ಟ ಪೋಲಿಸರ ದೌರ್ಜನ್ಯ ಹಾಗೂ ಅರಣ್ಯ ಸಿಬ್ಬಂದಿಯಿಂದ ತಮ್ಮ ಸಮಾನತೆ ಮತ್ತು ಸ್ಥಾನಮಾನದ ಹಕ್ಕುಗಳ ರಕ್ಷಣೆಗಾಗಿ ಮಹಿಳಾ ಸಂಘಗಳನ್ನು ರಚಿಸಿಕೊಳ್ಳಬೇಕೆಂದು ಪ್ರತಿಪಾದಿಸಿತು.

ಕ.ರಾ.ರೈ.ಸಂ.ದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯು ಶಿವಮೊಗ್ಗಾದಲ್ಲಿ ನಡೆಯಿತು. ಅದು ಕಂಚಿಯ ಪುರಿಸ್ವಾಮಿಗಳು ಸತಿ ಪದ್ಧತಿಯ ಪರವಾಗಿ ನೀಡಿದ ಹೇಳಿಕೆಯನ್ನು ವಿರೋಧಿಸಲು ಒಂದು ತೀರ್ಮಾನ ಕೈಗೊಂಡಿತು. ೧೯೮೮ರ ಅಕ್ಟೋಬರ್ ೨ರಂದು, ರಾಜ್ಯದಾದ್ಯಂತ ಅದು ಪ್ರತಿಭಟನಾ ಚಳುವಳಿಯನ್ನು ವ್ಯವಸ್ಥೆಗೊಳಿಸಿತು. ಕ.ರಾ.ರೈ.ಸಂ. ಅವರನ್ನು ಸತಿ ವಿರೋಧಿ ಕಾನೂನಿನ ಪ್ರಕಾರ ತಕ್ಷಣ ಬಂಧಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿತು. ಹಾಗೂ ಅದು ರಾಜ್ಯ ಸರ್ಕಾರವನ್ನು ಒತ್ತಾಯಿಸಿತು. ಹಾಗೂ ಅದು ರಾಜ್ಯ ಸರ್ಕಾರವನ್ನು,

ಕರ್ನಾಟಕ ರಾಜ್ಯವನ್ನು ಒಂದು ವೇಳೆ ಅವರು ಪ್ರವೇಶಿಸಿದರೆ ಅವರನ್ನು ಬಂಧಿಸುವಂತೆ ಒತ್ತಾಯಿಸಿತು. ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ರೈತ ಮಹಿಳೆಯರ ಏಳಿಗೆಗಾಗಿ ಅವರು ಮುಂದೆ ಬಂದು ತಮ್ಮ ಹಕ್ಕುಗಳನ್ನು ಅನುಭವಿಸಲು ಮಹಿಳಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ಮತ್ತೊಂದು ನಿರ್ಣಯ ಕೈಗೊಂಡಿತು.

ಕ.ರಾ.ರೈ.ಸಂ. ರೈತ ಸಮಾಜದ ಮತ್ತು ಪ್ರಮುಖವಾಗಿ ರೈತ ಮಹಿಳೆಯರ ಪ್ರಮುಖ ಸಮಸ್ಯೆಯಾದ 'ಸಾರಾಯಿ ಕುಡಿತ'ದ ಮತ್ತೊಂದು ಸಮಸ್ಯೆಯನ್ನು ಕೈಗೆತ್ತಿಕೊಂಡಿತು. ಅದು ಅಬಕಾರಿ ಹರಾಜು ತಡೆ ಕಾರ್ಯಕ್ರಮ ಎಂದು ಪ್ರಸಿದ್ಧ ಪ್ರತಿಭಟನಾ ವಿಧಾನವನ್ನು ಅಳವಡಿಸಿಕೊಂಡಿತು. ಹೀಗೆ ಅದು ಅಬಕಾರಿ ಹರಾಜಿನ ವಿರುದ್ಧ ಶಿವಮೊಗ್ಗಾ ಜಿಲ್ಲೆಯ ಎಲ್ಲಾ ಹಳ್ಳಿಗಳಿಂದ ಸಹಿಯನ್ನು ಕಾರ್ಮಿಕರು, ಮಹಿಳೆಯರು ಮತ್ತು ವಿದ್ಯಾರ್ಥಿಗಳಿಂದ ಸಂಗ್ರಹಿಸಿತು ಹಾಗೂ ಸಹಿ ಹಾಕಿದ ಮನವಿಯನ್ನು ಅಬಕಾರಿ ಕಮೀಷನರ್, ಡೆಪ್ಯುಟಿ ಕಮೀಷನರ್ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್ ಇವರಿಗೆ ಒಪ್ಪಿಸಿತು.

ಎಲ್ಲಾ ವಿಚಾರವಂತ ವರ್ಗ, ದೇಶಾಭಿಮಾನಿಗಳು, ರಾಜ್ಯದ ಶಿಕ್ಷಣ ಸಂಸ್ಥೆಗಳ ಮಠದ ಧಾರ್ಮಿಕ ಮುಖಂಡರು, ಗ್ರಾಮೀಣ ಜನರನ್ನು ಅವರ ಕಡಿಮೆ ವರಮಾನವನ್ನು ಕಸಿದು ಶೋಷಣೆ ಮಾಡಲು ಸಾರಾಯಿ ಪ್ರಚಾರದ ಬಗ್ಗೆ ಅರಿವು ಮೂಡಿಸಲು, ಕಾರ್ಯಕ್ರಮಗಳನ್ನು ರೂಪಿಸಿದರು. ಆದ್ದರಿಂದ, ಪ್ರತಿಯೊಂದು ಹಳ್ಳಿಯಲ್ಲಿ ಸಾರಾಯಿಯನ್ನು ಜಾರಿಗೆ ತರುವುದು ಮತ್ತು ಬಡವರಿಗೆ ಕುಡಿಯುವಂತೆ ಒತ್ತಾಯ ಪಡಿಸುವುದು ಮತ್ತು ಅವರ ಕನಿಷ್ಟ ವರಮಾನವನ್ನು ಖಜಾನೆಗೆ ಎಳೆದೊಯ್ಯುತ್ತಿರುವುದಕ್ಕಾಗಿ ಸರ್ಕಾರವನ್ನು ಟೀಕಿಸಿತು. ಕ.ರಾ.ರೈ.ಸಂ. ಸರ್ಕಾರ ಕರೆಯುವ ಸಾರಾಯಿ ಅಂಗಡಿ ಹರಾಜಿನಲ್ಲಿ ಭಾಗವಹಿಸದೇ ಇರುವಂತೆ ಸಾರಾಯಿ ಹರಾಜು ಕ್ರಮಕ್ಕೆ ಕೇಳುವವರನ್ನು ಎಚ್ಚರಿಸಿತು. ಇಲ್ಲದಿದ್ದರೆ, ಪ್ರತಿಯೊಂದು ಹಳ್ಳಿಯ ಮಟ್ಟದಲ್ಲಿ ತನ್ನ ಸಾರಾಯಿ ವಿರೋಧೀ ಚಳುವಳಿಯನ್ನು ಮುಂದುವರೆಸಲು ನಿರ್ಧರಿಸಿತು.

೧೯೮೯ರ ಏಪ್ರಿಲ್ ೧೦ರಂದು ಕ.ರಾ.ರೈ.ಸಂ. ರಾಜ್ಯದಾದ್ಯಂತ ರೈಲು ಮತ್ತು ರಸ್ತೆ ತಡೆ ಚಳುವಳಿಯನ್ನು ನಡೆಸಿತು. ರೈತ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕ.ರಾ.ರೈ.ಸಂ. ಒಂದು ತೀವ್ರವಾದ ಕ್ರಮವನ್ನು ಮುಂದಿಟ್ಟಿತು ಅದೇನೆಂದರೆ ಶಿವಮೊಗ್ಗಾ ಜಿಲ್ಲೆಯ ಕೊಪ್ಪ ಸಾರಾಯಿ ಕಂಟ್ರಾಕ್ಟರ್ ಎಲಿಯಾಸ್ ಡಯಾಸ್ ಅವರ ಒಡೆತನದ ೩೮ ಅನಧಿಕೃತ ಸ್ಥಳೀಯ ಸಾರಾಯಿ ಅಂಗಡಿಗಳನ್ನು ಬೀಗ ಹಾಕಿತು. ಈ ಎಲ್ಲಾ ಕಾರ್ಯಗಳು ರೈತ ಮಹಿಳೆಯಿರಿಂದಲೇ ನಡೆದವು.

ಕ.ರಾ.ರೈ.ಸಂ. ಸ್ವಾತಂತ್ರ್ಯ ಬಂದಾಗಿನಿಂದ ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳನ್ನು ಹಳ್ಳಿಯ ಮತ್ತು ರೈತರ ಪ್ರಸ್ತುತ ಪರಿಸ್ಥಿತಿಗೆ ಅವರೇ ಕಾರಣರೆಂದು ದೂಷಿಸಿತು. ಸರ್ಕಾರದ ಬಂಡವಾಳ ಪ್ರಭುತ್ವ ಪರ ನೀತಿಗಳು ಕೈಗಾರಿಕಾ ಸರಕುಗಳ ಅಧಿಕ ಬೆಲೆಗೆ ಪ್ರತಿಯಾಗಿ ಕೃಷಿ ಸರಕುಗಳಿಗೆ ಕಡಿಮೆ ಬೆಲೆ ನಿರ್ಧರಿಸಿದ್ದು ಗ್ರಾಮೀಣ ಅಭಿವೃದ್ಧಿಗೆ ಸಣ್ಣ ಪ್ರಾಜೆಕ್ಟ್‌ಗಳನ್ನು ಹಾಕಿ ಕೊಂಡಿದ್ದು ಮತ್ತು ಅನುತ್ಪಾದಕ ಶಿಕ್ಷಣ ನೀತಿ ಇವೆಲ್ಲವೂ ಒಟ್ಟಾರೆಯಾಗಿ ಜೇಬು ಮತ್ತು ತಲೆಯಲ್ಲಿ ಖಾಲಿ ರೈತರನ್ನು ಸೃಷ್ಟಿಸಿವೆ. ಇದರೊಂದಿಗೆ, ಸಾರಾಯಿ ಮತ್ತು ಲಾಟರಿಯನ್ನು ಹಳ್ಳಿಗಳಲ್ಲಿ ಜಾರಿಗೆ ತರುವ ಮೂಲಕ, ಸರ್ಕಾರ ಅವರನ್ನು ಪೂರ್ತಿಯಾಗಿ ಶೋಷಣೆ ಮಾಡಲು ನಿರ್ಧರಿಸಿದೆ.

ಕ.ರಾ.ರೈ.ಸಂ. ಸರ್ಕಾರದ ರೈತ ವಿರೋಧೀ ನೀತಿಗಳನ್ನು ಸಾಕ್ಷಿ ಸಹಿತ ಬಹಿರಂಗಪಡಿಸಿದೆ. ಇತ್ತೀಚಿನ ಅವಧಿಯಲ್ಲಿ, ಹಿಂದೆಂದೂ ಇಲ್ಲದಷ್ಟು, ಅಧಿಕ ಸಂಖ್ಯೆಯಲ್ಲಿ ಸಾರಾಯಿ ಮತ್ತು ವೈನ್ ಅಂಗಡಿಗಳು ಹಳ್ಳಿಗಳನ್ನು ಪ್ರವೇಶಿಸಿವೆ. ಇವು ಜೀವನದ ಹಕ್ಕು ಮತ್ತು ಸ್ಥಾನವನ್ನು ಗ್ರಾಮೀಣ ಜನರಿಂದ ಪೂರ್ತಿಯಾಗಿ ಮರೆ ಮಾಡಿದೆ. ಕಾಂಗ್ರೆಸ್ ಆಳ್ವಿಕೆಯಲ್ಲಿ, ಕರ್ನಾಟಕ ಸರ್ಕಾರ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಮೂರು ಅಥವಾ ನಾಲ್ಕು ಸಾರಾಯಿ ಡಿಸ್ಟಿಲರಿಗಳನ್ನು ತೆರೆದಿತ್ತು. ಕ.ರಾ.ರೈ.ಸಂ. ಹೇಳುವಂತೆ, ಇದು ಗ್ರಾಮೀಣ ಜನರ ಶಾಸನಾತ್ಮಕ ನಿರ್ಧಾರ ಕೈಗೊಳ್ಳುವ ಊಳಿಗಮಾನ್ಯ ಪ್ರಾಬಲ್ಯವನ್ನು ಮುಂದುವರೆಸಲು ಸರ್ಕಾರದ ವಿಧಾನವಾಗಿದೆ. ಆದರೆ ಸರ್ಕಾರದ ಈ ನಿರ್ಧಾರ ರೈತರ ಆರ್ಥಿಕ ಬಲ ಮತ್ತು ಸಮಾಜದ ಏಕತೆಯನ್ನು ದುರ್ಬಲಗೊಳಿಸುತ್ತಿತ್ತು. ಹೀಗೆ ಸಾರಾಯಿ ಮತ್ತು ವೈನ್ ಅಂಗಡಿಗಳಿಂದ ಹಳ್ಳಿಗಳನ್ನು ಹೇಗಾದರೂ ಮಾಡಿ ರಕ್ಷಿಸುವುದು ಅಗತ್ಯವಾಗಿತ್ತು. ಕ.ರಾ.ರೈ.ಸಂ. ಸಾರಾಯಿ ಅಂಗಡಿಗಳನ್ನು ತೆಗೆದು ಹಾಕುವ ಚಳುವಳಿಯಲ್ಲಿ ಭಾಗವಹಿಸುವಂತೆ ಎಲ್ಲಾ ಮಹಿಳೆಯರು ಮತ್ತು ಮಕ್ಕಳನ್ನು ಕೇಳಿಕೊಂಡಿತ್ತು. ಕ.ರಾ.ರೈ.ಸಂ. ಹೇಳುವಂತೆ, ಹಳ್ಳಿಗಳನ್ನು ಸಾರಾಯಿಯಿಂದ ಮುಕ್ತಗೊಳಿಸುವವರೆಗೂ ಸರ್ಕಾರ ಮತ್ತು ಹಳ್ಳಿಗರ ನಡುವೆ ವಿವಾದದ ವಿಷಯವಾಗಿರುತ್ತದೆ.

ಕ.ರಾ.ರೈ.ಸಂ. ತನ್ನ ನಿರ್ಣಯದಲ್ಲಿ ಕಳೆದ ೧೨ ವರ್ಷಗಳಿಂದಲೂ ಕರ್ನಾಟಕದ ಎಲ್ಲಾ ಮುಖ್ಯ ಮಂತ್ರಿಗಳು ರೈತ ಚಳುವಳಿಯನ್ನು ಅದರ ನಾಯಕರನ್ನು ಕೊಲ್ಲುವ ಮೂಲಕ ಅಂತ್ಯಗೊಳಿಸಲು ಯೋಚಿಸುವಂತೆ ಮಾಡಿದೆ ಆದ್ದರಿಂದ ಅದು ಸರ್ಕಾರದ ಜನವಿರೋಧೀ ನೀತಿಗಳ ವಿರುದ್ಧ ನಿಲ್ಲುತ್ತದೆ ಎಂದು ಹೇಳಿತು. ಅದು ಗುಂಡೂರಾವ್ ಅವರನ್ನು ೧೪೯ ರೈತರು ಪೋಲಿಸ್ ಗುಂಡಿನದಾಳಿಯಲ್ಲಿ ಸತ್ತಿದ್ದಕ್ಕಾಗಿ ದೂಷಿಸಿತು. ರಾಮಕೃಷ್ಣ ಹೆಗಡೆಯವರು ಆರು ಅಥವಾ ಏಳು ರೈತ

ಸಂಘಗಳನ್ನು ಸಂಘಟಿಸಲು ಪ್ರಚೋದಿಸುವ ಮೂಲಕ ಅದನ್ನು ಕೈಗೊಂಡರು.

೧೯೯೨ರಲ್ಲಿ, ಕ.ರಾ.ರೈ.ಸಂ.ದ ತೀವ್ರಗಾಮಿಗಳು ಅನೇಕ ಹಳ್ಳಿಗಳ ಜನರ ಬೆಂಬಲದಿಂದ ಸರ್ಕಾರಕ್ಕೆ ಹಳ್ಳಿಗಳ ಅಂಗಡಿಗಳಿಗೆ ಹೆಂಡ ಮತ್ತು ಸಾರಾಯಿಯನ್ನು ವಿತರಿಸುವುದರ ವಿರುದ್ಧ ಮನವಿ ಸಲ್ಲಿಸಿದರು. ಅದಕ್ಕೆ ಮುನ್ನ, ಅವರು ಹಳ್ಳಿಗಳಿಂದ ಅಂಗಡಿಗಳನ್ನು ತೆಗೆದು ಹಾಕಲು ಪ್ರಯತ್ನಿಸಿದರು, ಅದಕ್ಕೆ ಸಂಬಂಧಿಸಿದಂತೆ, ಕ.ರಾ.ರೈ.ಸಂ.ದ ತೀವ್ರಗಾಮಿಗಳು ಹಿರಿಯೂರು ಪೋಲೀಸ್ ಠಾಣೆಗೆ ೨೨ನೇ ಮೇ ೧೯೯೨ರಂದು ದೂರು ಸಲ್ಲಿಸಿದರು. ಅದಕ್ಕೆ ಹೊರತಾಗಿ, ಶಿವಮೊಗ್ಗಾ ಜಿಲ್ಲೆಯ, ಹಿರಿಯೂರಿಗೆ ಸಾರಾಯಿ ವಿತರಕರ ವಾಹನ ಸಾರಾಯಿ ವಿತರಿಸಲು ಬಂದಿತು. ಎಲ್ಲಾ ಮಹಿಳೆಯರು ಮತ್ತು ಮಕ್ಕಳು ತಮ್ಮ ಮನೆಯಿಂದ ಹೊರಬಂದರು, ಮತ್ತು ಅವರು ಸಾರಾಯಿ ಅಂಗಡಿಗಳಿಗೆ ಸಾರಾಯಿ ಪೂರೈಕೆ ಅವರ ಜೀವನದ ಮತ್ತು ಸ್ಥಾನಮಾನದ ಹಕ್ಕಿಗೆ ವಿರುದ್ಧವಾಗಿದೆ ಎಂದು ಭಾವಿಸಿದರು ಮತ್ತು ತಕ್ಷಣ ಅವರು ಸಾರಾಯಿ ವಾಹನಕ್ಕೆ ಬೆಂಕಿ ಹಾಕಿ ಅದನ್ನು ಸುಟ್ಟರು.

ಕ.ರಾ.ರೈ.ಸಂ.ದ ಹೇಳಿಕೆಯಂತೆ, ಹೆಂಡ ಮತ್ತು ಸಾರಾಯಿ ಆಸ್ತಿಯಲ್ಲ, ಏಕೆಂದರೆ ಅವುಗಳನ್ನು ಸಮಾಜನಾಶ ಮಾಡಲು ಉತ್ಪಾದಿಸಲಾಗುತ್ತದೆ. ಆದ್ದರಿಂದ ಯಾರು ಸರಾಯಿ ವಾಹನವನ್ನು ಸುಟ್ಟರೋ ಅವರನ್ನು ಅಪರಾಧಿಗಳೆಂದು ಪರಿಗಣಿಸಲ್ಪಡಲಿಲ್ಲ. ಅದಕ್ಕೆ ಬದಲಾಗಿ, ಸರ್ಕಾರವೇ ಅಪರಾಧಿಯಾಗಿತ್ತು. ಏಕೆಂದರೆ ಅದು ಸಾರಾಯಿ ಪ್ರಚಾರದ ಪರವಾಗಿ ಅಂತಹ ಕಾನೂನುಗಳನ್ನು ಜಾರಿಗೆ ತಂದಿತು. ನಂತರ, ಕ.ರಾ.ರೈ.ಸಂ. ರಾಜ್ಯದ ಉನ್ನತ ನ್ಯಾಯಲಯವನ್ನು ಹಳ್ಳಿಗಳಲ್ಲಿ ಹೆಂಡ ಮತ್ತು ಸಾರಾಯಿ ಪೂರೈಕೆಯನ್ನು ನಿಷೇದಿಸಲು ಆದೇಶ ಹೊರಡಿಸುವಂತೆ ಕೇಳಿಕೊಂಡಿತು.

ಕ.ರಾ.ರೈ.ಸಂ. ತನ್ನ ೧೯೯೪ ವಿಧಾನ ಸಭೆ ಚುನಾವಣೆ ಪ್ರಣಾಳಿಕೆಯಲ್ಲಿ ಪೂರ್ಣ ಸಾರಾಯಿ ನಿಷೇಧ ಮತ್ತು ಸಾರಾಯಿ ಅಂಗಡಿಗಳನ್ನು ಹಳ್ಳಿಯಿಂದ ತೆಗೆದು ಹಾಕುವುದಾಗಿ ಹೇಳಿತು. ಅದು ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನ ಹಕ್ಕು ನೀಡಲು ಕಾನೂನು ಜಾರಿಗೆ ತರುವುದಾಗಿ ಆಶ್ವಾಸನೆ ನೀಡಿತು ಅಂದರೆ ವಿವಾಹಕ್ಕೆ ಮೊದಲು ತಂದೆಯ ಆಸ್ತಿಯಲ್ಲಿ ಮತ್ತು ವಿವಾಹ ನಂತರ ಪತಿಯ ಆಸ್ತಿಯಲ್ಲಿ ಪಾಲು ನೀಡುವುದು. ೦೪ನೇ ಸೆಪ್ಟೆಂಬರ್ ೧೯೯೪ರಲ್ಲಿ ಕ.ರಾ.ರೈ.ಸಂ. ಶಿವಮೊಗ್ಗಾ ಜಿಲ್ಲೆಯಲ್ಲಿನ ಆಯನೂರಿನಲ್ಲಿ ಸಾರಾಯಿ ವಿರೋಧಿ ರೈತ ಮಹಿಳೆಯರ ಸಮ್ಮೇಳನವನ್ನು ನಡೆಸಿತು. ಸಾವಿರಾರು ರೈತ ಮಹಿಳೆಯರು ಈ ಸಮ್ಮೇಳನದಲ್ಲಿ ಭಾಗವಹಿಸಿದರು ಮತ್ತು ತಮ್ಮ ತಮ್ಮ ಹಳ್ಳಿಗಳಿಂದ ಸಾರಾಯಿ ಅಂಗಡಿಗಳನ್ನು ತೆಗೆದು ಹಾಕಲು ನಿರ್ಧಾರ ಕೈಗೊಂಡರು.

ಕ.ರಾ.ರೈ.ಸಂ. ೧೨ನೇ ಮೇ ೧೯೯೪ರಂದು ೧೨ನೇ ಶತಮಾನದ ಮಹಾನ್ ಸಮಾಜ ಸುಧಾರಕರಾದ, ಬಸವೇಶ್ವರರ ಜನ್ಮ ದಿನದಂದು ಆ ದಿನದ ಗುರುತಾಗಿ "ಸಾರಾಯಿ ನಿವಾರಣಾ ಚಲನೆ"ಯನ್ನು ನಡೆಸಿತು. ಕ.ರಾ.ರೈ.ಸಂ. ಸರ್ಕಾರದ ಸಾರಾಯಿ ನೀತಿಗಳ ಬಗ್ಗೆ ತೀವ್ರ ಸಂಶಯ ವ್ಯಕ್ತಪಡಿಸಿತು ಮತ್ತು ನಾಲ್ಕು ಅಥವಾ ಐದು ವರ್ಷಗಳಿಂದ ಅವರ ತೀವ್ರ ಸಾರಾಯಿ ವಿರೋಧವನ್ನು ಲೆಕ್ಕಿಸದೆ, ಸರ್ಕಾರ ಏಕೆ ತನ್ನ ಸಾರಾಯಿ ನೀತಿಗಳನ್ನು ಮನ ಬಂದಂತೆ ಜಾರಿಗೆ ತರುತ್ತಿದೆ ಎಂದು ಸರ್ಕಾರವನ್ನು ಪ್ರಶ್ನಿಸಿತು. ಕ.ರಾ.ರೈ.ಸಂ. ಸರ್ಕಾರ ಬಡವರನ್ನು ಅವರ ಕಡಿಮೆ ಆದಾಯ ಕಬಳಿಸಿ ಬಡವರಾಗಿಯೇ ಉಳಿಸಲು ಬಯಸಿ ಹೀಗೆ ಮಾಡಿತೆಂದು ಭಾವಿಸಿತು.

ಕ.ರಾ.ರೈ.ಸಂ. ಸರ್ಕಾರದ ಅಸಂಬದ್ಧವಾದ ನೀಲುವನ್ನು ಟೀಕಿಸಿತು. ಅದೇನೆಂದರೆ, ಒಂದು ಕಡೆ ಸರ್ಕಾರ ತನ್ನ ಸಂಪರ್ಕ ಮಾಧ್ಯಮಗಳಾದ ರೇಡಿಯೋ, ದೂರದರ್ಶನ ಇತ್ಯಾದಿಗಳಲ್ಲಿ 'ಸಾರಾಯಿ ವಿಷಕಾರಿ, ಸಾರಾಯಿ ಆರೋಗ್ಯಕ್ಕೆ ಹಾನಿಕರ' ಇತ್ಯಾದಿ ಜಾಹಿರಾತು ನೀಡುತ್ತಾ ಇದೆ ಮತ್ತು ಇನ್ನೊಂದು ಕಡೆ, ರೈತರು, ಕೃಷಿ ಕಾರ್ಮಿಕರು, ರೈತ ಮಹಿಳೆಯರ ಆಕ್ರಮಣಶೀಲ ಸಾರಾಯಿ ವಿರೋಧಿ ಪ್ರತಿಭಟನೆಗಳನ್ನು ಲೆಕ್ಕಿಸದೆ ಮತ್ತು ಅದಕ್ಕೆ ವಿರುದ್ಧವಾಗಿ ಪೋಲೀಸ್ ರಕ್ಷಣೆಯೊಂದಿಗೆ ಸಾರಾಯಿ ಹರಾಜು ಮಾಡುತ್ತಿದೆ ಮತ್ತು ಮಾರಾಟ ಮಾಡುತ್ತಿದೆ. ಇದು ನಿಜಕ್ಕೂ ಸರ್ಕಾರದ ಒಂದು ಹಾಸ್ಯಾಸ್ಪದ ಕಾರ್ಯವಾಗಿದೆ.

೧೦ನೇ ಮೇ ೧೯೯೪ರಲ್ಲಿ ಸಾರಾಯಿ ಹರಾಜಿಗೆ ಎರಡು ದಿನ ಮೊದಲು, ಕ.ರಾ.ರೈ.ಸಂ.ದ ಪದಾಧಿಕಾರಿ ವರ್ಗದ ದಾಕ್ಷಾಯಣಮ್ಮ, ಜಿಲ್ಲಾ ಮಹಿಳಾ ಸಂಘಟನಾಕಾರರು, ಕ.ರಾ.ರೈ.ಸಂ., ಪವಿತ್ರಮ್ಮ ತಾಲ್ಲೂಕು ಮಹಿಳಾ ಸಂಘಟನಾಕಾರರು, ಶಿವಮೊಗ್ಗಕ್ಕೆ ಸಾರಾಯಿ ವಿರೋಧೀ ಚಲನೆಯನ್ನು ಕೈಗೊಂಡರು ಮತ್ತು ಸಾರಾಯಿ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದರು, ಆದರೂ ಅದನ್ನು ನಡೆಸಲಾಯಿತು. ಹಾಗೂ ಸರ್ಕಾರ ಕೂಡ ಜಿ. ಷಡಾಕ್ಷರಪ್ಪ, ಅಧ್ಯಕ್ಷರು ಕ.ರಾ.ರೈ.ಸಂ. ಘಟಕ ಭದ್ರಾವತಿ ತಾಲ್ಲೂಕು, ಈಶಣ್ಣ ಖಜಾಂಚಿ, ರಾಜಶೇಖರ್ ಮುಂತಾದ ಎಲ್ಲಾ ಸಾರಾಯಿ ವಿರೋಧೀ ಪ್ರತಿಭಟನಾಕಾರರನ್ನು ಬಂಧಿಸಿತು ಮತ್ತು ಜೈಲಿನಲ್ಲಿ ಇಟ್ಟಿತು. ಭದ್ರಾವತಿ ಕ.ರಾ.ರೈ.ಸಂ.ದ ಶಾಖೆ "ಪ್ರತಿಯೊಂದು ತಾಲ್ಲೂಕು ಅಬಕಾರಿ ಕಛೇರಿ ಮೇಲೆ ದಾಳಿ" ಎಂಬ ಕಾರ್ಯಕ್ರಮವನ್ನು ಬಂಧಿತರ ಬಿಡುಗಡೆಗೆ ಕೈಗೊಂಡಿತು. ನಂತರ ಅವರನ್ನು ಬಿಡುಗಡೆ ಮಾಡಲಾಯಿತು.

ಕ.ರಾ.ರೈ.ಸಂ. ಅನೇಕ ಘೋಷಣೆಗಳನ್ನು ಸಾರಾಯಿ ಕುಡಿತದ ವಿರುದ್ಧ

ರಚಿಸಿತು. ಅವು ಈ ಕೆಳಗಿನಂತೆ ಇದ್ದವು. 'ಮದ್ಯಪಾನ ತೊಲಗಲಿ ಸಮಾಜಕ್ಕೆ ನೆಮ್ಮದಿ ಸಿಗಲಿ', 'ಮದ್ಯ ವಿಷ ಆಸ್ತಿ ಅಲ್ಲ', 'ಸಾರಾಯಿ ಓಡಿಸಿ ತಾಳಿ ಉಳಿಸಿ', 'ಸಾರಾಯಿ ಬೇಡ ಶಿಕ್ಷಣ ಬೇಕು', 'ಹಳ್ಳಿಗಳಿಂದ ಸಾರಾಯಿ ತೊಲಗಲಿ ಹಳ್ಳಿಗಳ ಬಾಳು ಉಳಿಯಲಿ', 'ಹಳ್ಳಿಗಳು ಉಳಿದರೆ ಭಾರತವೂ ಉಳಿದೀತು', 'ರೈತ ಅಂದರೆ ಭಾರತ, ಭಾರತ ಅಂದರೆ ರೈತ.' ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರ ಸಾರಾಯಿ ಮತ್ತು ಲಾಟರಿಯನ್ನು ನಿಷೇಧಿಸಿದೆ. ಇದು ಕ.ರಾ.ರೈ.ಸಂ.ದ ಮಹಿಳಾ ಕೃಷಿ ಕಾರ್ಮಿಕರಿಗೆ ಮತ್ತು ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಂದ ವಿಜಯ ಎನ್ನಬಹುದು.

ಗ್ರಾಮ ಪಂಚಾಯ್ತಿಗಳಲ್ಲಿ ರೈತ ಮಹಿಳೆಯರು

ಭಾರತದ ಉಳಿದ ರಾಜ್ಯಗಳಿಗಿಂತ ಬಹಳಷ್ಟು ಮೊದಲೇ ಕರ್ನಾಟಕದ ಮಹಿಳೆಯರಿಗೆ ರಾಜ್ಯದ ಪಂಚಾಯತ್ ರಾಜ್ ಪದ್ಧತಿಯು ಸ್ಥಳೀಯ ಆಡಳಿತದಲ್ಲಿ ರಾಜಕೀಯ ಸ್ಥಾನ ನೀಡಲಾಗಿತ್ತು. ೧೯೯೨ರ ಸಂವಿಧಾನದ ೭೩ನೇ ತಿದ್ದುಪಡಿ ಮಹಿಳೆಯರಿಗೆ ಶೇಕಡಾ ೩೩.೩ ರಷ್ಟು ಸ್ಥಾನಗಳನ್ನು ಪಂಚಾಯತ್ ಚುನಾವಣೆಗಳಲ್ಲಿ ಮೀಸಲಿಡುವಂತೆ ಎಲ್ಲಾ ರಾಜ್ಯಗಳಿಗೂ ಕಡ್ಡಾಯ ಗೊಳಿಸಿತು. ಅದು ಮಹಿಳೆಯರ ಬಲವನ್ನು ೧೪,೦೦೦ (೨೫% ೧೯೮೭ರಲ್ಲಿ) ದಿಂದ ೩೭,೦೬೯ ಕ್ಕೆ (೪೩.೮% ೧೯೯೩ರ ಚುನಾವಣೆಗಳಲ್ಲಿ) ಹೆಚ್ಚಿಸಿತು. ಅಬ್ದುಲ್ ಅಜೀಜ್ ಹೇಳುವಂತೆ "ಅದು ಕನಿಷ್ಟ ಅವಶ್ಯಕತೆಗಿಂತಲೂ ಹೆಚ್ಚಾಗಿದ್ದು ಶೇಕಡಾ ೪೩.೮ರಷ್ಟಿದೆ ಇದು ಸಂತೋಷದ ಸಂಗತಿ."

ಕರ್ನಾಟಕದ ಗ್ರಾಮ ಪಂಚಾಯ್ತಿ ಸದಸ್ಯರಲ್ಲಿ, ಶಿವಮೊಗ್ಗಾ ಜಿಲ್ಲೆಯ ಮೈದೊಳಲು ಗ್ರಾಮ ಪಂಚಾಯ್ತಿಯ ಸದಸ್ಯರದು ಆಸಕ್ತಿಪೂರ್ಣವಾಗಿದೆ. ಏಕೆಂದರೆ ಗ್ರಾಮ ಪಂಚಾಯ್ತಿಯ ಎಲ್ಲಾ ಹನ್ನೊಂದು ಸದಸ್ಯರು ಮಹಿಳೆಯರಾಗಿದ್ದಾರೆ ಮತ್ತು ಅವರೆಲ್ಲರೂ ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇದು ಕ.ರಾ.ರೈ.ಸಂ., ಅರಿವು ಸಂಸ್ಥೆ, ಆಂಜನೇಯ ಯುವ ಸಂಘ (ಎರಡೂ ಯುವಕ ಸಂಘಗಳು) ಮತ್ತು ಮೈದೊಳಲು ಗ್ರಾಮದ ಹಿರಿಯ ಸದಸ್ಯರ ಚಿಂತನೆಯ ಕೂಸಾಗಿದೆ. ಮೈದೊಳಲು ಗ್ರಾಮದಲ್ಲಿ ಮಹಿಳಾ ಗ್ರಾಮ ಪಂಚಾಯ್ತಿ ರಚಿಸುವಲ್ಲಿ ಇತರ ಎಲ್ಲಾ ಸಂಸ್ಥೆಗಳಿಗಿಂತ ಕ.ರಾ.ರೈ.ಸಂ.ದ ಪಾತ್ರ ತುಂಬಾ ಪ್ರಮುಖವಾಗಿದೆ. ಸರ್ವಾನುಮತದಿಂದ ಆಯ್ಕೆಯಾದ ಎಲ್ಲಾ ಹನ್ನೊಂದು ಮಹಿಳೆಯರ ಹೆಸರುಗಳು ಈ ಕೆಳಗಿನಂತಿವೆ.

೧) ಶ್ರೀಮತಿ. ಬಸಮ್ಮ ದೊಡ್ಡಪ್ಪ, ಮೈದೊಳಲು.
೨) ಶ್ರೀಮತಿ. ರುದ್ರಮ್ಮ ಮಲ್ಲೇಶಪ್ಪ, ಮಲ್ಲಾಪುರ
೩) ಶ್ರೀಮತಿ. ಪಾಪಮ್ಮ ತಿಮ್ಮಪ್ಪ, ಕಲ್ಲಂಜನಹಾಳ್
೪) ಶ್ರೀಮತಿ. ಮವುರದಮ್ಮ ಧರ್ಮಪ್ಪ, ಮೈದೊಳಲು

೫) ಶ್ರೀಮತಿ. ಸುಶೀಲಮ್ಮ ಸಿದ್ದಪ್ಪ, ಮೈದೊಳಲು
೬) ಶ್ರೀಮತಿ. ತುಂಗಾಬಾಯಿ ನರಸಿಂಗರಾವ್, ಮೈದೊಳಲು
೭) ಶ್ರೀಮತಿ. ಸಾವಿತ್ರಮ್ಮ ನಾಗಪ್ಪ, ಮೈದೊಳಲು
೮) ಶ್ರೀಮತಿ ದೇವೀರಮ್ಮ ನಾಗಪ್ಪ, ಮೈದೊಳಲು
೯) ಶ್ರೀಮತಿ. ಸಾಕಮ್ಮ ಬಿ. ವೀರಪ್ಪ, ಮೈದೊಳಲು
೧೦) ಶ್ರೀಮತಿ. ಕುಮಾರಿ ಲಕ್ಷ್ಮಿ ಬಸಪ್ಪ, ಮೈದೊಳಲು,
೧೧) ಶ್ರೀಮತಿ ರತ್ನಮ್ಮ ಕರಿಯಪ್ಪ, ಮೈದೊಳಲು.

ಅಭಿವೃದ್ಧಿ ವಿಷಯಗಳಲ್ಲಿ, ನೆರೆಯ ಗ್ರಾಮ ಪಂಚಾಯ್ತಿಗಳಿಗೆ ಹೋಲಿಸಿದರೆ, ಮೈದೊಳಲು ಮಹಿಳಾ ಗ್ರಾಮ ಪಂಚಾಯ್ತಿ ಕೂಡ ಅವುಗಳಲ್ಲಿ ಒಂದಾಗಿದೆ. ಆದರೆ ಈ ಗ್ರಾಮ ಪಂಚಾಯ್ತಿಯ ಕಾರ್ಯಕ್ರಮಗಳಲ್ಲಿ ಕೆಲವು ವಿಶೇಷತೆಗಳಿವೆ. ಅವುಗಳು ಈ ಕೆಳಗಿನಂತಿವೆ.

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿ ಪ್ರತಿ ಸದಸ್ಯರಿಗೆ ಒಂದು ವರ್ಷ, ಒಂದು ವರ್ಷ ಪೂರ್ತಿಯಾದ ನಂತರ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ತಮ್ಮ ಸ್ಥಾನ ಬಿಟ್ಟು ಕೊಡಬೇಕು ಮತ್ತು ಸರ್ವಾನುಮತದಿಂದ ಆ ಸ್ಥಾನಗಳಿಗೆ ಇತರ ಸದಸ್ಯರಿಗೆ ಅವಕಾಶ ಮಾಡಿಕೊಡಬೇಕು. ಮಾರ್ಚ್ ೧೯೯೪ರಿಂದ, ಯಾವುದೇ ಚುನಾವಣೆಯಿಲ್ಲದೆ ಅಧಿಕಾರದ ಶಾಂತಿಯುತ ವರ್ಗಾವಣೆ ಮೈದೊಳಲು ಗ್ರಾಮ ಪಂಚಾಯ್ತಿಯಲ್ಲಿ ಮುಂದುವರೆಯುತ್ತಾ ಬಂದಿದೆ.

ಎರಡನೆಯದಾಗಿ, ಮೈದೊಳಲು ಗ್ರಾಮ ಪಂಚಾಯ್ತಿ ಸಾರಾಯಿಯ ಪೂರ್ಣ ನಿಷೇಧವನ್ನು ಕಠಿಣವಾಗಿ ನಿಭಾಯಿಸಿದೆ. ಪ್ರತಿಭಟನೆಯ ಮೊದಲ ಭಾಗವಾಗಿ, ಸಾರಾಯಿ ಅಂಗಡಿಗಳ ಸ್ಥಾಪನೆಗೆ "ಅಭ್ಯಂತರ ಇಲ್ಲ" ಪತ್ರದ ಹಂಚಿಕೆಯನ್ನು ರದ್ದು ಪಡಿಸಿದೆ. ನಂತರ ಅದು ಕಳ್ಳ ಭಟ್ಟಿ ಉತ್ಪಾದನೆಯ ಸಮಸ್ಯೆಯನ್ನು ಕಂಡು ಹಿಡಿಯಿತು. ಇದನ್ನು ಗ್ರಾಮ ಪಂಚಾಯ್ತಿ ಸಾರ್ವಜನಿಕರ ಬೆಂಬಲದಿಂದ ತೀವ್ರವಾದ ರೀತಿಯಲ್ಲಿ ನಿಯಂತ್ರಿಸಿತು. ಗ್ರಾಮ ಪಂಚಾಯ್ತಿಯು ಮೈದೊಳಲಿನಿಂದ ಶಿವಮೊಗ್ಗಾದವರೆಗೆ ದೀರ್ಘವಾದ ಚಲನೆಯನ್ನು ವ್ಯವಸ್ಥೆಗೊಳಿಸಿತು. ಮತ್ತು ಸಾರಾಯಿ ಪೂರ್ಣ ನಿಷೇಧ ಹಾಗೂ ತಮ್ಮ ಹಳ್ಳಿಗಳಲ್ಲಿ ಸಾರಾಯಿ ಹರಾಜನ್ನು ರದ್ದು ಗೊಳಿಸುವಂತೆ ಒತ್ತಾಯಿಸಿ ಒಂದು ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿತು.

ಮೂರನೆಯದಾಗಿ, ಅದು ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿತು. ಅದು ವಯಸ್ಕರಿಗೆ ಶಿಕ್ಷಣ ನೀಡಲು ೧೨ ಶಾಲೆಗಳನ್ನು

ತೆರೆಯಿತು. ಕಡಿದಾಳ್ ಶಾಮಣ್ಣನವರು ಈ ಗ್ರಾಮ ಪಂಚಾಯ್ತಿಯ ಸಾಧನೆಗಳನ್ನು ಶ್ಲಾಘನೀಯವಾದುದು ಎಂದು ಪ್ರಶಂಸಿಸಿದ್ದಾರೆ.

ಅಂತಿಮವಾಗಿ, ಅದು ಅಧಿಕ ಸಂಖ್ಯೆಯಲ್ಲಿ ಶೌಚಾಲಯಗಳನ್ನು ಕರ್ನಾಟಕ ಸರ್ಕಾರ ನೆರವು ನೀಡಿದ 'ಗ್ರಾಮ ನೈರ್ಮಲ್ಯ' ಕಾರ್ಯಕ್ರಮದ ಅಡಿಯಲ್ಲಿ ಕಟ್ಟಿಸಿತು. ಅದು ಪೂರ್ಣವಾಗಿ ಸರ್ಕಾರದ ಹಣವನ್ನು ಆ ಉದ್ದೇಶಕ್ಕೆ ನೀಡಿದ ಉಪಕರಣಗಳನ್ನು ಬಳಸಿಕೊಂಡಿತು ಮತ್ತು ಹೆಚ್ಚುವರಿ ಹಣಕ್ಕಾಗಿ ಬೇಡಿಕೆ ಸಲ್ಲಿಸಿತು. ಕಡಿದಾಳ್ ಶಾಮಣ್ಣ ಅವರ ಪ್ರಕಾರ "ಈ ಪ್ರದೇಶದಲ್ಲಿ ಇದು ಶೌಚಾಲಯ ನಿರ್ಮಾಣಕ್ಕಾಗಿ ನಿಗದಿಪಡಿಸಿದ ಹಣ ಮತ್ತು ಉಪಕರಣಗಳನ್ನು ಉಪಯೋಗಿಸಿದ ಏಕೈಕ ಗ್ರಾಮ ಪಂಚಾಯ್ತಿಯಾಗಿದೆ." ಎಂದಿದ್ದಾರೆ.

ಶಿವಮೊಗ್ಗಾ ಆಧಾರಿತ ವ್ಯಕ್ತಿ ಅಭಿವೃದ್ಧಿ ಸಂಸ್ಥೆಯಾದ ಶಾರದಾ ಜೂನಿಯರ್ ಛೇಂಬರ್ ಎಲ್ಲಾ ಹನ್ನೊಂದು ಮಹಿಳಾ ಸದಸ್ಯರನ್ನು ಗುರುತಿಸಿದೆ ಮತ್ತು ಅವರ ಸಾಧನೆಗಾಗಿ ಸನ್ಮಾನಿಸಿದೆ. ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಪ್ರಭಾಕರ್‌ರವರು ಅವರ ಸಾಧನೆಯನ್ನು ಹೊಗಳಿದ್ದಾರೆ ಮತ್ತು ನಾಲ್ಕು ಲಕ್ಷ ರೂಪಾಯಿ ಮೌಲ್ಯದ ಒಂದು ಗ್ರಂಥಾಲಯವನ್ನು ಮೈದೊಳಲು ಗ್ರಾಮಕ್ಕೆ ನೀಡಿದ್ದಾರೆ. ಶಾಮಣ್ಣ ಅವರ ಅಭಿಪ್ರಾಯದಂತೆ ಪಾರ್ಲಿಮೆಂಟಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ಪರ ಹಾಗೂ ವಿರುದ್ಧ ಚರ್ಚೆ ನಡೆಯುತ್ತಿರುವಾಗ, ಮೈದೊಳಲು ಗ್ರಾಮ ಪಂಚಾಯ್ತಿಯ ಸಾಧನೆ ಮಸೂದೆಗೆ ಪರವಾಗಿ ಒಂದು ಉದಾಹರಣೆಯಾಗಿದೆ.

ಕ.ರಾ.ರೈ.ಸಂ. ೧೯೯೬ರಲ್ಲಿ ಬೆಂಗಳೂರಿನಲ್ಲಿ ನಡೆದ ವಿಶ್ವ ಸುಂದರಿ ಸ್ಪರ್ಧೆಯ ವಿರುದ್ಧ ತನ್ನ ಕ್ರೋಧವನ್ನು ವ್ಯಕ್ತಪಡಿಸಿತು. 'ನಂಜುಂಡಸ್ವಾಮಿಯವರು ಸೌಂದರ್ಯ ಸ್ಪರ್ಧೆಯ ವಿರುದ್ಧ ಪ್ರತಿಭಟನೆ ನಡೆಸಲು ಎಲ್ಲಾ ಮಹಿಳಾ ಸಂಘಟನೆಗಳ ಬೆಂಬಲವನ್ನು ಕೇಳಿಕೊಂಡರು. ಅವರು ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ತಮ್ಮ ಸಾಮ್ರಾಜ್ಯಶಾಹಿ ಸಂಸ್ಕೃತಿಯನ್ನು ಹೇರಲು ಪಾಶ್ಚಿಮಾತ್ಯ ರಾಷ್ಟ್ರಗಳು ಕೈಗೊಂಡ ಬುದ್ಧಿವಂತ ಆಟವೆಂದು ಸೌಂದರ್ಯ ಸ್ಪರ್ಧೆಯನ್ನು ವ್ಯಾಖ್ಯಾನಿಸಿದರು. ನಂಜುಂಡಸ್ವಾಮಿಯವರು ವಿಧಾನ ಸೌಧದ ಬ್ಯಾಂಕ್ವೆಟ್ ಸಭಾಂಗಣವನ್ನು ಅಮಿತಾಬ್ ಬಚ್ಚನ್ ಕಾರ್ಪೋರೇಷನ್ನಿನ ಪತ್ರಿಕಾ ಸಮ್ಮೇಳನ ನಡೆಸಲು ಕೊಡುವ ಸರ್ಕಾರದ ನಿಲುವನ್ನು ತೀವ್ರವಾಗಿ ಟೀಕಿಸಿದರು. ಅವರು ಬ್ಯಾಂಕ್ವೆಟ್ ಸಭಾಂಗಣ ಇರುವುದು ಕೇವಲ ಸರ್ಕಾರದ ಚರ್ಚೆಗಳು ಮತ್ತು ಪತ್ರಿಕಾ ಸಮ್ಮೇಳನ ನಡೆಸಲು ಮಾತ್ರ ಮೀಸಲಿದೆ ಎಂದು ಎಚ್ಚರಿಸಿದರು. ಆದರೆ, ಈ ತತ್ವಕ್ಕೆ ವಿರುದ್ಧವಾಗಿ, ಅದನ್ನು ಒಂದು ಖಾಸಗಿ ಸಂಸ್ಥೆಗೆ ಪತ್ರಿಕಾ ಸಮ್ಮೇಳನ ನಡೆಸಲು ಕೊಡುವುದು ಸಂವಿಧಾನಕ್ಕೆ ವಿರುದ್ಧವಾದ ನಡವಳಿಕೆಯಾಗಿದೆ. ಅಂತಿಮವಾಗಿ ಅವರು

ಸೌಂದರ್ಯ ಸ್ಪರ್ಧೆಯಂತಹ ಅಸಹ್ಯ ಸ್ಪರ್ಧೆಯಲ್ಲಿ ಭಾಗವಹಿಸದಿರುವಂತೆ ಮಹಿಳೆಯರನ್ನು ಒತ್ತಾಯಿಸಿದರು.

ಕ.ರಾ.ರೈ.ಸಂ. ತನ್ನ ಸ್ಥಾಪನೆಯ ನಾಲ್ಕು ಅಥವಾ ಐದು ವರ್ಷಗಳ ನಂತರ ಮಹಿಳಾ ವಿಷಯವನ್ನು ಕೈಗೆತ್ತಿಕೊಂಡಿದೆ, ಆದರೆ ೮೦ರ ಮಧ್ಯಭಾಗದ ನಂತರ, ಪ್ರತಿಯೊಂದು ಮಹಿಳಾ ವಿಷಯವನ್ನು ತನ್ನ ಚಳುವಳಿಗಳ ಅಡಿಯಲ್ಲಿ ಪರಿಗಣಿಸಿದೆ ಮತ್ತು ಅದಕ್ಕಾಗಿ ಹೋರಾಟ ನಡೆಸಿದೆ.

ಪರಿಸರ ಹಾಗೂ ಕ.ರಾ.ರೈ.ಸಂ.

ಇತ್ತೀಚೆಗೆ ರಾಷ್ಟ್ರದಲ್ಲಿ ಹೆಚ್ಚುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ಕಾಳಜಿ ಹೆಚ್ಚುತ್ತಿದೆ. ಒಂದೆಡೆ ಸಂಪನ್ಮೂಲಗಳ ವಿವೇಕ ರಹಿತ ಬಳಕೆಯಿಂದ ಆಗುತ್ತಿರುವ ಹಾನಿಯನ್ನು ಸರಿಪಡಿಸಲಾಗದುದರ ವಿರುದ್ಧ, ಇನ್ನೊಂದೆಡೆ ಅಭಿವೃದ್ಧಿಯ ಹೆಸರಿನ ಮೂಲಕ ಗಾಳಿ, ನೀರು ಮತ್ತು ಅವ್ಯವಸ್ಥಿತ ಪರಿಸರದ ಮಾಲಿನ್ಯದ ವಿರುದ್ಧ ಎಚ್ಚರಿಕೆಗಳನ್ನು ನೀಡಲಾಗಿದೆ. ಇಂದಿನ ಬಂಡವಾಳ ಪ್ರಭುತ್ವ ಸಮಾಜಗಳಲ್ಲಿ, ಪರಿಸರದ ಆಡಳಿತ ಬಂಡವಾಳಶಾಹಿಗಳ ಲಾಭದ ಉದ್ದೇಶದಿಂದ ನಿರ್ದೇಶಿಸಲ್ಪಡುತ್ತಿದೆ. ೩೦೦ ವರ್ಷಗಳ ಸಾಮ್ರಾಜ್ಯಶಾಹಿ ಆಡಳಿತದಲ್ಲಿ, ಬ್ರಿಟಿಷರು ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡಿದ್ದಾರೆ ಮತ್ತು ಪರಿಸರವನ್ನು ಮಲಿನಗೊಳಿಸಿದ್ದಾರೆ. ಆದರೆ ಸ್ವಾತಂತ್ರ್ಯ ನಂತರವೂ ಪರಿಸರದ ಮೇಲೆ ಸ್ಥಳೀಯ ಬಂಡವಾಳ ಶಾಹಿಗಳ ಆಕ್ರಮಣವನ್ನು ಅಪರಾಧವೆಂದು ಪರಿಗಣಿಸಲಾಗಿಲ್ಲ. ಕಠಿಣ ನಿಯಮ ಮತ್ತು ನಿರ್ಬಂಧನೆಗಳಿಗೆ ಬದಲಾಗಿ ಪರಿಸರ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅಧಿಕ ಪ್ರಮಾಣದ ಆಕ್ರಮಣ ಅನಿರ್ಬಂಧಿತವಾಗಿ ಮುಂದುವರೆಯುತ್ತಲೇ ಇದೆ.

ಕಾಡುಗಳು, ಭೂಮಿ ಮತ್ತು ಜಲ ಸಂಪನ್ಮೂಲಗಳು ಹವಾಮಾನ ನಿಯಂತ್ರಣಕ್ಕಾಗಿ ಅವಶ್ಯಕವಾಗಿವೆ. ಕೃಷಿ ಚಟುವಟಿಕೆಗಳು ಹೆಚ್ಚಾಗಿ ಕಾಡುಗಳನ್ನೇ ಅವಲಂಭಿಸಿವೆ ಅವು ಇತರ ಅಂಶಗಳನ್ನು, ಮಣ್ಣಿನ ಸವೆತ, ಪ್ರವಾಹಗಳು, ಅಣೆಕಟ್ಟುಗಳ ಕೆಸರಾಗುವಿಕೆ, ಮರುಭೂಮಿಗಳ ಬೆಳವಣಿಗೆ ಮತ್ತು ಬರಗಾಲವನ್ನು ನಿಯಂತ್ರಿಸಲು ಸಹಾಯ ಮಾಡುತ್ತವೆ. ಭಾರತದಲ್ಲಿ ಕನಿಷ್ಟ ಅರಣ್ಯ ವಿಸ್ತಾರ ಬೇಕಾಗಿರುವುದು ಅದರ ಭೂಭಾಗದ ೧/೩ ಭಾಗವೆಂದು ನಿರ್ಧರಿಸಲಾಗಿದೆ. ಬೆಟ್ಟ ಪ್ರದೇಶಗಳಲ್ಲಿ ಶೇಕಡಾ ೬೦ ಮತ್ತು ಸಮತಟ್ಟು ಪ್ರದೇಶಗಳಲ್ಲಿ ಶೇಕಡಾ ೨೦. ಇದಕ್ಕೆ ವಿರುದ್ಧವಾಗಿ, ಪ್ರಸ್ತುತದಲ್ಲಿ ಭಾರತದಲ್ಲಿ ಅರಣ್ಯ ವಿಸ್ತಾರ ಶೇಕಡಾ ೧೧ಕ್ಕಿಂತ ಅಧಿಕವಾಗಿಲ್ಲವೆಂದು ಅಂದಾಜು ಮಾಡಲಾಗಿದೆ. ಇಂದಿನವರೆಗೂ ನೈಸರ್ಗಿಕ ಪರಿಸರಕ್ಕೆ ಸಂಬಂಧಿಸಿದ ವಿಷಯಗಳನ್ನು ಅರ್ಥವ್ಯವಸ್ಥೆಯ ಮೇಲಿನ ಚರ್ಚೆಗಳಲ್ಲಿ ಕೇಂದ್ರ ಭಾಗವೆಂದು

ಪರಿಗಣಿಸುವಷ್ಟು ಪ್ರಮುಖವಾಗಿಲ್ಲದಿರುವುದು ದುರದೃಷ್ಟಕರ.

ಇದಕ್ಕೆ ವಿರುದ್ಧವಾಗಿ ಪಾಶ್ಚಿಮಾತ್ಯ ವಿಶ್ವದಲ್ಲಿ ಪರಿಸರದ ವಿಷಯಗಳನ್ನು ಕಾರ್ಮಿಕ ಸಂಘಗಳು, ಪರಿಸರ ವಾದಿಗಳು ಮತ್ತು ಪ್ರಾಣಿದಯಾ ಕಾರ್ಯಕರ್ತರು ಪ್ರಮುಖವಾಗಿ ಕೈಗೆತ್ತಿಕೊಂಡಿದ್ದಾರೆ. ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ೩೦ಕ್ಕಿಂತ ಹೆಚ್ಚು ಸಂಸ್ಥೆಗಳು, ಪರಿಸರವಾದಿಗಳನ್ನು ಒಳಗೊಂಡಂತೆ, ಅಲ್ಪ ಭಾಷಾ ಗುಂಪುಗಳು ಎಡ ಪಂಥೀಯ ಸಂಸ್ಥೆಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ದಲಿತ ಸಂಸ್ಥೆಗಳು ಕ.ರಾ.ರೈ.ಸಂ. ಜೊತೆಗೂಡಿ ಬಹುರಾಷ್ಟ್ರೀಯ ಕಂಪೆನಿಗಳು ಉಂಟುಮಾಡುತ್ತಿರುವ ಪರಿಸರ ಮಾಲಿನ್ಯವನ್ನು ವಿರೋಧಿಸುತ್ತಿದೆ ಹಾಗೂ ಈ ವಿಷಯಗಳು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇಡೀ ಸಮಾಜದ ವಿಷಯಗಳಾಗಿವೆ, ದುರದೃಷ್ಟವಶದಿಂದ ಭಾರತದಲ್ಲಿ ಮತ್ತು ಅದರಲ್ಲೂ ಕರ್ನಾಟಕದಲ್ಲಿ ಇದು ರೈತರ ವಿಷಯವಾಗಿದೆ.

ಶರದ್ ಜೋಶಿ, ಅಧ್ಯಕ್ಷರು, ಮಹಾರಾಷ್ಟ್ರ ಶೇತ್ಕಾರೀ ಸಂಘಟನೆ, ಕೈಗಾರಿಕಾ ಮಾಲಿನ್ಯ, ಕೈಗಾರೀಕಾಕರಣ, ಮತ್ತು ನಗರ ತಾರತಮ್ಯವನ್ನು ಭಾರತದಲ್ಲಿ ಮಣ್ಣಿನ ಫಲವತ್ತತೆ ಮತ್ತು ಪರಿಸರ ಹಾಳುಗೆಡವುದಕ್ಕಾಗಿ ಮತ್ತು ರೈತರಿಂದ ಶತಮಾನದಷ್ಟು ಹಳೆಯುದಾದ ಸ್ವಂತಕ್ಕೆ ಬಳಸುವ ವಿಧಾನವನ್ನು ಕಸಿದುಕೊಂಡದ್ದಕ್ಕಾಗಿ ದೂಷಿಸುತ್ತಾರೆ. ವಂದನಾಶಿವ ಕೂಡ ಇದೇ ರೀತಿಯ ಅಭಿಪ್ರಾಯವನ್ನು ವಿದೇಶೀ/ನಗರ/ಕೈಗಾರಿಕಾ ಅಭಿವೃದ್ಧಿಯ ವಿಧಾನ ರೈತರನ್ನು ಲೂಟಿ ಮಾಡಿದೆಯಲ್ಲದೆ ಪರಿಸರವನ್ನು ಲೂಟಿ ಮಾಡಿದೆ ಎಂದು ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಸರ್ಕಾರ ೧೯೭೧ರಲ್ಲಿ ಕೈಗಾರಿಕಾ ಅವಶ್ಯಕತೆಗಳನ್ನು ಪೂರೈಸಲು ಕರ್ನಾಟಕ ಅರಣ್ಯಗಾರಿಕೆ ನಿಗಮವನ್ನು ಸ್ಥಾಪಿಸಿತು. ಅದರ ಉದ್ದೇಶ ಎಲ್ಲಾ ರೀತಿಯ ಅರಣ್ಯ ಗಿಡಗಳನ್ನು, ಮರಗಳನ್ನು ಮತ್ತು ಬೆಳೆಗಳನ್ನು ನೆಡುವುದು, ಸಾಗುವಳಿ ಮಾಡುವುದು, ಉತ್ಪಾದಿಸುವುದು ಮತ್ತು ಬೆಳೆಸುವುದು ಆಗಿದ್ದರೂ, ಅದರ ವ್ಯಾಪಾರ ಮುಖ್ಯವಾಗಿ ನೀಲಗಿರಿ ಮತ್ತು ರಬ್ಬರ್ ಮೇಲೆ ಕೇಂದ್ರೀಕೃತವಾಗಿದ್ದಿತು. ೧೯೮೫ರ ಕೊನೆಯವರೆಗೆ, ಕರ್ನಾಟಕ ಅರಣ್ಯಗಾರಿಕೆ ನಿಗಮ ೪೦,೩೫೦ ಹೆಕ್ಟೇರ್ ಭೂಮಿಯಲ್ಲಿ ನೀಲಗಿರಿ ಗಿಡಗಳನ್ನು ಬೆಳಸಿತ್ತು ಮತ್ತು ೧೦,೦೦೦ ಹೆಕ್ಟೇರುಗಳಿಗಿಂತ ಅಧಿಕ ನೀಲಗಿರಿ ಗಿಡಗಳನ್ನು ಹರಿಹರ ಪಾಲಿಫೈಬರ್ಸ್ ಎಂಬ ಸಂಯುಕ್ತ ಬಂಡವಾಳ ಸಂಸ್ಥೆಯ ಅಡಿಯಲ್ಲಿ ನೆಡಲಾಗಿತ್ತು.

ಕ.ರಾ.ರೈ.ಸಂ. ನೀಲಗಿರಿ ಬೆಳೆಸುವುದನ್ನು, ಅದು ಪರಿಸರ ಹಾಳು ಮಾಡುತ್ತದೆ ಮತ್ತು ಆಹಾರ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆಂಬ ಅಂಶಗಳ ಆಧಾರದ

ಮೇಲೆ ವಿರೋಧಿಸಿತ್ತು. ತಕ್ಷಣ ಅರಣ್ಯ ಮಂತ್ರಿಗಳಾದ ಶ್ರೀ ಜೀವಿಜಯ, ಕ.ರಾ.ರೈ.ಸಂ.ದ ೩೫ ಸದಸ್ಯರನ್ನು ಗುಜರಾತಿನಲ್ಲಿ ಸಾಮಾಜಿಕ ಅರಣ್ಯ ಅಧ್ಯಯನಕ್ಕಾಗಿ ಕಳಿಸುವಂತೆ ಕ.ರಾ.ರೈ.ಸಂ.ನ್ನು ಕೇಳಿಕೊಂಡರು.

೧೯೮೬ರ ಏಪ್ರಿಲ್ ೨೨ರಿಂದ ೨೮ರವರೆಗೆ, ಅರಣ್ಯ ಇಲಾಖೆ ವತಿಯಿಂದ ಗುಜರಾತ್‌ಗೆ ಏಳು ದಿನಗಳ ಅಧ್ಯಯನ ಪ್ರವಾಸವನ್ನು ವ್ಯವಸ್ಥೆ ಮಾಡಿತು. ಕ.ರಾ.ರೈ.ಸಂ.ದ ಅಧ್ಯಯನ ಪ್ರವಾಸದಿಂದ ಬಂದ ಮೇಲೆ ನೀಡಿದ ಅಧ್ಯಯನ ವರದಿ ನೀಲಗಿರಿ ಬೆಳೆಸುವಿಕೆ ಕೇವಲ ಪರಿಸರ ಹಾಳು ಮಡುವುದೇ ಅಲ್ಲದೆ ಆಹಾರ ಉತ್ಪಾದನೆಯನ್ನು ಕಡಿಮೆ ಮಾಡುವುದೆಂದು ಕಂಡು ಹಿಡಿಯಿತು.

ಕ.ರಾ.ರೈ.ಸಂ.ದ ಗುಜರಾತ್‌ನ ನೀಲಗಿರಿಯ ಅಧ್ಯಯನ ವರದಿ, ಗುಜರಾತ್ ಸರ್ಕಾರ ೧೯೬೯ರಲ್ಲಿ ಸಾಮಾಜಿಕ ಅರಣ್ಯಗಾರಿಕೆ ಕಾರ್ಯಕ್ರಮವನ್ನು ತನ್ನ ಅರಣ್ಯ ವಿಸ್ತಾರವನ್ನು ಶೇಕಡಾ ಐದರಿಂದ ರಿಂದ ಕನಿಷ್ಟ ಶೇಕಡಾ ಮೂವತ್ಮೂರಕ್ಕೆ ಹೆಚ್ಚಿಸುವ ಉದ್ದೇಶದಿಂದ ಕೈಗೊಂಡಿತು ಎಂದು ಅಭಿಪ್ರಾಯ ಪಟ್ಟಿತು. ಸರ್ಕಾರ ಸರ್ಕಾರದ ನಿರುಪಯುಕ್ತ ಭೂಮಿಯಲ್ಲಿ ನೆಡಲು ಸಾಧ್ಯವಿಲ್ಲದ್ದರಿಂದ, ಅದು ಅರಣ್ಯಗಾರಿಕೆ ಹೆಚ್ಚಿಸಲು ಖಾಸಗಿ ಉದ್ದಿಮೆಗಳನ್ನು ಅವಲಂಭಿಸಬೇಕಾಯಿತು. ಖಾಸಗಿ ಉದ್ದಿಮೆಗಳು ಸರ್ಕಾರಿ ನರ್ಸರಿಗಳಿಂದ ನೀಲಗಿರಿ ಗಿಡಗಳನ್ನು ಕೇಳಿಕೊಂಡರು. ಆದ್ದರಿಂದ ಶೇಕಡಾ ೭೦ಕ್ಕಿಂತ ಅಧಿಕ ಗಿಡಗಳು ನೀಲಗಿರಿ ಗಿಡಗಳೇ ಆಗಿದ್ದವು. ೧೯೮೨ರ ಕೊನೆಯ ವೇಳೆಗೆ, ಭಾವನಗರ ಜಿಲ್ಲೆ ಒಂದು ಕೋಟಿಗಿಂತಲೂ ಹೆಚ್ಚು ಗಿಡಗಳನ್ನು ನೆಟ್ಟಿತು. ಆದ್ದರಿಂದ, ಕೇಂದ್ರ ಸರ್ಕಾರದ ಅಂದಿನ ಹಣಕಾಸು ಮಂತ್ರಿಗಳಾದ ಶ್ರೀ ಪ್ರಣವ್ ಮುಖರ್ಜಿಯವರು "ಭಾವನಗರ ವಿಶ್ವದ ಪ್ರಥಮ ನೀಲಗಿರಿ ಜಿಲ್ಲೆಯೆಂದು ಘೋಷಿಸಿದರು."

ಅಧ್ಯಯನ ವರದಿ, ಕೇವಲ ದೊಡ್ಡದಾದ ಭೂಮಿ ಹೊಂದಿದವರು ನೀಲಗಿರಿ ಬೆಳೆಸಿದುದನ್ನು ಕಂಡು ಕೊಂಡಿತು. ಏಕೆಂದರೆ ಅವರು ತಮ್ಮ ಭೂಮಿಯನ್ನು ಖಾಲಿ ಬಿಡಲು ಬಯಸಲಿಲ್ಲ. ಆದರೆ ಮಧ್ಯಮ ಮತ್ತು ಸಣ್ಣ ಭೂ ಮಾಲೀಕರು ಹೀಗೆ ಮಾಡಲಿಲ್ಲ. ಅಲ್ಲದೇ, ಯಾರು ಕೃಷಿಯನ್ನು ಆದಾಯದ ಉಪ ಮೂಲವೆಂದು ಪರಿಗಣಿಸಿದ್ದರೋ ಅಂತಹ ಭೂಮಿಯಲ್ಲಿ ಮಾತ್ರ ನೀಲಗಿರಿ ಬೆಳೆಸಲಾಯಿತು. ಅವರಲ್ಲಿ ಅನೇಕರು ಸರ್ಕಾರಿ ನೌಕರರು ಇಲ್ಲವೆ ವ್ಯಾಪಾರಸ್ಥರಾಗಿದ್ದರು.

ಅಧ್ಯಯನ ವರದಿ, ನೀಲಗಿರಿ ಬೆಳವಣಿಗೆಯ ಪ್ರಮಾಣದ ಬಗ್ಗೆ ಇದ್ದ ತಪ್ಪು ಕಲ್ಪನೆ ಅಂದರೆ ನೀಲಗಿರಿ ಇತರ ಗಿಡಗಳಿಗಿಂತ ಶೀಘ್ರಗತಿಯಲ್ಲಿ ಬೆಳೆಯುತ್ತದೆಂಬ

ಬಗ್ಗೆ ಸ್ಪಷ್ಟೀಕರಣ ನೀಡಿತು. ವಾಸ್ತವವಾಗಿ ಇತರೆ ಗಿಡಗಳು ನೀಲಗಿರಿಗಿಂತ ಹೆಚ್ಚು ಬೇಗ ಬೆಳೆಯುತ್ತವೆ. ಪಟ್ಟಿ ಸಂಖ್ಯೆ ೧.೧೪. ಈ ವ್ಯತ್ಯಾಸವನ್ನು ತೋರಿಸುತ್ತದೆ.

ಪಟ್ಟಿ ೧.೧೫
ಮರಗಳ ಬೆಳೆಯುವ ಸಾಮಾರ್ಥ್ಯ

ಕ್ರ. ಸಂ.	ಗಿಡಗಳ ಹೆಸರು	ವರ್ಷಗಳು	ಸ್ಕ್ವೇರ್ ಮೀಟರ್ – ಒಂದು ಹೆಕ್ಟೆರ್‌ಗೆ
೧	ನೀಲಗಿರಿ	೫	೫–೧೦
೨	ಶಿವಾನೆ	೩	೨೨
೩	ನೊಗ	೫	೧೯
೪	ಸರ್ವೇಗಿಡ	೫	೧೫
೫	ಗೀಲಿಮರ	೭	೧೩
೬	ಕರಿಮತ್ತಿ	೪	೧೦
೭	ಸಂಪಿಗೆ	೮	೧೮
೮	ಟರ್ಮಿನಾಲಿಯಾ	೮	೧೫
೯	ಮಲ್‌ಬರಿಮರ	೧೦	೨೫

ಮೂಲ : 'ಗುಜರಾತ್ ರಾಜ್ಯದಲ್ಲಿ ಸಾಮಾಜಿಕ ಅರಣ್ಯಾಗಾರಿಕೆಯ ಬಗ್ಗೆ, ರೈತ ಸಂಘದ ನಿಯೋಗದ ವರದಿ', ಪುಟ ೨೦, ದಿನಾಂಕ ಇಲ್ಲ.

ವರದಿ ಪ್ರಕಾರ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಅರಣ್ಯ ಕಡಿಮೆಯಾಗುತ್ತಿದೆ. ಪ್ರಸ್ತುತದಲ್ಲಿ, ಕರ್ನಾಟಕದಲ್ಲಿರುವ ಅರಣ್ಯ ಅವಶ್ಯವಿರುವ ಶೇಕಡಾ ೩೩ಕ್ಕೆ ಬದಲಾಗಿ ಕೇವಲ ಶೇಕಡಾ ೧೦ ರಿಂದ ೧೨ ರಷ್ಟಿದೆ. ಆದರೆ, ಕ.ರಾ.ರೈ.ಸಂ. ಸಾಮಾಜಿಕ ಅರಣ್ಯಾಗಾರಿಕೆಯ ಹೆಸರಿನಲ್ಲಿ, ನೀಲಗಿರಿ ಬೆಳೆಸುವುದು ಒಂದು 'ದುರಂತ' ಎಂದು ಸರ್ಕಾರವನ್ನು ದೂಷಿಸಿದೆ. ಆದ್ದರಿಂದ, ಕ.ರಾ.ರೈ.ಸಂ. ಕರ್ನಾಟಕದಲ್ಲಿ ಸಾಮಾಜಿಕ ಅರಣ್ಯಾಗಾರಿಕೆ ಕಾರ್ಯಕ್ರಮದ ಪರಿಣಾಮಕಾರಿ ಜಾರಿಗೆ ಹಲವಾರು ಸಲಹೆಗಳನ್ನು ನೀಡಿದೆ. ಅವುಗಳು ಈ ಕೆಳಗಿನಂತಿದೆ.

೧) ಅರಣ್ಯ ಹೆಚ್ಚಿಸುವಂತೆ ಸರ್ಕಾರ ಜನರ ಮನವೊಲಿಸಬೇಕು. ಸರ್ಕಾರ ಈ ಕಾರ್ಯಕ್ರಮದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯ್ತಿ, ಮುನಿಸಿಪಾಲಿಟಿ

ಮತ್ತು ಕಾರ್ಪೋರೇಷನ್‌ಗಳನ್ನು ತೊಡಗಿಸಿಕೊಳ್ಳಬೇಕು.

೨) ಸರ್ಕಾರ ಜನರ ಬಯಕೆಯಂತೆ ಬೇರೆ ಬೇರೆ ಪ್ರಕಾರದ ಗಿಡಗಳನ್ನು ಉಚಿತವಾಗಿ ಅವರಿಗೆ ಹಂಚಬೇಕು ಮತ್ತು ಅದು ಮಣ್ಣು ಮತ್ತು ಹವಾಮಾನ ಪರಿಸ್ಥಿತಿಗೆ ಹೊಂದಿಕೊಳ್ಳುವಂತಿರಬೇಕು.

೩) ಹಣ್ಣು ನೀಡುವ ಮರಗಳ ಪ್ರಕಾರಗಳಿಂದ ತೆಂಗು, ಖರ್ಜೂರ, ಮಾವಿನ ಗಿಡಗಳು ಇತ್ಯಾದಿ ಸರ್ಕಾರ ವಿತರಿಸಬೇಕು.

೪) ಜನರ ಬಯಕೆಗಳಂತೆ ಮತ್ತು ಮಣ್ಣು ಹಾಗೂ ಹವಾಮಾನ ಪರಿಸ್ಥಿತಿಗೆ ತಕ್ಕಂತೆ ಪ್ರಾದೇಶಿಕ ನರ್ಸರಿಗಳನ್ನು ಸ್ಥಾಪಿಸಬೇಕು.

೫) ಅರಣ್ಯ ಇಲಾಖೆಯ ಸಿಬ್ಬಂದಿ ರೈತರೊಂದಿಗೆ ಅವರ ಭೂಮಿಯಲಿ ಗಿಡಗಳನ್ನು ಬೆಳೆಸಲು ಸಹಕರಿಸಬೇಕು.

೬) ಬಗರ್ ಹುಕುಂ ಭೂಮಿಯಲ್ಲಿ ಸರ್ಕಾರವೇ ಗಿಡಗಳನ್ನು ಬೆಳಸಬೇಕು ಮತ್ತು ಸಂಬಂಧಪಟ್ಟ ಸ್ಥಳೀಯ ಪಂಚಾಯ್ತಿಗಳಿಗೆ ಅದರ ರಕ್ಷಣೆಯ ಜವಬ್ದಾರಿಯನ್ನು ನೀಡಬೇಕು.

ಮೇಲಿನ ಸಲಹೆಗಳೊಂದಿಗೆ, ಕ.ರಾ.ರೈ.ಸಂ. ಸಾಮಾಜಿಕ ಅರಣ್ಯಗಾರಿಕೆ ಕಾರ್ಯಕ್ರಮದ ಜಾರಿಯಲ್ಲಿ ರಾಜ್ಯ ಸರ್ಕಾರಕ್ಕೆ ತನ್ನ ಬೆಂಬಲವನ್ನು, ಅಂತಹ ಕಾರ್ಯಕ್ರಮ ಹಳ್ಳಿಗಳಿಗೆ ಅನುಕೂಲಕರವಾಗಿರಬೇಕೆಂಬ ಷರತ್ತಿನ ಮೇಲೆ ನೀಡುವುದಾಗಿ ಭರವಸೆ ನೀಡಿತು.

ಅಲ್ಲದೆ ಗಿಡ ಬೆಳೆಸುವಿಕೆ ಜನರ ಬಯಕೆಯಂತೆ ಮತ್ತು ಮಣ್ಣು ಹಾಗೂ ಹವಾಮಾನಕ್ಕೆ ತಕ್ಕಂತೆ ಇರಬೇಕು ಎಂದು ಹೇಳಿತು. ಇಲ್ಲದಿದ್ದರೆ ಕ.ರಾ.ರೈ.ಸಂ. ನೀಲಗಿರಿ ಬೆಳೆಸುವಿಕೆ ಬಂಡವಾಳಶಾಹಿಯನ್ನು ಒಪ್ಪಿಕೊಂಡಂತೆಯೇ ಎಂದು ಹೋಲಿಕೆ ನೀಡಿತು ಮತ್ತು ಅದು 'ನೀಲಗಿರಿಯನ್ನು, ಕಪ್ಪು ಹಣದಂತೆ ಕಪ್ಪು ಗಿಡೆ' ಎಂದು ಕರೆಯಿತು.

ಕ.ರಾ.ರೈ.ಸಂ. ನೀಲಗಿರಿ ಬೆಳೆಸುವಿಕೆ ಆಹಾರ ಉತ್ಪಾದನೆಗೆ ಅಪಾಯ ಒಡ್ಡುತ್ತದೆಂದು ಎಚ್ಚರಿಸಿತು. ಕ.ರಾ.ರೈ.ಸಂ. ಉಲ್ಲೆಖಿಸಿರುವಂತೆ, ಕೋಲಾರ ಜಿಲ್ಲೆಯಲ್ಲಿ, ನೀಲಗಿರಿ ಬೆಳೆಸಿದ ನಂತರ, ಆಹಾರ ಉತ್ಪಾದನೆ ಅಪಾಯಕಾರಿ ಕನಿಷ್ಠ ಹಂತ ತಲುಪಿತು. ೧೯೭೭–೭೮ ಮತ್ತು ೧೯೮೦–೮೧ರಲ್ಲಿ ಕೋಲಾರ ಜಿಲ್ಲೆಯಲ್ಲಿ ರಾಗಿ ಸಾಗುವಳಿಯ ಭೂಮಿ ಶೇಕಡಾ ೯೬.೬ರಷ್ಟು ಕಡಿಮೆಯಾಯಿತು ಎಂಬುದು ಒಂದು ಸತ್ಯ ಸಂಗತಿ. ಹಾಗೆಯೇ ಅದೇ ಅವಧಿಯಲ್ಲಿ ಆ ಬೆಳೆಯ ಉತ್ಪಾದನೆ, ಶೇಕಡಾ ೯೨.೩೮ರಷ್ಟು ಕಡಿಮೆಯಾಯಿತು. (ಇದಕ್ಕೆ ಪಟ್ಟಿ ಸಂಖ್ಯೆ ೧.೧೬ ನೋಡಿ)

ಪಟ್ಟಿ ಸಂಖ್ಯೆ : ೧.೧೬

ಕೋಲಾರ ಜಿಲ್ಲೆಯಲ್ಲಿ ೧೯೭೭-೭೮ ಮತ್ತು ೧೯೮೦-೮೧ರಲ್ಲಿ ರಾಗಿ ಉತ್ಪಾದನೆ

ವರ್ಷ	ಒಟ್ಟು ಹೆಕ್ಟೇರು	ವರ್ಷಗಳಲ್ಲಿ ಶೇಕಡಾವಾರು ಬದಲಾವಣೆ	ಉತ್ಪಾದನೆ	ವರ್ಷಗಳಲ್ಲಿ ಶೇಕಡಾವಾರು ಬದಲಾವಣೆ
೧೯೭೭-೭೮	೧೪೪೭೭೨	–	೧೭೫೧೯೫	–
೧೯೭೮-೭೯	೧೪೬೮೬೧	-೧.೯೪	೧೬೫೧೭೪	-೫.೭
೧೯೭೯-೮೦	೧೪೦೮೬೨	-೪.೧೪	೮೯೨೮೬	-೪೩.೨೨
೧೯೮೦-೮೧	೪೮೪೦೬	-೯೬.೬	೧೩೩೪೦	-೯೨.೩೮

ಮೂಲ : ಚಂದ್ರಶೇಖರ. ಡಿ. ಎಂ., ಇಟ್ಸ್ ಎಎಲ್, "ಕರ್ನಾಟಕದಲ್ಲಿ ಸಮಾಜಿಕ ಅರಣ್ಯಗಾರಿಕೆ" ಇಪಿಡಬ್ಲ್ಯೂ., ಸಂಪುಟ ೨೦, ನಂ. ೨೪, ಜೂನ್ ೧೩, ೧೯೮೭. ಪುಟ ೨೬೯.

ಆದ್ದರಿಂದ ಕ.ರಾ.ರೈ.ಸಂ. ಯಾವ ಸ್ಥಳಗಳಲ್ಲಿ ನೀಲಗಿರಿ ಬೆಳೆಸುವಿಕೆ ಮುಂದುವರೆಯುವುದೋ, ಅಲ್ಲಿ ಇದೇ ಸ್ಥಿತಿ ಕಂಡು ಬರುವುದಾಗಿ ಎಚ್ಚರಿಕೆ ನೀಡಿತು. ಹಾಗೆಯೇ, ಕೃಷಿ ಚಟುವಟಿಕೆಗಳು ಲಭ್ಯವಿಲ್ಲದ್ದರಿಂದ (ಆದಾಯದ ಪ್ರಮುಖ ಮೂಲ) ಭೂ ರಹಿತ ಕಾರ್ಮಿಕರು ಜೀವನಾಧಾರಕ್ಕಾಗಿ ನಗರ ಪ್ರದೇಶಗಳಿಗೆ ಹೋಗಬೇಕಾಗುತ್ತದೆ. ಅರಣ್ಯ ಪ್ರಾಣಿಗಳಾದ ಮಂಗ, ಆನೆ, ಕಾಗೆ, ತೋಳ ಇತ್ಯಾದಿ. ಅವರ ಆಹಾರಕ್ಕಾಗಿ ಹಳ್ಳಿಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತವೆ.

ಕ.ರಾ.ರೈ.ಸಂ. ಪರಿಸರಕ್ಕೆ ಅಪಾಯಕಾರಿಯಾದ ಪ್ಲೈವುಡ್ ಕಾರ್ಖಾನೆಗಳಿಗೆ ಪೂರೈಸುವುದಕ್ಕಾಗಿ ಸರ್ಕಾರ ನೀಲಗಿರಿ ಬೆಳೆಸುವುದು ಮತ್ತು ಪೂರೈಸುವುದರ ಪ್ರಾಮುಖ್ಯತೆಯನ್ನು ಪ್ರಶ್ನಿಸಿತು. ಅದರಲ್ಲೂ ಕರ್ನಾಟಕದಲ್ಲಿ, ಹರಿಹರ ಪಾಲಿ ಫೈಬರ್ಸ್ ಕಾರ್ಖಾನೆ ಅನೇಕ ರಾಸಾಯನಿಕಗಳನ್ನು ಹೊರಹಾಕುವುದರಿಂದ ತುಂಗಭದ್ರಾ ನದಿಯ ನೀರು ಕಲುಷಿತಗೊಂಡಿದೆ ಹಾಗೂ ಈ ಕಾರ್ಖಾನೆಗಳ ವಿಷಯುಕ್ತ ಹೊಗೆ ನಲವಾಗಲ ಹಳ್ಳಿಯನ್ನು ವಿನಾಶದ ಅಂಚಿಗೆ ತಳ್ಳಿದೆ. ಆ ಹಳ್ಳಿಯ ನಿವಾಸಿಗಳು ಹೃದಯ ಮತ್ತು ಕರುಳಿನ ಕಾಯಿಲೆಯಿಂದ ನರುಳುತ್ತಿದ್ದಾರೆ ಮತ್ತು ಅನೇಕ ವೇಳೆ ತುಂಗಭದ್ರಾ ನದಿಯ ಮೀನುಗಳನ್ನು ಸೇವಿಸಿದ್ದರಿಂದ ಮೀನುಗಾರರು ಮರಣಕ್ಕೆ ತುತ್ತಾಗಿದ್ದಾರೆ.

ಕಾರ್ಖಾನೆಗಳ ಈ ಎಲ್ಲಾ ಸಮಸ್ಯೆಗಳಿಂದಾಗಿ, ಕ.ರಾ.ರೈ.ಸಂ. ನಾವು ಏಕೆ ನೀಲಗಿರಿ ಬೆಳೆಯಬೇಕು ಮತ್ತು ಈ ಕಾರ್ಖಾನೆಗಳಿಗೆ ಪೂರೈಸಬೇಕು ಎಂದು ಪ್ರಶ್ನಿಸಿದೆ. ಆದ್ದರಿಂದ ಕ.ರಾ.ರೈ.ಸಂ. ಇದನ್ನು ಎರಡು ರೀತಿಯಲ್ಲಿ ವಿರೋಧಿಸಲು ಜನರನ್ನು ಕೇಳಿಕೊಂಡಿತು. ಎಲ್ಲಿದ್ದರೂ ನೀಲಗಿರಿ ಬೆಳೆಸುವುದನ್ನು ವಿರೋಧಿಸುವುದು, ಎರಡನೆಯದಾಗಿ, ಪ್ರತಿ ಕುಟುಂಬ ಕನಿಷ್ಟ ೧೦ ಮಿಶ್ರ ಸಾಗುವಳಿ ಗಿಡಗಳನ್ನು ಪ್ರತಿ ವರ್ಷ ಬೆಳೆಸಬೇಕು. ೧೯೮೬ರಲ್ಲಿ, ಕ.ರಾ.ರೈ.ಸಂ.ದ ಸೊರಬ ಶಾಖೆ ನೀಲಗಿರಿ ಬೆಳೆಸುವುದನ್ನು ವಿರೋಧಿಸಲು ಒಂದು ಬೃಹತ್ ರ್‍ಯಾಲಿಯನ್ನು ನಡೆಸಿತು. ಅದು ೧೩ ಬೇಡಿಕೆಗಳುಳ್ಳ ಒಂದು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ನೀಲಗಿರಿ ಬೆಳೆಸುವುದನ್ನು ರದ್ದುಗೊಳಿಸುವ ಒಂದು ಬೇಡಿಕೆ ಅದರಲ್ಲಿ ಸೇರಿತ್ತು.

೧೯೮೭ರಲ್ಲಿ, ಕ.ರಾ.ರೈ.ಸಂ. ಒಂದು ವಿಶೇಷವಾದ ಪ್ರಮುಖ ಹೋರಾಟ ವಿಧಾನವನ್ನು ಅನುಸರಿಸಿತು. ಅದೇನೆಂದರೆ "ನಿರಂತರ ಜೈಲು ತುಂಬುವ ಸತ್ಯಾಗ್ರಹ." ಕ.ರಾ.ರೈ.ಸಂ. ಈ ಸತ್ಯಾಗ್ರಹದಲ್ಲಿ ಸರ್ಕಾರ ನೀಲಗಿರಿ ಬೆಳೆಸುವ ಮೂಲಕ, ಹಲವು ವರ್ಷಗಳವರೆಗೆ ಆ ಭೂಮಿಯನ್ನು ಸಾಗುವಳಿ ಮಾಡಿದ ರೈತರನ್ನು ಒಕ್ಕಲೆಬ್ಬಿಸಿದೆ ಎಂದು ಸರ್ಕಾರವನ್ನು ಟೀಕಿಸಿತು.

ಕ.ರಾ.ರೈ.ಸಂ.ದ ನೈಸರ್ಗಿಕ ಸಂಪನ್ಮೂಲಗಳು ಆದಾಯದ ಒಂದು ಮೂಲವಾಗಿ ಮತ್ತು ಗ್ರಾಮ ಸ್ವರಾಜ್ಯದ ಪರಿಭಾವನೆಗಳು

ಬ್ರಿಟಿಷರ ಆಳ್ವಿಕೆಯಲ್ಲಿ, ಸಂಪತ್ತಿನ ಹರಿವು ಸರ್ವೇ ಸಾಮಾನ್ಯವಾಗಿತ್ತು. ಅವರು ನಮ್ಮ ಅಮೂಲ್ಯ ನೈಸರ್ಗಿಕ ಸಂಪನ್ಮೂಲಗಳು, ಅರಣ್ಯಗಳು, ಕಚ್ಚಾ ಸರಕುಗಳು ಮತ್ತು ಪರಿಸರವನ್ನು ಶೋಷಣೆ ಮಾಡಿದರು. ಅಂತರ್ಜಲ ಸಂಪನ್ಮೂಲ ಪುಷ್ಪ ಮತ್ತು ಫಲಗಳನ್ನು ತಮ್ಮ ರಾಷ್ಟ್ರದ ಅನುಕೂಲಕ್ಕಾಗಿ ಲೂಟಿ ಮಾಡಿದರು. ಆದರೆ ಈ ಪದ್ಧತಿ ಸ್ವಾತಂತ್ರ್ಯ ನಂತರವೂ ಮುಂದುವರಿಯುತ್ತಿದೆ. ಭಾರತೀಯ ಬಂಡವಾಳ ಶಾಹಿಗಳು ನೈಸರ್ಗಿಕ ಸಂಪನ್ಮೂಲ ರಕ್ಷಣೆಯ ಕಾನೂನುಗಳನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಆದರೆ ಸರ್ಕಾರ ಒಂದು ಅಂಧ ಅಥವಾ ತಟಸ್ಥ ವಿಕ್ಷಕನಾಗಿದೆ.

ಬೆಂಗಳೂರು ಜಿಲ್ಲೆಯ ಕನಕಪುರ ಮತ್ತು ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಲಭ್ಯವಿರುವ ಬಹುಉಪಯೋಗಿ ಗ್ರಾನೈಟ್ ಕಲ್ಲು ಒಂದು ಅಮೂಲ್ಯ ನೈಸರ್ಗಿಕ ಸಂಪನ್ಮೂಲವಾಗಿದೆ. ಇದು ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆ ಹೊಂದಿದೆ. ಆದ್ದರಿಂದ ಅದು ಸರ್ಕಾರಕ್ಕೆ ಹೆಚ್ಚಿನ ಲಾಭವನ್ನು ತಂದು ಕೊಡುತ್ತದೆ. ಆದರೆ ಸರ್ಕಾರದ ಬೇಜವಾಬ್ದಾರಿ ಖಾಸಗಿ ಕಂಟ್ರಾಕ್ಟರುಗಳಿಗೆ ಲಾಭ ನೀಡುತ್ತಿದೆ.

೧೯೮೨ರ ನಂತರ ಕನಕಪುರ ಜಿಲ್ಲೆಯ ಕ.ರಾ.ರೈ.ಸಂ.ದ ತೀವ್ರಗಾಮಿಗಳು ಗ್ರಾನೈಟ್ ಕಲ್ಲಿನ ಗೌರವಧನವನ್ನು ಹಳ್ಳಿಗಳ ಅಭಿವೃದ್ಧಿಗೆ ಬಳಸಿಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿದರು. ಶ್ರೀ ಮದನ ಗೋಪಾಲ, ನಂಜನಗೂಡು ತಾಲ್ಲೂಕಿನ ಅಸಿಸ್ಟೆಂಟ್ ಕಮೀಷನರ್, ಮೈಸೂರು ಜಿಲ್ಲೆ, ಕ.ರಾ.ರೈ.ಸಂ.ದ ತತ್ವಗಳನ್ನು ಜಾರಿಗೆ ತಂದರು ಮತ್ತು ಅನುಮತಿಯಿಲ್ಲದೆ ಎಲ್ಲಾ ನೈಸರ್ಗಿಕ ಸಂಪನ್ಮೂಲಗಳ ಸಾಗಾಣಿಕೆಯನ್ನು ನಿರ್ಬಂಧಿಸಿದರು. (ಗ್ರಾನೈಟ್, ಸುಣ್ಣ, ಮರಳು ಇತ್ಯಾದಿ) ತಕ್ಷಣ ರಾಜಕೀಯ ಉದ್ದೇಶದಿಂದ ಸರ್ಕಾರ ಅವರನ್ನು ವರ್ಗಾವಣೆ ಮಾಡಿತು. ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ ತಾಲ್ಲೂಕುಗಳ ಜನರು ಸರ್ಕಾರದ ಕ್ರಮವನ್ನು ವಿರೋಧಿಸಿದರೂ, ಸರ್ಕಾರ ಅವರ ಹೋರಾಟಕ್ಕೆ ಸ್ಪಂದಿಸದೆ ಅವರ ಹೋರಾಟವನ್ನು ದಮನ ಮಾಡಿತು. ಮತ್ತೊಮ್ಮೆ ಅರಳಲುಸಂದ್ರ ಮತ್ತು ಚನ್ನಪಟ್ಟಣ ತಾಲ್ಲೂಕಿನ ನೆರೆಹೊರೆಯ ಹಳ್ಳಿಗಳ ಜನರು ಅಲಂಕಾರಿಕ ಗ್ರಾನೈಟ್‌ನ ಲೂಟಿಯ ವಿರುದ್ಧ ವಿರೋಧ ವ್ಯಕ್ತಪಡಿಸಿದರು. ಅದು ಒಂದು ಪ್ರಸಿದ್ಧವಾದ ಚಳುವಳಿಯಾಗಿತ್ತು. ಏಕೆಂದರೆ ಪ್ರತಿಭಟನಾಕಾರರಲ್ಲಿ ಹಲವರು ಮಹಿಳೆಯರು, ದಲಿತರು ಮತ್ತು ರೈತರಾಗಿದ್ದರು. ನಂತರ ಪೋಲಿಸರು ಅವರನ್ನು ಬಂಧಿಸಿದರು ಮತ್ತು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಇರಿಸಿದರು. ಕ.ರಾ.ರೈ.ಸಂ. ಅಂದಿನ ಜೈಲು ಮಂತ್ರಿಯವರನ್ನು, ಅವರನ್ನು ರಾಜಕೀಯ ಬಂಧಿಗಳಂತೆ ನೋಡಿಕೊಳ್ಳುವಂತೆ ಮತ್ತು ಯಾವುದೇ ಹಿಂಸೆ ಕೊಡದಂತೆ ಒತ್ತಾಯಿಸಿತು. ಇಲ್ಲದಿದ್ದರೆ, ಅದು ರಾಜ್ಯಾದ್ಯಂತ ಚಳುವಳಿ ನಡೆಸುವುದಾಗಿ ಎಚ್ಚರಿಕೆ ನೀಡಿತು.

ಕ.ರಾ.ರೈ.ಸಂ. ನೈಸರ್ಗಿಕ ಸಂಪನ್ಮೂಲಗಳ ಒಡೆತನ ಸಂಬಂಧಪಟ್ಟ ಹಳ್ಳಿಗೆ ಸೇರಬೇಕೆಂದು ಅಭಿಪ್ರಾಯ ಪಟ್ಟಿತು. ಆದ್ದರಿಂದ, ನೈಸರ್ಗಿಕ ಸಂಪನ್ಮೂಲಗಳು ಅಥವಾ ಅದರ ಆದಾಯವನ್ನು ಸಂಬಂಧಿಸಿದ ಹಳ್ಳಿಗಳ ಅಭಿವೃದ್ಧಿಗೆ ಬಳಸಬೇಕು. ಕ.ರಾ.ರೈ.ಸಂ. ಬಂಡವಾಳಶಾಹಿಗಳು ತಮ್ಮ ಸ್ವಂತ ಲಾಭಕ್ಕಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಶೋಷಣೆ ಮಾಡುತ್ತಿರುವ ಜಿಲ್ಲೆಗಳ ಪಟ್ಟಿಯನ್ನೇ ನೀಡಿತು. ಕನಕಪುರದ ಬೆಟ್ಟಗಳು, ಕೊಳ್ಳೇಗಾಲದ ಮಹದೇಶ್ವರ ಬೆಟ್ಟಗಳು, ಯೆಳಂದೂರಿನ ಬಿಳಿಗಿರಿ ರಂಗನ ಬೆಟ್ಟಗಳು, ಮೈಸೂರಿನ ಚಾಮುಂಡಿ ಬೆಟ್ಟಗಳು, ಮಂಡ್ಯದ ಮೇಲು ಕೋಟೆ ಬೆಟ್ಟಗಳು, ತುಮಕೂರಿನ ಶಿವಗಂಗೆ ಬೆಟ್ಟಗಳು, ಈ ಎಲ್ಲಾ ಬೆಟ್ಟಗಳೂ ಖಾಸಗಿ ಸಂಸ್ಥೆಗಳಿಂದ ಶೋಷಣೆ ಮಾಡಲ್ಪಟ್ಟಿವೆ. ಇದರೊಂದಿಗೆ, ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಅಂತರ್ಜಲದ ಮೂಲಗಳು ಮರೆಯಾಗುತ್ತಿವೆ. ಏಕೆಂದರೆ ಗ್ರಾನೈಟ್, ಅಮೂಲ್ಯ ಹರಳುಗಳು, ಸುಣ್ಣ, ಮರಳು ಇತ್ಯಾದಿ ಲೂಟಿಯಾಗುತ್ತಿದೆ. ಕ.ರಾ.ರೈ.ಸಂ. ಆಡಳಿತ ಮತ್ತು ವಿರೋಧ ಪಕ್ಷಗಳು ಹಾಗೂ ಐ.ಎ.ಎಸ್., ಕೆ.ಎ.ಎಸ್. ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನು ಹಳ್ಳಿಗಳ

ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡುವಲ್ಲಿ ಸೇರಿಕೊಂಡಿದ್ದಾರೆಂದು ದೂಷಿಸಿತು. ಆದ್ದರಿಂದ ಕ.ರಾ.ರೈ.ಸಂ. ಅವುಗಳನ್ನು ಹಳ್ಳಿಗಳೇ ನಿಯಂತ್ರಿಸಬೇಕೆಂದು ನಿರ್ಧರಿಸಿತು. ಆದ್ದರಿಂದ, ಕ.ರಾ.ರೈ.ಸಂ. ಸರ್ಕಾರವನ್ನು ಎಲ್ಲಾ ನೈಸರ್ಗಿಕ ಸಂಪನ್ಮೂಲಗಳು ಸಂಬಂಧಿಸಿದ ಹಳ್ಳಿಗಳ ಆಸ್ತಿಯೆಂಬುದಾಗಿ ಪರಿಗಣಿಸುವ ಒಂದು ಕಾನೂನು (ಅರಣ್ಯ, ಗ್ರಾನೈಟ್, ಹೂವು, ಹಣ್ಣು, ಸುಣ್ಣ, ಮರಳು) ರಚಿಸಬೇಕೆಂದು ಒತ್ತಾಯಿಸಿತು. ಅಂತಹ ಕಾನೂನುಗಳು ರಚನೆಯಾಗುವವರೆಗೂ, ತಮ್ಮ ಹಳ್ಳಿಗಳಲ್ಲಿ ಸಾಗಾಣಿಕೆ ನಿರ್ಬಂಧಿಸಿ ಕಾಯ್ದುಕೊಳ್ಳಲು ಮತ್ತು ಮುಂದಿನ ಪೀಳಿಗೆಗಾಗಿ ಇಟ್ಟುಕೊಳ್ಳಲು ನಿರ್ಧರಿಸಿತು.

ಕ.ರಾ.ರೈ.ಸಂ. ಗ್ರಾಮ ಸ್ವರಾಜ್ಯ ಸಮಿತಿಗಳನ್ನು ಸ್ಥಳೀಯ ಸಂಪನ್ಮೂಲಗಳನ್ನು ಹಳ್ಳಿಯ ಉದ್ಧಾರಕ್ಕೆ ಬಳಸಲು ಮತ್ತು ನಗರ ಬಳಕೆಯನ್ನು ನಿಯಂತ್ರಿಸಲು ಸ್ಥಾಪಿಸುವ ಮೂಲಕ ಜಾರಿಗೆ ತಂದಿತು. ಒಂದು ವೇಳೆ ಅಂತಹ ಸಂಪನ್ಮೂಲಗಳನ್ನು ಬಳಸಬೇಕಾದರೆ ಸಮಿತಿಗಳು ಗೌರವಧನಕ್ಕೆ ಬೇಡಿಕೆ ಸಲ್ಲಿಸುತ್ತವೆ. ಬಳಕೆಯ ಪ್ರಮಾಣಕ್ಕೆ ಸಮಿತಿಯ ಅನುಮತಿ ಪಡೆಯಬೇಕೆಂದು ಹೇಳಲಾಯಿತು. ಆದರೆ, ವಾಸ್ತವವಾಗಿ, ಈ ಯೋಜನೆ ಪ್ರಚಾರಗೊಳ್ಳಲಿಲ್ಲ ಮತ್ತು ಕ.ರಾ.ರೈ.ಸಂ.ದ ಹತೋಟಿಯಲ್ಲೂ, ಇಂತಹ ಸಮಿತಿಗಳನ್ನು ಹೆಚ್ಚಾಗಿ ಕಾಣಲು ಸಾಧ್ಯವಿಲ್ಲ.

೧೯೯೨ರಲ್ಲಿ, ರಾಜ್ಯ ಸರ್ಕಾರದ ರದ್ಧತಿಯೊಂದಿಗೆ, ಕ.ರಾ.ರೈ.ಸಂ. 'ಸರ್ಕಾರವನ್ನು ಹಾಸ್ಯಕ್ಕೆ ಗುರಿಮಾಡಿ' ಹೋರಾಟವನ್ನು ಕೈಗೊಂಡಿತು. ತಮ್ಮ ನವೀನ ಹೋರಾಟದ ಭಾಗವಾಗಿ ರಾಜ್ಯದಾದ್ಯಂತ ಸಾವಿರಾರು ರೈತರು ವಿಧಾನ ಸೌಧಕ್ಕೆ ಮುತ್ತಿಗೆ ಹಾಕಿದರು. ಮದ್ಯ, ಗ್ರಾನೈಟ್ ಮತ್ತು ಇತರ ಹಲವು ಪ್ರಭಾವಗಳಿಗೆ ಮಣಿದಿದೆ ಎಂದು ಸರ್ಕಾರವನ್ನು ಟೀಕಿಸಿತ್ತಾ, ನಂಜುಂಡಸ್ವಾಮಿಯವರು ಅಂತಹ 'ಭ್ರಷ್ಟ' ಸರ್ಕಾರವನ್ನು ಹೊರದೂಡುವಂತೆ ರೈತರಿಗೆ ಕರೆ ನೀಡಿದರು. ಕ.ರಾ.ರೈ.ಸಂ. ಹಳ್ಳಿಗಳು ತಮ್ಮ ಹಳ್ಳಿ ಆವರಣದಲ್ಲಿರುವ ಗ್ರಾನೈಟ್, ಕಚ್ಚಾ ಸರಕುಗಳು, ಔಷಧೀಯ ಸಸ್ಯಗಳು, ಅರಣ್ಯ ಇತ್ಯಾದಿ ನೈಸರ್ಗಿಕ ಸಂಪನ್ಮೂಲಗಳ ವಿಷಯದಲ್ಲಿ ಸಾರ್ವಭೌಮರು ಎಂದು ಅಭಿಪ್ರಾಯಪಟ್ಟಿತು. ಹಾಗೆಯೇ ಅರಣ್ಯ ರಕ್ಷಣೆಗಾಗಿ ೧೦ ವರ್ಷಗಳವರೆಗೆ ಅರಣ್ಯ ಲೂಟಿಯನ್ನು ರದ್ದುಗೊಳಿಸುವುದು ಅವಶ್ಯಕವೆಂದು ಸಲಹೆ ಮಾಡಿತು.

ಕ.ರಾ.ರೈ.ಸಂ. ಅರಣ್ಯ ರಕ್ಷಣೆಗಾಗಿ ಮತ್ತೊಂದು ಪ್ರಮುಖ ವಿಧಾನ ಅನುಸರಿಸಿತು. ಅದೆಂದರೆ ಚೆಕ್ ಪೋಸ್ಟ್‌ಗಳನ್ನು ಅರಣ್ಯ ಲೂಟಿ ಮತ್ತು ಮರದ ದಿಮ್ಮಿಗಳ ಕಳ್ಳ ಸಾಗಣೆ ತಡೆಯುವ ಉದ್ದೇಶದಿಂದ ಸ್ಥಾಪಿಸಿತು. ಕ.ರಾ.ರೈ.ಸಂ. ಮುನ್ನೆಚ್ಚರಿಕೆ ವಹಿಸಿ ಸರ್ಕಾರಕ್ಕೂ ಇದನ್ನು ತಿಳಿಸಿತು. ಆದರೆ ದುರದೃಷ್ಟ ವಶದಿಂದ,

ಆ ಪ್ರದೇಶದ ಅರಣ್ಯ ಸಿಬ್ಬಂದಿಗಳು ಚೆಕ್ ಪೋಸ್ಟುಗಳಲ್ಲಿ ನಿಯಂತ್ರಿಸುತ್ತಿದ್ದ ರೈತರನ್ನು ಹೊಡೆದರು. ಏಕೆಂದರೆ ಅವರು ಕಳ್ಳ ಸಾಗಣೆದಾರರಿಂದ ಬರುತ್ತಿದ್ದ ಲಂಚವನ್ನು ಕಳೆದುಕೊಂಡಿದ್ದರು. ನಂತರದಲ್ಲಿ, ಶಿವಮೊಗ್ಗಾ ಜಿಲ್ಲೆಯಲ್ಲಿ ಶ್ರೀ ಶಂಕರ ಅರಣ್ಯಗಳ ರಕ್ಷಣೆಗಾಗಿ, ಕ.ರಾ.ರೈ.ಸಂ. ಉನ್ನತ ದರ್ಜೆಯ ಅರಣ್ಯ ಅಧಿಕಾರಿಗಳ ವಶಕ್ಕೆ ಅದನ್ನು ಒಳಪಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ನಂಜುಂಡಸ್ವಾಮಿಯವರು ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯನ್ನು ಬಡತನ ನಿವಾರಣೆಯೊಂದಿಗೆ ಸೇರಿಸಿದರು. ಅವರು ವಿಧಾನಸೌಧದಲ್ಲಿ ಹಳ್ಳಿಗಳ ನೈಸರ್ಗಿಕ ಸಂಪನ್ಮೂಲಗಳ ಲೂಟಿಯನ್ನು ತಡೆಯುವುದರಿಂದ ಮಾತ್ರ ಬಡತನ ನಿವಾರಣೆ ಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅದಕ್ಕೆ ಬದಲಾಗಿ ಉತ್ಪಾದಿತ ಸರಕುಗಳು ಹಳ್ಳಿಗಳಿಂದ ಹೊರಗೆ ಹೋಗಬೇಕೆಂದು ಅವರು ಒತ್ತಿ ಹೇಳಿದರು. ಸ್ವಾಮಿಯವರು ಪರಿಸರವಾದಿಗಳೊಂದಿಗೆ ಸಹಮತ ವ್ಯಕ್ತಪಡಿಸಿದರು ಮತ್ತು ರೈತ ಸಂಘ ಎಂದಿಗೂ ೧೦೦೦ ಮೆಗಾ ವ್ಯಾಟ್ ಸಾಮರ್ಥ್ಯದ ಕೊಜೆಂಟ್ರಿಕ್ಸ್ ಶಕ್ತಿ ಘಟಕ, ಪರಿಸರ ಸೂಕ್ಷ್ಮವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು. ಕೊಜೆಂಟ್ರಿಕ್ಸ್ ಕಂಪೆನಿ ರಾಜ್ಯ ಉನ್ನತ ನ್ಯಾಯಾಲಯದ ಕಠಿಣ ಸಲಹೆಗಳನ್ನು ನಿರಾಕರಿಸಿದ್ದುದರಿಂದ, ಅವರು ಕೊಜೆಂಟ್ರಿಕ್ಸ್ ಕಂಪೆನಿಯನ್ನು ತೀವ್ರವಾಗಿ ವಿರೋಧಿಸುವುದಾಗಿ ಹೇಳಿದರು.

ನಂಜುಂಡಸ್ವಾಮಿಯವರು ಎಲ್ಲಾ ಸರ್ಕಾರಿ ಸಂಸ್ಥೆಗಳು ತಮ್ಮ ನಂಬಿಕೆ ಕಳೆದುಕೊಂಡಿವೆ ಎಂದು ಪರಿಗಣಿಸಿದರು, ಅವರು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಅತ್ಯಂತ "ಮಲಿನಗೊಂಡ" ಸಂಸ್ಥೆ ಎಂದು ವಿವರಿಸಿದರು. ಅವರು ಪರಿಸರ ವಿರೋಧೀ ಘಟಕಗಳನ್ನು ಓಡಿಸಲು ಗಾಂಧೀಯವರ ಮಾರ್ಗವನ್ನು ಹೆಚ್ಚು ಬಯಸಿದರು. ಅವರು ದಕ್ಷಿಣ ಕನ್ನಡದ ಜನರನ್ನು ಕೊಜೆಂಟ್ರಿಕ್ಸ್ ವಿರೋಧೀ ಹೋರಾಟದಲ್ಲಿ ಕ.ರಾ.ರೈ.ಸಂ.ವನ್ನು ಬೆಂಬಲಿಸುವಂತೆ ಕೇಳಿಕೊಂಡರು. ದಿವಂಗತ ಕೋಟಾ ಶಿವರಾಮ ಕಾರಂತರು, ಜ್ಞಾನ ಪೀಠ ಪ್ರಶಸ್ತಿ ವಿಜೇತರು, ಪ್ರಮುಖ ಕನ್ನಡ ಬರಹಗಾರರು ಮತ್ತು ಪರಿಸರವಾದಿಗಳು ನಂಜುಂಡಸ್ವಾಮಿಯವರೊಂದಿಗೆ ಸಹಮತ ವ್ಯಕ್ತ ಪಡಿಸಿದರು ಮತ್ತು ಕೊಜೆಂಟ್ರಿಕ್ಸ್ ಸ್ಥಾಪನೆ ರಾಜ್ಯ ಸರ್ಕಾರದ ನಿರಂಕುಶ ಕಾರ್ಯ ಎಂದು ಹೇಳಿದರು.

೧೯೯೭ರಲ್ಲಿ, ಕ.ರಾ.ರೈ.ಸಂ. ಚಿಕ್ಕಮಗಳೂರು ಜಿಲ್ಲೆಯ ನೆಲ್ಲಿಬೀಡು ಬೆಟ್ಟದಲ್ಲಿನ ಗಣಿಗಾರಿಕೆ ವಿಷಯವನ್ನು ಕೈಗೆತ್ತಿಕೊಂಡಿತು. ಅಲ್ಲಿ ಕುದುರೆ ಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತದ ಗಣಿಕೆಲಸವನ್ನು ಕೈಗೊಂಡಿತ್ತು.

ನಂಜುಂಡಸ್ವಾಮಿಯವರು ನೆಲ್ಲಿಬೀಡು ಬೆಟ್ಟದ ಮೇಲೆ ಗಣಿಗಾರಿಕೆ ಮಾಡುವುದು ಈ ಪ್ರದೇಶದಲ್ಲಿ ಶತಮಾನದಷ್ಟು ಹಳೆಯದಾದ ಅರಣ್ಯಗಳನ್ನು ನಾಶಮಾಡುತ್ತದೆ ಮತ್ತು ಪರಿಸರ ಸಮತೋಲನದ ಮೇಲೆ ದುಷ್ಪರಿಣಾಮ ಬೀರುತ್ತದೆ. ನಂಜುಂಡಸ್ವಾಮಿ, ಆದ್ದರಿಂದ, ಸರ್ಕಾರಕ್ಕೆ ಒಂದು ತಿಂಗಳ, ಒಂದು ಕಡೆಯ ತೀರ್ಮಾನವನ್ನು ಪಶ್ಚಿಮ ಘಟ್ಟಗಳನ್ನು ರಕ್ಷಿಸಲು ನೆಲ್ಲಿಬೀಡು ಬೆಟ್ಟದಲ್ಲಿ ಗಣಿ ಕೆಲಸಗಳನ್ನು ನಿಲ್ಲಿಸುವಂತೆ ಕಳಿಸಿತು. ಅಂತಿಮವಾಗಿ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಆಧಾರದ ಮೇಲೆ ಕುದುರೆಮುಖ ಕಬ್ಬಿಣದ ಅದಿರು ಕಾರ್ಖಾನೆಯನ್ನು ಪರಿಸರ ವಿರೋಧಿ ಎಂದು ಪರಿಗಣಿಸಿ, ಡಿಸೆಂಬರ್ ೩೧, ೨೦೦೫ರಂದು ವಾರ್ಷಿಕವಾಗಿ ೨೦೦೦ ಕೋಟಿ ವಿದೇಶಿ ವಿನಿಮಯ ಲಾಭ ಗಳಿಸುತ್ತಿದ್ದ ಆ ಬೃಹತ್ ಕಾರ್ಖಾನೆಯನ್ನು ಮುಚ್ಚಲು ಆದೇಶಿಸಿತು. ಅದೇಶಕ್ಕನುಸಾರ ಅದನ್ನು ಮುಚ್ಚಲಾಯಿತು. ಇದು ನೆಲ್ಲಿಬೀಡು ಗ್ರಾಮ ಪಂಚಾಯ್ತಿ ಒಂದು ಕಾನೂನು ಹೋರಾಟವನ್ನು ಗಣಿ ಕೆಲಸಗಳ ವಿರುದ್ಧ ಕೈಗೊಂಡು ಸಾಧಿಸಿದ್ದು. ಆದ್ದರಿಂದ, ನಂಜುಂಡಸ್ವಾಮಿಯವರು ಇತರ ಹಳ್ಳಿ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತಿಗಳು ಇಂತಹದೇ ತೀರ್ಮಾನಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿದರು. ಅವರು ಗಣಿ ಕೆಲಸಗಳ ವಿರುದ್ಧ ಇದು ಸಾರ್ವಜನಿಕ ಅಭಿಪ್ರಾಯ ರೂಪಿಸಲು ಒಂದು ಪ್ರಮುಖ ಪಾತ್ರ ವಹಿಸುವುದೆಂದು ಹೇಳಿದರು. ಅವರು ಸರ್ಕಾರ ದೊಡ್ಡ ಯೋಜನೆಗಳನ್ನು ಕೈಗೊಳ್ಳುವಲ್ಲಿ ಆಸಕ್ತಿ ಹೊಂದಿದೆ. ಏಕೆಂದರೆ ಈ ಯೋಜನೆಗಳು ಹಲವು ತೊಂದರೆ ಹೊಂದಿವೆ ಎಂದು ಆರೋಪಿಸಿದರು. ಅವರು "ಮೆಗಾ ಪ್ರಾಜೆಕ್ಟ್‌ಗಳೆಂದರೆ ಸರ್ಕಾರಕ್ಕೆ ಮೆಗಾ ಕಿಕ್ ಬ್ಯಾಕ್ಸ್" ಎಂದು ಹೇಳಿದರು.

ಕ.ರಾ.ರೈ.ಸಂ. ಸ್ವರ್ಣಹಳ್ಳಿ ಆಶ್ರಮದ ಗಂಗಾಧರೇಂದ್ರ ಸ್ವಾಮೀಜಿಯವರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಇತರ ಸಂಸ್ಥೆಗಳೊಂದಿಗೆ ಬೇಡ್ತಿ ಯೋಜನೆ ವಿರುದ್ಧ ತನ್ನ ಬೆಂಬಲ ಸೂಚಿಸಿತು. ಕ.ರಾ.ರೈ.ಸಂ. ಈ ಯೋಜನೆ ಪಶ್ಚಿಮಘಟ್ಟ ಅರಣ್ಯಗಳಿಗೆ ಅಪಾಯ ಉಂಟುಮಾಡುತ್ತದೆಂದು ಹೇಳಿತು. ಹಾಗೂ ಆ ಹೋರಾಟ ಇನ್ನೂ ಮುಂದುವರಿಯುತ್ತಿದೆ.

ಕ.ರಾ.ರೈ.ಸಂ. ತೆಲುಗು-ಗಂಗಾ ಯೋಜನೆ ಮತ್ತು ಕಾವೇರಿ ಜಲ ವಿವಾದದ ಬಗ್ಗೆ ಕೇಂದ್ರ ಸರ್ಕಾರದ ಅಂತರ ರಾಜ್ಯ ಜಲ ನೀತಿಯನ್ನು ಹಿಂದಿನ ದೋಷ ಪೂರಿತ ಕಾನೂನುಗಳಿಂದ ತೆಗೆದುಕೊಳ್ಳಲಾಗಿದೆ, ಆದ್ದರಿಂದ ತೆಲುಗು-ಗಂಗಾ ಮತ್ತು ಕಾವೇರಿ ಜಲ ವಿವಾದಗಳು ಮುಂದುವರೆಯುತ್ತಿವೆ ಎಂದು ತನ್ನ ನಿಲುವನ್ನು ವ್ಯಕ್ತಪಡಿಸಿತು. ಕ.ರಾ.ರೈ.ಸಂ. ಕೃಷ್ಣಾ ನೀರು ವಿತರಣೆಯ ಬಜಾವತ್ ವರದಿ ಮತ್ತು ಕಾವೇರಿ ನೀರು ವಿತರಣೆಯ ಕಾವೇರಿ ಮಧ್ಯಂತರ ವರದಿಯನ್ನು ಅಲ್ಲಗಳೆಯಿತು.

ಇದಕ್ಕೆ ವಿರುದ್ಧವಾಗಿ ಅಂತರರಾಜ್ಯ ನೀರು ಹಂಚಿಕೆಗೆ ರಾಷ್ಟ್ರೀಯ ಜಲನೀತಿಯನ್ನು ಒತ್ತಾಯಿಸಿತು ಹಾಗೂ ಅದು ಸಂಯುಕ್ತ ಪದ್ಧತಿಯಲ್ಲಿ ಪ್ರಾದೇಶಿಕ ಅವಶ್ಯಕತೆ ಮತ್ತು ಆಸಕ್ತಿ ನೀರಿನ ವಿತರಣೆಯ ಆಧಾರವಾಗಿರಬೇಕೆಂದು ಹೇಳಿತು.

ಕ.ರಾ.ರೈ.ಸಂ. ಕೇಂದ್ರ ಸರ್ಕಾರವನ್ನು ಕರ್ನಾಟಕ ಮತ್ತು ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡು ನಡುವೆ ನೀರಿನ ವಿತರಣೆಯನ್ನು ರಾಜಕೀಯಗೊಳಿಸುತ್ತಿದೆ ಎಂದು ದೂಷಿಸಿತು. ಅದಕ್ಕಿಂತಲೂ ಹೆಚ್ಚಾಗಿ ನಂಜುಂಡಸ್ವಾಮಿಯವರು ಕೋರ್ಟುಗಳು, ನ್ಯಾಯಾಧೀಶರು ಮತ್ತು ನ್ಯಾಯ ಪೀಠಗಳು ನೀರಿನ ವಿವಾದಗಳನ್ನು ಬಗೆಹರಿಸುವುದಿಲ್ಲ ಮತ್ತು ಅದನ್ನು ಕೇವಲ ಮಾತುಕತೆಗಳಿಂದ ಮಾತ್ರ ಬಗೆಹರಿಸಬಹುದೆಂದು ಹೇಳಿದರು. ಅವರು ಮಧ್ಯಂತರ ಮಂಡಳಿಗಳನ್ನು ನೇಮಿಸುವ ಬದಲು, ನೀರಿನ ವಿತರಣೆ ಸಮಸ್ಯೆಯಿರುವ ರಾಜ್ಯಗಳಾ ನಡುವೆ ಸಭೆಗಳನ್ನು ಏರ್ಪಡಿಸಲು ಸರ್ಕಾರಕ್ಕೆ ಸಲಹೆ ನೀಡಿದರು.

ಆದ್ದರಿಂದ, ಕ.ರಾ.ರೈ.ಸಂ. ನೀರಿನ ಸಮಸ್ಯೆಯನ್ನು, ಸಮಸ್ಯೆ ಸಂಬಂಧಿಸಿದ ರಾಜ್ಯಗಳಿಗೆ ನೀಡಬೇಕೆಂದು ಸಲಹೆ ಮಾಡಿತು ಹಾಗು ಅವುಗಳು ಈ ಸಮಸ್ಯೆಯನ್ನು ಪ್ರೀತಿ ಮತ್ತು ನಂಬಿಕೆ ಹಾಗು ಹೆಚ್ಚು ಹೊಂದಾಣಿಕೆಯಿಂದ ಬಗೆಹರಿಸಿಕೊಳ್ಳುತ್ತವೆ, ಎಂದಿದೆ.

ಉಪಸಂಹಾರ

ಪ್ರಸ್ತುತ ಸಂಶೋಧನಾ ಅಧ್ಯಯನ ೧೯೮೦-೧೯೯೮ರ ಅವಧಿಯಲ್ಲಿ ಕರ್ನಾಟಕದಲ್ಲಿ ನಡೆದ ರೈತ ಚಳುವಳಿಯ ಒಂದು ವಿಶ್ಲೇಷಣೆಯಾಗಿದೆ. ಈ ಅಧ್ಯಯನ ಕೆಳಕಂಡಂತೆ ಕೆಲವು ಸಲಹೆಗಳನ್ನು ಹಾಗೂ ಅಂತರಾರ್ಥಗಳನ್ನು ನೀಡಿದೆ.

ಕ.ರಾ.ರೈ.ಸಂ. ೧೯೮೦ ರಿಂದ ೧೯೮೭ ರವರೆಗೆ ರಾಜಕೀಯ ವಲಯದಲ್ಲಿ ಅಂತಹ ಪ್ರಭಾವಯುತವಾದ ಪಾತ್ರವನ್ನೇನೂ ವಹಿಸಲಿಲ್ಲ. ಮೊದಲನೆಯಾಗಿದೆ, ೧೯೮೩ರಲ್ಲಿ ಶಕ್ತಿ ಸಮತೋಲನತೆಯ ಸಿದ್ಧಾಂತವನ್ನು ಅಳವಡಿಸಿ ಕೊಂಡು ಜನತಾ ಪಕ್ಷಕ್ಕೆ ಸರ್ಕಾರ ರಚಿಸಲು ಬೆಂಬಲ ನೀಡಿತು. ಆದರೆ ಜನತಾ ಪಕ್ಷ ಕ.ರಾ.ರೈ.ಸಂ.ದ ಉದ್ದೇಶ ಹಾಗೂ ಬೇಡಿಕೆಗಳ ವಿರುದ್ಧ ಕಾರ್ಯಚರಣೆ ನಡೆಸಿತು. ಎರಡನೆಯದಾಗಿ, ಮತದಾರರ ಅಭ್ಯರ್ಥಿ ಎಂಬ ಹೊಸ ತತ್ವವನ್ನು ಜಾರಿಗೆ ತಂದಿತು. ಇದರ ಉದ್ದೇಶ ಕಾಂಗ್ರೆಸ್ ಅಥವಾ ಜನತಾ ಪಕ್ಷಕ್ಕೆ ಬೆಂಬಲ ನೀಡದೆ ಇರುವುದೇ ಆಗಿತ್ತು. ಆದರೆ ಈ ಆಧಾರದ ಮೇಲೆ ತತ್ವ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆ ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋಲನ್ನು ಅನುಭವಿಸಿತು. ಆದ್ದರಿಂದ ಅಂತಿಮವಾಗಿ ಕ.ರಾ.ರೈ.ಸಂ. ಪ್ರತ್ಯೇಕ ರಾಜಕೀಯ ಪಕ್ಷ ರಚಿಸಿ ರಾಜಕೀಯ ಪ್ರವೇಶಿಸಲು ನಿರ್ಧರಿಸಿತು. ಇದರಿಂದ ರೈತ ಸಂಘದಲ್ಲಿ ಆಂತರಿಕ ಕಲಹಕ್ಕೆ ಅವಕಾಶವಾಯಿತು. ಒಂದು ಗುಂಪು ಕ.ರಾ.ರೈ.ಸಂ.ವನ್ನು ರಾಜಕೀಯ ಪಕ್ಷವಾಗಿ ಪರಿವರ್ತಿಸುವುದನ್ನು ವಿರೋಧಿಸಿತು. ಹಾಗೇ ವಿರೋಧಿಸಿದ ಗುಂಪಿನ ಸದಸ್ಯರನ್ನು ವಜಾ ಮಾಡಲಾಯಿತು. ಕೆಲವರು ಸ್ವ ಇಚ್ಛೆಯಿಂದ ಸಂಘವನ್ನು ತೊರೆದರು. 'ಕನ್ನಡ ದೇಶ' ಎಂಬ ಪಕ್ಷವನ್ನು ೧೯೮೭ರಲ್ಲಿ ರಚಿಸಿದರೂ ಕ.ರಾ.ರೈ.ಸಂ. ತನ್ನ ಬೆಂಬಲದ ತಳಪಾಯವನ್ನು ಹೆಚ್ಚಿಸಲು ಭಾಷೆ ಮತ್ತು ದಲಿತ ವಿಷಯಗಳನ್ನು ತನ್ನ ಸಿದ್ಧಾಂತಗಳಲ್ಲಿ ಸೇರಿಸಿಕೊಂಡಿತು. ಆದರೆ ಇದರಲ್ಲೂ ಸಫಲತೆ ಕಾಣಲಾಗಲಿಲ್ಲ. ಈ ಚಳುವಳಿ ತನ್ನದೇ ಹಳೆಯ ವಿಚಾರಗಳನ್ನು ಪುನರುಚ್ಚರಿಸಿದರೂ ತನ್ನ ವ್ಯಾಪ್ತಿಯಲ್ಲಿ ಎಲ್ಲಾ ಪ್ರಕಾರದ ರೈತರನ್ನು ಒಗ್ಗೂಡಿಸುವ ಹೊಸ ಪ್ರಯತ್ನ ಮಾಡಿತು. ಆ ವಿಚಾರಗಳೆಂದರೆ

೧) ಭೂ ಸುಧಾರಣೆ

೨) ಕೃಷಿ ಉತ್ಪನ್ನಕ್ಕೆ ವೈಜ್ಞಾನಿಕ ಬೆಲೆ

೩) ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬರುವುದನ್ನು ವಿರೋಧಿಸುವುದು ವಿಶೇಷವಾಗಿ ಕೃಷಿ ಕ್ಷೇತ್ರ ಪ್ರವೇಶಿಸುವುದನ್ನು ವಿರೋಧಿಸುವುದು.

೪) ಸ್ತ್ರೀ ಪರ ವಿಚಾರಗಳು

೫) ಜೈವಿಕ ಮತ್ತು ಪರಿಸರ ವಿಚಾರಗಳು

೧) ಭೂ ಸುಧಾರಣೆ

ಪ್ರಸ್ತುತ ಅಧ್ಯಯನ ವಿಶ್ಲೇಶಿಸಿರುವಂತೆ ಭೂ ಸುಧಾರಣೆಗಳು ಸರ್ಕಾರದಿಂದ ಕೊಡಲ್ಪಟ್ಟ ಮುಕ್ತವಾದ ಕೊಡುಗೆ ಅಲ್ಲ, ಬದಲಾಗಿ ಕೆಳಸ್ತರದ ರೈತರ ಹೋರಾಟದ ಫಲವಾಗಿದೆ. ಭೂ ಸುಧಾರಣೆಗಳು ಕೃಷಿ ಪದ್ಧತಿಯ ದೋಷಗಳಿಂದಾಗಿ ಉಂಟಾದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ತಡೆಗಳ ನಿವಾರಣೆಗೆ ಇರುವ ಒಂದು ಸಮರ್ಪಕ ಕಾರ್ಯಕ್ರಮವಾಗಿದೆ. ಕ.ರಾ.ರೈ.ಸಂ. ಭೂ ಸುಧಾರಣೆಗಳು ಭಾರತದ ರೈತರ ಸಮಸ್ಯೆಗಳಿಗೆ ವಿಶೇಷವಾಗಿ ಕರ್ನಾಟಕದ ರೈತರ ಸಮಸ್ಯೆಗಳಿಗೆ ಇರುವ ಪರಿಹಾರವೆಂದು ಭಾವಿಸಿದೆ. ವಿಶ್ವದ ಇತರ ಭಾಗಗಳಲ್ಲಿ ಇರುವಂತೆ ಭಾರತದಲ್ಲೂ ರೈತ ಚಳುವಳಿಗಳು ಭೂ ಸುಧಾರಣೆ ಕಾನೂನುಗಳನ್ನು ಜಾರಿಗೆ ತರುವಂತೆ ಸರ್ಕಾರವನ್ನು ಒತ್ತಾಯಿಸುವಲ್ಲಿ ಪ್ರಧಾನ ಪಾತ್ರ ವಹಿಸಿವೆ. ಸ್ವಾತಂತ್ರ್ಯ ಬಂದಾಗಿನಿಂದ ಅನೇಕ ರೈತ ಚಳುವಳಿಗಳು ಬೇರೆ ಬೇರೆ ಪ್ರದೇಶಗಳಲ್ಲಿ ಭೂ ಸುಧಾರಣಾ ಕಾಯ್ದೆ ಜಾರಿಗಾಗಿ ಒತ್ತಾಯಿಸಿವೆ. ಕರ್ನಾಟಕ ಭೂ ಸುಧಾರಣಾ ಕಾಯಿದೆಗಳು (೧೯೫೫, ೧೯೬೧ ಮತ್ತು ೧೯೭೪) ರೈತರ ಹೋರಾಟ, ಮುಷ್ಕರಗಳು ಮತ್ತು ಚಳುವಳಿಗಳ ಫಲವೇ ಆಗಿದೆ. ಪ್ರಸ್ತುತ ಅಧ್ಯಯನ ರೈತ ಚಳುವಳಿಗಳು ಭೂ ಸುಧಾರಣೆಗಳಿಗೆ ಪ್ರಮುಖ ಮೂಲವೆಂದು ಭಾವಿಸಿ ಇತರ ಮೂಲಗಳನ್ನು ಪರಿಗಣಿಸಿಲ್ಲ.

ಕರ್ನಾಟಕದಲ್ಲಿ ಭೂ ಸುಧಾರಣೆಗಳು ಭೂ ಒಡೆತನಕ್ಕೆ ಸಂಬಂಧಿಸಿದಂತೆ, ರೈತರಿಗೆ ಪರಿಹಾರ ಒದಗಿಸಿ ಕೊಡುವಲ್ಲಿ ಪರಿಣಾಮಕಾರಿಯಾಗಲಿಲ್ಲ. ಆದರೆ ವಿಶೇಷವಾಗಿ ಅತಿಯಾಗಿ ಉಳಿದ ಭೂಮಿಯನ್ನು ತುಳಿತಕ್ಕೊಳಗಾದ ವರ್ಗಗಳಾದ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಹಂಚುವಲ್ಲಿ ಯಶಸ್ವಿಯಾಯಿತು. ಇದು ಕೃಷಿಕರ ಮತ್ತು ಕೃಷಿ ಕಾರ್ಮಿಕರ ಹೋರಾಟದ ಬಲವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಯಿತು.

ಕರ್ನಾಟಕದಲ್ಲಿ ಭೂ ಸುಧಾರಣಾ ಕಾನೂನು ಮತ್ತು ಅದರ ಕಾರ್ಯಾಚರಣೆ ರಾಜಕೀಯ ಗುರಿಯನ್ನು ಹೊಂದಿತ್ತು. ೧೯೭೪ರಲ್ಲಿ, ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ದೇವರಾಜ ಅರಸ್‌ರವರು ಬಲಿಷ್ಟ ಜಾತಿಗಳಾದ ಲಿಂಗಾಯಿತ ಮತ್ತು ಒಕ್ಕಲಿಗರನ್ನು ಅಧಿಕಾರದಿಂದ ತಡೆಗಟ್ಟಲು ಹಿಂದುಳಿದ ಜಾತಿಗಳ ಕ್ರೋಢೀಕರಣ ಉದ್ದೇಶದಿಂದ ಈ ಭೂ ಸುಧಾರಣಾ ಕಾಯಿದೆಗಳ ಸಮರ್ಪಕ ಬಳಕೆಯಾಯಿತು.

ಹಾಗಾಗಿ ಕರ್ನಾಟಕದಲ್ಲಿ ಸರ್ಕಾರದ ಅಧಿಕಾರ ಬದಲಾವಣೆಗೆ ಭೂ ಸುಧಾರಣೆ ಒಂದು ಉತ್ತಮ ವಿಷಯವಾಗಿತ್ತು. ಆದ್ದರಿಂದಲೇ ರೈತ ಚಳುವಳಿ ತನ್ನ ರಾಜಕೀಯ ಸ್ವರೂಪದ 'ಕನ್ನಡ ದೇಶ' ಪಕ್ಷವನ್ನು ರಚಿಸಿದ ನಂತರ ಈ ವಿಷಯವನ್ನು ಪ್ರಧಾನ ವಿಷಯವನ್ನಾಗಿ ಅಂಗೀಕರಿಸಿತು. ಆದರೆ ಇತರೆ ರಾಜಕೀಯ ಪಕ್ಷಗಳಂತೆಯೇ ಭೂ ಸುಧಾರಣೆಗೆ ಸಂಬಂಧಿಸಿದಂತೆ 'ಕನ್ನಡ ದೇಶ' ಪಕ್ಷದ ಸಾಧನೆ ಕೂಡ ಸೀಮಿತವಾದುದಾಗಿದೆ.

೨) ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗಧೀಕರಣ :

ರೈತ ಚಳುವಳಿಯ ವೈಜ್ಞಾನಿಕ ಬೆಲೆಗಾಗಿ ನಡೆದ ಹೋರಾಟಗಳು ಹೆಚ್ಚು ಗುರುತರವಾದಂತವುಗಳಾಗಿವೆ. ಪ್ರಾರಂಭದಲ್ಲಿ ರೈತರ ವೈಜ್ಞಾನಿಕ ಬೆಲೆಯ ಹೋರಾಟಗಳು ಕೇವಲ ಕಬ್ಬು ಮತ್ತು ಭತ್ತಕ್ಕೆ ಮಾತ್ರ ಸೀಮಿತವಾಗಿತ್ತು. ಕ್ರಮೇಣ, ೧೯೮೭ರ ನಂತರ ಎಲ್ಲಾ ಕೃಷಿ ಉತ್ಪನ್ನಗಳನ್ನು ತನ್ನ ಹೋರಾಟದ ಭಾಗವಾಗಿ ಸೇರಿಸಿಕೊಂಡಿತು. ರೈತ ಚಳುವಳಿ ಕೈಗಾರಿಕಾ ವಸ್ತುಗಳ ಬೆಲೆ ನಿಗಧೀಕರಣಕ್ಕೆ ಉತ್ಪಾದನಾ ವೆಚ್ಚವನ್ನು ಮೂಲವಾಗಿ ಪರಿಗಣಿಸುವಂತೆ ಕೃಷಿ ಉತ್ಪನ್ನಗಳ ಬೆಲೆ ನಿಗಧೀಕರಣಕ್ಕೆ ಅನುಸರಿಸಬೇಕೆಂದು ಒತ್ತಾಯಿಸಿತು ಹಾಗೂ ಸರ್ಕಾರ ಕೃಷಿ ಉತ್ಪನ್ನಗಳ ಅಮದು–ರಫ್ತು ನೀತಿಯನ್ನು ನಿಯಂತ್ರಿಸುವುದರ ಮೂಲಕ ಕೃಷಿ ಉತ್ಪನ್ನಗಳ ಬೆಲೆ ನಿಗಧೀಕರಣವನ್ನು ಮಾಡಬೇಕೆಂದು ಒತ್ತಾಯಿಸಿದೆ. ಈ ನೀತಿಯಿಂದ ಸರ್ಕಾರ ಒಂದು ಕಡೆ ರೈತರನ್ನು ಮತ್ತೊಂದು ಕಡೆ ಅನುಭೋಗಿಗಳನ್ನು ರಕ್ಷಿಸಬಹುದಾಗಿದೆ.

ಹಾಗೂ ರೈತರ ಸಂಘಟಿತ ಗುಂಪುಗಳನ್ನು ರಚಿಸುವುದರಿಂದ ಅವರು ಕೃಷಿ ಸಾಲ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಅನುಕೂಲವಾಗುತ್ತದೆ. ಅಷ್ಟೇ ಅಲ್ಲದೆ ರೈತರು ಒಬ್ಬೊಬ್ಬರಾಗಿಯೇ ತಮ್ಮ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗುವುದರ ಬದಲು; ಗುಂಪುಗಳಲ್ಲಿಯೇ ಮಾರುಕಟ್ಟೆ ಪ್ರವೇಶಿಸಬಹುದು. ಆಗ ರೈತರಿಗೆ ಮಾರುಕಟ್ಟೆಯ ದಳ್ಳಾಳಿಗಳಿಂದ ಶೋಷಣೆಗೆ ಒಳಗಾಗುವುದು ತಪ್ಪುತ್ತದೆ ಮತ್ತು ಹೆಚ್ಚು ಲಾಭ ಸಿಗುತ್ತದೆ.

೩) ಬಹುರಾಷ್ಟ್ರೀಯ ಕಂಪೆನಿಗಳ ಭಾರತದ ಪ್ರವೇಶಕ್ಕೆ ವಿರೋಧ, ಸಾಮಾನ್ಯವಾಗಿ ಎಲ್ಲಾ ಬಹುರಾಷ್ಟ್ರೀಯ ಕಂಪೆನಿಗಳ ಹಾಗೂ ನಿರ್ದಿಷ್ಟವಾಗಿ ಕೃಷಿ ಆಧಾರಿತ ಬಹುರಾಷ್ಟ್ರೀಯ ಕಂಪೆನಿಗಳು

ಬಹುರಾಷ್ಟ್ರೀಯ ಕಂಪೆನಿಗಳ ಭಾರತ ಪ್ರವೇಶವನ್ನು, ತಾಂತ್ರಿಕವಾಗಿ ಬಲಿಷ್ಠ ರಾಷ್ಟ್ರಗಳು ತಾಂತ್ರಿಕವಾಗಿ ದುರ್ಬಲವಾದ ರಾಷ್ಟ್ರಗಳ ಮೇಲಿನ ದಬ್ಬಾಳಿಕೆ

ಎಂದು ರೈತ ಚಳುವಳಿ ಪರಿಗಣಿಸಿದೆ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ತಾಂತ್ರಿಕ ಜ್ಞಾನದ ದಬ್ಬಾಳಿಕೆಯನ್ನು, ಬೌದ್ಧಿಕ ಆಸ್ತಿಯ ಹಕ್ಕಿನ ಪದ್ಧತಿಗಳಾದ ಸ್ವಾಮ್ಯದ ಸನ್ನದು, ಸ್ವಾಮ್ಯದ ಹಕ್ಕುಗಳು, ವ್ಯಾಪಾರ ಚಿಹ್ನೆಗಳು ಮತ್ತು ಕೈಗಾರಿಕಾ ವಿನ್ಯಾಸಗಳ ಮೂಲಕ ಜಾರಿಗೊಳಿಸುತ್ತಿವೆ. ಈ ಹಕ್ಕುಗಳು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಬಹುರಾಷ್ಟ್ರೀಯ ಕಂಪೆನಿಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಮಾರುಕಟ್ಟೆ ಪ್ರವೇಶಕ್ಕೆ ಅನುಕೂಲಕರವಾಗಿದೆ.

ರೈತ ಚಳುವಳಿ ಇಂತಹ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶಕ್ಕೆ ವಿರೋಧವನ್ನು ವ್ಯಕ್ತಪಡಿಸಲು ಹಲವಾರು ತಂತ್ರಗಳನ್ನು ವಿಧಾನಗಳನ್ನು ಬಳಸಿಕೊಂಡು ಬಂದಿದೆ. ಆದರೆ ರೈತ ಚಳುವಳಿಯಲ್ಲಿ ಈ ಬಗೆಗೆ ವಿರೋಧವಿದೆ, ಏಕೆಂದರೆ, ನಮ್ಮ ಸ್ಥಳೀಯವಾದ ಹಲವಾರು ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಾಗದಿರುವಾಗ ಇಂತಹ ಬಹುರಾಷ್ಟ್ರೀಯ ಕಂಪೆನಿಗಳ ವಿರೋಧಕ್ಕೆ ಸಾಕಷ್ಟು ಬೆಂಬಲ ರೈತ ಸಂಘದಿಂದ ವ್ಯಕ್ತವಾಗಿಲ್ಲ.

ಕೃಷಿ ಸಂಬಂಧಿತವಾದ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದಲ್ಲಿ (ಕರ್ನಾಟಕದಲ್ಲಿ) ಬಂಡವಾಳ ಹೂಡಲು ಅವಕಾಶ ನೀಡುವ ಸಂದರ್ಭದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರ ಹಲವಾರು ಪ್ರತಿನಿಧಿಗಳನ್ನು ಒಳಗೊಂಡಂತಹ ಒಂದು ಸಮಿತಿಯನ್ನು ರಚಿಸಬೇಕು. ಆ ಸಮಿತಿಯಲ್ಲಿ ಸರ್ಕಾರದ ಪ್ರತಿನಿಧಿಗಳು (ಹಣಕಾಸು ಸಚಿವರು ಮತ್ತು ವಿದೇಶಾಂಗ ಸಚಿವರು) ಆರ್ಥಿಕ ತಜ್ಞರು, ಕೃಷಿ ತಜ್ಞರು, ಮಾರುಕಟ್ಟೆ ತಜ್ಞರು, ರೈತ ಪ್ರತಿನಿಧಿಗಳು, ಸಂಶೋಧಕರು, ಸಾಮಾಜಿಕ ಚಿಂತಕರನ್ನೊಳಗೊಂಡಿರಬೇಕು. ಈ ಸಮಿತಿ ಅಧ್ಯಯನ ಮಾಡಿ ನೀಡುವ ವರದಿಯ ಆಧಾರದ ಮೇಲೆ ಅನುಮತಿ ನೀಡಬೇಕು. ಆಗ ಅಂತಹ ಬಹುರಾಷ್ಟ್ರೀಯ ಕಂಪೆನಿಯಿಂದ ಒದಗಬಹುದಾದ ಸಾಧಕ ಭಾದಕಗಳನ್ನು ಸರಿಪಡಿಸಲು ಸಾಧ್ಯವಾಗುತ್ತದೆ.

೪) ಮಹಿಳಾ ವಿಷಯಗಳು :

ಹೆಚ್ಚು ದಕ್ಷತೆಯು ಕಾರ್ಮಿಕರಾದ ರೈತ ಮಹಿಳೆಯರ ಪ್ರಾಮುಖ್ಯತೆಯನ್ನು ಕೃಷಿ ಸಮಾಜದಲ್ಲಿ ಕಡೆಗಣಿಸಲಾಗಿದೆ. ಅವರು ಬಹಳ ನಿಕೃಷ್ಟವಾಗಿ ನಿರಾಕರಿಸ್ಪಟ್ಟ ಜನಾಂಗವಾಗಿರುವುದರಿಂದ ಅವರ ಸ್ಥಾನಮಾನ ಇನ್ನೂ ಬದಲಾಗಬೇಕಿದೆ. ಕ.ರಾ.ರೈ.ಸಂ.ದ ಆಶ್ರಯದಲಿ ರೈತ ಮಹಿಳೆಯರು ಹಲವಾರು ಮದ್ಯ ವಿರೋಧಿ ಚಳುವಳಿಗಳನ್ನು ಗ್ರಾಮೀಣ ಮಟ್ಟದಿಂದ ಜಿಲ್ಲಾ ಮಟ್ಟದವರೆಗೂ ನಡೆಸಿ ತಮ್ಮ ಹಳ್ಳಿಗಳಲಾದರೂ ಮದ್ಯ ಮರಾಟವನ್ನು

ನಿಷೇಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಈ ಚಳುವಳಿ ಗ್ರಾಮೀಣ ಮಟ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಕ.ರಾ.ರೈ.ಸಂ. ಮದ್ಯ ವಿರೋಧಿ ಚಳಿವಳಿಯನ್ನು ರಾಜ್ಯ ಮಟ್ಟದ ಚಳುವಳಿಯನ್ನಾಗಿಸುವಲ್ಲಿ ವಿಫಲವಾಗಿದೆ. ಸ್ವಲ್ಪ ಮಟ್ಟಿನಲ್ಲಿ ಕ.ರಾ.ರೈ.ಸಂ. ಸಮಾಜದಲ್ಲಿ ಮಹಿಳೆಯರ ಸಮಸ್ಯೆಗಳನ್ನು ಲಿಂಗ ತಾರತಮ್ಯದಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಲ್ಲಿ ಒಂದು ವೇದಿಕೆಯನ್ನು ನೀಡುತ್ತಿದೆ. ಈ ನಿಟ್ಟಿನಲ್ಲಿ ಶಿವಮೊಗ್ಗ ಜಿಲ್ಲೆಯ ಮೈದೂಳಲು ಗ್ರಾಮ ಪಂಚಾಯಿತಿಯನ್ನು ಪೂರ್ಣವಾಗಿ ಮಹಿಳಾ ಗ್ರಾಮ ಪಂಚಾಯಿತಿಯಾಗಿಸುವಲ್ಲಿ ಯಶಸ್ವಿಯಾಗಿದೆ. ಇದು ಕರ್ನಾಟಕದಲ್ಲೆ ಮೊದಲ ಮಹಿಳಾ ಗ್ರಾಮ ಪಂಚಾಯಿತಿ ಎನಿಸಿದೆ. ಕ.ರಾ.ರೈ.ಸಂ. ಮಹಿಳಾ ಪ್ರತಿನಿಧಿಗಳಿಗೆ ಮುಕ್ತವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸೂಕ್ತವಾದ ವೇದಿಕೆಯನ್ನು ಗ್ರಾಮ ಪಂಚಾಯಿತಿಗಳ ಮೂಲಕ ಒದಗಿಸಲು ಪ್ರಯತ್ನಿಸಿದೆ. ಆದರೆ ಕರ್ನಾಟಕದಲ್ಲಿ ೫೩೬೩ ಗ್ರಾಮ ಪಂಚಾಯಿತಿಗಳಲ್ಲಿ ಕೇವಲ ಒಂದು ಮಹಿಳಾ ಗ್ರಾಮ ಪಂಚಾಯಿತಿ ರಚನೆ ಅಂತಹ ಸಾಧನೆಯೇನೂ ಅಲ್ಲ. ಕ.ರಾ.ರೈ.ಸಂ. ಪ್ರತಿ ತಾಲ್ಲೂಕಿನಲ್ಲಿ ಒಂದು ಮಹಿಳಾ ಗ್ರಾಮ ಪಂಚಾಯಿತಿಯನ್ನು ರಚಿಸಲು ಪ್ರಯತ್ನಿಸಿದರೆ, ಇಂತಹ ಪ್ರಯೋಗಗಳು ಪರಿಗಣಿಸಲು ಯೋಗ್ಯವೆನಿಸುತ್ತದೆ.

ಸರ್ಕಾರ ಮಹಿಳಿಗೆ ಸಮಾನ ಸ್ಥಾನಮಾನವನ್ನು ನೀಡುವ ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಬೇಕಾಗಿದೆ. ಅದಕ್ಕಾಗಿ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಗೆ ಶೇಕಡ ೩೩.೩ ಮೀಸಲಾತಿಯನ್ನು ವಿಸ್ತರಿಸಿದರೆ ಆ ಸಮಸ್ಯೆಯನ್ನು ಪರಿಹರಿಸಲು ದಾರಿ ನಿರ್ಮಾಣವಾಗುತ್ತದೆ.

೫) ಪರಿಸರ ಸಂಬಂಧೀ ವಿಚಾರಗಳು :

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪರಿಸರ ಸಂಬಂಧೀ ವಿಷಯಗಳು ಇಡೀ ಸಮಾಜಕ್ಕೆ ಸಂಬಂಧಿಸಿದ ವಿಚಾರಗಳಾಗಿವೆ. ಆದರೆ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ದೃರಾದೃಷ್ಟಾವಶಾತ್ ಇದು ರೈತ ಸಂಬಂಧೀ ವಿಚಾರವೆನಿಸಿದೆ. ಕ.ರಾ.ರೈ.ಸಂ. ಇನ್ನಿತರ ಹಲವಾರು ಸಂಘಟನೆಗಳೊಂದಿಗೆ ಅಂದರೆ ಪರಿಸರ ವಾದಿಗಳು, ಭಾಷಾ ಸಂಘಟನೆಗಳು, ವಾಮಪಂಥೀಯ ಸಂಘಟನೆಗಳು ಮತ್ತು ಅಲ್ಪ ಸಂಖ್ಯಾತ ಸಂಘಟನೆಗಳೊಂದಿಗೆ ಬಹುರಾಷ್ಟ್ರೀಯ ಕಂಪೆನಿಗಳಿಂದ ಆಗುತ್ತಿರುವ ಪರಿಸರ ಮಾಲಿನ್ಯವನ್ನು ವಿರೋಧಿಸುತ್ತಿದೆ. ನೀಲಗಿರಿ ಬೆಳೆಯನ್ನು ಅದು ಪರಿಸರ ವಿನಾಶಕ್ಕೆ ಕಾರಣವಾಗುತ್ತದೆಂದು ಹಾಗೂ ಆಹಾರ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆಂಬ ಕಾರಣಗಳನ್ನು ಮುಂದಿಟ್ಟುಕೊಂಡು, ಕ.ರಾ.ರೈ.ಸಂ. ವಿರೋಧಿಸುತ್ತಿರುವುದು ಶ್ಲಾಘನೀಯವಾಗಿದೆ. ಕ.ರಾ.ರೈ.ಸಂ.ದ

ಒಂದು ನಿಯೋಗ ಗುಜರಾತ್‌ಗೆ ಅಧ್ಯಯನ ಪ್ರವಾಸ ಕೈಗೊಂಡು ಒಂದು ವರದಿ ಸಲ್ಲಿಸಿದೆ. ಇದು ನೀಲಗಿರಿ ಬೆಳೆ ಪರಿಸರ ನಾಶಕ್ಕೆ ಮತ್ತು ಆಹಾರ ಉತ್ಪಾದನೆ ಇಳಿತಕ್ಕೆ ಕಾರಣವಾಗುತ್ತದೆ ಎಂಬುದನ್ನು ದೃಢಪಡಿಸಿದೆ. ಆದ್ದರಿಂದಲೇ ಕ.ರಾ.ರೈ.ಸಂ. ಸರ್ಕಾರದ ನೀಲಗಿರಿ ಬೆಳೆಯುವ ಸಾಮಾಜಿಕ ಅರಣ್ಯ ಕಾರ್ಯಕ್ರಮವನ್ನು ವಿರೋಧಿಸಿತು. ಇದಕ್ಕೆ ಪರ್ಯಾಯವಾಗಿ ಸ್ಥಳೀಯ ಜನರ ಅಭಿಪ್ರಾಯಗಳನ್ನು ಮತ್ತು ಮಣ್ಣು, ಹವಮಾನ ಸ್ಥಿತಿಯನ್ನು ಆಧಾರವಾಗಿಟ್ಟುಕೊಂಡು ಬೆಳೆಯುವುದು ಸೂಕ್ತವೆಂದು ಸ್ಪಷ್ಟಪಡಿಸಿತು. ಹೀಗೆ ಸರ್ಕಾರ ಕಾರ್ಯಕ್ರಮವನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಯಿತು.

ಗಾಂಧಿಜೀಯವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ತನ್ನದಾಗಿಸಿಕೊಂಡ ಕ.ರಾ.ರೈ.ಸಂ. ನೈಸರ್ಗೀಕ ಸಂಪನ್ಮೂಲಗಳ ಒಡೆತನ, (ಗ್ರಾನೈಡ್, ಕಚ್ಚಾ ಸರಕು, ಔಷಧಿ ಸಸ್ಯಗಳು, ಅರಣ್ಯ ಇತ್ಯಾದಿ) ಅಥವಾ ಇವುಗಳಿಂದ ಬರುವ ಆದಾಯವನ್ನು ಆಯಾಯ ಗ್ರಾಮಗಳ ಅಭಿವೃದ್ಧಿಗೆ ಬಳಸಬೇಕೆಂದು ಅಭಿಪ್ರಾಯಪಟ್ಟಿತು. ಕೆಲವು ಅರಣ್ಯ ಪ್ರದೇಶಗಳಲ್ಲಿ ಅರಣ್ಯ ರಕ್ಷಣೆಗಾಗಿ ತಪಾಸಣಾ ಕೇಂದ್ರವನ್ನು ನಿರ್ಮಿಸಲು ಮತ್ತು ತನ್ನದೆ ರಕ್ಷಣಾ ಪಡೆಯನ್ನು ನೇಮಿಸಲು ಪ್ರಯತ್ನಿಸಿದರೂ, ಅರಣ್ಯ ಇಲಾಖೆಯ ಬೆಂಬಲ ದೊರೆಯದೆ ವಿಫಲವಾಯಿತು. ಕೊಜೆಂಟ್ರಿಕ್ಸ್ ಮತ್ತು ಕುದುರೆ ಮುಖ ಕಬ್ಬಿಣ ಅದಿರು ಕಂಪೆನಿಗಳಂತಹ ಪರಿಸರ ವಿರೋಧಿ ಯೋಜನೆಗಳನ್ನು ಹೊಡೆದೋಡಿಸಲು ಗಾಂಧಿಜೀಯ ಮಾರ್ಗವನ್ನು ಅನುಸರಿಸಿ ಸಫಲವಾಯಿತು.

ಕ.ರಾ.ರೈ.ಸಂ. ಹೇಳುವಂತೆ ಕೇಂದ್ರ ಸರ್ಕಾರವು ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ನೀರಿನ ಹಂಚಿಕೆಯನ್ನು ರಾಜಕೀಕರಣಗೊಳಿಸುತ್ತಿದೆ ಎಂದು ಅಪಾದಿಸಿದೆ ಹಾಗೂ ಸಂಬಂಧಪಟ್ಟ ರಾಜ್ಯಗಳ ರೈತರ ಸಂಧಾನದ ಮೂಲಕ ಸಮಸ್ಯೆ ಪರಿಹರಿಸಲು ಬಯಸುತ್ತಿದೆ. ಆದರೂ ಶತಮಾನಗಳಿಂದಲೂ ಇರುವ ಈ ಸಮಸ್ಯೆ ಸೂಕ್ತ ಪರಿಹಾರ ಸೂಚಿಸುವಲ್ಲಿ ವಿಫಲವಾಗಿದೆ.

ಪರಿಸರ ಸಂರಕ್ಷಣೆ ವಿಚಾರ ಇಂದು ರೈತ ಸಂಘದ ವಿಚಾರ ಮಾತ್ರವಾಗಿರದೇ ಪ್ರಪಂಚದ ಪ್ರತಿಯೊಬ್ಬ ಮಾನವನ ಜೀವವಾಗಿದೆ. ಆದ್ದರಿಂದ ಸರ್ಕಾರ ಮಣ್ಣಿನ ಆರೋಗ್ಯ ಮತ್ತು ರಕ್ಷಣೆ, ಜಲಾನಯನ ಅಭಿವೃದ್ಧಿ, ಸಣ್ಣ ನೀರಾವರಿ, ಬೀಜ ಸಂಸ್ಕರಣೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಣೆ ; ಮಾಂಸ ಉತ್ಪಾದನೆ, ರೇಷ್ಮೇ, ಕೃಷಿ ಉತ್ಪನ್ನಗಳ ಶೇಖರಣೆ ಮತ್ತು ಸಂಸ್ಕರಣೆಗಾಗಿ

ಮೂಲ ಸೌಲಭ್ಯ, ರಫ್ತು, ಕೃಷಿ ಸಂಶೋಧನೆ, ರೈತ ಮಾರುಕಟ್ಟೆ ವೈವಿದ್ಯಮಯ ಕೃಷಿ ವೈವಿಧ್ಯಮಯ ಅರಣ್ಯ ಬೆಳೆಸುವಿಕೆಯಂತಹ ಯೋಜನೆಗಳನ್ನು ಜಾರಿಗೆ ತಂದರೆ ರೈತ ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ ಪರಿಸರ ನಾಶ ಸಮಸ್ಯೆಯನ್ನು ನಿವಾರಿಸಬಹುದಾಗಿದೆ. ಗಣಿಗಾರಿಕೆಗೆ ಸಂಬಂಧಿಸಿದಂತೆ, ಸರ್ಕಾರ ಎಲ್ಲಾ ಗಣಿ ಪ್ರದೇಶದಲ್ಲಿ ಸಾರ್ವಜನಿಕ ಮಾಹಿತಿ ಕೇಂದ್ರಗಳನ್ನು ರಚಿಸಿ, ಆ ಕೇಂದ್ರದಲ್ಲಿ ಗಣಿಗಾರಿಕೆಗೆ ನೀಡಿರುವ ಪರವಾನಗಿ, ಪರವಾನಗಿಯ ಪ್ರಮಾಣ, ಎಂಬ ವಿಷಯಗಳನ್ನು ಸಾರ್ವಜನಿಕರಿಗೆ ದೊರೆಯುವಂತೆ ಜಾರಿ ಮಾಡಬೇಕಾಗಿದೆ ಹಾಗೂ ಗಣಿಗಾರಿಕೆಗೆ ಸಂಬಂಧಿಸಿದಂತೆ ಒಂದೊ ಪ್ರತ್ಯೇಕ ಸ್ಥಳೀಯ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಅದಕ್ಕೆ ಗಣಿಗಾರಿಕೆಯ ನಿಗಾ ವಹಿಸುವ ಅಧಿಕಾರ ನೀಡಬೇಕಾಗಿದೆ.

ಈ ಯೋಜನೆಗಳ ಮೂಲಕ ಕೆಲವು ಪರಿಸರ ಸಂಬಂಧೀ ಸಮಸ್ಯೆಗಳನ್ನು ನಿವಾರಿಸಬಹುದಾಗಿದೆ.

ಕೊನೆಯ ಮಾತು

ಮೇಲೆ ವಿವರಿಸಿದ ಐದೂ ಸಮಸ್ಯೆಗಳಿಗೆ ಸಾಮೂಹಿಕ ಚಳುವಳಿಗಳಿಂದ ಮಾತ್ರ ಪರಿಹಾರ ಸಾಧ್ಯ. ಈ ನಿಟ್ಟಿನಲ್ಲಿ ಕ.ರಾ.ರೈ.ಸಂ. ಸಾಮೂಹಿಕ ಚಳುವಳಿಯಾಗಿ ರೂಪುಗೊಳ್ಳಬೇಕಿದೆ. ಆದರೆ ಪ್ರಸ್ತುತವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಹಂತದಲ್ಲಿದೆ, ಇದಕ್ಕೆ ಕಾರಣವೆಂದರೆ, ಕ.ರಾ.ರೈ.ಸಂ. ರಾಜಕೀಯ ಪಕ್ಷವಾಗಿ ಮಾರ್ಪಾಡು ಹೊಂದಿ, ರಾಜಕೀಯ ಪ್ರವೇಶಿಸುವ ಅದರ ಬಯಕೆ.

ಕ.ರಾ.ರೈ.ಸಂ. ಒಂದು ಒತ್ತಡದ ಗುಂಪಾಗಿ ಕಾರ್ಯನಿರ್ವಹಿಸಿದಾಗ ಎಲ್ಲಾ ವರ್ಗದ ರೈತರ ಬೆಂಬಲ ಪಡೆದಿದ್ದು, ರೈತ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿತ್ತು. ಆದರೆ ರಾಜಕೀಯ ಪಕ್ಷವಾಗಿ ಬದಲಾದ ನಂತರ, ಇದು ಕೂಡ ಇತರೆ ರಾಜಕೀಯ ಪಕ್ಷಗಳಂತೆ ಪರಿವರ್ತನೆಗೊಂಡಿದ್ದರಿಂದ ಎಲ್ಲಾ ವರ್ಗದ ರೈತರ ಬೆಂಬಲವನ್ನು ಪಡೆಯುವಲ್ಲಿ ವಿಫಲವಾಗಿದೆ. ಆದರೆ ಕ.ರಾ.ರೈ.ಸಂ.ದ ಉಳಿವು ರಾಜಕೀಯ ತಾಟಸ್ಥ್ಯದಿಂದ ಮಾತ್ರ ಸಾಧ್ಯವೆಂದು ಈ ಅಧ್ಯಯನದಿಂದ ದೃಢಪಟ್ಟಿದೆ.

ಕ.ರಾ.ರೈ.ಸಂ. ರಾಜಕೀಯ ಪ್ರವೇಶಿಸುವುದೇ ಅದಲ್ಲಿ, ಅದಕ್ಕೆ ಅನುಗುಣವಾದ ಯೋಜನೆಗಳನ್ನು ಸಿದ್ಧಪಡಿಸಬೇಕಾಗಿದೆ. ಏನೆಂದರೆ, ಇಂದು ಸಮ್ಮಿಶ್ರ ಸರ್ಕಾರಗಳ ಯುಗವಾಗಿರುವುದರಿಂದ ಯಾವುದೇ ಒಂದು ಪಕ್ಷ ವೈಯಕ್ತಿಕ ಬಹುಮತ ಗಳಿಸಿ ಸರ್ಕಾರ ರಚಿಸುವುದು ಕಡಿಮೆಯಾಗುತ್ತಿದೆ. ಆದ್ದರಿಂದ ತನ್ನ ಪ್ರಣಾಳಿಕೆಗೆ ಸರಿ

ಹೊಂದುವ ಯಾವುದಾದರೂ ಒಂದು ರಾಷ್ಟ್ರೀಯ ಅಥವಾ ಪ್ರಾಂತೀಯ ಪಕ್ಷದೊಂದಿಗೆ ಗುರುತಿಸಿಕೊಂಡು ಸ್ಥಾನ ಹೊಂದಾಣಿಕೆ ಮಾಡಿಕೊಂಡು ಸ್ಪರ್ಧಿಸಿ ತನ್ನ ಗೆಲುವು ಸಾಧಿಸುವುದರ ಮೂಲಕ ತನ್ನ ಪ್ರಾಣಾಳಿಕೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳನ್ನು ಜಾರಿಗೆ ತರುವ ಪ್ರಯತ್ನದೆಡೆಗೂ ಯೋಚಿಸಬಹುದಾಗಿದೆ. ಆದರೆ, ಅದಕ್ಕೆ ಇಡೀ ಕರ್ನಾಟಕ ಎಲ್ಲಾ ರೈತ ಸಂಘಟನೆಗಳು ಕ.ರಾ.ರೈ.ಸಂಘವೇ ಮೂರು ಪ್ರತ್ಯೇಕ ಗುಂಪುಗಳಾಗಿವೆ ಅವುಗಳು ಒಂದಾಗ ಬೇಕಾಗಿರುವುದು ಅಗತ್ಯವಾಗಿದೆ.

ಪ್ರಸ್ತುತ ಸಂಶೋಧನಾ ಅಧ್ಯಯನ ಕ.ರಾ.ರೈ.ಸಂ. ರಾಜಕೀಯ ಪಕ್ಷವಾಗಿ ಏಕೆ ಸೂಲನ್ನು ಅನುಭವಿಸಿತು. ರಾಜಕೀಯ ಪಕ್ಷವಾಗಿ ಅದರ ಸಂಘಟನಾ ಸಾಮರ್ಥ್ಯ ಮತ್ತು ನಾಯಕತ್ವದ ವಿಷಯಗಳ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಕೈಗೊಳ್ಳಲು ಅವಕಾಶ ಮಾಡಿಕೊಟ್ಟಿದೆ.

ಕೊನೆಯದಾಗಿ, ಕ.ರಾ.ರೈ.ಸಂ. ಎಲ್ಲಾ ವರ್ಗದ ರೈತರನ್ನೊಳಗೊಂಡ ರಾಜ್ಯದ ಎಲ್ಲಾ ಭಾಗಗಳಲ್ಲೂ ಹರಡಿಕೊಂಡ ಏಕೈಕ ಸಂಘಟನೆ ಎನಿಸಿದೆ, ಇದು ರೈತರು ಹಾಗೂ ರೈತ ಮಹಿಳೆಯರಿಗೆ ತಮ್ಮನ್ನು ತಾವು ಅಭಿವ್ಯಕ್ತಗೊಳಿಸಲು ಒಂದು ವೇದಿಕೆಯನ್ನು ಒದಗಿಸಿದೆ. ತನ್ನ ಚಳುವಳಿಯಲ್ಲಿ ಸರಳ ವಿವಾಹ, ಮದ್ಯ ವಿರೋಧ, ವರದಕ್ಷಿಣೆ ವಿರೋಧ, ವಯಸ್ಕರ ಶಿಕ್ಷಣ, ಲಿಂಗ ಸಮಾನತೆ, ಭಾಷೆ, ಪರಿಸರ, ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶಕ್ಕೆ ವಿರೋಧ, ಬೌದ್ಧಿಕ ಆಸ್ತಿಯ ಹಕ್ಕು, ರೈತರ ಹಕ್ಕುಗಳ ರಕ್ಷಣೆ, ಚುನಾವಣೆ, ನೌಕರಶಾಹಿಯ ನಿರಂಕುಶತೆ ಇತ್ಯಾದಿ ಹತ್ತು ಹಲವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಷಯಗಳನ್ನು ಅಳವಡಿಸಿಕೊಂಡಿದೆ. ಇದರಿಂದಲೇ ಕ.ರಾ.ರೈ.ಸಂ. ಒಂದು ಸಾಂಸ್ಕೃತಿಕ ಚಳುವಳಿಯಾಗಿ ಹೊರಹೊಮ್ಮಿದೆ.

ಗ್ರಂಥಸೂಚಿ

೧. ಪ್ರಾಥಮಿಕ ಮೂಲಗಳು :

೧) ಸರ್ಕಾರದ ಮತ್ತು ಬ್ಯಾಂಕುಗಳ ವರದಿಗಳು
೨) ಗುಲ್ಬರ್ಗ, ಧಾರವಾಡ, ರಾಯಚೂರು, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಬೀದರ್ ಜಿಲ್ಲೆಗಳ ಗೆಜೆಟ್‌ಗಳು
೩) ಆದೇಶಗಳು, ನಡಾವಳಿಗಳು ಮತ್ತು ನಿರ್ಣಯಗಳು
೪) ಕ.ರಾ.ರೈ.ಸಂ.ದ ಭಿತ್ತಿ ಪತ್ರಗಳು ಮತ್ತು ಪ್ರಕಾಶನಗಳು

೨. ದ್ವಿತೀಯ ಮೂಲಗಳು :

ಅ) ಪುಸ್ತಕಗಳು :

೧) ಅಲೆಗ್ಸಾಂಡರ್. ಕೆ. ಸಿ., ೧೯೭೫. ಅಗ್ರೇರಿಯನ್ ಟೆನ್ಷನ್ ಇನ್ ತಂಜಾವೂರು, ಹೈದ್ರಬಾದ್ ; ನ್ಯಾಷನಲ್ ಇನ್‌ಸ್ಟ್ಯೂಟ್ ಆಫ್ ಕಮ್ಯೂನಿಟಿ ಡೆವೆಲಪ್‌ಮೆಂಟ್.
೨) ಶರಣಬಸವೇಶ್ವರ ಅಂಗಡಿ, ೧೯೯೪. ಕೃಷಿ ಕ್ಷೇತ್ರದ ವಿಷಕಳೆ ಡಂಕೆಲ್ ಪ್ರಸ್ತಾವನೆ, ನವಕರ್ನಾಟಕ ಪ್ರಕಾಶನ.
೩) ಸುಮಾಂತ ಬ್ಯಾನರ್‌ಜೀ, ೧೯೮೦. ಇನ್ ದಿ ವೇಕ್ ಆಫ್ ನಕ್ಸಲ್‌ಬಾರಿ, ಕಲ್ಕತ್ತ ; ಸುವರ್ಣರೇಖಾ.
೪) ಕೌಶಿಕ್ ಬಸು, ೧೯೯೪. ಆಗ್ರೇರಿಯನ್ ಕ್ವೆಷನ್ಸ್, ದೆಹಲಿ ; ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.
೫) ಟೀಯೋಡರ್ ಬರ್ಗ್‌ಮನ್, ೧೯೮೪. ಆಗ್ರೇರಿಯನ್ ರಿಫಾರ್ಮ್ ಇನ್ ಇಂಡಿಯಾ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಕೇರಳ, ಕರ್ನಾಟಕ, ಆಂಧ್ರಪ್ರದೇಶ ಅಂಡ್ ವೆಸ್ಟ್ ಬೆಂಗಾಲ್, ನ್ಯೂ ದೆಹಲಿ ; ಆಗ್ರಿಕೋಲ್.
೬) ವೈ. ಸಿ. ಭಗತ್, ೧೯೫೩. ಪೆಸೆಂಟ್ ರೆವಲ್ಯೂಷನ್ ಇನ್ ಬೆಂಗಾಲ್, ಕಲ್ಕತ್ತ ; ಭಾರತಿ ಲೈಬ್ರರಿ ಪ್ರೆಸ್.
೭) ವಿನೋಬ ಭಾವೆ, ೧೯೫೩. ಭೂಧಾನ್ ಯಜ್ಞ ; ಲ್ಯಾಂಡ್ ಗಿಫ್ಟ್ ಮಿಷನ್, ಅಹಮದಬಾದ್ ; ನವ ಜೀವನ್.

೮) ಟಾಮ್ ಬ್ರಾಸ್, ಸಂ. ೧೯೯೫. ಫಾರ್ಮರ್ಸ್ ಮೂವ್‌ಮೆಂಟ್ಸ್ ಇನ್ ಇಂಡಿಯಾ, ಯುಕೆ ; ಫ್ರ್ಯಾಂಕ್ ಕಾಸ್ ಪಬ್ಲಿಕೇಷನ್.

೯) ಜುಡಿತ್ ಬ್ರೌನ್ ಎಂ., ೧೯೯೪. ಮಾಡ್ರನ್ ಇಂಡಿಯಾ ; ದಿ ಆರಿಜಿನ್ಸ್ ಆಫ್ ಅನ್ ಏಷಿಯನ್ ಡೆಮಾಕ್ರೆಸಿ, ದೆಹಲಿ ; ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

೧೦) ಡಾರ್ಲಿಂಗ್ ಎಂ. ಎಲ್., ೧೯೭೮. ದಿ ಪಂಜಾಬ್ ಪೆಸೆಂಟ್ ಇನ್ ಪ್ರಾಸ್ಪರಿಟಿ ಅಂಡ್ ಡೆಬ್ಟ್, ಕೊಲಂಬಿಯಾ ; ಸೌತ್ ಏಷ್ಯಾ.

೧೧) ಬಿಪ್ಲಾ ದಾಸ್‌ಗುಪ್ತಾ, ೧೯೭೪. ದಿ ನಕ್ಸಲೈಟ್ ಮೂವ್‌ಮೆಂಟ್, ಬಾಂಬೆ ; ಅಲೈಡ್ ಪಬ್ಲಿಷರ್ಸ್.

೧೨) ದೇಸಾಯಿ ಎ. ಆರ್., ೧೯೯೧. ಸೋಷಿಯಲ್ ಬ್ಯಾಗ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಷನಾಲಿಸಂ, ಬಾಂಬೆ, ಪಾಪುಲರ್ ಪಬ್ಲಿಷರ್ಸ್.

೧೩) ಧನಾಗರೆ ಡಿ. ಎನ್., ೧೯೮೩, ಪೆಸೆಂಟ್ ಮೂವ್‌ಮೆಂಟ್ಸ್ ಇನ್ ಇಂಡಿಯಾ, ೧೯೨೦-೫೦, ದೆಹಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

೧೪) ಗಾಡ್ಗಿಲ್. ಡಿ. ಆರ್., ೧೯೩೮, ದಿ ಇನ್‌ಡಸ್ಟ್ರಿಯಲ್ ಎವಲೂಷನ್ ಇನ್ ಇಂಡಿಯಾ ಇನ್ ರೀಸೆಂಟ್ ಟೈಮ್ಸ್, ಲಂಡನ್ ; ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

೧೫) ಗಾಂಧಿ. ಎಂ. ಕೆ., ೧೯೮೪, ಇನ್‌ಡಸ್ಟ್ರಿಯಲ್ ಅಂಡ್ ಆಗ್ರೇರಿಯನ್ ಲೈಫ್ ಅಂಡ್ ರೀಲೇಷನ್ಸ್, ಅಹಮಾದಬಾದ್ ; ನವಜೀವನ್.

೧೬) ಶಾಂತವೇರಿ ಗೋಪಾಲ ಗೌಡ, ೧೯೭೧, “ವಿಧಾನಸಭೆಯಲ್ಲಿನ ಭಾಷಣ” ಇನ್ ಕೋಣಂದೂರು ಲಿಂಗಪ್ಪ ಸಂ., ಶಾಸನ ಸಭೆಯಲ್ಲಿ ಶಾಂತವೇರಿ, ಬೆಂಗಳೂರು ; ಲಿಪಿ ಮುದ್ರಣ.

೧೭) ರಂಜಿತ್ ಗುಹಾ, ಸಂ., ೧೯೮೨, ಸಬಾಲ್ಟರ್ನ್ ಸ್ಟಡೀಯಸ್, ರೈಟಿಂಗ್ಸ್ ಅನ್ ಸೌತ್ ಏಷಿಯನ್ ಹಿಸ್ಟರಿ ಅಂಡ್ ಸೋಸೈಟಿ., ವಾಲ್ಯೂಮ್ ೧., ನ್ಯೂ ದೆಹಲಿ ; ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

೧೮) ಗುರುಸ್ವಾಮಿ. ಎಸ್., ೧೯೮೩, ಪೆಸೆಂಟ್ ಪೊಲಿಟಿಕ್ಸ್ ಇನ್ ಸೌತ್ ಇಂಡಿಯಾ ; ಎ ಸೋಷಿಯಲ್ ಪೊಲಿಟಿಕಲ್ ಅನಾಲಿಸಿಸ್ ಆಫ್ ಎ ಪ್ರೆಸರ್ ಗ್ರೂಪ್, ದೆಹಲಿ ; ಕಾನಿಷ್ಕ ಪಬ್ಲಿಷರ್ಸ್.

೧೯) ಡೇವಿಡ್ ಹಾರ್‌ಡೀಮನ್., ೧೯೮೧, ಪೆಸೆಂಟ್ ನ್ಯಾಷನಾಲಿಸ್ಟ್ ಆಫ್ ಗುಜರಾತ್, ದೆಹಲಿ ; ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

೨೦) ಸಾಮೂಯಲ್ ಹನ್‌ಟಿಂಗ್‌ಟನ್. ಪಿ, ೧೯೭೧, ಪೊಲಿಟಿಕಲ್ ಆರ್ಡರ್ ಇನ್ ಚೆಂಜಿಂಗ್ ಸೋಸೈಟ್ಸಿ, ನ್ಯೂ ಹೆವೆನ್; ಯಾಲೆ ಯೂನಿವರ್ಸಿಟಿ ಪ್ರೆಸ್.

೨೧) ರಜನಿ ಕೋಠಾರಿ, ೧೯೮೮, ಸ್ಟೇಟ್ ಎಗೆನ್ಸ್ಟ್ ಡೆಮೊಕ್ರಸಿ ; ಇನ್ ಸರ್ಚ್ ಆಫ್ ಹೂಮೆನ್ ಗೌರ್‌ನೆನ್ಸ್, ದೆಹಲಿ ; ಅಜಂತಾ.

೨೨) ಕುರಿಯನ್ ಸಿ. ಟಿ., ೧೯೯೪, ಗ್ಲೋಬಲ್ ಕ್ಯಾಪಿಟಲಿಸಂ ಅಂಡ್ ದಿ ಇಂಡಿಯನ್ ಎಕಾನಮಿ, ನ್ಯೂ ದೆಹಲಿ ; ಓರಿಯಂಟ್ ಲಾಂಗ್‌ಮ್ಯಾನ್.

೨೩) ನಾಡಕರ್ಣಿ. ಎಂ. ವಿ., ೧೯೮೬, ಕರ್ನಾಟಕದ ರೈತ ಹೋರಾಟಗಳು, ಬೆಂಗಳೂರು ; ಪ್ರಿಂಟರ್ ಪ್ರಕಾಶನ.

೨೪) ರಾಜಶೇಖರ್. ಜಿ., ೧೯೮೦, ಕಾಗೋಡು ಸತ್ಯಾಗ್ರಹ, ಸಾಗರ್–ಕರ್ನಾಟಕ ; ಅಕ್ಷರ ಪ್ರಕಾಶನ.

೨೫) ಎಡ್ವರ್ಡ್ ಸೈಯುದ್ ಡಬ್ಲೂ, ೧೯೯೬, ಕಲ್ಚರ್ ಅಂಡ್ ಇಂಪಿರಿಯಲಿಸಮ್, ಲಂಡನ್ ; ವಿಂಟೇಜ್.

೨೬) ವಂದನಾ ಶಿವ, ೧೯೯೬, ಫ್ಯೂಚರ್ ಆಫ್ ಅವರ್ ಸೀಡ್ಸ್, ಫ್ಯೂಚರ್ ಆಫ್ ಅವರ್ ಫಾರ್‌ಮರ್ಸ್, ನ್ಯೂ ದೆಹಲಿ ; ಆರ್. ಎಫ್. ಎಸ್. ಟಿ. ಎನ್. ಆರ್. ಪಿ.

೨೭) ತಿಮ್ಮಯ್ಯ. ಜಿ. ಅಂಡ್ ಅಬ್ದುಲ್ ಅಜೀಜ್., ೧೯೮೪, ದಿ ಪೊಲಿಟಿಕಲ್ ಎಕಾನಮಿ ಆಫ್ ಲ್ಯಾಂಡ್ ರಿಫಾರ್ಮ್ಸ್, ನ್ಯೂ ದೆಹಲಿ ; ಆಶೀಶ್ ಪಬ್ಲಿಶಿಂಗ್ ಹೌಸ್.

೩. ಲೇಖನಗಳು, ಪಾಕ್ಷಿಕಗಳು, ಸಂಚಿಕೆಗಳು ಮತ್ತು ಮುಂತಾದವುಗಳು.

೧) ಅರ್ಥವಿಜ್ಞಾನ

೨) ಕಾಮರ್ಸ್

೩) ಎಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲೀ

೪) ಫ್ರಂಟ್‌ಲೈನ್

೫) ಹಾಯ್ ಬೆಂಗಳೂರ್

೬) ಮೈನ್‌ಸ್ಟ್ರೀಮ್

೭) ಸದರ್ನ್ ಎಕಾನಾಮಿಸ್ಟ್

೮) ದಿ ಜರ್ನಲ್ ಆಫ್ ಪೆಸೆಂಟ್ ಸ್ಟಡೀಸ್

೪. ದಿನ ಪತ್ರಿಕೆಗಳು

೧) ಡೆಕ್ಕನ್ ಹೆರಾಲ್ಡ್
೨) ಜನವಾಣಿ
೩) ಮುಂಗಾರು
೪) ಪ್ರಜಾವಾಣಿ
೫) ಸಂಯುಕ್ತ ಕರ್ನಾಟಕ
೬) ದಿ ಇಂಡಿಯನ್ ಎಕ್ಸ್‌ಪ್ರೆಸ್
೭) ದಿ ಟೈಮ್ಸ್ ಆಫ್ ಇಂಡಿಯಾ

ಡಾ. ಕೆ.ಎಂ. ಕುಮಾರ್



ಶ್ರೀಯುತ ಡಾ. ಕೆ.ಎಂ. ಕುಮಾರ್ ಇವರು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪ ಗ್ರಾಮದವರು. ಶ್ರೀಮತಿ ಮಲ್ಲಮ್ಮ ಹಾಗೂ ಶ್ರೀ ಕೆ.ಎಂ. ಮಹದೇವಪ್ಪನವರ ಪುತ್ರರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ, ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕುವೆಂಪು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿರುವ ಇವರು ಪ್ರಸ್ತುತ ದಾವಣಗೆರೆ ಜಿಲ್ಲೆಯ ಚೆನ್ನಗಿರಿಯ ಸರ್ಕಾರಿ ಸ್ನಾತಕೋತ್ತರ ವಿಭಾಗದಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರು ವಿದ್ಯಾರ್ಥಿ ದೆಸೆಯಿಂದಲೇ ಪ್ರತಿಭಾವಂತರಾಗಿದ್ದು ಎನ್.ಸಿ.ಸಿ., ಎನ್.ಎಸ್.ಎಸ್., ಭಾಷಣ ಕಲೆ, ಕ್ರೀಡೆ ಇತ್ಯಾದಿ ಚಟುವಟಿಕೆಗಳಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದು ಬಹುಮುಖ ಪ್ರತಿಭೆಯುಳ್ಳವರಾಗಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ದೂರ ಶಿಕ್ಷಣ ಪರಿಷತ್ ಪ್ರಕಟಿಸಿದ 'ರಾಜ್ಯಶಾಸ್ತ್ರ' 'ಪೊಲಿಟಿಕಲ್ ಸೈನ್ಸ್', ಮಾಡರ್ನ್ ಗೌರ್ನಮೆಂಟ್ಸ್' ಮತ್ತು 'ಇಂಡಿಯನ್ ಕಾನ್‌ಸ್ಟಿಟ್ಯೂಷನ್ ಅಂಡ್ ಗೌರ್ನಮೆಂಟ್' ಎಂಬ ಪುಸ್ತಕಗಳನ್ನು ರಚಿಸಿದ್ದಾರೆ. ಜರ್ನಲ್ ಆಫ್ ಕರ್ನಾಟಕ ಪೊಲಿಟಿಕ್ಸ್ ಮತ್ತು ಯೋಜನೆ ಪತ್ರಿಕೆಗಳಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಪಠ್ಯವಸ್ತು ರಚನಾ ಸಮಿತಿಯಲ್ಲಿ ಸದಸ್ಯರಾಗಿ ಕಾರ್ಯ. ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿ ಸಮೂಹದಲ್ಲಿ ಒಬ್ಬ ಜನಪ್ರಿಯ ಹಾಗೂ ಪ್ರಭಾವಿ ಉಪನ್ಯಾಸಕರಾಗಿರುವ ಶ್ರೀಯುತರು ರಚಿಸಿರುವ ಪ್ರಸ್ತುತ ಕೃತಿ ಅವರ ಸಂಶೋಧನಾ ಪ್ರಬಂಧದ ಕನ್ನಡ ಅವತರಣಿಕೆಯಾಗಿದೆ.

ಡಾ. ಕೆ.ಎಂ.ಕುಮಾರ್
ರಾಜ್ಯಶಾಸ್ತ್ರ ಪ್ರಾಧ್ಯಾಪಕರು
'ಅಭಿಕುಂಜ್' ವಿನೋಬನಗರ
೧ನೇ ಹಂತ, ಶಿವಮೊಗ್ಗ
ದೂ : ೯೪೪೮೭೬೬೭೫

ಜ್ಞಾನವೆಂಬುದು ಕೇವಲ ಕೆಲವು ಕೇಂದ್ರಗಳಲ್ಲಿ ಶೇಖರಗೊಂಡು ನಿಂತ ನೀರಾಗದೆ ಅದೊಂದು ಜೀವಂತ ವಾಹಿನಿಯಾಗಿ ಈ ನಾಡಿನ ಪ್ರಜೆಗಳ ಕಡೆಗೆ ನಿರಂತರ ಹರಿದು ಬರುತ್ತಲೇ ಇರಬೇಕು.

ಕನ್ನಡದ ಹೆಮ್ಮೆಯ ಪ್ರಾತಿನಿಧಿಕ ಸಾಂಸ್ಕೃತಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ವಿಶೇಷ ಯೋಜನೆಯ ಫಲವಾಗಿ, ನಮ್ಮ ವಿಶ್ವವಿದ್ಯಾಲಯಗಳಿಗೆ ಕನ್ನಡ ನಾಡು-ನುಡಿ-ಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಸಲ್ಲಿಸಲಾದ ಮಹಾಪ್ರಬಂಧಗಳು ಈಗ ಸ್ವಲ್ಪ ಸರಳಗೊಂಡು, ಸಂಕ್ಷಿಪ್ತಗೊಂಡು, ಕನ್ನಡ ಓದುಗರ ಕೈ ಸೇರುತ್ತಿವೆ.

ಕನ್ನಡ ಬದುಕಿನ ಒಂದು ಅರ್ಥಪೂರ್ಣ ಅಂಗವಾಗುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಹೆಮ್ಮೆಯ ಸಾಧನೆಗಳಲ್ಲಿ ಇದೂ ಒಂದು.